ಮಂಗಳವಾರ, ಆಗಸ್ಟ್ 27, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 239 | ಪುಟ 16
www.prajavani.net
prajavani.net prajavani prajavani prajavani
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ–ಅಗಲ
ಬಣ್ಣದ ಲೋಕದ ಕರಾಳ ಮುಖಗಳು
ಟಾರ್ಚ್ ಬಿಟ್ಟು ನೋಡುವ ಪರಿಸ್ಥಿತಿ ಬೇಕಿತ್ತಾ? 8
'ನಟರಿಂದ ಲೈಂಗಿಕ ಕಿರುಕುಳ' 13

ಸೆನ್ಸೆಕ್ಸ್	ನಿಫ್ಟಿ	₹/$
81,698	25,010	83.87



ಕೃಷ್ಣ ಜನ್ಮಾಷ್ಟಮಿಯ ಸಂಭ್ರಮ

ಕೃಷ್ಣ ಜನ್ಮಾಷ್ಟಮಿ ಉತ್ಸವದ ಪ್ರಯುಕ್ತ ಹುಬ್ಬಳ್ಳಿಯ ಅಕ್ಷಯ ಪಾರ್ಕ್‌ನ ಸಂತೆ ಮೈದಾನದಲ್ಲಿ ಸೋಮವಾರ ಕೃಷ್ಣ ಜನ್ಮಾಷ್ಟಮಿ ಉತ್ಸವ ಸಮಿತಿ ಮತ್ತು ವಿಶ್ವ ಹಿಂದೂ ಪರಿಷತ್ ವತಿಯಿಂದ ಮೊಸರು ಗಡಿಗೆ ಒಡೆಯುವ ಸ್ಪರ್ಧೆ ನಡೆಯಿತು

ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

9 ಮಂದಿ ಅಮಾನತು ● ಐಪಿಎಸ್ ಅಧಿಕಾರಿ ನೇತೃತ್ವದಲ್ಲಿ ತನಿಖೆ

ದರ್ಶನಾತಿಥ್ಯ: 3 ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ನಟ ದರ್ಶನ್ ಮತ್ತು ಸಹಚರರು ಹಾಗೂ ರೌಡಿ ಶೀಟರ್‌ಗಳಿಗೆ ವಿಶೇಷ ಆತಿಥ್ಯ ನೀಡಿದ ಆರೋಪದಡಿ ಜೈಲಿನ ಮುಖ್ಯ ಅಧೀಕ್ಷಕ, ಅಧೀಕ್ಷಕ ಮತ್ತು ಸಿಬ್ಬಂದಿ ಸೇರಿ ಒಂಬತ್ತು ಮಂದಿಯನ್ನು ಅಮಾನತು ಮಾಡಲಾಗಿದೆ.

ದರ್ಶನ್ ಹಾಗೂ ಅಮಾನತುಗೊಂಡಿರುವ ಅಧಿಕಾರಿಗಳು, ಸಿಬ್ಬಂದಿ ವಿರುದ್ಧ ಕಾರಾಗೃಹಗಳ ಇಲಾಖೆ ಡಿಐಜಿ ಸೋಮಶೇಖರ್ ಅವರು ದೂರು ನೀಡಿದ್ದು, ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಮೂರು ಎಫ್‌ಐಆರ್‌ಗಳು ದಾಖಲಾಗಿವೆ. ಬೇಗೂರು, ಹುಳಿಮಾವು ಠಾಣೆ ಇನ್‌ಸ್ಪೆಕ್ಟರ್ ಹಾಗೂ ಎಲೆಕ್ಟ್ರಾನಿಕ್ ಸಿಟಿ ಎಸಿಪಿ ಅವರನ್ನು ತನಿಖಾಧಿಕಾರಿಗಳಾಗಿ ನೇಮಿಸಲಾಗಿದೆ. ಮತ್ತೊಂದೆಡೆ ಹಿರಿಯ ಐಪಿಎಸ್ ಅಧಿಕಾರಿ ನೇತೃತ್ವದಲ್ಲಿ ಪ್ರತ್ಯೇಕ ತನಿಖೆಯೂ ಆರಂಭವಾಗಿದೆ.

ಜೈಲಿನ ಮುಖ್ಯ ಅಧೀಕ್ಷಕ ವಿ. ಶೇಷುಮೂರ್ತಿ, ಅಧೀಕ್ಷಕ ಮಲ್ಲಿಕಾರ್ಜುನ್ ಸ್ವಾಮಿ, ಜೈಲರ್‌ಗಳಾದ ಶರಣಬಸವ ಅಮೀನಗಡ, ಪ್ರಭು ಎಸ್. ಖಂಡೇಲವಾಲ, ಸಹಾಯಕ ಜೈಲರ್‌ಗಳಾದ ಶ್ರೀಕಾಂತ್ ತಳವಾರ್, ಎಲ್.ಎಸ್.ತಿಪ್ಪೇಸ್ವಾಮಿ, ಮುಖ್ಯ ವಾರ್ಡರ್‌ಗಳಾದ ವೆಂಕಪ್ಪ, ಸಂಪತ್ ಕುಮಾರ್ ತಡಪಟ್ಟಿ, ವಾರ್ಡರ್ ಬಸಪ್ಪ ತೇಲಿ ಅವರನ್ನು ಕರ್ತವ್ಯಲೋಪ ಎಸಗಿದ ಆರೋಪದ ಮೇಲೆ ಅಮಾನತು ಮಾಡಲಾಗಿದೆ.

ಕೊಲೆ ಆರೋಪಿಗಳಿಗೆ ಜೈಲಿನಲ್ಲಿ ಸಿಗರೇಟ್, ಮೊಬೈಲ್ ಸೇರಿ ಸಕಲ ಸೌಲಭ್ಯ ಕಲ್ಪಿಸಿದ್ದಕ್ಕೆ ವ್ಯಾಪಕ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ ಗೃಹ ಸಚಿವ ಜಿ.ಪರಮೇಶ್ವರ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ಕಾರಾಗೃಹಗಳು ಹಾಗೂ ಸುಧಾರಣಾ ಸೇವೆಗಳ ಇಲಾಖೆ ಪೊಲೀಸ್ ಮಹಾನಿರ್ದೇಶಕಿ ಮಾಲಿನಿ ಕೃಷ್ಣಮೂರ್ತಿ ಅವರು ಪರಪ್ಪನ ಅಗ್ರಹಾರ ಜೈಲಿಗೆ ಭೇಟಿ ನೀಡಿ ಪರಿಶೀಲಿಸಿದರು.

ಸ್ಥಳಾಂತರಕ್ಕೆ ಸೂಚನೆ: ಪ್ರಕರಣದ ಸಂಪೂರ್ಣ ವರದಿ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆದೇಶಿಸಿದ್ದು, ವಿಶೇಷ ಆತಿಥ್ಯ ಪಡೆದ ದರ್ಶನ್ ಹಾಗೂ ಇತರರನ್ನು ಬೇರೆ ಜೈಲುಗಳಿಗೆ ಸ್ಥಳಾಂತರ ಮಾಡುವಂತೆ ಸೂಚಿಸಿದ್ದಾರೆ.

8ನೇ ಪುಟ ನೋಡಿ

ಬ್ಯಾರಕ್ ಒಳಗೆ ಮತ್ತೊಬ್ಬ ಕೈದಿ ಹಿಡಿದಿದ್ದ ಮೊಬೈಲ್ ವೀಕ್ಷಿಸಿದ್ದ ನಟ ದರ್ಶನ್

ವರದಿ ಬಂದ ಬಳಿಕ ತಪ್ಪಿತಸ್ಥರನ್ನು ಸೇವೆಯಿಂದ ವಜಾಗೊಳಿಸುವ ಬಗ್ಗೆಯೂ ತೀರ್ಮಾನಿಸಲಾಗುವುದು. ಸಿಸಿಬಿ ಪೊಲೀಸರಿಂದಲೂ ವರದಿಯನ್ನು ಪಡೆಯಲಾಗುವುದು
ಜಿ.ಪರಮೇಶ್ವರ, ಗೃಹ ಸಚಿವ

ಸಿ.ಸಿ.ಟಿ.ವಿ ಕ್ಯಾಮೆರಾ ನಿರ್ವಹಣೆಯಲ್ಲಿ ಸಿಬ್ಬಂದಿ ಲೋಪ ಎಸಗಿದ್ದಾರೆ. ಪೊಲೀಸ್ ತನಿಖೆಯಿಂದಲೇ ಎಲ್ಲವೂ ಗೊತ್ತಾಗಲಿದೆ
ಮಾಲಿನಿ ಕೃಷ್ಣಮೂರ್ತಿ, ಡಿಜಿಪಿ, ಕಾರಾಗೃಹಗಳು ಹಾಗೂ ಸುಧಾರಣೆ ಇಲಾಖೆ

ಫೋಟೊ ಬಹಿರಂಗವಾಗಿದ್ದು ಹೇಗೆ?

ದರ್ಶನ್ ಕುರ್ಚಿ ಮೇಲೆ ಕುಳಿತು ಸಿಗರೇಟ್ ಸೇದುತ್ತಾ ರೌಡಿ ಶೀಟರ್ ವಿಲ್ಸನ್ ಗಾರ್ಡನ್ ನಾಗನ ಜತೆಗೆ ಹರಟೆ ಹೊಡೆಯುತ್ತಿರುವ ಫೋಟೊ ಬಹಿರಂಗ ಆಗಿದ್ದು ಹೇಗೆ?

ಈ ಪ್ರಶ್ನೆಗೆ ಉತ್ತರ ಹುಡುಕಲು ಹೊರಟ ಜೈಲು ಸಿಬ್ಬಂದಿ ಹಾಗೂ ಅಧಿಕಾರಿಗಳು, 'ದರ್ಶನ್, ನಾಗ, ಕುಳ್ಳ ಸೀನ ಹಾಗೂ ದರ್ಶನ್ ವ್ಯವಸ್ಥಾಪಕ ನಾಗರಾಜ್ ಅವರು ಬ್ಯಾರಕ್ ಎದುರು ಕುಳಿತಿದ್ದ ಫೋಟೊವನ್ನು ರೌಡಿ ವೇಲು ಎಂಬಾತ ತೆಗೆದಿದ್ದ. ಅದನ್ನು ತನ್ನ ಪತ್ನಿಗೆ ಕಳುಹಿಸಿದ್ದ. ಆಕೆ ತಮ್ಮ ಸ್ನೇಹಿತರಿಗೆ ಕಳುಹಿಸಿದ್ದರು. ಅವರು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದರು' ಎಂದು ಪ್ರಾಥಮಿಕ ವಿಚಾರಣೆ ವೇಳೆ ಪತ್ತೆ ಹಚ್ಚಿದ್ದಾರೆ. ಇದೇ ಜೈಲಿನಲ್ಲಿರುವ ರೌಡಿ ಧರ್ಮ ಎಂಬಾತ ದರ್ಶನ್ ಸ್ನೇಹ ಬೆಳೆಸಿಕೊಂಡಿದ್ದಾನೆ. ಇತ್ತೀಚೆಗೆ ದರ್ಶನ್ ಬ್ಯಾರಕ್‌ಗೆ ತೆರಳಿದ್ದ ಆತ, ರೌಡಿಶೀಟರ್ ಜನಾರ್ದನ್ ಅಲಿಯಾಸ್ ಜಾನಿಯ ಮಗ ಸತ್ಯನಿಗೆ ವಿಡಿಯೊ ಕರೆ ಮಾಡಿದ್ದ. ಆಗ ದರ್ಶನ್ ಜತೆಗೂ ಮಾತುಕತೆ ನಡೆದಿತ್ತು. ವಿಡಿಯೊ ಕರೆ ವೇಳೆ ಸತ್ಯ ವಿಡಿಯೊವನ್ನು ರೆಕಾರ್ಡ್ ಮಾಡಿಕೊಂಡು, ಸ್ಕ್ರೀನ್‌ಶಾಟ್ ಫೋಟೊ ತೆಗೆದುಕೊಂಡಿದ್ದ. ಆ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ ಎನ್ನಲಾಗಿದೆ.

ದರ್ಶನ್‌ಗೆ ಮಟನ್ ಬಿರಿಯಾನಿ!

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿರುವ ಸ್ಥಿತಿವಂತರು, ರೌಡಿಗಳು, ರಾಜಕಾರಣಿಗಳಿಗೆ ಜೈಲಿನೊಳಗೆ ಬೇಕಾದ 'ಸಕಲ ಸೌಲಭ್ಯ' ಸಿಗುವ ವ್ಯವಸ್ಥೆ ಇದ್ದು, ದರ್ಶನ್ ತಂಡಕ್ಕೆ ಬಸವನಗುಡಿಯ ಹೋಟೆಲ್ ಒಂದರಿಂದ ಮಟನ್ ಬಿರಿಯಾನಿ ಪೂರೈಕೆಯಾಗುತ್ತಿತ್ತು ಎಂಬ ಮಾಹಿತಿ ಲಭ್ಯವಾಗಿದೆ.

'ಹೊರಗಿನಿಂದ ಯಾವುದೇ ವಸ್ತು ತಂದುಕೊಡಲು ದರ ನಿಗದಿ ಪಡಿಸಲಾಗಿದೆ. ಜೈಲು ಸಿಬ್ಬಂದಿಯ ನೆರವಿನಿಂದಲೇ ಈ ರೀತಿಯ ಅಕ್ರಮಗಳು ನಡೆಯುತ್ತಿವೆ' ಎಂದು ಮೂಲಗಳು ತಿಳಿಸಿವೆ.

'ಮದ್ಯ, ಸಿಗರೇಟ್, ಬಿರಿಯಾನಿ, ಬಿಸಿ ನೀರು ತರಿಸಿ ಕೊಡಲು ದರ ನಿಗದಿಯಾಗಿದೆ. ಊಟದ ದರದ ಜತೆಗೆ ಹೆಚ್ಚಿನ ಹಣ ನೀಡಿದರೆ ನಿತ್ಯವೂ ಸಕಲ ಸೌಲಭ್ಯ ದೊರೆಯುತ್ತದೆ. ಜೈಲು ಸಿಬ್ಬಂದಿ ಹಾಗೂ ಐದು ವರ್ಷಕ್ಕಿಂತ ಹೆಚ್ಚು ಜೈಲಿನಲ್ಲಿರುವ ಕೈದಿಗಳು ಒಂದು ತಂಡ ರಚಿಸಿಕೊಂಡಿದ್ದಾರೆ' ಎಂದು ಹೇಳಿವೆ.

8ನೇ ಪುಟ ನೋಡಿ

ಆಸ್ತಿ ನೋಂದಣಿ: ಇನ್ನು ಜಿಲ್ಲಾ ವ್ಯಾಪ್ತಿಗೆ ವಿಸ್ತಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ನೋಂದಣಿಯನ್ನು ಸೆಪ್ಟೆಂಬರ್ 2ರಿಂದ ಆಯಾ ಜಿಲ್ಲಾ ವ್ಯಾಪ್ತಿಯ ಯಾವುದೇ ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಮಾಡಿಸಬಹುದು.

ಈ ಕುರಿತು ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಜಮೀನು, ನಿವೇಶನ, ಮನೆ, ವಾಣಿಜ್ಯ ಕಟ್ಟಡಗಳು ಸೇರಿದಂತೆ ಯಾವುದೇ ಆಸ್ತಿಯನ್ನು ಇದುವರೆಗೂ ಆಯಾ ತಾಲ್ಲೂಕು ವ್ಯಾಪ್ತಿಯ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಮಾತ್ರ ಮಾಡಿಸಬೇಕಿತ್ತು. ಇನ್ನು ಮುಂದೆ ಜಿಲ್ಲಾ ವ್ಯಾಪ್ತಿಗೆ ಅವಕಾಶ ಕಲ್ಪಿಸಲಾಗಿದ್ದು, ಮುಂದಿನ ಹಂತಗಳಲ್ಲಿ ರಾಜ್ಯದ ಯಾವುದೇ ಭಾಗದ ಕಚೇರಿಗೆ ತೆರಳಿ ನೋಂದಣಿ ಮಾಡಿಸುವ ವ್ಯವಸ್ಥೆ ರೂಪಿಸಲಾಗುವುದು ಎಂದರು.

ಒಂದು ದಾಖಲೆ ಕಡ್ಡಾಯ: ನಕಲಿ ದಾಖಲೆ ಸೃಷ್ಟಿಸಿ ಬೇರೆಯವರ ಆಸ್ತಿ ಕಬಳಿಸುವ ವಂಚನೆ ಪ್ರಕರಣಗಳನ್ನು ತಡೆಯಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವವರು ಆಸ್ತಿ ದಾಖಲೆಗಳ ಜತೆಗೆ, ಆಸ್ತಿಯ ಮಾಲೀಕತ್ವ ಹೊಂದಿರುವವರ ಆಧಾರ್, ಪ್ಯಾನ್ ಕಾರ್ಡ್ ಅಥವಾ ಪಾಸ್‌ಪೋರ್ಟ್ ಸಲ್ಲಿಸುವುದು ಕಡ್ಡಾಯ. ಯಾವುದೇ ಭಾರತೀಯ ಅಥವಾ ಅನಿವಾಸಿ ಭಾರತೀಯ ಪ್ರಜೆ ಈ ಮೂರರಲ್ಲಿ ಒಂದು ದಾಖಲೆ ಹೊಂದಿರುತ್ತಾರೆ. ಹಾಗಾಗಿ, ಮೂರು ದಾಖಲೆಗಳನ್ನು ಪರಿಶೀಲನೆಗೆ ಒಳಪಡಿಸಿದ ನಂತರವೇ ಆಸ್ತಿ ನೋಂದಣಿ ಮಾಡಲಾಗುತ್ತದೆ ಎಂದು ಹೇಳಿದರು.

8ನೇ ಪುಟ ನೋಡಿ

'ರಾಜ್ಯಪಾಲರ ನಡೆ; ಕೋರ್ಟ್‌ಗೆ ಮೊರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನರಿಗೆ ಅನುಕೂಲ ಕಲ್ಪಿಸುವ ಆಶಯದಿಂದ ರೂಪಿಸಿದ ಉತ್ತಮ ಮಸೂದೆಗಳಿಗೆ ರಾಜ್ಯಪಾಲರು ಅಂಕಿತ ಹಾಕದೆ ವಿಳಂಬ ಮಾಡುತ್ತಿದ್ದಾರೆ. ರಾಜ್ಯಪಾಲರ ನಡೆಯ ವಿರುದ್ಧ ಕೋರ್ಟ್ ಮೊರೆ ಹೋಗುವ ಕುರಿತು ಸರ್ಕಾರ ಚಿಂತನೆ ನಡೆಸಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಸೋಮವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ಬರ ಪರಿಹಾರ ಬಿಡುಗಡೆಯಲ್ಲೂ ಕೇಂದ್ರ ಸರ್ಕಾರ ಇಂತಹ ಧೋರಣೆ ಅನುಸರಿಸಿತ್ತು. ಅಧಿಕಾರಿಗಳ ಮನವಿ, ನಷ್ಟದ ದಾಖಲೆಗಳನ್ನು ಕೋರ್ಟ್‌ಗೆ ಸಲ್ಲಿಸಲಾಗಿತ್ತು. ನಂತರ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡಿತು. ಮಸೂದೆಗಳ ಕುರಿತು ಸರ್ಕಾರ ಸ್ಪಷ್ಟೀಕರಣ ನೀಡಿದ ನಂತರವೂ ರಾಜ್ಯಪಾಲರು ವಾಪಸ್ ಕಳುಹಿಸಿದ್ದಾರೆ. ಇದರ ಹಿಂದೆ ಯಾರಿದ್ದಾರೆ ಎನ್ನುವ ಕುರಿತು ಹೇಳುವ ಅಗತ್ಯವಿಲ್ಲ' ಎಂದು ಹೇಳಿದರು.

12 ಯೋಜನೆಗಳಿಗೆ ಭೂಮಿ ಅಲಭ್ಯ ● ಶುರುವಾಗದ 25 ಯೋಜನೆಗಳು

ಹೆದ್ದಾರಿ ಯೋಜನೆಗೆ 'ಭೂ ಗ್ರಹಣ'

● ಮಂಜುನಾಥ ಹೆಬ್ಬಾರ್

ನವದೆಹಲಿ: ಕರ್ನಾಟಕ ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಯ ಸಂದರ್ಭದಲ್ಲಿ 'ಮತ ಸೆಳೆಯುವ ಉದ್ದೇಶ'ದಿಂದ ಘೋಷಿಸಿದ್ದ ರಾಷ್ಟ್ರೀಯ ಹೆದ್ದಾರಿ ಯೋಜನೆಗಳ ಕಾಮಗಾರಿ ಇನ್ನೂ ಆರಂಭವಾಗಿಲ್ಲ. ರಾಜ್ಯದಲ್ಲಿ ₹12,863 ಕೋಟಿ ಮೊತ್ತದ 12 ಕಾಮಗಾರಿಗಳಿಗೆ ಜಾಗದ ಲಭ್ಯತೆಯೇ ಇಲ್ಲ.

ರಾಜ್ಯದಲ್ಲಿ 2,335 ಕಿ.ಮೀ. ಉದ್ದದ 91 ಹೆದ್ದಾರಿಗಳ ಕಾಮಗಾರಿ ಪ್ರಗತಿಯಲ್ಲಿವೆ. ಈ ಕಾಮಗಾರಿಗಳ ಒಟ್ಟು ವೆಚ್ಚ ₹38,785 ಕೋಟಿ. ಇದರಲ್ಲಿ ಕೆಲವು ಕಾಮಗಾರಿಗಳು ಅಂತಿಮ ಹಂತಕ್ಕೆ ತಲುಪಿದ್ದರೆ, ಇನ್ನೂ ಹಲವು ಕಾಮಗಾರಿಗಳು ಶೇ 10–20ರಷ್ಟು ಪ್ರಗತಿ ಸಾಧಿಸಿವೆ. ಆದರೆ, ₹16,436 ಕೋಟಿ ಅಂದಾಜು ವೆಚ್ಚದ 25 ಯೋಜನೆಗಳ ಕಾಮಗಾರಿಗಳಿಗೆ ಚಾಲನೆ ನೀಡಿಲ್ಲ. 12 ಯೋಜನೆಗಳಿಗೆ ಭೂಮಿಯದ್ದೇ ಸಮಸ್ಯೆ. 7 ಯೋಜನೆಗಳ ಬಿಡ್‌ಗಳು ಪರಿಶೀಲನೆ ಹಂತದಲ್ಲಿವೆ. ಉಳಿದ ಆರು ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ ಎಂದು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವಾಲಯದ ಮೂಲಗಳು ತಿಳಿಸಿವೆ.

'ಗತಿ ಶಕ್ತಿ' ಯೋಜನೆಯಡಿ ಮೈಸೂರು–ಮಡಿಕೇರಿ ನಡುವೆ ನಾಲ್ಕು ಪಥದ ಹೆದ್ದಾರಿ ನಿರ್ಮಿಸಲಾಗುತ್ತದೆ. ಇದಕ್ಕೆ ಅನುಮೋದನೆ ನೀಡಲಾಗಿದೆ' ಎಂದು ರಾಷ್ಟ್ರೀಯ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು 2023ರ ಫೆಬ್ರುವರಿಯಲ್ಲಿ ಪ್ರಕಟಿಸಿದ್ದರು. ವಿಧಾನಸಭಾ ಚುನಾವಣೆಯ ಪೂರ್ವದಲ್ಲಿ ರಾಜ್ಯಕ್ಕೆ ಹತ್ತು ಹಲವು ಯೋಜನೆಗಳನ್ನು ಘೋಷಿಸಿದ್ದರು. ಮೈಸೂರು–ಮಡಿಕೇರಿ ನಡುವೆ ನಾಲ್ಕು ಪ್ಯಾಕೇಜ್‌ಗಳಲ್ಲಿ ₹3,573 ಕೋಟಿ ವೆಚ್ಚದಲ್ಲಿ ಹೆದ್ದಾರಿ ಅಭಿವೃದ್ಧಿಪಡಿಸುವ ಯೋಜನೆ ಇದೆ. ಆದರೆ, ಇಲ್ಲಿ ಯೋಜನೆ ಅನುಷ್ಠಾನಕ್ಕೆ ಜಮೀನು ಲಭ್ಯ ಇಲ್ಲ. ಹೆದ್ದಾರಿಗಳ ವಿಸ್ತರಣೆಗೆ ಭೂಸ್ವಾಧೀನ ಪ್ರಕ್ರಿಯೆ ನಡೆಯದಿರುವುದೇ ವಿಳಂಬಕ್ಕೆ ಕಾರಣ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅಸಹಾಯಕತೆ ವ್ಯಕ್ತಪಡಿಸಿದೆ.

ಬೆಳಗಾವಿ–ಹುನಗುಂದ–ರಾಯಚೂರು ನಡುವೆ ಆರು ಪ್ಯಾಕೇಜ್‌ಗಳಲ್ಲಿ ಹೆದ್ದಾರಿ ವಿಸ್ತರಣೆ ಮಾಡಲು ಯೋಜಿಸಲಾಗಿದೆ. ಚುನಾವಣೆಯ ಪೂರ್ವದಲ್ಲಿ ಘೋಷಣೆಯಾದ ಯೋಜನೆಗಳಿವು. ಹೆದ್ದಾರಿ ವಿಸ್ತರಣೆಗೆ ಭೂಸ್ವಾಧೀನ ಮಾಡಬೇಕಿದೆ. ಆದರೆ, ಈ ಪ್ರಕ್ರಿಯೆ ವಿಳಂಬವಾಗಿದೆ. ಹೀಗಾಗಿ, ಈ ಯೋಜನೆಗೆ ಚಾಲನೆ ಸಿಕ್ಕಿಲ್ಲ ಎಂದು ಪ್ರಾಧಿಕಾರ ಹೇಳಿಕೊಂಡಿದೆ.

ಹೊನ್ನಾವರ ಬಂದರು–ಕಾಸರಕೋಡ್ ನಡುವಿನ ಹೆದ್ದಾರಿ ವಿಸ್ತರಣೆಗೆ ಮೀನುಗಾರರ ವಿರೋಧ ಇದೆ. ಈ ಯೋಜನೆ ಕೈಗೆತ್ತಿಕೊಳ್ಳದಂತೆ ಒತ್ತಾಯಿಸಿ ಸ್ಥಳೀಯರು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಮೆಟ್ಟಿಲೇರಿದ್ದು, ಮೂರು ವರ್ಷಗಳಿಂದ ನ್ಯಾಯಮಂಡಳಿಯಲ್ಲಿ ವಿಚಾರಣೆ ನಡೆಯುತ್ತಿದೆ.

9ನೇ ಪುಟ ನೋಡಿ

ವಾಂತಿ, ಭೇದಿ: ಮೂವರ ಸಾವು

ಪ್ರಜಾವಾಣಿ ವಾರ್ತೆ

ತುಮಕೂರು (ಮಧುಗಿರಿ): ತಾಲ್ಲೂಕಿನ ಚಿನ್ನೇನಹಳ್ಳಿಯಲ್ಲಿ ಕಲುಷಿತ ನೀರು ಸೇವಿಸಿ 7 ಮಂದಿ ಮೃತಪಟ್ಟ ಘಟನೆ ಮಾಸುವ ಮುನ್ನವೇ ಮತ್ತೊಂದು ಘಟನೆ ಸಂಭವಿಸಿದ್ದು, ಬುಳ್ಳಸಂದ್ರ ಗ್ರಾಮದಲ್ಲಿ ವಾಂತಿ, ಭೇದಿ ಕಾಣಿಸಿಕೊಂಡು ಮೂವರು ಸಾವನ್ನಪ್ಪಿದ್ದಾರೆ.

ಬುಳ್ಳಸಂದ್ರದ ತಿಮ್ಮಕ್ಕ (85), ಗಿರಿಯಮ್ಮ (90) ಶನಿವಾರ ಹಾಗೂ ಮಡಕಶಿರಾ ತಾಲ್ಲೂಕಿನ ಸಿದ್ದಗಿರಿ ಗ್ರಾಮದ ಕಾಟಮ್ಮ ಎಂಬುವರು (45) ಭಾನುವಾರ ಮೃತಪಟ್ಟಿದ್ದಾರೆ. ಇನ್ನೂ 6 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗ್ರಾಮದಲ್ಲಿ ಮುತ್ತುರಾಯಸ್ವಾಮಿ ಜಾತ್ರೆಗಾಗಿ ಮನೆಯಲ್ಲಿ ಅಡುಗೆ ಮಾಡಿದ್ದರು. ಆಹಾರ ಸೇವನೆಯಿಂದಾಗಿ ವಾಂತಿ, ಭೇದಿ ಕಾಣಿಸಿಕೊಂಡಿದೆ. ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆ ಆವರಣದಲ್ಲಿ ಆರೋಗ್ಯ ಇಲಾಖೆ ವತಿಯಿಂದ ಕ್ಲಿನಿಕ್ ತೆರೆದು ಚಿಕಿತ್ಸೆ ನೀಡಲಾಗುತ್ತಿದೆ. ತೀವ್ರವಾಗಿ ಅಸ್ವಸ್ಥರಾಗಿದ್ದ ಇಬ್ಬರನ್ನು ಮಧುಗಿರಿ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿದೆ.

'ವಾಂತಿ, ಭೇದಿಯಿಂದ ಬಳಲಿದ್ದವರಿಗೆ ಗ್ರಾಮದಲ್ಲಿ ಚಿಕಿತ್ಸೆ ನೀಡಲಾಗಿದೆ. ಸದ್ಯಕ್ಕೆ ಹೊಸ ಪ್ರಕರಣಗಳು ವರದಿಯಾಗಿಲ್ಲ. ಒಬ್ಬರು ವಾಂತಿ, ಭೇದಿಯಿಂದ ಮೃತಪಟ್ಟಿರುವುದು ಖಚಿತಪಟ್ಟಿದೆ. ಮತ್ತಿಬ್ಬರದು ವಯೋಸಹಜ ಸಾವು ಎನ್ನುತ್ತಿದ್ದಾರೆ. ಪರೀಕ್ಷೆಗೆ ಮಾದರಿಗಳನ್ನು ಕಳುಹಿಸಿದ್ದು, ವರದಿ ಬಂದ ನಂತರ ಖಚಿತವಾಗಲಿದೆ' ಎಂದು ಸ್ಥಳದಲ್ಲಿ ಚಿಕಿತ್ಸೆ ನೀಡುತ್ತಿರುವ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ರಾಮೇಗೌಡ ತಿಳಿಸಿದರು.

ಕೆಪಿಎಸ್‌ಸಿ: ಪೂರ್ವಭಾವಿ ಪರೀಕ್ಷೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023-24ನೇ ಸಾಲಿನ 40 ಕೆಎಎಸ್ ಹುದ್ದೆಗಳೂ ಸೇರಿ ಒಟ್ಟು 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಮಂಗಳವಾರ ಪೂರ್ವಭಾವಿ ಪರೀಕ್ಷೆ ನಡೆಸಲಿದೆ.

ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ, 214 ಸರ್ಕಾರಿ, 189 ಅನುದಾನಿತ ಹಾಗೂ 161 ಖಾಸಗಿ ಶಾಲಾ–ಕಾಲೇಜುಗಳು ಸೇರಿ ಒಟ್ಟು 564 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ.

ಒಟ್ಟು ಹುದ್ದೆಗಳ ಪೈಕಿ, 159 ಗ್ರೂಪ್ 'ಎ' ವೃಂದದ ಮತ್ತು 225 ಗ್ರೂಪ್ 'ಬಿ' ವೃಂದದ ಹುದ್ದೆಗಳು. ಈ ಹುದ್ದೆಗಳಿಗೆ 2,10,910 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. ನೇಮಕಾತಿಗೆ ಕೆಪಿಎಸ್‌ಸಿ ಫೆ. 26ರಂದು ಅಧಿಸೂಚನೆ ಹೊರಡಿಸಿತ್ತು.

9ನೇ ಪುಟ ನೋಡಿ

ರೈತರ ಪ್ರತಿಭಟನೆ: ಕಂಗನಾ ಮಾತಿನ ಕಿಡಿ

ನವದೆಹಲಿ/ಥಾಣೆ (ಪಿಟಿಐ): 'ದೇಶದ ನಾಯಕತ್ವವು ಬಲಿಷ್ಠವಾಗಿಲ್ಲದೆ ಇದ್ದಿದ್ದರೆ ರೈತರ ಪ್ರತಿಭಟನೆಯು ಬಾಂಗ್ಲಾದೇಶದಲ್ಲಿ ಸೃಷ್ಟಿಯಾದಂತಹ ಸನ್ನಿವೇಶವನ್ನು ಭಾರತದಲ್ಲಿಯೂ ಸೃಷ್ಟಿಸುತ್ತಿತ್ತು' ಎಂದು ಸಂಸದೆ ಕಂಗನಾ ರನೌತ್ ಹೇಳಿದ್ದಾರೆ. ಅವರು ಆಡಿರುವ ವಿವಾದಾತ್ಮಕ ಮಾತುಗಳ ಬಗ್ಗೆ ಬಿಜೆಪಿ ಅಸಮ್ಮತಿ ವ್ಯಕ್ತಪಡಿಸಿದೆ.

ಕಂಗನಾ ಮಾತುಗಳು ವಿವಾದ ಸೃಷ್ಟಿಸಿದ ನಂತರ ಹೇಳಿಕೆ ಬಿಡುಗಡೆ ಮಾಡಿರುವ ಬಿಜೆಪಿ, 'ಇನ್ನು ಮುಂದೆ ಇಂತಹ ಮಾತುಗಳನ್ನು ಆಡಬಾರದು' ಎಂದು ತಾಕೀತು ಮಾಡಿದೆ. ಕಂಗನಾ ಮಾತುಗಳನ್ನು ಪಕ್ಷವು ಖಂಡಿಸಿದೆ.

ಹಿಂದಿ ದಿನಪತ್ರಿಕೆ 'ದೈನಿಕ್ ಭಾಸ್ಕರ್'ಗೆ ತಾವು ನೀಡಿದ ಸಂದರ್ಶನದ ತುಣುಕೊಂದನ್ನು ಸಾಮಾಜಿಕ ಮಾಧ್ಯಮ ಖಾತೆಯ ಮೂಲಕ ಕಂಗನಾ ಹಂಚಿಕೊಂಡಿದ್ದರು. ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಮೂರು ಕಾಯ್ದೆಗಳನ್ನು ವಿರೋಧಿಸಿ ರೈತರು ಪ್ರತಿಭಟನೆ ನಡೆಸಿದ ಸಂದರ್ಭದಲ್ಲಿ 'ಶವಗಳು ನೇತಾಡುತ್ತಿದ್ದವು, ಅತ್ಯಾಚಾರಗಳು ನಡೆಯುತ್ತಿದ್ದವು' ಎಂದು ಕೂಡ ಕಂಗನಾ ಆರೋಪಿಸಿದ್ದರು. ಅಲ್ಲದೆ, 'ಪಿತೂರಿ'ಯಲ್ಲಿ ಚೀನಾ ಮತ್ತು ಅಮೆರಿಕದ ಪಾತ್ರವೂ ಇತ್ತು ಎಂದು ಅವರು ಹೇಳಿದ್ದರು.

'ರೈತರ ಚಳವಳಿಗೆ ಸಂಬಂಧಿಸಿದಂತೆ ಬಿಜೆಪಿ ಸಂಸದೆ ಕಂಗನಾ ಅವರು ಆಡಿರುವ ಮಾತುಗಳು ಪಕ್ಷದ ಅಭಿಪ್ರಾಯ ಅಲ್ಲ. ಕಂಗನಾ ಆಡಿರುವ ಮಾತುಗಳ ವಿಚಾರವಾಗಿ ಪಕ್ಷವು ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸುತ್ತಿದೆ' ಎಂದು ಬಿಜೆಪಿಯು ಹೇಳಿಕೆಯಲ್ಲಿ ತಿಳಿಸಿದೆ.

ಪಕ್ಷದ ನೀತಿಗಳ ವಿಚಾರವಾಗಿ, ಪಕ್ಷದ ಪರವಾಗಿ ಹೇಳಿಕೆ ನೀಡಲು ಕಂಗನಾ ಅವರಿಗೆ ಅನುಮತಿ ನೀಡಿಲ್ಲ. ಮುಂದೆ ಇಂತಹ ಹೇಳಿಕೆಗಳನ್ನು ನೀಡಬಾರದು ಎಂದು ಕಂಗನಾ ಅವರಿಗೆ ಸೂಚಿಸಲಾಗಿದೆ ಎಂದು ಬಿಜೆಪಿ ಸ್ಪಷ್ಟಪಡಿಸಿದೆ. ಕೃಷಿ ಕಾಯ್ದೆಗಳನ್ನು ವಿರೋಧಿಸಿ ನಡೆದ ಪ್ರತಿಭಟನೆಗೆ ಹರಿಯಾಣದ ರೈತರು ಕೂಡ ಬೆಂಬಲ ನೀಡಿದ್ದರು. ಹರಿಯಾಣದಲ್ಲಿ ಇನ್ನು ಕೆಲವು ವಾರಗಳಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ. ಈ ಸಂದರ್ಭದಲ್ಲಿ ಕಂಗನಾ ಅವರು ಆಡಿರುವ ಈ ಮಾತುಗಳಿಂದ ಹರಿಯಾಣದಲ್ಲಿ ಎದುರಾಗಬಹುದಾದ ಕೆಟ್ಟ ಪರಿಣಾಮದಿಂದ ತನ್ನನ್ನು ರಕ್ಷಿಸಿಕೊಳ್ಳಲು ಬಿಜೆಪಿಯು ಈ ಸ್ಪಷ್ಟನೆ ನೀಡಿದೆ ಎಂದು ವಿಶ್ಲೇಷಿಸಲಾಗಿದೆ.

13ನೇ ಪುಟ ನೋಡಿ

ದೇಶದಲ್ಲೇ ಅತಿ ಹೆಚ್ಚು ಏರಿಕೆ: ಆಸ್ತಿ ಮೌಲ್ಯ ಶೇ 90ರಷ್ಟು ನೆಗೆತ

ಬಾಗಲೂರು: ಮನೆ ಬೆಲೆ ಬಾನೆತ್ತರಕ್ಕೆ!

ನವದೆಹಲಿ (ಪಿಟಿಐ): ಬೆಂಗಳೂರಿನ ಬಾಗಲೂರಲ್ಲಿ 2020ರ ಬಳಿಕ ಮನೆಗಳ ಸರಾಸರಿ ಬೆಲೆಯಲ್ಲಿ ಶೇ 90ರಷ್ಟು ಹೆಚ್ಚಳವಾಗಿದೆ ಎಂದು ರಿಯಲ್ ಎಸ್ಟೇಟ್ ಸಲಹಾ ಸಂಸ್ಥೆ ಅನರಾಕ್ ಹೇಳಿದೆ.

ಕಳೆದ ಐದು ವರ್ಷಗಳಲ್ಲಿ ಮನೆಗಳ ಬೆಲೆ ಏರಿಕೆ ವಿಚಾರದಲ್ಲಿ ಬೆಂಗಳೂರಿನ ವೈಟ್‌ಫೀಲ್ಡ್ ಮತ್ತು ಸರ್ಜಾಪುರ ರಸ್ತೆ ಕ್ರಮವಾಗಿ ಮೂರು ಮತ್ತು ಐದನೇ ಸ್ಥಾನಗಳಲ್ಲಿವೆ. ಅನರಾಕ್ ಸಂಸ್ಥೆಯು ಬೆಂಗಳೂರು ಸೇರಿದಂತೆ ದೇಶದ ಏಳು ಪ್ರಮುಖ ನಗರಗಳನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿತ್ತು.

'ಬಾಗಲೂರಲ್ಲಿ 2019ರ ಕೊನೆಯಲ್ಲಿ ಮನೆಗಳ ಸರಾಸರಿ ಬೆಲೆ ಚದರ ಅಡಿಗೆ ₹4,300 ಇತ್ತು. ಈ ವರ್ಷದ ಜೂನ್ ಅಂತ್ಯದ ವೇಳೆಗೆ ಪ್ರತಿ ಚದರ ಅಡಿಗೆ ಸರಾಸರಿ ಬೆಲೆ ₹8,151ಕ್ಕೆ ಏರಿದೆ' ಎಂದು ಅನರಾಕ್ ಅಧ್ಯಕ್ಷ ಅನುಜ್ ಪುರಿ ಹೇಳಿದ್ದಾರೆ.

ಎಲ್ಲಿ, ಎಷ್ಟು ಹೆಚ್ಚಳ (ಪ್ರತಿ ಚದರ ಅಡಿಗೆ ₹ಗಳಲ್ಲಿ)

ಪ್ರದೇಶ	2019	2024 (ಜೂನ್‌ವರೆಗೆ)	ಶೇ ಏರಿಕೆ
ಬಾಗಲೂರು (ಬೆಂಗಳೂರು)	4,300	8,151	90
ಕೋಕಾಪೇಟ್ (ಹೈದರಾಬಾದ್)	4,750	9,000	89
ವೈಟ್‌ಫೀಲ್ಡ್ (ಬೆಂಗಳೂರು)	4,765	8,600	80
ದ್ವಾರಕಾ ಎಕ್ಸ್‌ಪ್ರೆಸ್‌ವೇ (ನವದೆಹಲಿ)	5,359	9,600	79
ಸರ್ಜಾಪುರ ರಸ್ತೆ (ಬೆಂಗಳೂರು)	5,870	9,300	58
ಬಾಚುಪಲ್ಲಿ (ಹೈದರಾಬಾದ್)	3,690	5,800	57
ತೆಲ್ಲಾಪುರ್ (ಹೈದರಾಬಾದ್)	4,819	7,350	53

ವೈಟ್‌ಫೀಲ್ಡ್ ಮತ್ತು ಸರ್ಜಾಪುರ ರಸ್ತೆಯಲ್ಲಿ ಇದೇ ಅವಧಿಯಲ್ಲಿ ಮನೆಗಳ ಸರಾಸರಿ ಬೆಲೆಯಲ್ಲಿ ಕ್ರಮವಾಗಿ ಶೇ 80 ಹಾಗೂ ಶೇ 58ರಷ್ಟು ಹೆಚ್ಚಳವಾಗಿದೆ.

ಬೆಂಗಳೂರಿನ ರಿಯಲ್ ಎಸ್ಟೇಟ್ ಪ್ರಗತಿಯ ಕುರಿತು ಪ್ರತಿಕ್ರಿಯಿಸಿದ ಬಿಸಿಡಿ ಸಮೂಹದ ಸಿಎಂಡಿ ಅಂಗದ್ ಬೇಡಿ, 'ಉತ್ತರ ಬೆಂಗಳೂರು, ವೈಟ್‌ಫೀಲ್ಡ್ ಮತ್ತು ಸರ್ಜಾಪುರ ರಸ್ತೆಯಲ್ಲಿ ಮನೆಗಳ ಬೆಲೆಯಲ್ಲಿ ಗಣನೀಯ ಏರಿಕೆಗೆ ಈ ಭಾಗಗಳಲ್ಲಿ ಮೂಲಸೌಕರ್ಯಗಳ ತ್ವರಿತ ಅಭಿವೃದ್ಧಿಯೇ ಕಾರಣ' ಎಂದಿದ್ದಾರೆ.

'ಬೆಂಗಳೂರು: ಸರಾಸರಿ ಶೇ 28 ಏರಿಕೆ'

ಬೆಂಗಳೂರಿನಲ್ಲಿ ಒಟ್ಟಾರೆಯಾಗಿ ಮನೆಗಳ ಬೆಲೆ ಕಳೆದ ಜೂನ್ ತ್ರೈಮಾಸಿಕಕ್ಕೆ ಹೋಲಿಸಿದರೆ ಶೇ 28ರಷ್ಟು ಹೆಚ್ಚಳವಾಗಿದೆ ಎಂದು ಕ್ರೆಡಾಯ್, ಕೊಲಿಯರ್ಸ್ ಮತ್ತು ಲಯಾಸಸ್ ಫೊರಸ್ ಜಂಟಿಯಾಗಿ ನಡೆಸಿರುವ ಅಧ್ಯಯನ ವರದಿಯೊಂದು ಹೇಳಿದೆ.

2023ರ ಜೂನ್ ತ್ರೈಮಾಸಿಕದಲ್ಲಿ ಪ್ರತಿ ಚದರ ಅಡಿಗೆ ₹8,688 ಇದ್ದರೆ, 2024ರ ಜೂನ್ ತ್ರೈಮಾಸಿಕಕ್ಕೆ ₹11,161ಕ್ಕೆ ಏರಿಕೆಯಾಗಿದೆ ಎಂದಿದೆ.

ಚಿನಕುರುಳಿ
ಪ್ರಕಾಶ್ ಶೆಟ್ಟಿ

₹2.88 ಲಕ್ಷ ನಿವ್ವಳ ಲಾಭ

ಯಲಹಂಕ: ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ಸಂಘದ ವತಿಯಿಂದ ಉಪನಗರದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ 15ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯಲ್ಲಿ ಹಲವು ನಿರ್ಣಯಗಳನ್ನು ಮಂಡಿಸಿ, ಅಂಗೀಕಾರ ಪಡೆಯಲಾಯಿತು.

ಈ ವೇಳೆ ಮಾತನಾಡಿದ ಸಂಘದ ಅಧ್ಯಕ್ಷ ಎಂ.ಮುನಿರೆಡ್ಡಿ, ಸಹಕಾರಿಯ ಸದಸ್ಯರ ಸಂಖ್ಯೆ ವರ್ಷಕಳೆದಂತೆ ಹೆಚ್ಚಾಗುತ್ತಿದ್ದು, ಈಗ 5800ರ ಗಡಿಯನ್ನು ದಾಟಿದೆ. ಸಂಘವು ಪ್ರಸಕ್ತ ಆರ್ಥಿಕ ವರ್ಷದಲ್ಲಿ ₹106.54 ಲಕ್ಷ ಠೇವಣಿ ಹೊಂದಿದ್ದು, ಸದಸ್ಯರಿಗೆ ವಿವಿಧ ರೂಪದಲ್ಲಿ ₹81.77 ಲಕ್ಷ ಸಾಲ ನೀಡಿ, ₹2.88 ಲಕ್ಷ ನಿವ್ವಳ ಲಾಭದೊಂದಿಗೆ ಪ್ರಗತಿಯ ಹಾದಿಯಲ್ಲಿದೆ ಎಂದರು.

ಸಹಕಾರಿಯ ವತಿಯಿಂದ ಮೊಬೈಲ್ ಬ್ಯಾಂಕಿಂಗ್ ಸೇವೆಗಳಾದ ಮೊಬೈಲ್ ಅಪ್ಲಿಕೇಶನ್, ಸದಸ್ಯತ್ವ ಸಂಖ್ಯೆಯಿಂದ ಸಹಕಾರಿಯ ವೆಬ್‌ಸೈಟ್‌ಗೆ ಲಾಗಿನ್ ಮತ್ತು ವಿಭಿನ್ನ ಭಾಷೆಗಳಲ್ಲಿ ವಹಿವಾಟು ನಡೆಸಲು ಅವಕಾಶ, ಖಾತೆ ಸಂಬಂಧಿತ ವಿವಿಧ ಆಯ್ಕೆಗಳ ಲಭ್ಯತೆ ಮತ್ತು ಎಲ್ಲಿಂದಲಾದರೂ ಖಾತೆ ವಿವರ ತಿಳಿಯಬಹುದಾದ ಸೌಲಭ್ಯ ಕಲ್ಪಿಸಲಾಗಿದೆ. ಕ್ಯೂ ಆರ್ ಕೋಡ್ ಸ್ಕ್ಯಾನಿಂಗ್ ಮೂಲಕ ಸಹಕಾರಿಯ ಮೊಬೈಲ್ ಅಪ್ಲಿಕೇಶನ್ ಪ್ಲೇ ಸ್ಟೋರ್‌ನಲ್ಲಿ ಡೌನ್ ಲೋಡ್ ಮಾಡಿಕೊಳ್ಳುವ ಸೌಲಭ್ಯಗಳನ್ನು ಸದಸ್ಯರಿಗೆ ನೀಡಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಸಂಘದ ಉಪಾಧ್ಯಕ್ಷ ಎಸ್.ಎನ್. ಸಂಪತ್‌ಕುಮಾರ್, ನಿರ್ದೇಶಕ ಎಸ್.ಜಿ. ನರಸಿಂಹಮೂರ್ತಿ, ಎಂ. ಮೋಹನ್ ಕುಮಾರ್, ಎಚ್.ರಾಜಣ್ಣ, ಅರುಣ ಪ್ರಕಾಶ್, ಬಿ.ಎಂ.ಗೀತಾ, ಟಿ.ಎನ್. ಶ್ರೀನಿವಾಸ್, ಕೆ.ಜಿ.ರಾಮಕೃಷ್ಣಯ್ಯ, ಜಿ. ನರಸಿಂಹಮೂರ್ತಿ, ಸಿ.ಶ್ರೀನಿವಾಸ್, ಕೆ.ವಿ. ಸತೀಶ್, ಸಿ.ಆರ್.ಜಯಪ್ಪರೆಡ್ಡಿ, ಸಿಇಒ ನಾಗೇಶ್.ಟಿ.ಆರ್ ಉಪಸ್ಥಿತರಿದ್ದರು.

ಒಪ್ಪಿಗೆಗೆ ಕಾಯುತ್ತಿದೆ ಬಿಎಂಆರ್‌ಸಿಎಲ್

ಹೆಬ್ಬಾಳ– ಸರ್ಜಾಪುರ ಮೆಟ್ರೊ ಮಾರ್ಗ • ಎರಡು ತಿಂಗಳ ಹಿಂದೆ ಸರ್ಕಾರಕ್ಕೆ ವಿಸ್ತೃತ ಯೋಜನಾ ವರದಿ ಸಲ್ಲಿಸಿರುವ ಬೆಂಗಳೂರು ಮೆಟ್ರೊ ರೈಲು ನಿಗಮ

• ಬಾಲಕೃಷ್ಣ ಪಿ.ಎಚ್.



36.585 ಕಿ.ಮೀ. ಹೆಬ್ಬಾಳ–ಸರ್ಜಾಪುರ ಮಾರ್ಗದ ಉದ್ದ

28 ಒಟ್ಟು ನಿಲ್ದಾಣಗಳ ಸಂಖ್ಯೆ

4 ಇಂಟರ್‌ಚೇಂಜ್‌ಗಳ ಸಂಖ್ಯೆ

₹28,405 ಕೋಟಿ ಯೋಜನೆಯ ಅಂದಾಜು ವೆಚ್ಚ

ಬೆಂಗಳೂರು: 'ನಮ್ಮ ಮೆಟ್ರೊ' ಹಂತ 3ಎ ಹೆಬ್ಬಾಳ–ಸರ್ಜಾಪುರ ಕಾರಿಡಾರ್ ನಿರ್ಮಾಣಕ್ಕಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಒಪ್ಪಿಗೆಗಾಗಿ ಬಿಎಂಆರ್‌ಸಿಎಲ್ ಕಾಯುತ್ತಿದೆ.

'ನಮ್ಮ ಮೆಟ್ರೊ' ಹಳೆಯ ಯೋಜನೆಗಳಲ್ಲಿ ಒಂದಾಗಿರುವ ಹೆಬ್ಬಾಳ–ಸರ್ಜಾಪುರ ಮಾರ್ಗಕ್ಕೆ (ಕೆಂಪು) ಸಂಬಂಧಿಸಿದಂತೆ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್) ಜೂನ್‌ನಲ್ಲಿ ಸರ್ಕಾರಕ್ಕೆ ಸಲ್ಲಿಸಿದೆ.

ನಗರದ ಪ್ರಮುಖ ವಹಿವಾಟು ಪ್ರದೇಶಗಳಲ್ಲಿ ಒಂದಾಗಿರುವ ಕೋರಮಂಗಲವನ್ನು ಹಾದು ಹೋಗುವ ಈ ಮಾರ್ಗವು 17 ಎತ್ತರಿಸಿದ ಹಾಗೂ 11 ನೆಲದಡಿಯ ನಿಲ್ದಾಣಗಳನ್ನು ಹೊಂದಿರಲಿದೆ. ಹೆಬ್ಬಾಳ, ಗಂಗಾನಗರ ಮತ್ತು ಪಶು ವೈದ್ಯಕೀಯ ಕಾಲೇಜು ನಿಲ್ದಾಣದವರೆಗೆ ಎತ್ತರಿಸಿದ ಮಾರ್ಗ ಇರಲಿದೆ. ಅಲ್ಲಿಂದ ಕೋರಮಂಗಲ ಮೂರನೇ ಬ್ಲ್ಯಾಕ್ ವರೆಗೆ 14.449 ಕಿ.ಮೀ. ಸುರಂಗ ಮಾರ್ಗವನ್ನು ಹೊಂದಿದೆ. ಅಲ್ಲಿಂದ ಮುಂದಕ್ಕೆ ಸರ್ಜಾಪುರವರೆಗೆ ಮತ್ತೆ ಎತ್ತರಿಸಿದ ಮಾರ್ಗ ಇರಲಿದೆ. 22.136 ಕಿ.ಮೀ. ಎತ್ತರಿಸಿದ ಮಾರ್ಗ ಸೇರಿ ಒಟ್ಟು 36.585 ಕಿ.ಮೀ. ಉದ್ದದ ಮಾರ್ಗ ಇದಾಗಿದೆ.

ಎಂಟನೇ ಕಾರಿಡಾರ್: ಮೆಟ್ರೊ ಒಂದನೇ ಹಂತದಲ್ಲಿ ನೇರಳೆ ಮಾರ್ಗ ಮತ್ತು ಹಸಿರು ಮಾರ್ಗ ನಿರ್ಮಾಣಗೊಂಡು ಕಾರ್ಯಾಚರಣೆಯಲ್ಲಿದೆ. ಹಂತ 2ರ ಕಾರಿಡಾರ್‌ಗಳಲ್ಲಿ ಹಳದಿ ಮಾರ್ಗ ಉದ್ಘಾಟನಾ ಹಂತಕ್ಕೆ ಬಂದಿದ್ದು, ಗುಲಾಬಿ ಮತ್ತು ನೀಲಿ ಮಾರ್ಗಗಳು ನಿರ್ಮಾಣ ಹಂತದಲ್ಲಿವೆ. ಹಂತ–3ರಲ್ಲಿ ಕೇಸರಿ ಮಾರ್ಗದ ಎರಡು ಕಾರಿಡಾರ್‌ಗಳಿಗೆ ಕೇಂದ್ರ ಸರ್ಕಾರದ ಒಪ್ಪಿಗೆ ಸಿಕ್ಕಿದ್ದು, ಕಾಮಗಾರಿ ಆರಂಭಗೊಳ್ಳಲಿದೆ. ಹೆಬ್ಬಾಳ–ಸರ್ಜಾಪುರ ಮಾರ್ಗಕ್ಕೆ ಒಪ್ಪಿಗೆ ಸಿಕ್ಕಿದರೆ ಇದು ಎಂಟನೇ ಕಾರಿಡಾರ್ ಆಗಲಿದೆ.

ಈ ಕೆಂಪು ಮಾರ್ಗದಲ್ಲಿ ನಾಲ್ಕು ಇಂಟರ್‌ಚೇಂಜ್‌ಗಳು ಇರಲಿವೆ. ಹೆಬ್ಬಾಳದಲ್ಲಿ ಕೇಸರಿ ಮತ್ತು ನೀಲಿ ಮಾರ್ಗವನ್ನು ಸಂಪರ್ಕಿಸಲಿದೆ. ಕೆ.ಆರ್. ಸರ್ಕಲ್‌ನಲ್ಲಿ ನೇರಳೆ ಮಾರ್ಗವನ್ನು, ಡೇರಿ ಸರ್ಕಲ್‌ನಲ್ಲಿ ಗುಲಾಬಿ ಮಾರ್ಗವನ್ನು ಮತ್ತು ಅಗರದಲ್ಲಿ ಮತ್ತೆ ನೀಲಿ ಮಾರ್ಗವನ್ನು ಸಂಪರ್ಕಿಸುವುದರಿಂದ ಪ್ರಯಾಣಿಕರಿಗೆ ಮಾರ್ಗ ಬದಲಾವಣೆಗೆ ಅವಕಾಶ ಸಿಗಲಿದೆ. ನೀಲಿ ಮಾರ್ಗ ಸಂಪರ್ಕಿಸುವುದರಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಚರಿಸುವವರಿಗೆ ಅನುಕೂಲವಾಗಲಿದೆ.

ಹೆಬ್ಬಾಳ–ಸರ್ಜಾಪುರ ಮೆಟ್ರೊ ಮಾರ್ಗ ನಿರ್ಮಾಣ ಯೋಜನೆಯನ್ನು 2022ರಲ್ಲಿ ರಾಜ್ಯ ಸರ್ಕಾರವು ಬಜೆಟ್‌ನಲ್ಲಿ ಘೋಷಣೆ ಮಾಡಿತ್ತು. ಎರಡು ವರ್ಷಗಳ ಬಳಿಕ ರಾಜ್ಯ ಸರ್ಕಾರಕ್ಕೆ ಡಿಪಿಆರ್ ಸಲ್ಲಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದ ಒಪ್ಪಿಗೆ ಸಿಕ್ಕಿದರೆ ಕೇಂದ್ರಕ್ಕೆ

ಎಂ. ಮಹೇಶ್ವರ ರಾವ್

'ಮೆಟ್ರೊ ಹಂತ ಮೂರರ ಜೆ.ಪಿ.ನಗರ ನಾಲ್ಕನೇ ಹಂತ–ಕೆಂಪಾಪುರ ಮತ್ತು ಹೊಸಹಳ್ಳಿ–ಕಡಬಗೆರೆ ಕಾರಿಡಾರ್‌ಗಳಿಗೆ ರಾಜ್ಯ ಸರ್ಕಾರವು ನವೆಂಬರ್‌ನಲ್ಲಿ ಅನುಮೋದನೆ ನೀಡಿದ್ದು, ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿತ್ತು. ಎರಡು ವಾರದ ಹಿಂದೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. 3–ಎ ಕಾರಿಡಾರ್‌ನ ಡಿಪಿಆರ್ ರಾಜ್ಯ ಸರ್ಕಾರದ ಹಂತದಲ್ಲಿದೆ. ರಾಜ್ಯ ಸರ್ಕಾರದ ಅನುಮೋದನೆ ಸಿಕ್ಕಿದ ಬಳಿಕ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುವುದು. ಕೇಂದ್ರ ಸರ್ಕಾರದ ಒಪ್ಪಿಗೆ ಸಿಕ್ಕಿದ ಬಳಿಕ ಯೋಜನೆ ಅನುಷ್ಠಾನಗೊಳ್ಳಲಿದೆ' ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಸುದ್ದಿ 2 ನಿಮಿಷ

'ಖರ್ಗೆ ಕುಟುಂಬಕ್ಕೆ ಮಸಿ ಬಳಿಯಲು ಲಹರ್ ಸಿಂಗ್ ಯತ್ನ'

ಬೆಂಗಳೂರು: 'ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರ ರಾಹುಲ್ ಖರ್ಗೆ ಅವರ ಸಿದ್ಧಾರ್ಥ ವಿಹಾರ ಶಿಕ್ಷಣ ಟ್ರಸ್ಟ್‌ಗೆ ನಾಗರಿಕ ಸೌಲಭ್ಯದ ನಿವೇಶನ ನಿಯಮ ಪ್ರಕಾರವೇ ಹಂಚಿಕೆ ಆಗಿದ್ದರೂ, ಖರ್ಗೆ ಕುಟುಂಬಕ್ಕೆ ಮಸಿ ಬಳಿಯಲು ಬಿಜೆಪಿ ನಾಯಕ ಲಹರ್ ಸಿಂಗ್ ಸಿರೋಯ ಜಾತಿಯ ಬಣ್ಣ ಲೇಪಿಸಿದ್ದಾರೆ' ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಒಂದು ಸಮುದಾಯವನ್ನು ಲಹರ್ ಸಿಂಗ್ ಗುರಿ ಮಾಡಿರುವ ಕಾರಣಕ್ಕೆ ಅವರ ವಿರುದ್ಧ ದೂರು ದಾಖಲಿಸಲಾಗುವುದು. ಅವರು ಸಾರ್ವಜನಿಕವಾಗಿ ಕ್ಷಮೆ ಕೇಳದಿದ್ದರೆ ಕಾಂಗ್ರೆಸ್ ಪಕ್ಷ ಅವರ ವಿರುದ್ಧ ಹೋರಾಟ ಹಮ್ಮಿಕೊಳ್ಳಲಿದೆ' ಎಂದು ಎಚ್ಚರಿಕೆ ನೀಡಿದರು.

'ರಾಜಸ್ಥಾನದಿಂದ ವಲಸೆ ಬಂದು ಕರ್ನಾಟಕದಲ್ಲಿ ರಾಜಕೀಯವಾಗಿ ಲಾಟರಿ ಹೊಡೆದವರಲ್ಲಿ ಲಹರ್ ಸಿಂಗ್ ಕೂಡಾ ಒಬ್ಬರು. ಅವರಿಂದ ಕರ್ನಾಟಕದ ಅಭಿವೃದ್ಧಿಗೆ, ಬೆಳವಣಿಗೆಗೆ ಕಿಂಚಿತ್ತೂ ಕೊಡುಗೆಯಿಲ್ಲ. ಬಿಜೆಪಿಯ ಖಜಾಂಚಿಯಾಗಿದ್ದ ಅವರು ಹೇಗೆ ರಾಜ್ಯಸಭೆ ಸದಸ್ಯ ಸ್ಥಾನಕ್ಕೆ ಹೋದರು ಎಂಬುದರ ಬಗ್ಗೆ ತನಿಖೆ ಆಗಬೇಕಿದೆ. ಯಾವ್ಯಾವ ನಾಯಕರಿಗೆ ಏನು ಕೆಲಸ ಮಾಡಿಕೊಟ್ಟು ಈ ಹುದ್ದೆಗೆ ಅವರು ಏರಿದ್ದಾರೆ ಎಂಬ ಬಗ್ಗೆಯೂ ತನಿಖೆ ನಡೆಸಬೇಕು' ಎಂದು ಆಗ್ರಹಿಸಿದರು.

'ರಾಹುಲ್ ಖರ್ಗೆ ಅವರ ಟ್ರಸ್ಟ್‌ಗೆ ನಿವೇಶನ ನೀಡಿರುವುದನ್ನು ಪ್ರಶ್ನಿಸುವ ಮೂಲಕ ಲಹರ್ ಸಿಂಗ್ ಅವರು, ದಲಿತ ವಿರೋಧಿ ಮನಸ್ಥಿತಿ ಹೊಂದಿರುವ ಬಿಜೆಪಿಯ ಗುಣವನ್ನು ಹೊರ ಹಾಕಿದ್ದಾರೆ' ಎಂದೂ ಟೀಕಿಸಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ರಾಮಚಂದ್ರಪ್ಪ ಇದ್ದರು.

ಪರೀಕ್ಷೆ: ಇಂದು ಹೆಚ್ಚುವರಿ ಬಸ್

ಬೆಂಗಳೂರು: ಗೆಜೆಟೆಡ್ ಪ್ರೊಬೆಷನರಿ ಗ್ರೂಪ್ 'ಎ' ಮತ್ತು 'ಬಿ' ವೃಂದದ ಹುದ್ದೆ ಭರ್ತಿಗೆ ನಡೆಯುವ ಪೂರ್ವಭಾವಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮಂಗಳವಾರ (ಆಗಸ್ಟ್ 27) ಜಿಲ್ಲಾ, ತಾಲ್ಲೂಕು ಕೇಂದ್ರಗಳಿಂದ ಹೆಚ್ಚುವರಿ ಬಸ್‌ಗಳನ್ನು ಓಡಿಸಲು ಕೆಎಸ್‌ಆರ್‌ಟಿಸಿ ನಿರ್ಧರಿಸಿದೆ.

ಬಸ್ ವ್ಯವಸ್ಥೆ ಕಲ್ಪಿಸುವಂತೆ ಪರೀಕ್ಷೆ ಬರೆಯುವ ಅಭ್ಯರ್ಥಿಗಳು 'ಎಕ್ಸ್' ಖಾತೆ ಮೂಲಕ ಮುಖ್ಯಮಂತ್ರಿಯವರಿಗೆ ಮನವಿ ಮಾಡಿದ್ದರು. ಇದಕ್ಕೆ ಸ್ಪಂದಿಸಿರುವ ಕೆಎಸ್‌ಆರ್‌ಟಿಸಿ ನಗರದ ಸುತ್ತಮುತ್ತಲಿನ ಜಿಲ್ಲೆಗಳಾದ ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ, ತುಮಕೂರು ಇನ್ನಿತರ ಜಿಲ್ಲಾ ಕೇಂದ್ರಗಳಿಂದ, ವಿವಿಧ ತಾಲ್ಲೂಕು ಕೇಂದ್ರಗಳಿಂದ ಪರೀಕ್ಷಾ ಕೇಂದ್ರಗಳಿಗೆ ಹೆಚ್ಚುವರಿ ಬಸ್ ಓಡಿಸಲಿದೆ ಎಂದು ನಿಗಮದ ಮುಖ್ಯ ಸಂಚಾರ ವ್ಯವಸ್ಥಾಪಕರು ತಿಳಿಸಿದ್ದಾರೆ.

ರಾಜಭವನ ಚಲೋ ಸಂಚಾರ ಮಾರ್ಗ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ವತಿಯಿಂದ ಮಂಗಳವಾರ ರಾಜಭವನ ಚಲೋ ಹಮ್ಮಿಕೊಂಡಿರುವ ಕಾರಣ ಸಂಚಾರ ದಟ್ಟಣೆ ನಿವಾರಣೆಗೆ ಪೊಲೀಸರು ಸಂಚಾರ ಮಾರ್ಗದಲ್ಲಿ ಕೆಲವು ಬದಲಾವಣೆ ಮಾಡಿದ್ದಾರೆ.

ಮೈಸೂರು, ತುಮಕೂರು, ಕನಕಪುರ, ಬಳ್ಳಾರಿ ರಸ್ತೆ ಹಾಗೂ ಹಳೆ ಮದ್ರಾಸ್ ರಸ್ತೆಗಳ ಕಡೆಯಿಂದ ಸಾವಿರಾರು ಪ್ರತಿಭಟನಕಾರರು ಸ್ವಾತಂತ್ರ್ಯ ಉದ್ಯಾನಕ್ಕೆ ಬರುವ ಸಾಧ್ಯತೆ ಇದೆ. ಹಾಗಾಗಿ ಅಂದು ಬೆಳಿಗ್ಗೆ 9 ರಿಂದ ಸಂಜೆ 4ರವರೆಗೆ ವಾಹನ ಸವಾರರು ಪರ್ಯಾಯ ಮಾರ್ಗ ಬಳಸಬೇಕಿದೆ.

ಪ್ರತಿಭಟನೆಗೆ ಬರುವ ಬಸ್‌ಗಳು ಮೇಖ್ರಿವೃತ್ತದ ಬಳಿಯ ಅರಮನೆ ಮೈದಾನದ ಗೇಟ್ ನಂ 1, 2, ಮತ್ತು 3ರಲ್ಲಿ ನಿಲುಗಡೆ ಮಾಡಬೇಕು. ಕಾರು, ದ್ವಿಚಕ್ರ ವಾಹನಗಳನ್ನು ಸ್ವಾತಂತ್ರ್ಯ ಉದ್ಯಾನದಲ್ಲಿರುವ ಬಹುಮಹಡಿ ಕಾರು ಪಾರ್ಕಿಂಗ್ ಜಾಗದಲ್ಲಿ ಶುಲ್ಕ ಪಾವತಿಸಿ ನಿಲುಗಡೆ ಮಾಡಬೇಕು.

ಮಂಗಳವಾರ ಕೆಪಿಎಸ್‌ಸಿ ಪರೀಕ್ಷೆ ಕೂಡ ಇರುವುದರಿಂದ ಪರೀಕ್ಷಾರ್ಥಿಗಳು ಮುಂಚಿತವಾಗಿ ಪರೀಕ್ಷಾ ಕೇಂದ್ರಗಳಿಗೆ ತಲುಪುವಂತೆ ಪೊಲೀಸರು ಸಲಹೆ ನೀಡಿದ್ದಾರೆ.

ಬೆಂಗಳೂರಿನ ಕಥೆ: ದುಂಡುಮೇಜಿನ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರಿನ ಕಥೆ: ಸಮತೋಲನ ಬೆಳವಣಿಗೆ, ಸುಸ್ಥಿರತೆ ಮತ್ತು ಒಳಗೊಳ್ಳುವಿಕೆ' ದುಂಡುಮೇಜಿನ ಸಭೆಯನ್ನು ನೀತಿ ಆಯೋಗದೊಂದಿಗೆ ಜನಾಗ್ರಹ ಸಂಸ್ಥೆಯು ಸೋಮವಾರ ನಡೆಸಿತು.

ಆರ್ಥಿಕ ಬೆಳವಣಿಗೆ, ಉದ್ಯೋಗ ಸೃಷ್ಟಿ, ವಲಸಿಗರಿಗೆ ಸ್ವಾಗತ ನೀಡುವ ಮನೋಭಾವವು ಬೆಂಗಳೂರಿನ ಬೆಳವಣಿಗೆ ದೇಶದಲ್ಲಿ ಮಾತ್ರವಲ್ಲ, ಜಾಗತಿಕವಾಗಿ ಗುರುತಾಗಿದೆ. ಈ ಬೆಳವಣಿಗೆಯ ಜೊತೆಗೆ ಯೋಜಿತ ನಗರವನ್ನಾಗಿ ಮಾಡಬೇಕಿದೆ ಎಂದು ಉದ್ಯಮಿಗಳು ಸಲಹೆ ನೀಡಿದರು.

ಎರಡು ದಶಕಗಳಲ್ಲಿ ನಗರ ಬೆಳೆದ ರೀತಿ, ಮುಂದೆ ಎಲ್ಲರನ್ನೂ ಒಳಗೊಂಡು ಬೆಳೆಯಬೇಕಿರುವ ದಾರಿಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು. ಅತಿವೇಗದಿಂದ ಬೆಳೆಯುತ್ತಿರುವ ನಗರದಿಂದ ಮುಂದೆ ಉಂಟಾಗಬಹುದಾದ ಅಪಾಯಗಳು ಮತ್ತು ಅವಕಾಶಗಳೆರಡರ ಬಗ್ಗೆಯೂ ಚಿಂತನೆ ನಡೆಸಲಾಯಿತು. ವಾಸಯೋಗ್ಯ ನಗರವನ್ನಾಗಿ ಉಳಿಸಿಕೊಳ್ಳಲು ಮತ್ತು ಪೋಷಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸಲಹೆಗಳನ್ನು ನೀಡಲಾಯಿತು. ಉದ್ಯಮ, ಬಂಡವಾಳ, ಲೋಕೋಪಕಾರ ಮತ್ತು ನಾಗರಿಕ ಸಮಾಜದ ವಿವಿಧ ವರ್ಗಗಳನ್ನು ಪ್ರತಿನಿಧಿಸುವ 18 ಹಿರಿಯ ಪಾಲುದಾರರು ಭಾಗವಹಿಸಿದ್ದರು.

ನಗರದಲ್ಲಿ ಸೋಮವಾರ ನಡೆದ ದುಂಡು ಮೇಜಿನ ಸಭೆಯಲ್ಲಿ ಜನಾಗ್ರಹ ಸಂಸ್ಥೆಯ ಸಿಇಒ ಶ್ರೀಕಾಂತ್ ವಿಶ್ವನಾಥನ್, ನೀತಿ ಆಯೋಗದ ಉಪಾಧ್ಯಕ್ಷರಾದ ಸುಮನ್ ಬೇರಿ ಭಾಗವಹಿಸಿದ್ದರು

ನೀತಿ ಆಯೋಗದ ಉಪಾಧ್ಯಕ್ಷರಾದ ಸುಮನ್ ಬೇರಿ, ಜನಾಗ್ರಹ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಕಾಂತ್ ವಿಶ್ವನಾಥನ್, ಕರ್ನಾಟಕ ಪರಿವರ್ತನಾ ಸಂಸ್ಥೆಯ ಮಾಜಿ ಅಧ್ಯಕ್ಷ ಎಂ.ವಿ. ರಾಜೀವ್ ಗೌಡ, ವಿವಿಧ ಸಂಸ್ಥೆಗಳ ಪ್ರಮುಖರಾದ ವೈತೀಶ್ವರನ್ ಎಸ್., ಲಕ್ಷ್ಮೀ ನಾರಾಯಣ, ರೇವತಿ ಅಶೋಕ್, ನಾರಾಯಣ ರಾಮಚಂದ್ರನ್, ಶ್ರುತಿ ಶಿಬುಲಾಲ್, ಮದನ್ ಪದಕಿ, ದಿನೇಶ್ ಪೈ, ಗಾಯತ್ರಿ ವಾಸುದೇವನ್, ಮಾಲಿನಿ ಗೋಯಲ್, ನಾರಾಯಣ ಪಿ.ಎಸ್. ಉಪಸ್ಥಿತರಿದ್ದರು.

ಡೆಂಗಿ, ಮಲೇರಿಯಾ ನಿಯಂತ್ರಣಕ್ಕಾಗಿ ಈಡಿಸ್ ಸೊಳ್ಳೆಗಳನ್ನು ಆಕರ್ಷಿಸಿ ನಾಶಪಡಿಸುವ ಓವಿ ಟ್ರ್ಯಾಪ್ ಸಾಧನವನ್ನು ಗೋಪಾಲಪುರದಲ್ಲಿ ಆರೋಗ್ಯ ಸಿಬ್ಬಂದಿ ಅಳವಡಿಸಿದರು. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ನೆರವಾದರು
– ಪ್ರಜಾವಾಣಿ ಚಿತ್ರ

'ಭೋಜನ ಬಂಡಿ': ಸಿಬ್ಬಂದಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಲ್ಲಿಸಿದ ಬಸ್ ಅನ್ನು ಭೋಜನ ಬಂಡಿಯನ್ನಾಗಿ ಪರಿವರ್ತಿಸಿದ ಬಿಎಂಟಿಸಿ ತಾಂತ್ರಿಕ ಸಿಬ್ಬಂದಿಗೆ ಪ್ರಶಂಸನಾ ಪತ್ರ ನೀಡಿ ಗೌರವಿಸಲಾಯಿತು.

ಬಿಎಂಟಿಸಿ ಉತ್ತರ ವಲಯದಲ್ಲಿ 10.64 ಲಕ್ಷ ಕಿ.ಮೀ. ಕ್ರಮಿಸಿದ್ದ ಲೇಲ್ಯಾಂಡ್ ವಾಹನವನ್ನು ದಾಸನಪುರದಲ್ಲಿರುವ ಕೇಂದ್ರೀಯ ಕಾರ್ಯಾಗಾರ-4ರ ತಾಂತ್ರಿಕ ಸಿಬ್ಬಂದಿ ಭೋಜನ ಬಂಡಿಯನ್ನಾಗಿ ಪರಿವರ್ತಿಸಿದ್ದರು.

ಬಿಎಂಟಿಸಿ ಕೇಂದ್ರ ಕಚೇರಿಯಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ತಾಂತ್ರಿಕ ಸಿಬ್ಬಂದಿ ಮತ್ತು ಚಾಲನಾ ಸಿಬ್ಬಂದಿಯನ್ನು ಸನ್ಮಾನಿಸಿದರು. ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್., ನಿರ್ದೇಶಕಿ ಶಿಲ್ಪಾ ಎಂ. ಮತ್ತು ಮುಖ್ಯ ತಾಂತ್ರಿಕ ಎಂಜಿನಿಯರ್ ಎ.ಎನ್. ಗಜೇಂದ್ರ ಕುಮಾರ್, ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸಂಚಾರ ನಿಲ್ಲಿಸಿದ ಬಸ್ ಅನ್ನು ಭೋಜನ ಬಂಡಿಯನ್ನಾಗಿ ಪರಿವರ್ತಿಸಿದ ಬಿಎಂಟಿಸಿ ತಾಂತ್ರಿಕ ಸಿಬ್ಬಂದಿಗೆ ಪ್ರಶಂಸನಾ ಪತ್ರ ನೀಡಿ ಗೌರವಿಸಲಾಯಿತು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಬಿಎಂಟಿಸಿ ಅಧಿಕಾರಿಗಳು ಭಾಗವಹಿಸಿದ್ದರು

'ಬನ್ನಿ, ಕುಳಿತು ಊಟ ಮಾಡೋಣ ಎಂಬ ಘೋಷವಾಕ್ಯದೊಂದಿಗೆ ಭೋಜನ ಬಂಡಿ ಡಿಪೊ 8ರಲ್ಲಿ ಆರಂಭಗೊಂಡಿದೆ. ಮುಂದೆ ಎಲ್ಲ ಡಿಪೊಗಳಲ್ಲಿ ಇದೇ ರೀತಿ ಭೋಜನ ಬಂಡಿ ಆರಂಭಿಸುವ ಗುರಿ ಇದೆ' ಎಂದು ಸಚಿವರು ತಿಳಿಸಿದರು. ಕ್ಯಾಂಟೀನ್ ಕಟ್ಟಡಗಳಿಲ್ಲದ ನೂತನವಾಗಿ ನಿರ್ಮಿತವಾಗಿರುವ ಘಟಕಗಳು/ ಬಸ್ ನಿಲ್ದಾಣಗಳಲ್ಲಿ ಭೋಜನ ಬಂಡಿ ಬಳಕೆಯಾಗಲಿದೆ. ಕುಳಿತುಕೊಳ್ಳಲು ಆಸನ ಮತ್ತು ಟೇಬಲ್ ವ್ಯವಸ್ಥೆ, ಫ್ಯಾನ್, ವಾಶ್ ಬೇಸಿನ್, ಕುಡಿಯುವ ನೀರು, ಗಾಳಿ ಬೆಳಕಿನ ವ್ಯವಸ್ಥೆ ಇದರಲ್ಲಿದೆ.

ಆ್ಯಪ್: ಕಾನೂನುಬಾಹಿರ ಸೇವೆ– ಕ್ರಮಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾನೂನುಬಾಹಿರವಾಗಿ ಸೇವೆ ನೀಡುತ್ತಿರುವ ರ‍್ಯಾಪಿಡೊ ಮತ್ತು ಪೋರ್ಟರ್ ಆ್ಯಪ್ ಆಧಾರಿತ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ನಮ್ಮ ಚಾಲಕರ ಟ್ರೇಡ್ ಯೂನಿಯನ್ ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಯೂನಿಯನ್ ಅಧ್ಯಕ್ಷ ಬಿ.ಎನ್. ರವಿಕುಮಾರ್, 'ರಾಜ್ಯದಾದ್ಯಂತ ಚಾಲಕರು ವಾಣಿಜ್ಯ ಬಳಕೆ ವಾಹನಗಳ ಮೂಲಕ ಸಾರ್ವಜನಿಕರಿಗೆ ಸೇವೆ ನೀಡುತ್ತಿದ್ದಾರೆ. ಅನಧಿಕೃತ ಬೈಕ್ ಟ್ಯಾಕ್ಸಿ ಮತ್ತು ಪೋರ್ಟರ್ ಸಂಸ್ಥೆಗಳಿಂದ ಆಟೊ ಮತ್ತು ಗೂಡ್ಸ್ ವಾಹನಗಳ ಮಾಲೀಕರಿಗೆ ನಷ್ಟವಾಗುತ್ತಿದೆ. ಅನಧಿಕೃತವಾಗಿ ಬೈಕ್ ಟ್ಯಾಕ್ಸಿ (ವೈಟ್ ಬೋರ್ಡ್) ಮೂಲಕ ಪ್ರತಿದಿನ 80 ಸಾವಿರ ಬುಕ್ಕಿಂಗ್ ಸೇವೆ ನೀಡುತ್ತಿವೆ' ಎಂದು ದೂರಿದರು.

ನಗರದಲ್ಲಿ ಸಿಎನ್‌ಜಿ ಅನಿಲ ಸ್ಟೇಷನ್ ಮತ್ತು ಬಂಕ್‌ಗಳಲ್ಲಿ ಹಲವು ಸಮಸ್ಯೆಗಳಿವೆ. ಒಂದು ಸ್ಟೇಷನ್‌ನಲ್ಲಿ ಗರಿಷ್ಠ ಎರಡರಿಂದ ಮೂರು ಪಾಯಿಂಟ್‌ಗಳಿವೆ. ಇದರಲ್ಲಿ ಒಂದು ಪಾಯಿಂಟ್ ಹಾಳಾದರೆ, ಗಂಟೆಗಟ್ಟಲೇ ಸರದಿ ಸಾಲಿನಲ್ಲಿ ಆಟೊ ಚಾಲಕರು ಕಾಯಬೇಕಾಗಿದೆ. ಆದ್ದರಿಂದ ಸಿಎನ್‌ಜಿ ಬಂಕ್‌ಗಳ ಸಂಖ್ಯೆ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಶ್ರೀನಿಧಿ ಬ್ಯಾಂಕ್‌ಗೆ ₹8.86 ಕೋಟಿ ಲಾಭ

ಬೆಂಗಳೂರು: 'ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ 2023–24ನೇ ಆರ್ಥಿಕ ವರ್ಷದಲ್ಲಿ ₹8.86 ಕೋಟಿ ನಿವ್ವಳ ಲಾಭಗಳಿಸಿದೆ' ಎಂದು ಬ್ಯಾಂಕ್‌ನ ಅಧ್ಯಕ್ಷ ಸದಾಶಿವರೆಡ್ಡಿ ತಿಳಿಸಿದರು.

ನಗರದಲ್ಲಿ ಭಾನುವಾರ ನಡೆದ 26ನೇ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಮಾತನಾಡಿದ ಅವರು, 'ಬ್ಯಾಂಕ್‌ನ ಷೇರುದಾರ ಸದಸ್ಯರಿಗೆ ಶೇಕಡ 14ರಷ್ಟು ಲಾಭಾಂಶವನ್ನು ನೀಡಲಾಗುವುದು' ಎಂದು ಘೋಷಿಸಿದರು.

'ಮಾರ್ಚ್ ಅಂತ್ಯಕ್ಕೆ ಬ್ಯಾಂಕ್‌ನ ಠೇವಣಿ ಪ್ರಮಾಣವು ₹419.52 ಕೋಟಿ ಇದೆ. ಸಾಲದ ಪ್ರಮಾಣ ₹286.46 ಕೋಟಿ ಇದ್ದು, ಒಟ್ಟು ₹709.98 ಕೋಟಿ ವಹಿವಾಟು ನಡೆಸಲಾಗಿದೆ ಎಂದು ಹೇಳಿದರು.

ಡೆಂಗಿ ನಿಯಂತ್ರಣಕ್ಕೆ 'ಓವಿ ಟ್ರ್ಯಾಪ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೆಂಗಿ, ಮಲೇರಿಯಾ ನಿಯಂತ್ರಣಕ್ಕಾಗಿ ಈಡಿಸ್ ಸೊಳ್ಳೆಗಳನ್ನು ಆಕರ್ಷಿಸಿ ನಾಶಪಡಿಸುವ ಓವಿ ಟ್ರ್ಯಾಪ್ ಸಾಧನಗಳಿಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಸೋಮವಾರ ಗೋಪಾಲಪುರದಲ್ಲಿ ಚಾಲನೆ ನೀಡಿದರು.

ದಿನೇಶ್ ಗುಂಡೂರಾವ್ ಮಾತನಾಡಿ, 'ಓವಿ ಟ್ರ್ಯಾಪ್ ಬಯೋ ಸಾಧನವಾಗಿದ್ದು, ಈಡಿಸ್ ಸೊಳ್ಳೆಗಳನ್ನು ಆಕರ್ಷಿಸಿ ನಾಶಪಡಿಸುತ್ತದೆ. ಸೊಳ್ಳೆ ಹೆಚ್ಚಿರುವ ಪ್ರದೇಶಗಳಲ್ಲಿ ಈ ಸಾಧನ ಅಳವಡಿಸುವ ಮೂಲಕ ಡೆಂಗಿ ನಿಯಂತ್ರಣಕ್ಕೆ ತರುವ ನಿಟ್ಟಿನಲ್ಲಿ ಬಿಬಿಎಂಪಿ ಹಾಗೂ ಆರೋಗ್ಯ ಇಲಾಖೆ ಜಂಟಿಯಾಗಿ ಯೋಜನೆ ರೂಪಿಸಿವೆ. ಪ್ರಾಯೋಗಿಕವಾಗಿ ಗೋಪಾಲಪುರದಲ್ಲಿ 120 ಓವಿ ಟ್ರ್ಯಾಪ್ ಸಾಧನಗಳನ್ನು ಮನೆಗಳಿಗೆ ಅಳವಡಿಸಲಾಗಿದೆ' ಎಂದು ಮಾಹಿತಿ ನೀಡಿದರು. ಮುಂಬೈಯ ಧಾರಾವಿ ಕೊಳೆಗೇರಿ ಪ್ರದೇಶಗಳಲ್ಲಿಯೂ ಈ ಪ್ರಯೋಗ ನಡೆಯುತ್ತಿದೆ. ಅದೇ ರೀತಿ ಬೆಂಗಳೂರಿನಲ್ಲೂ ಪ್ರಯೋಗ ಆರಂಭಿಸಲಾಗಿದೆ. ಉತ್ತಮ ಫಲಿತಾಂಶ ದೊರೆತರೆ ರಾಜ್ಯದಾದ್ಯಂತ ಓವಿ ಟ್ರ್ಯಾಪ್ ಸಾಧನಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಬಯೋ ಟ್ರ್ಯಾಪ್: ಇದೊಂದು ಮಡಿಕೆ ಆಕಾರದ ಸಾಧನ. ಕುಂಡದಲ್ಲಿ ನೀರು ತುಂಬಿ ರಾಸಾಯನಿಕ ಬೆರಸಲಾಗುತ್ತದೆ. ರಾಸಾಯನಿಕ ಮಿಶ್ರಣ ಸೊಳ್ಳೆಗಳನ್ನು ಆಕರ್ಷಿಸುತ್ತದೆ. ಈಡಿಸ್ ಸೊಳ್ಳೆಗಳು ಹಾಗೂ ಅವುಗಳ ಮೊಟ್ಟೆಗಳನ್ನು ನಾಶಪಡಿಸುತ್ತದೆ. ಜೈವಿಕ ಟ್ರ್ಯಾಪ್ ಬಳಕೆಯಿಂದ ಶೇ 60ರಷ್ಟು ಸೊಳ್ಳೆಗಳ ನಿಯಂತ್ರಿಸಬಹುದು.

ಅತ್ತಿಬೆಲೆಯಲ್ಲಿ ರಾಮ್‌ರಾಜ್ ನೂತನ ಮಳಿಗೆ ಆರಂಭ

ಬೆಂಗಳೂರು: ಧೋತಿ ಮತ್ತು ಶರ್ಟ್‌ಗಳಿಗೆ ಹೆಸರಾದ ವಿಶ್ವಾಸಾರ್ಹ ಹಾಗೂ ಆಕರ್ಷಕ ಬ್ರ್ಯಾಂಡ್ 'ರಾಮ್‌ರಾಜ್ ಕಾಟನ್ ಕಂಪನಿ'ಯ ನೂತನ ಮಳಿಗೆ ಆ. 26 ರಂದು ಆನೇಕಲ್ ತಾಲ್ಲೂಕಿನ ಅತ್ತಿಬೆಲೆಯಲ್ಲಿ ಆರಂಭಿಸಲಾಯಿತು.

ಶ್ರೀ ಕೃಷ್ಣ ಜನ್ಮಾಷ್ಟಮಿ ಹಬ್ಬದ ಶುಭ ದಿನದಂದು ಬೆಂಗಳೂರಿನ ಆಕ್ಸ್‌ಫರ್ಡ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ. ಎಸ್.ಎನ್.ವಿ.ಎಲ್. ನರಸಿಂಹ ರಾಜು (ರಮೇಶ್ ರಾಜು) ಅವರು ದೀಪ ಬೆಳಗಿಸುವ ಮೂಲಕ ಶೋರೂಂ ಅನ್ನು ಉದ್ಘಾಟಿಸಿದರು. ಯಶವಂತಪುರ ಎಪಿಎಂಸಿ ಯಾರ್ಡ್‌ನ ಎನ್. ಮುನಿಸ್ವಾಮಿ ರೆಡ್ಡಿ ಆ್ಯಂಡ್ ಸನ್ಸ್ ಸಂಸ್ಥೆಯ ಪಾಲುದಾರ ಎ.ಎಸ್. ಅನಿಲ್ ಕುಮಾರ್ ಅವರಿಗೆ ಆರಂಭಿಕ ಮಾರಾಟವನ್ನು ಮಾಡಲಾಯಿತು.

ರಾಮರಾಜ್‌ನ ಹೊಸ ಉತ್ಪನ್ನಗಳಾದ ಬ್ಯಾಕ್ಟೀರಿಯಾ ಮತ್ತು ವೈರಲ್ ಸೋಂಕುಗಳಿಂದ ರಕ್ಷಿಸುವ ಬ್ಯಾಕ್ಟೀರಿಯಾ ವಿರೋಧಿ ಧೋತಿಗಳನ್ನು ಈ ಸಂದರ್ಭದಲ್ಲಿ ಪರಿಚಯಿಸಲಾಯಿತು.

ಅತ್ತಿಬೆಲೆ ಶೋರೂಂ ಉದ್ಘಾಟಿಸಿದ ಡಾ. ಎಸ್.ಎನ್.ವಿ.ಎಲ್. ನರಸಿಂಹ ರಾಜು ಅವರು ಎ.ಎಸ್. ಅನಿಲ್ ಕುಮಾರ್ ಅವರಿಗೆ ಮೊದಲ ಮಾರಾಟ ಮಾಡಿದರು.

ಮಾರಾಟದಲ್ಲಿ ಉತ್ತಮ ಪ್ರಗತಿ: ರಾಮ್‌ರಾಜ್ ಕಾಟನ್ ದಕ್ಷಿಣ ಭಾರತದಲ್ಲಿ ಮಾತ್ರವಲ್ಲದೆ ಉತ್ತರ ಭಾರತ ಮತ್ತು ಹೊರ ರಾಜ್ಯಗಳಲ್ಲೂ ತನ್ನ ಉತ್ಪನ್ನಗಳನ್ನು ಮಾರಾಟ ಮಾಡುತ್ತಲಿದೆ. ಸಂಪ್ರದಾಯ ಮತ್ತು ಸಂಸ್ಕೃತಿ ಉಳಿಸಲು ಉತ್ಸುಕವಾಗಿರುವ ಕಂಪನಿ ಇಡೀ ದಕ್ಷಿಣ ರಾಜ್ಯಗಳಲ್ಲಿ ಕಾಟನ್ ಬಟ್ಟೆಗಳ ಮಾರಾಟದಲ್ಲಿ ಉತ್ತಮ ಪ್ರಗತಿ ಸಾಧಿಸಿದೆ.

ತಮಿಳುನಾಡಿನ ಎಲ್ಲ ಪ್ರಮುಖ ಕೇಂದ್ರಗಳಲ್ಲಿ ತನ್ನ ಶೋರೂಂ ಹೊಂದಿರುವ ರಾಮರಾಜ್ ಕಾಟನ್ ವಿಶ್ವಾದ್ಯಂತ ತನ್ನ ವ್ಯಾಪ್ತಿಯನ್ನು ವಿಸ್ತರಿಸಲು ಇಚ್ಛಿಸಿದೆ. www.ramrajcotton.in ಮೂಲಕ ಆನ್‌ಲೈನ್ ಮಾರಾಟವನ್ನು ಪ್ರಾರಂಭಿಸಿದ್ದು, ಶ್ರೀಲಂಕಾ, ಸಿಂಗಾಪುರ್, ಮಲೇಷ್ಯಾ ಮತ್ತು ಇತರ ದೇಶಗಳಿಗೆ ತನ್ನ ಉತ್ಪನ್ನಗಳನ್ನು ರಫ್ತು ಮಾಡುತ್ತಲಿದೆ.

ಕಂಪನಿಯ ಎಲ್ಲ ಉತ್ಪನ್ನಗಳು ತನ್ನ ಎಕ್ಸ್‌ಕ್ಲೂಸಿವ್ ಶೋರೂಂಗಳಲ್ಲಿ ಮಾತ್ರವಲ್ಲದೇ ಪ್ರಮುಖ ನಗರಗಳ ವಿಮಾನ ನಿಲ್ದಾಣಗಳಲ್ಲಿರುವ ಮಳಿಗೆಗಳಲ್ಲೂ ದೊರೆಯುತ್ತವೆ ಎಂದು ಪ್ರಕಟಣೆಯಲ್ಲಿ ಹೇಳಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ದೈಹಿಕ ಶಿಕ್ಷಣ ಶಿಕ್ಷಕರ ಸತ್ಯಾಗ್ರಹ

ಬೆಂಗಳೂರು: ಸಹ ಶಿಕ್ಷಕರು ಎಂದು ಪರಿಗಣಿಸಬೇಕು ಹಾಗೂ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ನೀಡಬೇಕು ಎಂದು ಆಗ್ರಹಿಸಿ ದೈಹಿಕ ಶಿಕ್ಷಣ ಶಿಕ್ಷಕರು ಆ.29ರಂದು ಧರಣಿ ಸತ್ಯಾಗ್ರಹ ಹಮ್ಮಿಕೊಂಡಿದ್ದಾರೆ.

ಸಮಾನ ವೇತನ, ಸಮಾನ ವಿದ್ಯಾರ್ಹತೆ ಇದ್ದರೂ ಶಾಲಾ ಶಿಕ್ಷಣ ಇಲಾಖೆಯ ಸಹ ಶಿಕ್ಷಕರಿಗೆ ಸಿಗುವ ಸೌಲಭ್ಯ, ಬಡ್ತಿಗಳು ದೈಹಿಕ ಶಿಕ್ಷಕರಿಗೆ ಸಿಗುತ್ತಿಲ್ಲ. ಇಲಾಖೆಯ ಆದೇಶ 17 ವರ್ಷಗಳಿಂದ ಅನುಷ್ಠಾನವಾಗಿಲ್ಲ. ಇಂತಹ ಹಲವು ಬೇಡಿಕೆ ಈಡೇರಿಕೆಗೆ ಸರ್ಕಾರವನ್ನು ಒತ್ತಾಯಿಸಲು ಸ್ವಾತಂತ್ರ್ಯ ಉದ್ಯಾನದಲ್ಲಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ಎಸ್. ಚೌಡಪ್ಪ ಹೇಳಿದ್ದಾರೆ.

ಮಕ್ಕಳ ಅನುಪಾತಕ್ಕೆ ಅನುಗುಣವಾಗಿ ದೈಹಿಕ ಶಿಕ್ಷಕರನ್ನು ನೇಮಿಸುವ ನಿಯಮ ಬದಲಿಸಬೇಕು. ಪಿ. ಯು ಕಾಲೇಜುಗಳಲ್ಲೂ ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆ ಸೃಜಿಸಬೇಕು ಎಂಬುದೂ ಸೇರಿದಂತೆ ಹಲವು ಬೇಡಿಕೆ ಈಡೇರಿಸಲು ಒತ್ತಾಯಿಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹೇಳಿಕೆ

'ಸಮಸ್ಯೆಗೆ ಸಕಾಲದಲ್ಲಿ ಪರಿಹಾರ ಸಿಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಹಾಯ ಹೆಸರಿನಲ್ಲಿ ಆ್ಯಪ್ ಮಾಡಿದರೆ ಸಾಲದು. ಸಕಾಲದಲ್ಲಿ ಜನರಿಗೆ ಪರಿಹಾರ ಸಿಗಬೇಕು. ಇದಕ್ಕಾಗಿ, ಬಿಬಿಎಂಪಿ ಆಡಳಿತಕ್ಕೆ ಚುರುಕು ನೀಡಬೇಕಾಗಿದೆ' ಎಂದು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅಭಿಪ್ರಾಯಪಟ್ಟರು.

ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿರುವ 'ಇಂಟಿಗ್ರೇಟೆಡ್ ಕಮಾಂಡ್ ಕಂಟ್ರೋಲ್ ಸೆಂಟರ್'ಗೆ (ಐಸಿಸಿಸಿ) ಸೋಮವಾರ ಭೇಟಿ ನೀಡಿ ಅವರು ಮಾತನಾಡಿದರು.

'ಉಪ ಮುಖ್ಯಮಂತ್ರಿಯವರು ನಾಗರಿಕರ ಸಮಸ್ಯೆಯನ್ನು ತುರ್ತಾಗಿ ಪರಿಹರಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದ್ದಾರೆ. ಅದರಂತೆ ಪರಿಶೀಲನೆ ನಡೆಸಿ, ಆಡಳಿತದಲ್ಲಿ ಸುಧಾರಣೆ ತರಲು ಕ್ರಮ ಕೈಗೊಳ್ಳಲಾಗಿದೆ. ನಗರದಲ್ಲಿ ನಾಗರಿಕರ ಸಮಸ್ಯೆಗೆ ಸಕಾಲದಲ್ಲಿ ಪರಿಹಾರ ಕಲ್ಪಿಸಲು ಎಲ್ಲ ಇಲಾಖೆಗಳು ಸಮನ್ವಯ ಸಾಧಿಸಬೇಕು. ಪರಿಹಾರ ಕೈಗೊಂಡಿರುವುದರನ್ನು ಜನರಿಗೆ ತಿಳಿಸಬೇಕು' ಎಂದು ಹೇಳಿದರು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಬಿಬಿಎಂಪಿಯ 'ಇಂಟಿಗ್ರೇಟೆಡ್ ಕಮಾಂಡ್ ಕಂಟ್ರೋಲ್ ಸೆಂಟರ್'ನಲ್ಲಿ (ಐಸಿಸಿಸಿ) ಅಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿದರು

ನಗರದಲ್ಲಿ ಹೆಚ್ಚು ಮಳೆ ಬಂದರೆ, ಪ್ರವಾಹ ಉಂಟಾಗುತ್ತಿದೆ. ಮರಗಳು ಬಿದ್ದರೆ ಪ್ರಾಣ ಹಾನಿಯೂ ಆಗುತ್ತಿದೆ. ಇದನ್ನು ಪರಿಹರಿಸಲು ತಾಂತ್ರಿಕವಾಗಿ ಹೇಗೆ ಕ್ರಮ ಕೈಗೊಳ್ಳಬಹುದು ಎಂಬುದನ್ನು ಪ್ರತ್ಯೇಕ ತಂತ್ರಾಂಶ ರೂಪಿಸಬೇಕು ಎಂದು ಸೂಚಿಸಿದರು.

ಮ್ಯಾನ್‌ಹೋಲ್ ಸಮಸ್ಯೆ, ಬೃಹತ್ ನೀರುಗಾಲುವೆಯಲ್ಲಿ ನೀರು ಹರಿವು ಹೆಚ್ಚಳ, ತ್ಯಾಜ್ಯ ನಿರ್ವಹಣೆ ಸೇರಿದಂತೆ ಹಲವು ಸಮಸ್ಯೆಗಳನ್ನು ನಾಗರಿಕರು ಎದುರಿಸುತ್ತಿದ್ದಾರೆ.

ಬಿಬಿಎಂಪಿ ಸುದ್ದಿ

ಬಿಬಿಎಂಪಿ, ಬಿಡಿಎ, ಜಲಮಂಡಳಿ, ಬೆಸ್ಕಾಂ ಸೇರಿದಂತೆ ಎಲ್ಲ ಇಲಾಖೆಗಳ ಮಧ್ಯೆ ಸಮನ್ವಯ ಸಾಧಿಸಬೇಕು. ಸಿಬ್ಬಂದಿ ಕೊರತೆಯನ್ನು ನೆಪವಾಗಿಟ್ಟುಕೊಳ್ಳದೆ, ಆಡಳಿತಾತ್ಮಕವಾಗಿ, ಕ್ರಿಯಾತ್ಮಕವಾಗಿ ಕಾರ್ಯನಿರ್ವಹಿಸಬೇಕು ಎಂಬ ಸೂಚನೆ ನೀಡಲಾಗಿದೆ ಎಂದರು.

ಹಲವು ವರ್ಷಗಳಿಂದ ನಿಂತು ಹೋಗಿದ್ದ ಮುಖ್ಯ ಕಾರ್ಯದರ್ಶಿ ನೇತೃತ್ವದ ಉನ್ನತ ಮಟ್ಟದ ಮಾಸಿಕ ಸಭೆಯನ್ನೂ ಶಾಲಿನಿ ರಜನೀಶ್ ಅವರು ನಡೆಸಿದ್ದಾರೆ.

ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಡಾ. ಕೆ ಹರೀಶ್ ಕುಮಾರ್, ಸುರಳ್ಕರ್ ವಿಕಾಸ್ ಕಿಶೋರ್, ಬಿಎಂಆರ್‌ಡಿಎ ಆಯುಕ್ತ ರಾಜೇಂದ್ರ ಚೋಳನ್, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕಿ ಸುಶೀಲಮ್ಮ ಉಪಸ್ಥಿತರಿದ್ದರು.

Instagram ನ 50+ ಟೂಲ್‌ಗಳ ಮೂಲಕ ನಿಮ್ಮ ಹರೆಯದವರು ಆನ್‌ಲೈನ್‌ನಲ್ಲಿ ಸುರಕ್ಷಿತವಾಗಿರಲು ಸಹಾಯ ಮಾಡಿ.

ನಮ್ಮ ಪ್ಲಾಟ್‌ಫಾರ್ಮ್‌ನಲ್ಲಿ ಹರೆಯದವರನ್ನು ರಕ್ಷಿಸಲು ಸಹಾಯ ಮಾಡಲು, Instagram ನ ಟೂಲ್‌ಗಳಾದ ಸೂಕ್ಷ್ಮ ಕಂಟೆಂಟ್ ನಿಯಂತ್ರಣದಂತದ್ದನ್ನು ಬಳಸಿ, ಅವು ಹರೆಯದವರ ಎಲ್ಲಾ ಖಾತೆಗಳು ಡೀಫಾಲ್ಟ್ ಆಗಿ ಕಡಿಮೆ ಸೂಕ್ಷ್ಮ ಕಂಟೆಂಟ್ ನೋಡುವಂತೆ ಸೆಟ್ ಮಾಡುತ್ತವೆ.

instagram.com/familytools ಇಲ್ಲಿ ನಮ್ಮ 50+ ಟೂಲ್‌ಗಳೊಂದಿಗೆ ಪ್ರಾರಂಭಿಸಿ

ಎಂಜಿನಿಯರ್‌ಗಳು ಲೋಕಾಯುಕ್ತ ಬಲೆಗೆ

ತುಮಕೂರು: ಜೆಜೆಎಂ ಕಾಮಗಾರಿ ಬಿಲ್ ಹಣ ಬಿಡುಗಡೆ ಮಾಡಲು ₹1.51ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಮೂವರು ಎಂಜಿನಿಯರ್‌ಗಳು ಸೋಮವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಚಿಕ್ಕನಾಯಕನಹಳ್ಳಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಉಮಾ ಮಹೇಶ್, ಎಂಜಿನಿಯರ್ ಶಶಿಕುಮಾರ್ (ಹೊರಗುತ್ತಿಗೆ) ಹಾಗೂ ಸಹಾಯಕ ಎಂಜಿನಿಯರ್ ಕಿರಣ್ ಲಂಚ ಪಡೆಯುವಾಗ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾರೆ.

ವರ್ಗಾವಣೆ ಕೌನ್ಸೆಲಿಂಗ್ ಶೀಘ್ರ ಪೂರ್ಣಗೊಳಿಸಿ: ದಿನೇಶ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಪ್ಟೆಂಬರ್ ಮೊದಲ ವಾರದೊಳಗೆ ವರ್ಗಾವಣೆ ಕೌನ್ಸೆಲಿಂಗ್ ಪೂರ್ಣಗೊಳಿಸುವಂತೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಂಗಳೂರಿನ ಆರೋಗ್ಯ ಸೌಧದಲ್ಲಿ ಸೋಮವಾರ ಇಲಾಖೆಯ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಿದರು.

ಎಂಟು ವರ್ಷಗಳ ಬಳಿಕ ಆರೋಗ್ಯ ಇಲಾಖೆಯಲ್ಲಿ ಎಲ್ಲ ವರ್ಗದ ನೌಕರರು, ಸಿಬ್ಬಂದಿಯ ವರ್ಗಾವಣೆಯು ಕೌನ್ಸೆಲಿಂಗ್ ಮೂಲಕ ನಡೆಯುತ್ತಿದೆ. ಸೆಪ್ಟೆಂಬರ್ ಮೊದಲ ವಾರದಲ್ಲಿ

ದಿನೇಶ್ ಗುಂಡೂರಾವ್

ವೈದ್ಯಾಧಿಕಾರಿಗಳ ಜೇಷ್ಠತಾ ಪಟ್ಟಿ ತಯಾರಾಗಬೇಕು ಎಂದು ಸೂಚಿಸಿದರು.

ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ಏಕರೂಪ ವೇತನ ಜಾರಿ ಕುರಿತು ಪರಿಶೀಲಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಯಾವುದೇ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಗಳ ಕೊರತೆ ಕಂಡುಬಂದರೆ ಸಹಿಸುವುದಿಲ್ಲ ಎಂದು ಇದೇ ವೇಳೆ ದಿನೇಶ್ ಗುಂಡೂರಾವ್ ಎಚ್ಚರಿಕೆ ನೀಡಿದರು.

ಮುಖ್ಯಾಂಶಗಳು

- ಇಲಾಖೆಯ ಯೋಜನೆಗಳ ಪ್ರಗತಿ ಪರಿಶೀಲನೆ
- ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಗಳ ಕೊರತೆಯಾದರೆ ಸಹಿಸುವುದಿಲ್ಲ: ಎಚ್ಚರಿಕೆ
- ಹೊರಗುತ್ತಿಗೆ ನೌಕರರಿಗೆ ಏಕರೂಪ ವೇತನ ಜಾರಿ: ಪರಿಶೀಲನೆಗೆ ಸೂಚನೆ

ಔಷಧ ಪೂರೈಕೆಯಲ್ಲಿ ಸುಧಾರಣೆ ಆಗಿದೆ. ಹಿಂದೆ ಕೇವಲ ಶೇ 30ರಷ್ಟು ಔಷಧಗಳು ನಿಗಮದಿಂದ ಸರಬರಾಜು ಆಗುತ್ತಿತ್ತು. ಇದೀಗ ಶೇ 65ರಷ್ಟು ಔಷಧಗಳು ಆಸ್ಪತ್ರೆಗಳಿಗೆ ರವಾನೆ ಯಾಗುತ್ತಿವೆ. ಇದು ಶೇ 90ಕ್ಕೆ ಏರಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧ ಕೊರತೆಯನ್ನು ಸಹಿಸುವುದಿಲ್ಲ ಎಂದು ಔಷಧ ಸರಬರಾಜು ನಿಗಮದ ಅಧಿಕಾರಿಗಳಿಗೆ ಎಚ್ಚರಿಸಿದರು.

ಆಸ್ಪತ್ರೆಗಳು ಅಗತ್ಯಕ್ಕನುಗುಣವಾಗಿ ಸ್ಥಳೀಯ ಮಟ್ಟದಲ್ಲಿ ಎಬಿಎಆರ್‌ಕೆ ನಿಧಿಯಲ್ಲಿ ಶೇ 10ರಷ್ಟು ಔಷಧ ಖರೀದಿಸಬಹುದು. ಈ ನಿಧಿಯನ್ನು ಔಷಧ ಖರೀದಿಗೇ ಪೂರ್ಣ ಬಳಸಿದರೆ ಆಸ್ಪತ್ರೆಗಳ ಅಭಿವೃದ್ಧಿ ಕುಂಠಿತಗೊಳ್ಳಬಹುದು ಎಂದರು. ಆರೋಗ್ಯ ಸೇವೆಗಳ ಕುರಿತು ಸಾರ್ವಜನಿಕರ ದೂರುಗಳಿಗೆ 104 ಸಹಾಯ ವಾಣಿಗೆ ಪರ್ಯಾಯವಾಗಿ 112 ಸಹಾಯವಾಣಿ ಆರಂಭಿಸುವ ನಿಟ್ಟಿನಲ್ಲಿ ಪರಿಶೀಲನೆ ನಡೆಸಿ ವರದಿ ನೀಡಲು ಸೂಚನೆ ನೀಡಿದರು.

‘ಬಿಜೆಪಿ ಅವಧಿಯಲ್ಲಿ ಕೊಟ್ಟ ಜಮೀನು ನಿಮ್ಮಪ್ಪನ ಆಸ್ತಿನಾ?’

ರಾಮನಗರ: ‘ಅರವಿಂದ ಬೆಲ್ಲದ ಅವರೇ, ನಿಮ್ಮ ಹೇಳಿಕೆಯಂತೆ ಹಿಂದೆ ನಿಮ್ಮ ಬಿಜೆಪಿ ಅವಧಿಯಲ್ಲಿ ಕೊಟ್ಟಿರುವ ಜಮೀನುಗಳು ನಿಮ್ಮಪ್ಪನ ಮನೆ ಆಸ್ತಿನಾ? ಅಥವಾ ರಾಜ್ಯ ಬಿಜೆಪಿಯವರ ಆಸ್ತಿನಾ?’ ಎಂದು ಕಾಂಗ್ರೆಸ್ ಶಾಸಕ ಎಚ್.ಸಿ.ಬಾಲಕೃಷ್ಣ ತಿರುಗೇಟು ನೀಡಿದ್ದಾರೆ.

ರಾಜ್ಯ ಸರ್ಕಾರ ಇತ್ತೀಚೆಗೆ ಜಿಂದಾಲ್ ಕಂಪನಿಗೆ ಜಮೀನು ಮಾರಾಟ ಮಾಡಿರುವುದಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ, ‘ಇದೇನು ನಿಮ್ಮಪ್ಪನ ಆಸ್ತಿನಾ?’ ಎಂದು ಪ್ರಶ್ನಿಸಿದ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಅವರಿಗೆ ಫೇಸ್‌ಬುಕ್‌ನಲ್ಲಿ ಸೋಮವಾರ ಬಾಲಕೃಷ್ಣ ತರಾಟೆಗೆ ತೆಗೆದುಕೊಂಡಿದ್ದಾರೆ.

‘ಸರ್ಕಾರ ಯಾರೊಬ್ಬರ ಮನೆ ಆಸ್ತಿಯಲ್ಲ. ಪ್ರತಿಯೊಬ್ಬ ನಾಗರಿಕನ ಆಸ್ತಿ. ನಾಡಿನ ಮುಖ್ಯಮಂತ್ರಿ ಬಗ್ಗೆ ಗೌರವಯುತವಾಗಿ ಮಾತನಾಡುವುದನ್ನು ಮೊದಲು ಕಲಿತುಕೊಳ್ಳಿ. ವಿರೋಧ ಪಕ್ಷದ ಉಪನಾಯಕನಾಗಿ ಕನಿಷ್ಠ ಸಾಮಾನ್ಯ ಜ್ಞಾನ ಇಲ್ಲದವರಂತೆ ಮಾತನಾಡುವುದನ್ನು ಬಿಡಿ’ ಎಂದು ಸಲಹೆ ನೀಡಿದ್ದಾರೆ.

ಸಮಾರಂಭದಲ್ಲಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪಾಲ್ಗೊಂಡಿದ್ದರು

ವಿವೇಚನಾ ರಹಿತವಾಗಿ ವರ್ತಿಸಿದರೆ ಅಧಃಪತನ: ಯದುವೀರ ಒಡೆಯರ್

ಪ್ರಜಾವಾಣಿ ವಾರ್ತೆ

ಕೆಂಗೇರಿ: ‘ಅಧಿಕಾರಸ್ಥರು ವಿವೇಚನಾ ರಹಿತರಂತೆ ವರ್ತಿಸಿದರೆ, ಯಾವುದೇ ವ್ಯವಸ್ಥೆ ಜನಪೀಡಕವಾಗಿ ರೂಪುಗೊಳ್ಳುವ ಆತಂಕ ಸೃಷ್ಟಿಯಾಗುತ್ತದೆ’ ಎಂದು ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಎಚ್ಚರಿಸಿದರು.

ಕನಕಪುರ ರಸ್ತೆಯಲ್ಲಿರುವ ಜ್ಯೋತಿ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜಿನ ಹೆಚ್ಚುವರಿ ಕಟ್ಟಡ ‘ಮಹಾರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಬ್ಲಾಕ್’ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಜಾಪ್ರಭುತ್ವ ಮತ್ತು ಅರಸೊತ್ತಿಗೆ ಎರಡೂ ವ್ಯವಸ್ಥೆಯೂ ತನ್ನದೇ ಆದ ಸಾಧಕ ಬಾಧಕ ಅಂಶಗಳನ್ನು ಒಳಗೊಂಡಿದೆ. ಅರಸೊತ್ತಿಗೆಯಾಗಲಿ, ರಾಜಕಾರಣವಾಗಲಿ ರಾಜಧರ್ಮ ಪಾಲನೆಯಾಗಬೇಕು. ಆಗ ಮಾತ್ರ ಇತಿಹಾಸದ ಪುಟಗಳು ನಮ್ಮನ್ನು ಹೆಮ್ಮೆಯಿಂದ ಸ್ಮರಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ವೃತ್ತಿ ಯಾವುದೇ ಆಗಿರಲಿ, ಧರ್ಮ ಪಾಲನೆಗೆ ಒತ್ತು ನೀಡಬೇಕು. ವ್ಯವಸ್ಥೆಯ ಯಶಸ್ಸು ಪರಿಪಾಲಕರ ಬದ್ಧತೆಯ ಮೇಲೆ ಅವಲಂಬಿತವಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

ಅದಮ್ಯ ಚೇತನ ಪ್ರತಿಷ್ಠಾನದ ತೇಜಸ್ವಿನಿ ಅನಂತ ಕುಮಾರ್ ಮಾತನಾಡಿದರು. ಇದೇ ವೇಳೆ 2023-24ನೇ ಸಾಲಿನ ಅತ್ಯುತ್ತಮ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜ್ಯೋತಿ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜಿನ ಮ್ಯಾನೇಜಿಂಗ್ ಟ್ರಸ್ಟಿ ಹಾಗೂ ಅಧ್ಯಕ್ಷೆ ಬಿ.ವಿ.ಸೀತಾ, ಎಂ.ನರಸಿಂಹನ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸುದ್ದಿ 2 ನಿಮಿಷ

ಯೋಗೀಶ್ವರ್‌ಗೆ ಟಿಕೆಟ್: ಚರ್ಚೆ

ಬೆಂಗಳೂರು: ಚನ್ನಪಟ್ಟಣ ಉಪ ಚುನಾವಣೆಯಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೀಶ್ವರ್ ಅವರಿಗೆ ಟಿಕೆಟ್ ನೀಡುವ ಕುರಿತು ಪಕ್ಷದ ವರಿಷ್ಠರು ಹಾಗೂ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಜೊತೆ ಚರ್ಚಿಸಲಾಗುವುದು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ಯೋಗೀಶ್ವರ್ ಅವರು ನನ್ನನ್ನು ಭೇಟಿ ಮಾಡಿ ಮಾತನಾಡಿದ್ದಾರೆ. ಅವರ ಮನೆಗೂ ಭೇಟಿ ನೀಡಿದ್ದೆ. ಸ್ಪರ್ಧಿಸುವ ಇಚ್ಛೆ ವ್ಯಕ್ತಪಡಿಸಿದ್ದಾರೆ. ಈ ಕುರಿತು ದೆಹಲಿಗೆ ತೆರಳಿ ಮಾತುಕತೆ ನಡೆಸಲಾಗುವುದು. ಎರಡೂ ಪಕ್ಷಗಳ ನಿರ್ಧರಿಸಿದ ನಂತರ ಅಭ್ಯರ್ಥಿ ಆಯ್ಕೆ ಅಂತಿಮವಾಗಲಿದೆ’ ಎಂದರು.

ಹಣ ನೀಡಿದವರ ಹೆಸರು ಬಹಿರಂಗಕ್ಕೆ ಆಗ್ರಹ: ‘ಕಾಂಗ್ರೆಸ್ ಶಾಸಕರಿಗೆ ಹಣ ನೀಡಿದ ಬಿಜೆಪಿ ನಾಯಕರ ಹೆಸರು ಬಹಿರಂಗ ಮಾಡದೇ ಇದ್ದರೆ ಹಿಟ್ ಆ್ಯಂಡ್ ರನ್ ಆಗುತ್ತದೆ. ಕಾಂಗ್ರೆಸ್‌ನವರು ಜೆಡಿಎಸ್‌ನ ಕುಮಾರಸ್ವಾಮಿ ವಿರುದ್ಧ ಸದಾ ಇಂತಹ ಆರೋಪ ಮಾಡುತ್ತಾರೆ. ಹೆಸರು ಬಹಿರಂಗ ಮಾಡದಿದ್ದರೆ ನಿಮ್ಮನ್ನೇ ಹಾಗೆ ಕರೆಯುತ್ತೇವೆ’ ಎಂದರು.

‘ಮುಡಾ’ ಮತ್ತು ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಗಮನ ಬೇರೆಕಡೆ ಸೆಳೆಯಲು ಕಾಂಗ್ರೆಸ್ ಶಾಸಕರು ಇಂತಹ ಕುತಂತ್ರ ಮಾಡುತ್ತಿದ್ದಾರೆ ಎಂದು ಹೇಳಿದರು.

ಸರ್ಕಾರದಲ್ಲಿ ಹಣವಿಲ್ಲದೆ, ಮದ್ಯದ ತೆರಿಗೆಯನ್ನು ಮೂರನೇ ಬಾರಿಗೆ ಏರಿಕೆ ಮಾಡಲು ಸಿದ್ಧತೆ ನಡೆಸಿದೆ. ಗ್ಯಾರಂಟಿಗೆ ಹಣವಿಲ್ಲದೆ ಸರ್ಕಾರ ದಿವಾಳಿಯಾಗಿದೆ. ಇಂತಹ ಸಮಯದಲ್ಲೂ ಮುಖ್ಯಮಂತ್ರಿ ಕುರ್ಚಿಗೆ ಕಚ್ಚಾಡುತ್ತಿದ್ದಾರೆ ಎಂದು ಟೀಕಿಸಿದರು.

ಸಿಎಂ ವಿರುದ್ಧ ಕಾನೂನು ಹೋರಾಟ: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಆರೋಪಗಳ ಕುರಿತು ಕಾನೂನು ಹೋರಾಟ ನಡೆಸಲು ಬಿಜೆಪಿ-ಜೆಡಿಎಸ್ ಚರ್ಚೆ ನಡೆಯುತ್ತಿವೆ. ಕಾಂಗ್ರೆಸ್‌ನ ಭ್ರಷ್ಟಾಚಾರದ ವಿರುದ್ಧದ ಹೋರಾಟವೂ ಮುಂದುವರಿಯಲಿದೆ ಎಂದರು.

ಸೆ.5ರಿಂದ ಬೆಂಗಳೂರು–ಕಲಬುರಗಿ ವಿಶೇಷ ರೈಲು

ಬೆಂಗಳೂರು: ಗಣೇಶೋತ್ಸವದ ಸಂದರ್ಭದಲ್ಲಿ ಪ್ರಯಾಣಿಕರ ದಟ್ಟಣೆ ಕಡಿಮೆಗೊಳಿಸಲು ಬೆಂಗಳೂರು ಎಸ್‌ಎಂವಿಟಿ–ಕಲಬುರಗಿ ನಡುವೆ ಸೆಪ್ಟೆಂಬರ್ 5ರಿಂದ ಮೂರು ದಿನ ವಿಶೇಷ ರೈಲು ಓಡಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಎರಡೂ ದಿಕ್ಕುಗಳಲ್ಲಿ ತಲಾ ಮೂರು ಟ್ರಿಪ್‌ಗಳು ಇರಲಿವೆ. ಎಸ್‌ಎಂವಿಟಿಯಿಂದ ಸೆ.5, 6 ಮತ್ತು 7ರಂದು ರಾತ್ರಿ 9.15ಕ್ಕೆ ಹೊರಟು ಮರುದಿನ ಬೆಳಿಗ್ಗೆ 7.40ಕ್ಕೆ ಕಲಬುರಗಿ ತಲುಪಲಿದೆ. ಕಲಬುರಗಿಯಿಂದ ಸೆ.6, 7 ಮತ್ತು 8ರಂದು ಬೆಳಿಗ್ಗೆ 9.35ಕ್ಕೆ ಹೊರಟು ಅದೇ ದಿನ ರಾತ್ರಿ 9ಕ್ಕೆ ಬೆಂಗಳೂರು ಎಸ್‌ಎಂವಿಟಿ ತಲುಪಲಿದೆ.

ಯಲಹಂಕ, ಧರ್ಮಾವರ ಜಂಕ್ಷನ್, ಅನಂತಪುರ, ಗುಂತಕಲ್ ಜಂಕ್ಷನ್, ಆದೋನಿ, ಮಂತ್ರಾಲಯ ರಸ್ತೆ, ರಾಯಚೂರು ಜಂಕ್ಷನ್, ಯಾದಗಿರಿ ಮತ್ತು ಶಹಾಬಾದ್ ನಿಲ್ದಾಣಗಳಲ್ಲಿ ಈ ರೈಲುಗಳ ನಿಲುಗಡೆ ಇರುತ್ತದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿ ಇಂದು

ರಾಷ್ಟ್ರೀಯ ನೇತ್ರದಾನ ಪಾಕ್ಷಿಕ–2024, ಪ್ರಶಸ್ತಿ ಪ್ರದಾನ ಹಾಗೂ ಸನ್ಮಾನ ಕಾರ್ಯಕ್ರಮ: ಅತಿಥಿಗಳು: ಬಿ. ದಯಾನಂದ, ಎಸ್.ಎ. ಚಿನ್ನೇಗೌಡ, ಯೋಗೀಶ್ ದ್ವಾರಕೀಶ್, ಶ್ಯಾಮಸುಂದರ್ ಜಿ., ಆಯೋಜನೆ ಮತ್ತು ಸ್ಥಳ: ನಾರಾಯಣ ನೇತ್ರಾಲಯ, ರಾಜಾಜಿನಗರ, ಬೆಳಿಗ್ಗೆ 9.30

ಮಣಿ ಶರ್ಮಾ, ಟಿ.ಆರ್. ಉದಯಕುಮಾರ್ ಅವರ ಕಲಾಕೃತಿಗಳ ಪ್ರದರ್ಶನ: ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10

ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆ: ಉದ್ಘಾಟನೆ: ಎಸ್. ಹಿರಿಯಣ್ಣ, ಅಧ್ಯಕ್ಷತೆ: ಲಕ್ಷ್ಮೀಶ್ರೀನಿವಾಸ್, ಆಶಯ ನುಡಿ: ಈ. ಬಸವರಾಜು, ಅತಿಥಿಗಳು: ನಾ. ಶ್ರೀಧರ್, ಗುಣಶೀಲನ್ ಆರ್., ಜಯಲಕ್ಷ್ಮಿ ಎನ್.ಕೆ., ಆಯೋಜನೆ: ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಸ್ಥಳ: ಜನತಾ ವಿದ್ಯಾನಿಕೇತನ ಅನುದಾನಿತ ಶಾಲೆ, ಲಕ್ಷ್ಮಣನಗರ, ಹೆಗ್ಗನಹಳ್ಳಿ ಕ್ರಾಸ್, ಬೆಳಿಗ್ಗೆ 10.30

‘55 ನಿಮಿಷದ ಒಂದು ಪ್ರೇಮ ಕಥೆ’ ನಾಟಕ ಪ್ರದರ್ಶನ: ಆಯೋಜನೆ: ರಂಗಪಯಣ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

ಅಭಿನಂದನಾ ಕಾರ್ಯಕ್ರಮ: ಸಾನ್ನಿಧ್ಯ: ಸಿದ್ಧರಾಮಾನಂದ ಸ್ವಾಮೀಜಿ, ಸನ್ಮಾನಿತರು: ಸಿ.ಎಚ್. ವಿಜಯಶಂಕರ್, ಅತಿಥಿಗಳು: ಡಿ. ವೆಂಕಟೇಶಮೂರ್ತಿ, ಭರತ್ ದತ್ತ ಟಿ.ಆರ್., ಕೆ.ಎಸ್. ಪುಟ್ಟಸ್ವಾಮಿ, ಆಯೋಜನೆ: ಚಂದ್ರಗುಪ್ತ ಮೌರ್ಯ ಟ್ರಸ್ಟ್, ಸ್ಥಳ: ಹೋಟೆಲ್ ಮೌರ್ಯ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30

ಸಂಗೀತ ಕಛೇರಿ: ಗೀತಾ ನವಲೆ, ಅರ್ಜುನ್ ಎಂ.ಡಿ., ಸಮರ್ಥ ಬಿ.ಎಸ್., ರಮೇಶ್ ಟಿ.ಎನ್., ಆಯೋಜನೆ ಮತ್ತು ಸ್ಥಳ: ದ್ವಾರಕ ಭದ್ರಿಕಾಶ್ರಮ, ಟಿ–10, ಸಂಖ್ಯೆ–39, ಯುಪಿ ಮ್ಯಾನ್ಷನ್, 16ನೇ ಕ್ರಾಸ್, ಮಲ್ಲೇಶ್ವರ, ಸಂಜೆ 5

‘ನೃತ್ಯ ಬಾಗಿನ’ 20ನೇ ವರ್ಷದ ವಾರ್ಷಿಕೋತ್ಸವ: ಉದ್ಘಾಟನೆ: ಶ್ರೀನಿವಾಸ್ ಜಿ. ಕಪ್ಪಣ್ಣ, ಅಧ್ಯಕ್ಷತೆ: ಕೆ. ಶೇಷಾದ್ರಿ, ಅತಿಥಿಗಳು: ಎನ್. ನರೇಂದ್ರಬಾಬು, ಸು.ತ. ರಾಮೇಗೌಡ, ಮಾಲತೇಶ ಬಡಿಗೇರ, ಎ.ಎನ್. ಸುಧೀರ್ ಕುಮಾರ್, ಪ್ರಜ್ವಲ್ ಗೌಡ, ಪ್ರಾಸ್ತಾವಿಕ ನುಡಿ: ಕವಿತಾರಾವ್, ಆಯೋಜನೆ: ಶಾಂತಲಾ ಚಾರಿಟಬಲ್ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ. nagaradalli_indu@prajavani.co.in

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: 19/2024, ದಿನಾಂಕ: 23.08.2024

ಭಾರತದ ರಾಷ್ಟ್ರಪತಿಯವರ ಪರವಾಗಿ, ಕೆಳಗೆ ಸಹಿಮಾಡಿದವರು ಕೇವಲ ಆಯ್‌ಆರ್‌ಇಪಿಎಸ್ ಮೂಲಕ ಕೆಳಗಿನ ಸಾಮಗ್ರಿಗಳನ್ನು ಒದಗಿಸಲು ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರು ಮುಕ್ತಾಯದ ಸಮಯ: 10.30 ಗಂಟೆ.

ಕ್ರಸಂ.	ಟೆಂಡರು ಸಂ.	ಸಂಕ್ಷಿಪ್ತವಾದ ವಿವರಗಳು	ಪರಿಮಾಣ	ಟೆಂಡರ ಕೊನೆಯ ದಿನಾಂಕ
1	38241001	ಎಎಆರ್ ಅನುಮೋದಿತ ಉನ್ನತೀಕರಣಗೊಂಡ ಕಾರ್ಟ್‌ರಿಡ್ಜ್ ಟೇಪರ್ ರೋಲರ್ ಬೇರಿಂಗ್	200 ನಂ.	02.09.2024
2	30241334	ಎರಡು ತುಂಡು ಎಫ್‌ಆರ್‌ಪಿ ಗ್ಲಾಸ್ ಶಟರ್	2430 ನಂ.	06.09.2024
3	29241717	ಮೌಂಟಿಂಗ್ ಬಿಡಿಭಾಗಗಳೊಂದಿಗೆ ಮುಖ್ಯ ಕಂಪ್ರೆಸ್ಸರ್	4 ನಂ.	06.09.2024
4	60245691ಎ	ವಿವಿಧ ರೇಖಾಚಿತ್ರಗಳಿಗನುಸಾರ ಟರ್ನೌಟ್ ಸ್ಲೀಪರ್‌ಗಳು	367 ಸೆಟ್	09.09.2024
5	60246068ಎ	ಪಿಎಸ್‌ಸಿ ಸ್ಲೀಪರ್‌ಗಳು	1661 ಸೆಟ್	09.09.2024
6	37241339ಎ	ಕೋಚಿಂಗ್ ಸ್ಟಾಕ್‌ಗಾಗಿ ಬಫರ್ ಪ್ಲಂಜರ್	922 ನಂ.	10.09.2024
7	18241173	90 ಟೀಥ್‌ಗಳನ್ನೊಳಗೊಂಡ ಗಿಯರ್ ಬುಲ್	18 ನಂ.	12.09.2024
8	25241028	ಸಂಪೂರ್ಣವಾದ ಬ್ರೇಕ್ ಶೂ	5480 ನಂ.	13.09.2024
9	29241765	ಮೋಟರ್‌ನೊಂದಿಗೆ ಆಯಿಲ್ ಕೂಲಿಂಗ್ ಸಂಪೂರ್ಣ ಘಟಕ	20 ನಂ.	13.09.2024
10	18241107	ಇಎಂಡಿ ಭಾಗ ಸಂ. 40220540ಗೆ ಅನುಸಾರ ಪಿಎಸ್‌ಎಂ 312	8 ನಂ.	13.09.2024
11	60242019	1–ಇನ್–12 ಬಿಜಿ 60 ಕೆಜಿ ವೆಲ್ಡೆಬಲ್ ಸಿಎಂಎಸ್ ಕ್ರಾಸಿಂಗ್	200 ಸೆಟ್	16.09.2024
12	33241076	ಎಫ್‌ಟಿಐಆರ್‌ಟಿಐಎಲ್ ಭಾಗ ಸಂ. 1/604501/2000ಗೆ ಅನುಸಾರ ಸ್ಪೀಡ್ ಸೆನ್ಸಾರ್	262 ನಂ.	17.09.2024

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/375/AAF/PRB/SWR/2024-25 ಪ್ರಧಾನ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ಹುಬ್ಬಳ್ಳಿ

South Western Railway - SWR | SWRRLY | SWRRLY

(ಲೋಕೋಪಯೋಗಿ ಇಲಾಖೆ)

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐ.ಎಫ್.ಟಿ) ಸಂಖ್ಯೆ:06/2024–25 ದಿನಾಂಕ: 23.08.2024

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರಸ್ತೆ/ಸೇತುವೆ/ಕಟ್ಟಡ–ನಿರ್ವಹಣೆ/ನಿರ್ಮಾಣ, ಕಾಮಗಾರಿಗಳಿಗೆ ಕೆ.ಡಬ್ಲ್ಯು–1, 2 & 4ರಂತೆ ಕಾರ್ಯಪಾಲಕ ಇಂಜಿನಿಯರ್, ಲೋ.ಇ ರವರು ರಾಜ್ಯಪಾಲರ ಪರವಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು **https://kppp.karnataka.gov.in ದಿನಾಂಕ: 23.08.2024 ರಿಂದ 30.08.2024 ಮತ್ತು 09.09.2024 ರವರೆಗೆ ಪಡೆದು ಸಂಜೆ: 4.00** ಗಂಟೆಗಳ ಒಳಗಾಗಿ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ ಪೋರ್ಟಲ್ ನಲ್ಲಿ ಮಾತ್ರ ಅಧಿಸೂಚಿಸಲಾಗುವುದು. ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:156/ಕೆಎಸ್‌ಎಂಸಿಎ/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ವಿಭಾಗ, 2ನೇ ಮಹಡಿ, ಶಕ್ತಿ ಸೌಧ, 13ನೇ ಅಡ್ಡರಸ್ತೆ, 4ನೇ ‘ಬಿ’ ಮುಖ್ಯರಸ್ತೆ, ಎಂ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು – 560 040.

ಸಂ: ಕಾಪಾಅ(ಗೋವಿ)/ಟಿಎನ್/ಜಿಎಲ್–03/2024–25 ದಿನಾಂಕ: 26.08.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕೆಪಿ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ವಿಭಾಗ, ಬಿಬಿಎಂಪಿ, ಇವರು ಅರ್ಹ ಸಂಸ್ಥೆ / ಏಜೆನ್ಸಿಗಳಿಂದ ದರ ಒಪ್ಪಂದದ ಆಧಾರದ ಮೇಲೆ **‘ಗೋವಿಂದರಾಜನಗರ ವಿಭಾಗದಲ್ಲಿರುವ ಅನಧಿಕೃತ ರಚನೆಗಳು ಮತ್ತು ಕಟ್ಟಡದ ಶಿಥಿಲವಾದ ಭಾಗವನ್ನು ತೆರವುಗೊಳಿಸಲು’** ಸ್ಪರ್ಧಾತ್ಮಕ ದರದಲ್ಲಿ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ಆಯಾ ಇಎಂಡಿ ಮತ್ತು ಅರ್ಜಿ ಶುಲ್ಕದ ಜೊತೆಗೆ ಕೇವಲ ಒಂದು ಪ್ರಸ್ತಾವನೆಯನ್ನು ಮಾತ್ರ ಸಲ್ಲಿಸಬೇಕು.

1) ಆರ್‌ಎಫ್‌ಪಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಕೆಪಿಪಿ ಪೋರ್ಟಲ್ https://kppp.karnataka.gov.in ನಿಂದ ದಿನಾಂಕ : **29.08.2024 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **04.09.2024 ರ ಸಂಜೆ 4.00 ಗಂಟೆಯವರೆಗೆ.** 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : **05.09.2024 ರ ಸಂಜೆ 4.30 ಗಂಟೆಗೆ.** 4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : **ನಂತರ ತಿಳಿಸಲಾಗುವುದು.** ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಹಾಗೂ ವೆಬ್‌ಸೈಟ್: https://kppp.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ವಿಭಾಗ.

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: B/SG-Proj-SMVB-CCTV ದಿನಾಂಕ: 19.08.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಸರ್.ಎಂ. ವಿಶ್ವೇಶ್ವರಯ್ಯ ಟರ್ಮಿನಲ್, ಬೆಂಗಳೂರು ರೈಲ್ವೆ ನಿಲ್ದಾಣದಲ್ಲಿ ವಿಡಿಯೋ ಸರ್ವೇಲೆನ್ಸ್ ಸಿಸ್ಟಮ್ (ವಿಎಸ್‌ಎಸ್) ನ ವ್ಯವಸ್ಥೆ.	ರೂ. 4,59,40,179.44

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.09.2024, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್ ಯೋಜನೆ/ಬೆಂಗಳೂರು

PUB/360/AAF/PRB/SWR/2024-25

South Western Railway - SWR | SWRRLY | SWRRLY

PUBLIC NOTICE

This is to inform the general public that my client intends to purchase the immovable properties mentioned and described in the schedule below from its respective Owners. The Owners represent that they are the absolute owners of their respective portion of the Schedule Property and the same is free from all encumbrance, mortgage, charge, lien or litigation and they have not entered into any sort of agreement/MOU/Deeds etc., for transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence **within Fifteen (15) days** from the date of publication of this Notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.

SCHEDULE

All the piece and parcel of the below mentioned properties situated at Kuppahalli Village, Nandi Hobli, Chikkaballapura Taluk, Chikkaballapura District :

Sl. No.	Sy. No.	Owners	Extent		Boundaries			
			Acres	Guntas	East by	West by	North by	South by
1.	61/5	Smt. Sudha, daughter of Late Narayanaswamy	00	10	Property bearing Sy. No. 61/4A.	Property bearing Sy. No. 61/4B	Road	Property bearing Sy. No. 61/6
2.	61/6	Smt. N.Sujatha, daughter of Late Narayanaswamy	00	10	Property bearing Sy. No. 61/4A	Property bearing Sy. No. 61/4B	Property bearing Sy. No. 61/5	Property bearing Sy. No. 61/7
3.	61/7	Smt. Aruna, daughter of Late Narayanaswamy	00	10	Property bearing Sy. No. 61/4A	Property bearing Sy. No. 61/4B	Property bearing Sy. No. 61/6	Property bearing Sy. No. 61/8
4.	61/8	Smt. Kalpana, daughter of Late Narayanaswamy	00	10	Property bearing Sy. No. 61/4A.	Property bearing Sy. No. 61/4B	Property bearing Sy. No. 61/7	Property bearing Sy. No. 61/4B

Vinay K. S., Advocate,
Vinay Kademane & Associates
307, 3rd Floor, Prestige Centre Point, No.7/49, Edward Road, Bengaluru-560001 Ph.: 080 22863885 email: vinay@vinaykademane.in

Place : Bengaluru
Date: 26-08-2024

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್

ಕಾರ್ಪೋರೇಟ್ ಐಡೆಂಟಿಫಿಕೇಶನ್ ನಂಬರ್ (ಸಿಐಎನ್): L18101KA2004PLC033475

ನೋಂದಾಯಿತ ಕಛೇರಿ: ನಂ. 25, 2ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೈಗಾರಿಕಾ ಉಪನಗರ, ಯಶವಂತಪುರ, ಬೆಂಗಳೂರು–560022

ದೂ: +91 80 68951000 ಫ್ಯಾಕ್ಸ್: +91 80 68951001 ಇಮೇಲ್: cs@gokaldasexports.com; ವೆಬ್‌ಸೈಟ್: www.gokaldasexports.com

ಸದಸ್ಯರಿಗೆ ನೋಟೀಸ್

ಸದಸ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಕಂಪನಿಗಳ ಕಾಯಿದೆ, 2013 (“ಕಾಯ್ದೆ”) ರಂತೆ ಅನ್ವಯವಾಗುವ ನಿಬಂಧನೆಗಳ ಅನುಗುಣವಾಗಿ ಜೊತೆಗೆ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ (ಒಟ್ಟಾರೆಯಾಗಿ “ಸುತ್ತೋಲೆಗಳು” ಎಂದು ಉಲ್ಲೇಖಿಸಲಾಗಿದೆ.) ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020 ದಿನಾಂಕ ಏಪ್ರಿಲ್ 08, 2020, ಸಾಮಾನ್ಯ ಸುತ್ತೋಲೆ ಸಂಖ್ಯೆ 17/2020 ದಿನಾಂಕ ಏಪ್ರಿಲ್ 13, 2020, ಮತ್ತು ಸಾಮಾನ್ಯ ಸುತ್ತೋಲೆ ಸಂಖ್ಯೆ 9/2023 ದಿನಾಂಕ ಸೆಪ್ಟೆಂಬರ್ 25, 2023 ಮತ್ತು ಇತರೆ ಅನ್ವಯವಾಗುವ ಕಾನೂನಿನಂತೆ ವೀಡಿಯೋ ಕಾನ್ಫರೆನ್ಸ್ / ಅದರ್ ಆಡಿಯೋ ವಿಷುವಲ್ ಮೀನ್ಸ್ ಮೂಲಕ ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ (“ಕಂಪನಿ”)ಯ 21ನೇ ವಾರ್ಷಿಕ ಸಾಮಾನ್ಯ ಸಭೆಯು (ಎಜಿಎಂ) ನಡೆಯಲಿದೆ.

ಮೇಲಿನ ಸುತ್ತೋಲೆಗಳನ್ವಯವಾಗಿ ಕಂಪನಿ / ಡೆಪಾಸಿಟರಿ ಪಾರ್ಟಿಸಿಪೆಂಟ್‌ಗಳೊಂದಿಗೆ ತಮ್ಮ ಇಮೇಲ್ ಐಡಿಗಳನ್ನು ನೋಂದಾಯಿಸಿಕೊಂಡಿರುವ ಎಲ್ಲಾ ಸದಸ್ಯರಿಗೆ ಎಜಿಎಂ ನೋಟೀಸ್ ಮತ್ತು ಆರ್ಥಿಕ ವರ್ಷ 2023–24ರ ವಾರ್ಷಿಕ ವರದಿಯನ್ನು ವಿದ್ಯುನ್ಮಾನ ಮೂಲಕವಾಗಿ ರವಾನಿಸಲಾಗುವುದು. ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇ–ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಗಳನ್ನು ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ಸ್‌ಗಳ ಮೂಲಕ ಸಂಬಂಧಿತ ಡಿಪಾಸಿಟರೀಸ್‌ಗಳೊಂದಿಗೆ ನೋಂದಾಯಿಸಲು ವಿನಂತಿಸಲಾಗಿದೆ. ಮತ್ತು ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಕಂಪನಿಯ ರೆಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ (“ಆರ್‌ಟಿಎ”) ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್‌ರವರಿಗೆ einward.ris@kfintech.comನಲ್ಲಿ ಮಾಹಿತಿಗಳನ್ನು ಕಳುಹಿಸಲು ವಿನಂತಿಸಲಾಗಿದೆ. ಎಜಿಎಂ ನೋಟೀಸ್ ಮತ್ತು ವಾರ್ಷಿಕ ವರದಿಯನ್ನು ಕಂಪನಿಯ ವೆಬ್‌ಸೈಟ್ www.gokaldasexports.comನಲ್ಲಿ, ಸ್ಟಾಕ್‌ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳು ಅಂದರೆ, ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್‌ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್‌ಗಳಲ್ಲಿ ಕ್ರಮವಾಗಿ www.bseindia.com ಮತ್ತು www.nseindia.com ಲಭ್ಯವಾಗುವಂತೆ ಮಾಡಲಾಗುವುದು.

ತಮ್ಮ ಇ–ಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು ಎಜಿಎಂ ನೋಟೀಸ್‌ನಲ್ಲಿ ನೀಡಿರುವ ವ್ಯವಹಾರಗಳಿಗೆ ರಿಮೋಟ್ ಇ–ವೋಟಿಂಗ್ ಮೂಲಕ ಅಥವಾ ಎಜಿಎಂ ಸಂದರ್ಭದಲ್ಲಿ ಇ–ವೋಟಿಂಗ್ ವ್ಯವಸ್ಥೆಯ ಮೂಲಕ ಮತಚಲಾಯಿಸುವ ಅವಕಾಶವನ್ನು ಕಲ್ಪಿಸಲಾಗುವುದು. ಡಿಮೆಟೀರಿಯಲೈಸ್ಡ್ ಹಾಗೂ ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರಿಗೆ ರಿಮೋಟ್ ಮತದಾನದ ವಿಧಾನವನ್ನು ಎಜಿಎಂನ ನೋಟೀಸ್‌ನಲ್ಲಿ ಒದಗಿಸಲಾಗುವುದು.

ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ವಿಳಾಸ ಮತ್ತು ಬ್ಯಾಂಕ್ ಖಾತೆಯ ವಿವರಗಳಲ್ಲಿನ ಬದಲಾವಣೆಗಳನ್ನು ಸಂಬಂಧಿತ ಡಿಪಾಸಿಟರಿ ಪಾರ್ಟಿಸಿಪೆಂಟ್(ಗಳ)ಗೆ ತಿಳಿಸಲು ವಿನಂತಿಸಿದೆ ಮತ್ತು ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಸಿಸ್ಟಂ (ಇಸಿಎಸ್) ವಿಧಾನವನ್ನು ಆಯ್ಕೆ ಮಾಡಿಕೊಳ್ಳಲು ವಿನಂತಿಸಲಾಗಿದೆ.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಪರವಾಗಿ
ಸಹಿ/–
ಗೌರೀಶ್ ಹೆಗಡೆ
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : ಆಗಸ್ಟ್ 26, 2024

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Lost

LOST
We, Mandovi Distilleries and Breweries Pvt., Ltd., No.102, 1st Floor, Sunny Vale, 35/1 Meanee Avenue Road, Bangalore-42. have lost ‘C’ Form Document issued by KSBCL, 1) C-Form No. KA-CA 6263761 dated 04-07-2023. 2) C-Form No. KA-CA 6263762 dated 04-07-2023. while in transit. If Found please Contact: 98804622566

Change of Name

CHANGE OF NAME
I, MOHAMMAD TAUSEEF, Resident at # 19/10, 2nd Floor, 5th Main, 16th Cross, Lakkasandra, Bengaluru-560030, I have changed my name to MOHD. TAUSEEF vide affidavit dated 26-08-2024, before notary L. Shankarnarayana, Bengaluru. Henceforth I shall be called MOHD. TAUSEEF only

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
*Conditions apply
www.dhclassifieds.com BOOK NOW
For more details contact:
9901641752
9845114560
9900428036
9731810277

CHANGE OF NAME
I, Mamatha, residing at No.A-2, Brighton Court, No.5, Annaswamy Mudaliliar Road, Ulsoor Lake, Sivan Chetty Garden, Bengaluru-560042, have changed my name to MAMATHA HADARAGERI vide affidavit dated 23/08/2024 before Notary H.R. Karunakara, Bengaluru. Henceforth I shall be called as MAMATHA HADARAGERI only

JOB OPPORTUNITIES

Teachers/ Professors

REQUIRED SOCIAL and English teachers for High school contact Kenmore School basavanagudi whatsapp 9901501185 and email kenmoreschool@gmail.com

REQUIRED FOR MINISTRY OF HUMAN RESOURCE & SOCIAL DEVELOPMENT, SAUDI ARABIA
(UNDER SPONSORSHIP OF A LEADING GROUP)
CLIENT INTERVIEW IN BANGALORE ON 29TH AUGUST 2024
At: Hotel AJ International, Near Shivaji Nagar Bus Depot, Bowring Hospital Rd, Bengaluru 560001
MALE & FEMALE BOTH ARE ACCEPTED FOR ALL POSITIONS
- NURSE: BSc Nursing
- PHYSIOTHERAPIST: Bachelor of Physiotherapy
- PHARMACIST: Bachelor of Pharmacy
- DENTAL ASSISTANT: Dipl. in Oral & Dental Health - Dental Studies
- NUTRITION SPECIALIST: Bachelor of Therapeutic Nutrition - Therapy & Rehabilitation

VACANCY IN LARGE NOS
ATTRACTIVE SALARY
ALL CANDIDATES MUST HOLD 2 YEARS EXP. AFTER MEDICAL COUNCIL REGISTRATION.
Email: healthcarejobs@alhudaifhr.com Cont: 7710062775 / 022-35067193
AL HUDAIF HR CONSULTANCY
Approved by Government of India
1st Floor, Bldg. ‘E’, S.V.Road, Khira Nagar, Opp. Reliance Mall, Santacruz (W), Mumbai-54 www.alhudaifhr.com
Regd. No.: B-0745/MUM/COM/1000+/5/9107/2014 (Validity 29.01.2026)

CONNECT ಕ್ಲಾಸಿಫೈಡ್ಸ್

ಇಂಡಿಯನ್ ಆರ್ಟಿಸನ್ ಬಜಾರ್
Indian Artisan Bazaar
Arts, Crafts, Handlooms & Lifestyle Exhibition
Ganesh Chaturthi Shopping Festival
Date: 23rd August 2024 to 1st September 2024
10 Days Exhibition
Timings: 10.30 am to 7 pm
Karnataka Chitrakala Parishath Kumara Krupa Road, Bengaluru
Hulivesha Show Live | 31st Aug 2024 5.00 PM - 6.30 PM
Yakshagana Live Performance | 1st Sept 2024 5.00 PM - 6.30 PM
10 DAYS EXHIBITION | 100+ STALLS | Live PERFORMANCE | Entry FREE
Grand Flea Market
For Details Contact: 6364685716 / 9036658774

SAD DEMISE

Sri. KHODAY L ANANTHA PADMANABHASA

(Born 30 December 1940 - 26 August 2024)

Joint Managing Director

Khoday Group of Companies, India

With deep sorrow, we announce the sad demise of our Leader.

Family, Board and Staff of Khoday Group

The House of Khodays

Mobile : 9980100128

ಜಲಮಂಡಳಿ ಕೆಲಸದಿಂದ ಜನರು ಹೈರಾಣ • ವ್ಯಾಪಾರಕ್ಕೂ ಬರೆ

ಎಂಟು ತಿಂಗಳಾದರೂ ಮುಗಿಯದ ಕಾಮಗಾರಿ

ಕೊಳವೆ ಮಾರ್ಗ ನಿರ್ಮಿಸಲು ಅಗೆದಿರುವ ಹುರಿಯೋಪೇಟೆಯ ಲಕ್ಷ್ಮಣರಾವ್ ರಸ್ತೆಯಲ್ಲಿ ನೀರು ನಿಂತಿರುವುದು —ಪ್ರಜಾವಾಣಿ ಚಿತ್ರಗಳು/ರಂಜು ಪಿ

• ಖಲೀಲಅಹ್ಮದ ಶೇಖ

ಬೆಂಗಳೂರು: ರಾಜಧಾನಿಯ ವಾಣಿಜ್ಯ ಚಟುವಟಿಕೆಗಳ ಕೇಂದ್ರ ಭಾಗವಾಗಿರುವ ಚಿಕ್ಕಪೇಟೆಯ ಹುರಿಯೋಪೇಟೆಯಲ್ಲಿನ ಲಕ್ಷ್ಮಣರಾವ್ ರಸ್ತೆಯಲ್ಲಿ ಜಲಮಂಡಳಿ ಎಂಟು ತಿಂಗಳ ಹಿಂದೆ ಆರಂಭಿಸಿದ್ದ ಕೊಳವೆ ಮಾರ್ಗದ ಕಾಮಗಾರಿ ಇನ್ನೂ ಕುಂಟುತ್ತಾ ಸಾಗಿದೆ. ಇದರಿಂದ ವ್ಯಾಪಾರಿಗಳು, ಖರೀದಿಗೆ ಬರುವ ಗ್ರಾಹಕರು, ಸ್ಥಳೀಯ ನಿವಾಸಿಗಳು ಹೈರಾಣಾಗಿದ್ದಾರೆ.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಪ್ರತಿನಿಧಿಸುವ ಗಾಂಧಿನಗರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿರುವ ರಸ್ತೆಯ ದುಃಸ್ಥಿತಿಯಿಂದ ವ್ಯಾಪಾರಕ್ಕೂ ಅಡ್ಡಿಯಾಗುತ್ತಿದೆ. ಹುರಿಯೋಪೇಟೆಯ ಲಕ್ಷ್ಮಣರಾವ್ ರಸ್ತೆಯು ಬಿವಿಕೆ ಅಯ್ಯಂಗಾರ್ ರಸ್ತೆಯಿಂದ ಅವೆನ್ಯೂ ರಸ್ತೆಗೆ ಸಂಪರ್ಕ ಕಲ್ಪಿಸುತ್ತದೆ. 2024ರ ಫೆಬ್ರುವರಿಯಲ್ಲಿ ₹15 ಲಕ್ಷ ವೆಚ್ಚದಲ್ಲಿ ಕೊಳವೆ ಮಾರ್ಗದ ಕಾಮಗಾರಿಗೆ ಚಾಲನೆ ನೀಡಲಾಗಿತ್ತು. ಜಲಮಂಡಳಿ ಅಧಿಕಾರಿಗಳ ವಿಳಂಬ ಧೋರಣೆಯಿಂದ ಕಾಮಗಾರಿ ಆಮೆಗತಿಯಲ್ಲಿ ಸಾಗಿದೆ.

‘ಹುರಿಯೋಪೇಟೆ ಲಕ್ಷ್ಮಣರಾವ್ ರಸ್ತೆಯಲ್ಲಿ ಬಟ್ಟೆ, ಎಲೆಕ್ಟ್ರಿಕ್ ಹಾಗೂ ಹಾರ್ಡ್‌ವೇರ್ ವಸ್ತುಗಳ ಮಾರಾಟ ಮಾಡುವ ಅಂಗಡಿಗಳಿವೆ. ರಸ್ತೆ ಅಗೆದಿರುವ ಪರಿಣಾಮ ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಸಾರ್ವಜನಿಕರು ಓಡಾಡದಂತಹ ಪರಿಸ್ಥಿತಿ ಎದುರಾಗಿದೆ. ಇದರಿಂದ, ವ್ಯಾಪಾರ–ವಹಿವಾಟು ಸಂಪೂರ್ಣವಾಗಿ ಕುಸಿದಿದೆ. ವ್ಯಾಪಾರಿಗಳು ಅಂಗಡಿ ಬಾಡಿಗೆ ಕಟ್ಟಲೂ ಪರದಾಡುವಂತಾಗಿದೆ. ರಸ್ತೆ ಅಗೆದು ಬಿಟ್ಟಿರುವುದರಿಂದ ಸ್ಥಳೀಯರಿಗೆ ನಿತ್ಯ ದೂಳಿನ ಮಜ್ಜನವಾಗುತ್ತಿದ್ದು, ಆರೋಗ್ಯ ಸಮಸ್ಯೆಗಳು ಹೆಚ್ಚುತ್ತಿವೆ’ ಎಂದು ಇಲ್ಲಿನ ರೂಪಾ ದೂರಿದರು.

‘ಇಲ್ಲಿನ ಅಂಗಡಿಗಳಿಗೆ ಬಟ್ಟೆ ಸೇರಿದಂತೆ ಇತರೆ ವಸ್ತುಗಳನ್ನು ಪೂರೈಸುವ ವಾಹನಗಳನ್ನು ಬಿವಿಕೆ ಅಯ್ಯಂಗಾರ್ ರಸ್ತೆಯಲ್ಲಿ ನಿಲ್ಲಿಸಲಾಗುತ್ತದೆ. ಅಲ್ಲಿಂದ ಅಂಗಡಿಗಳಿಗೆ ವಸ್ತುಗಳನ್ನು ಹೊತ್ತು ತರಬೇಕಿದೆ. ಹಾಗಾಗಿ ಕೆಲ ವ್ಯಾಪಾರಿಗಳು ಅಂಗಡಿಗಳನ್ನು ಮುಚ್ಚಿದ್ದಾರೆ. ಈ ರಸ್ತೆಯಲ್ಲಿ ಸ್ವಚ್ಛತೆ ಮರೀಚಿಕೆ ಆಗಿದೆ’ ಎಂದು ವ್ಯಾಪಾರಿಗಳು ಅಳಲು ತೋಡಿಕೊಂಡರು.

‘ಬಿಬಿಎಂಪಿ ಮತ್ತು ಜಲಮಂಡಳಿ ಸಿಬ್ಬಂದಿ ನಾನಾ ಕಾರಣಗಳಿಂದ ಕಾಮಗಾರಿ ವಿಳಂಬ ಮಾಡುತ್ತಿದ್ದಾರೆ. ರಸ್ತೆಯಲ್ಲಿ ಗುಂಡಿಗಳಿರುವ ಕಾರಣ ಹಲವು ಗ್ರಾಹಕರು ಮತ್ತು ವ್ಯಾಪಾರಿಗಳು ಬಿದ್ದು ಕಾಲು ಮುರಿದುಕೊಂಡಿದ್ದಾರೆ. ಹಬ್ಬಗಳು ಸೇರಿದಂತೆ ವಾರಾಂತ್ಯದಲ್ಲಿ ಸಾವಿರಾರು ಗ್ರಾಹಕರನ್ನು ಸೆಳೆಯುತ್ತಿದ್ದ ಈ ಮಾರುಕಟ್ಟೆ ಎಂಟು ತಿಂಗಳಿಂದ ದಯನೀಯ ಸ್ಥಿತಿಗೆ ತಲುಪಿದೆ’ ಎಂದರು ವ್ಯಾಪಾರಿ ವಿಶಾಲ್ ಜೈನ್.

ಹುರಿಯೋಪೇಟೆ ರಸ್ತೆ ದುರವಸ್ಥೆ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಜಲಮಂಡಳಿ ಎಂಜಿನಿಯರ್ ಒಬ್ಬರು, ‘ಮಳೆಗಾಲ ಪ್ರಾರಂಭವಾಗಿರುವ ಕಾರಣ ಕಾಮಗಾರಿ ವಿಳಂಬವಾಗಿದೆ. 15 ದಿನಗಳೊಳಗೆ ಕಾಮಗಾರಿ ಪೂರ್ಣಗೊಳಿಸಲಾಗುವುದು’ ಎಂದು ಭರವಸೆ ನೀಡಿದರು.

ನಗರದ ಹುರಿಯೋಪೇಟೆಯ ಲಕ್ಷ್ಮಣರಾವ್ ರಸ್ತೆಯ ಬದಿಯಲ್ಲಿ ಇರಿಸಿರುವ ಕೊಳವೆಗಳ ರಾಶಿ

ಜನರು ಏನಂತಾರೆ...

ಮಳೆ ಬಂದರೆ ರಸ್ತೆಯೆಲ್ಲಾ ಕೆಸರು ಗದ್ದೆಯಾಗುತ್ತದೆ. ರಸ್ತೆಯಲ್ಲಿಯೇ ಕಸ ಹಾಕುವುದರಿಂದ, ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ. ಸೊಳ್ಳೆಗಳ ಕಾಟ ಹೆಚ್ಚಾಗಿದ್ದು, ಡೆಂಗಿ, ಮಲೇರಿಯಾ ಹರಡುವ ಭೀತಿ ಎದುರಾಗಿದೆ.

ಭರತ್, ಸ್ಥಳೀಯ ನಿವಾಸಿ

ಬಿಬಿಎಂಪಿಗೆ ಚಿಕ್ಕಪೇಟೆ ಭಾಗದಿಂದ ತೆರಿಗೆ ಸಂಗ್ರಹವಾಗುತ್ತಿದೆ. ಆದರೆ, ಇಲ್ಲಿ ಅದಕ್ಕೆ ತಕ್ಕಂತೆ ಮೂಲಸೌಕರ್ಯ ನೀಡುತ್ತಿಲ್ಲ

ವಿಶಾಲ್ ಜೈನ್, ವ್ಯಾಪಾರಿ

ಸ್ಥಳೀಯ ಶಾಸಕರೂ ಆಗಿರುವ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಪ್ರತಿನಿಧಿಸುವ ಕ್ಷೇತ್ರದಲ್ಲಿ ಸ್ವಚ್ಛತೆ ಮರೀಚಿಕೆ ಆಗಿದೆ. ಗಣಪತಿ ಹಬ್ಬಕ್ಕಿಂತ ಮೊದಲು ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಗೋಪಾಲಕೃಷ್ಣ, ಸ್ಥಳೀಯರು

ಹುರಿಯೋಪೇಟೆ ರಸ್ತೆ ಮತ್ತು ಕಸದ ಸಮಸ್ಯೆ ನಿವಾರಿಸುವಂತೆ ದಿನೇಶ್ ಗುಂಡೂರಾವ್ ಅವರಿಗೆ ಮನವಿ ಸಲ್ಲಿಸಿದರೆ, ‘ನಿಮ್ಮ ವಾರ್ಡ್‌ನಲ್ಲಿ ನನಗೆ ಮತ ಬಂದಿಲ್ಲ. ನಿಮ್ಮ ಸಮಸ್ಯೆಗೆ ನಾನೇಕೆ ಸ್ಪಂದಿಸಬೇಕು’ ಎಂದು ಪ್ರಶ್ನಿಸುತ್ತಿದ್ದಾರೆ

ಶಿವಾನಂದ್, ಹುರಿಯೋಪೇಟೆ ನಿವಾಸಿ

ಸುದ್ದಿ 2 ನಿಮಿಷ

ಬಾಡಿಗೆ ಪಾವತಿಸದ ಅಂಚೆ ಕಚೇರಿಗಳಿಗೆ ಪಾಲಿಕೆಯಿಂದ ಬೀಗ

ಬೆಂಗಳೂರು: ಬಿಬಿಎಂಪಿ ನಿಗದಿಪಡಿಸಿರುವ ಬಾಡಿಗೆಯನ್ನು ಪಾವತಿಸದ ಎರಡು ಅಂಚೆ ಕಚೇರಿಗಳಿಗೆ ಬೀಗ ಹಾಕಲಾಗಿದೆ.

ಸೇಂಟ್ ಜಾನ್ಸ್ ರಸ್ತೆಯಲ್ಲಿ ಬಿಬಿಎಂಪಿ ಸ್ವತ್ತಿನ 1,665 ಚದರಡಿ ವಿಸ್ತೀರ್ಣದ ಮಳಿಗೆಯಲ್ಲಿರುವ ಅಂಚೆ ಕಚೇರಿ 2014ರ ಏಪ್ರಿಲ್‌ನಿಂದಲೂ ಹಳೆಯ ಬಾಡಿಗೆಯನ್ನೇ ಪಾವತಿಸುತ್ತಿದೆ. ಪರಿಷ್ಕೃತ ಬಾಡಿಗೆ ಪಾವತಿಸಲು ಹಲವು ಬಾರಿ ನೋಟಿಸ್ ನೀಡಿದ್ದರೂ ಸ್ಪಂದಿಸಿರಲಿಲ್ಲ. ಒಟ್ಟು ₹88.91 ಲಕ್ಷ ಬಾಡಿಗೆ ಬಾಕಿ ಇದೆ. ಹೀಗಾಗಿ, ಪೂರ್ವ ವಲಯ ಆಯುಕ್ತರ ಆದೇಶದಂತೆ ಪಾಲಿಕೆ ಸಿಬ್ಬಂದಿ ಸೋಮವಾರ ಬೆಳಿಗ್ಗೆ ಮಳಿಗೆಗೆ ಬೀಗ ಹಾಕಿದ್ದಾರೆ.

ವಸಂತನಗರ ಮಾರುಕಟ್ಟೆಯ ನೆಲ ಅಂತಸ್ತಿನಲ್ಲಿ 214 ಚದರಡಿಯಲ್ಲಿರುವ ಅಂಚೆ ಕಚೇರಿಯು 2016ರ ಜನವರಿಯಿಂದ ಪರಿಷ್ಕೃತ ಬಾಡಿಗೆಯನ್ನು ಪಾವತಿಸಿರಲಿಲ್ಲ. ₹10.80 ಲಕ್ಷ ಬಾಕಿ ಇದೆ. ಹೀಗಾಗಿ, ಸೋಮವಾರ ಬೆಳಿಗ್ಗೆ ಈ ಮಳಿಗೆಗೂ ಪಾಲಿಕೆ ಸಿಬ್ಬಂದಿ ಬೀಗ ಹಾಕಿದ್ದಾರೆ ಎಂದು ಸಹಾಯಕ ಕಂದಾಯ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಉದ್ದಿಮೆ ಪರವಾನಗಿ: ಕಂದಾಯ ವಿಭಾಗಕ್ಕೆ ಬೇಡ’

ಬೆಂಗಳೂರು: ‘ಬಿಬಿಎಂಪಿ ವ್ಯಾಪ್ತಿಯಲ್ಲಿ ‘ಆರೋಗ್ಯಕ್ಕೆ ಸಂಬಂಧಿಸಿರದ (ನಾನ್ ಹೆಲ್ತ್) ಉದ್ದಿಮೆ ಪರವಾನಗಿ’ ನೀಡುವ ಜವಾಬ್ದಾರಿಯನ್ನು ಕಂದಾಯ ವಿಭಾಗಕ್ಕೆ ವಹಿಸಬಾರದು’ ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಆಗ್ರಹಿಸಿದೆ.

‘ಪಾಲಿಕೆಯ ಸಾರ್ವಜನಿಕ ಆರೋಗ್ಯ ವಿಭಾಗ ಉದ್ದಿಮೆ ಪರವಾನಗಿ ನೀಡುತ್ತಿದೆ. ಆದರೆ, ‘ಆರೋಗ್ಯಕ್ಕೆ ಸಂಬಂಧಿಸಿರದ ಉದ್ದಿಮೆಗಳ ಪರವಾನಗಿ’ ನೀಡುವ ಪ್ರಕ್ರಿಯೆಯನ್ನು ಕಂದಾಯ ವಿಭಾಗಕ್ಕೆ ವಹಿಸಲು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತರು ಪ್ರಸ್ತಾವ ಸಲ್ಲಿಸಿದ್ದಾರೆ. ಇದನ್ನು ಕೈ ಬಿಡಬೇಕು’ ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಒತ್ತಾಯಿಸಿದ್ದಾರೆ.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಪತ್ರ ಬರೆದಿರುವ ಅಮೃತ್‌ರಾಜ್, ‘ಎಲ್ಲ ಉದ್ದಿಮೆಗಳಲ್ಲೂ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಇದು ಆರೋಗ್ಯ, ನೈರ್ಮಲ್ಯ ವಿಭಾಗಕ್ಕೆ ಸಂಬಂಧಿಸಿರುತ್ತದೆ. ಅಗ್ನಿ ಸುರಕ್ಷತಾ ಉಪಕರಣಗಳ ಬಳಕೆ ಜೊತೆಗೆ ಗಾಳಿ-ಬೆಳಕು ವ್ಯವಸ್ಥೆ, ಕಾರ್ಮಿಕರ ಆರೋಗ್ಯದ ವಿಷಯವೂ ಇರುತ್ತದೆ. ಇದೆಲ್ಲದರ ಪರಿಶೀಲನೆಗೆ ಆರೋಗ್ಯ ಪರಿವೀಕ್ಷಕರು ತರಬೇತಿ ಪಡೆದಿರುತ್ತಾರೆ. ಅವರೇ ಪರವಾನಗಿ ಪ್ರಕ್ರಿಯೆ ನಡೆಸಬೇಕು’ ಎಂದು ಹೇಳಿದ್ದಾರೆ.

‘ಶ್ರೀಕೃಷ್ಣಜನ್ಮಾಷ್ಟಮಿ’ ಕಾರ್ಯಕ್ರಮದಲ್ಲಿ ಚಿತ್ರದುರ್ಗದ ಯಾದವಾನಂದ ಸ್ವಾಮೀಜಿ ಕರೆ

ಮೀಸಲಾತಿ: ಒಗ್ಗಟ್ಟಿನಿಂದ ಹೋರಾಡೋಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಸಮುದಾಯದ ಅಭಿವೃದ್ಧಿಗೆ ಮೀಸಲಾತಿ ಅಗತ್ಯವಿದ್ದು, ಎಲ್ಲರೂ ಒಗ್ಗಟ್ಟಿನಿಂದ ಮೀಸಲಾತಿಗಾಗಿ ಹೋರಾಟ ಮಾಡೋಣ’ ಎಂದು ಚಿತ್ರದುರ್ಗದ ಅಖಿಲ ಭಾರತ ಶ್ರೀಕೃಷ್ಣ ಯಾದವ ಮಹಾಸಂಸ್ಥಾನ ಮಠದ ಯಾದವಾನಂದ ಸ್ವಾಮೀಜಿ ಕರೆ ನೀಡಿದರು.

ರವೀಂದ್ರ ಕಲಾಕ್ಷೇತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೋಮವಾರ ಆಯೋಜಿಸಿದ್ದ ಶ್ರೀಕೃಷ್ಣ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ನಮ್ಮ ಸಮುದಾಯ ಆರ್ಥಿಕವಾಗಿ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಹಿಂದುಳಿದಿದೆ. ಮೀಸಲಾತಿ ಸೌಲಭ್ಯದಿಂದ ವಂಚಿತರಾಗಿದ್ದೇವೆ. ಆಂತರಿಕ ಭಿನ್ನಾಭಿಪ್ರಾಯಗಳನ್ನು ಬಿಟ್ಟು, ಸೌಲಭ್ಯಗಳನ್ನು ಪಡೆಯುವುದಕ್ಕಾಗಿ ಹೋರಾಡಲು ಒಗ್ಗೂಡಬೇಕು’ ಎಂದು ಹೇಳಿದರು.

ಪುರಾಣಗಳಲ್ಲಿ ಕೃಷ್ಣನ ಕುರಿತು ಉಪನ್ಯಾಸ ನೀಡಿದ ಚಿಂತಕ ಬಂಜಗೆರೆ ಜಯಪ್ರಕಾಶ್, ‘ದೇವರನ್ನು ಜನಸಾಮಾನ್ಯರ ಬಳಿಗೆ ಕರೆದೊಯ್ದು, ಪೂಜೆ– ಆಚರಣೆಗಳನ್ನು ಸರಳೀಕರಿಸಿ, ದೇವರು ಭಕ್ತವತ್ಸಲ ಎಂದು ಸಾರಿದವನು ಶ್ರೀಕೃಷ್ಣ’ ಎಂದು ಪ್ರತಿಪಾದಿಸಿದರು.

‘ಭಾಗವತ ಪುರಾಣದ ಪ್ರಕಾರ ಕೃಷ್ಣನಿಗೆ ಮೇಲು–ಕೀಳಿನ ಮೇಲೆ ನಂಬಿಕೆ ಇರಲಿಲ್ಲ. ಸಾಮಾನ್ಯರು, ಬಡವರೂ ನಿರ್ಮಲ ಭಕ್ತಿಯನ್ನು ಹೊಂದಿದ್ದರೆ ಅವರಿಗೆ ಒಲಿಯುತ್ತಿದ್ದ. ಕೃಷ್ಣ, ದೀನರ ಮತ್ತು ತುಳಿತಕ್ಕೊಳಗಾದವರ ದೇವರು. ಕುಚೇಲ, ವಿದುರನ ಕಥೆಗಳು ಇದಕ್ಕೆ ಉದಾಹರಣೆಗಳು’ ಎಂದು ವಿವರಿಸಿದರು.

‘ಹುಟ್ಟು, ಜ್ಞಾನ, ತಾನು ಮಾಡುವ ಆಚರಣೆಗಳು ಯಾವುದರಿಂದಲೂ ನನ್ನನ್ನು ತಲುಪಲು ಸಾಧ್ಯವಿಲ್ಲ. ಶ್ರೀಮಂತಿಕೆ, ಬೆಲೆ ಬಾಳುವ ಅರ್ಚನೆಗಳೂ ಬೇಕಾಗಿಲ್ಲ. ಸರಳತೆ ಮತ್ತು ನಂಬಿಕೆಯೇ ಸಾಕು – ಇವೆಲ್ಲ ಕೃಷ್ಣ ನೀಡಿದ ಸಂದೇಶಗಳು’ ಎಂದರು.

‘ಶ್ರೀಕೃಷ್ಣ ವರ್ಣಾಶ್ರಮ, ಧರ್ಮ ಪ್ರತಿಪಾದಕ ಎನ್ನುವುದು ವಿವಾದಾಸ್ಪದ. ಆ ವರ್ಣಾಶ್ರಮ, ಧರ್ಮ ಪ್ರತಿಪಾದಕ ಎನ್ನುವ ಚೌಕಟ್ಟಿನಿಂದ ಅವನನ್ನು ಹೊರತರುವುದೇ ಕೃಷ್ಣನಿಗೆ ನಾವು ತೋರಿಸುವ ಗೌರವ’ ಎಂದು ಹೇಳಿದರು.

ವಿಧಾನಪರಿಷತ್ ಸದಸ್ಯರಾದ ನಾಗರಾಜ್ ಯಾದವ್, ಡಿ.ಟಿ. ಶ್ರೀನಿವಾಸ್ ಮಾತನಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣೀದೇವಿ ಮಾಲಗತ್ತಿ ಸ್ವಾಗತಿಸಿದರು. ರಂಗ ವಿಜಯ ಟ್ರಸ್ಟ್‌ನವರು ಶ್ರೀಕೃಷ್ಣನ ಕುರಿತ ಗೀತೆಗಾಯನ ಪ್ರಸ್ತುತಪಡಿಸಿದರು.

ಸಭಾ ಕಾರ್ಯಕ್ರಮಕ್ಕೂ ಮುನ್ನ ಎಸ್.ಪಿ.ರಸ್ತೆಯ ವೇಣುಗೋಪಾಲಸ್ವಾಮಿ ದೇವಾಲಯದಿಂದ ಕಲಾಕ್ಷೇತ್ರದವರೆಗೆ ಶ್ರೀಕೃಷ್ಣನ ಭಾವಚಿತ್ರದೊಂದಿಗೆ ಮೆರವಣಿಗೆ ನಡೆಸಲಾಯಿತು. ವಿವಿಧ ಜಾನಪದ ಕಲಾ ತಂಡಗಳು, ಗಣ್ಯರು ಸಾರ್ವಜನಿಕರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಚಿತ್ರದುರ್ಗದ ಅಖಿಲ ಭಾರತ ಶ್ರೀಕೃಷ್ಣ ಯಾದವ ಮಹಾಸಂಸ್ಥಾನ ಮಠದ ಯಾದವಾನಂದ ಸ್ವಾಮೀಜಿ ಶ್ರೀಕೃಷ್ಣನ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಚಿಂತಕ ಬಂಜಗೆರೆ ಜಯಪ್ರಕಾಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಧಾನ ಕಾರ್ಯದರ್ಶಿ ಅಜಯ್ ನಾಗಭೂಷಣ್, ವಿಧಾನ ಪರಿಷತ್ ಸದಸ್ಯರಾದ ನಾಗರಾಜ ಯಾದವ್, ಡಿ.ಟಿ.ಶ್ರೀನಿವಾಸ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಿರುತೆರೆ ನಟಿ ಗೀತಾ ಅವರು ಕೃಷ್ಣ ವೇಷಧಾರಿಯಾಗಿ ಕಾರ್ಯಕ್ರಮದಲ್ಲಿ ಗಮನ ಸೆಳೆದರು —ಪ್ರಜಾವಾಣಿ ಚಿತ್ರ

ನೆಲಮಂಗಲ ಪಟ್ಟಣದ ವಿಶಾಲ್ ಆಂಗ್ಲಶಾಲೆಯಲ್ಲಿ ಕೃಷ್ಣಜನ್ಮಾಷ್ಟಮಿ ಪ್ರಯುಕ್ತ ಮೊಸರು ಕುಡಿಕೆ ಒಡೆಯುವ ಸ್ಪರ್ಧೆ ಹಮ್ಮಿಕೊಳ್ಳಲಾಯಿತು

ಆರ್‌ಆರ್‌ನಗರ ಶ್ರೀಕೃಷ್ಣ ಜನ್ಮಾಷ್ಟಮಿ ಸಂಭ್ರಮ

ರಾಜರಾಜೇಶ್ವರಿನಗರ: ನಾಗದೇವನಹಳ್ಳಿಯಲ್ಲಿ ಭೂತಪ್ಪಸ್ವಾಮಿ ದೇವಸ್ಥಾನದ ಸೇವಾ ಟ್ರಸ್ಟ್ ಮತ್ತು ದೊಡ್ಡ ಗೊಲ್ಲರಹಟ್ಟಿ ಸೇರಿದಂತೆ ವಿವಿಧ ಬಡಾವಣೆಗಳ ನಾಗರಿಕರು, ಗ್ರಾಮಸ್ಥರು ಶ್ರೀಕೃಷ್ಣ ಜನ್ಮಾಷ್ಟಮಿ ಆಚರಿಸಿದರು.

ಬಿಜೆಪಿ ಯುವ ಮುಖಂಡ ಎನ್.ಸಿ. ಕುಮಾರ್, ಭೂತಪ್ಪಸ್ವಾಮಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಸೊಸೈಟಿ ಕೃಷ್ಣಪ್ಪ, ದೊಡ್ಡಯ್ಯ, ಪೂಜಾರಿ ತಿಮ್ಮಯ್ಯ, ಯರಪ್ಪ, ತಮ್ಮಯ್ಯ, ಮಾರಣ್ಣ, ವಕೀಲ ಕುಮಾರ್, ಶೇಷಪ್ಪ, ಸಮಾಜ ಸೇವಕ ಎಂ.ಸಿ. ಶಿವಕುಮಾರ್, ಬಿ.ಆರ್. ಮಹೇಶ್, ದೇವರಾಜು, ಗೋವಿಂದಪ್ಪ, ಪ್ರೇಮನಾಗಯ್ಯ, ಯಾದವ ಸಮಾಜದವರು, ಗ್ರಾಮಸ್ಥರು ಭಾಗವಹಿಸಿದ್ದರು.

ಪುಟ್ಟ ಮಕ್ಕಳು, ಕೃಷ್ಣ ವೇಷಧಾರಿಗಳಾಗಿ ಕಾಣಿಸಿಕೊಂಡರು. ವಿಶೇಷ ಪೂಜೆಯ ಬಳಿಕ ವಿಶೇಷ ಪ್ರಸಾದದ ವ್ಯವಸ್ಥೆ ಮಾಡಲಾಯಿತು.

ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ನಗರದ ಇಸ್ಕಾನ್ ದೇವಸ್ಥಾನಕ್ಕೆ ಭಾರಿ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರು – ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್

ಭಕ್ತಿ, ಪ್ರೀತಿಯಿಂದ ಶ್ರೀಕೃಷ್ಣನ ಆರಾಧನೆ

ಪ್ರಜಾವಾಣಿ ವಾರ್ತೆ

ಕೃಷ್ಣ ಜನ್ಮಾಷ್ಟಮಿ ಸಂಭ್ರಮ

ಬೆಂಗಳೂರು: ನಗರದಾದ್ಯಂತ ಸೋಮವಾರ ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಭಕ್ತಿ ಮತ್ತು ಪ್ರೀತಿಯಿಂದ ಆಚರಿಸಲಾಯಿತು.

ದೇವಾಲಯಗಳಲ್ಲಿ ಶ್ರೀಕೃಷ್ಣ–ರಾಧೆ, ಕೃಷ್ಣ–ಬಲರಾಮರ ಮೂರ್ತಿಗಳಿಗೆ ಪುಷ್ಪಾಲಂಕಾರ ಮಾಡಿ, ವಿಶೇಷ ಪೂಜೆ ಮಾಡಲಾಯಿತು.

ಹಲವರು ಮನೆಗಳಲ್ಲಿ ಶ್ರೀಕೃಷ್ಣನ ಮೂರ್ತಿಯನ್ನು ಪ್ರತಿಷ್ಠಾಪಿಸಿ, ವಿಶೇಷ ಪೂಜೆ ಮಾಡಿ ನೈವೇದ್ಯ ಅರ್ಪಿಸಿದರು.

ನಗರದ ಇಸ್ಕಾನ್‌ನ ಹರೇಕೃಷ್ಣ ಗಿರಿಯಲ್ಲಿ ಕೃಷ್ಣ ಜನ್ಮಾಷ್ಟಮಿಯನ್ನು ವೈಭವದಿಂದ ಆಚರಿಸಲಾಯಿತು. ರಾಧಾಕೃಷ್ಣ ಚಂದ್ರರ ಮೂರ್ತಿಗಳನ್ನು ವಜ್ರಾಭರಣಗಳಿಂದ, ಆಕರ್ಷಕ ವಸ್ತ್ರಗಳಿಂದ ಅಲಂಕರಿಸಲಾಗಿತ್ತು. ರಾಧಾಕೃಷ್ಣರಿಗೆ ಬೆಳಿಗ್ಗೆ ಮಹಾಮಂಗಳಾರತಿ ಮತ್ತು ಕೀರ್ತನೆಗಳಿಂದ ಪೂಜಾ ಕಾರ್ಯಕ್ರಮಗಳು ಪ್ರಾರಂಭವಾದವು.

ಪಂಚಾಮೃತ, ಪಂಚಗವ್ಯ, ಪುಷ್ಪೋದಕ, ಫಲೋದಕಗಳಿಂದ ಅಭಿಷೇಕ ಮಾಡಲಾಯಿತು. ಕೃಷ್ಣನಿಗೆ ಪ್ರಿಯವಾದ 108 ಭಕ್ಷ್ಯಗಳ ನೈವೇದ್ಯಗಳ ಸೇವೆ ಸಲ್ಲಿಸಲಾಯಿತು. ಇಡೀ ಮಂದಿರವನ್ನು ಬಗೆಬಗೆಯ ಹೂವಿನ ಮಾಲೆಗಳಿಂದ ಅಲಂಕರಿಸಲಾಗಿತ್ತು. ಗೋಶಾಲೆಯಲ್ಲಿ ಗೋಪೂಜೆ ಮಾಡಲಾಯಿತು. ಉಯ್ಯಾಲೆ ಸೇವೆ, ತೆಪ್ಪೋತ್ಸವ ನಡೆಯಿತು.

ಪೂರ್ಣಪ್ರಜ್ಞ ನಗರದ ಪೂರ್ಣಪ್ರಜ್ಞ ವಿದ್ಯಾಪೀಠ ಪ್ರತಿಷ್ಠಾನದಲ್ಲಿ ನಾನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಅಭಿಷೇಕ, ವಿಶೇಷ ಪೂಜೆ, ಅಲಂಕಾರ, ತುಳಸಿ ಅರ್ಚನೆ, ಭಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಬಸವನಗುಡಿಯಲ್ಲಿರುವ ಗೋವರ್ಧನಗಿರಿ ಗುಹಾಲಯ ಕ್ಷೇತ್ರ, ಉಡುಪಿ ಶ್ರೀ ಪುತ್ತಿಗೆ ಮಠದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಸಡಗರದಿಂದ ಆಚರಿಸಲಾಯಿತು. ನಗರದ ಹಲವರು ಮನೆಗಳಲ್ಲಿ ವಿಶಿಷ್ಟವಾಗಿ ಕೃಷ್ಣ ಜನ್ಮಾಷ್ಟಮಿ ಆಚರಿಸಿದರು. ಕೃಷ್ಣನ ವಿಗ್ರಹವಿಟ್ಟು, ಚಕ್ಕುಲಿ, ಕೋಡುಬಳೆ, ರವೆ ಉಂಡೆ, ಕರ್ಜಿಕಾಯಿ, ಒಬ್ಬಟ್ಟು ಇತ್ಯಾದಿಗಳನ್ನು ನೈವೇದ್ಯಕ್ಕೆ ಇಟ್ಟು ಪೂಜೆ ಮಾಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶ್ರೀಕೃಷ್ಣನ ವೇಷತೊಟ್ಟು ಗಮನ ಸೆಳೆದ ಪುಟಾಣಿ —ಪ್ರಜಾವಾಣಿ ಚಿತ್ರ

ಇಸ್ಕಾನ್ ಸುತ್ತಮುತ್ತ ವಾಹನ ದಟ್ಟಣೆ

ಇಸ್ಕಾನ್‌ನಲ್ಲಿ ಸೋಮವಾರ ನಡೆದ ಶ್ರೀಕೃಷ್ಣ ಜನ್ಮಾಷ್ಟಮಿಗೆ ಭಾರಿ ಸಂಖ್ಯೆಯಲ್ಲಿ ಭಕ್ತರು ಬಂದಿದ್ದರಿಂದ ದೇವಸ್ಥಾನದ ಸುತ್ತಮುತ್ತ ವಾಹನ ದಟ್ಟಣೆ ಉಂಟಾಗಿತ್ತು.

ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಸ್ಯಾಂಡಲ್ ಸೋಪ್ ಫ್ಯಾಕ್ಟರಿ ಜಂಕ್ಷನ್‌ನಿಂದ ವಿಜಯನಗರ, ನಂದಿನಿ ಲೇಔಟ್, ಮಹಾಲಕ್ಷ್ಮಿ ಲೇಔಟ್‌ನತ್ತ ತೆರಳುವ ವಾಹನ ಸವಾರರು ಪರದಾಡಿದರು. ಮೆಜೆಸ್ಟಿಕ್, ದಾಸರಹಳ್ಳಿ ಕಡೆಗೆ ತೆರಳುವ ಸವಾರರೂ ದಟ್ಟಣೆಯಲ್ಲಿ ಸಿಲುಕಬೇಕಾಯಿತು.

ಇನ್ನು ಸ್ಯಾಂಡಲ್ ಸೋಪ್ ಫ್ಯಾಕ್ಟರಿ, ಯಶವಂತಪುರ, ಗೊರಗುಂಟೆಪಾಳ್ಯ ಜಂಕ್ಷನ್‌ಗಳಲ್ಲೂ ಸೋಮವಾರ ರಾತ್ರಿ ದಟ್ಟಣೆ ಕಂಡುಬಂತು.

ಬೆಂಗಳೂರಿನ ಬಸವನಗುಡಿಯ ದೊಡ್ಡ ಬಸವಣ್ಣ ದೇವಸ್ಥಾನದ ರಸ್ತೆಯಲ್ಲಿರುವ ಪುತ್ತಿಗೆ ಶಾಖಾ ಮಠದ ಗೋವರ್ಧನ ಕ್ಷೇತ್ರದಲ್ಲಿ ಸೋಮವಾರ ಶ್ರೀಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಕೃಷ್ಣ ದರ್ಶನ ನಡೆಯಿತು – ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ನಗರದ ಭರವಸೆ ತಂಡದ ಸದಸ್ಯರು ಕಲಾಜ್ಯೋತಿ ಚಾರಿಟಬಲ್ ಟ್ರಸ್ಟ್‌ನ ವಿಶೇಷ ಮಕ್ಕಳ ಪುಣ್ಯಾಶ್ರಮದಲ್ಲಿನ ಮಕ್ಕಳಿಗೆ ಕೃಷ್ಣ–ರಾಧೆಯರ ವೇಷಭೂಷಣ ತೊಡಿಸಿ ಶ್ರೀಕೃಷ್ಣ ಜನ್ಮಾಷ್ಟಮಿ ಆಚರಿಸಿದರು

ವೇಣುಗೋಪಾಲಸ್ವಾಮಿ ದೇವಸ್ಥಾನದಲ್ಲಿ ಜನ್ಮಾಷ್ಟಮಿ

ಕೆ.ಆರ್.ಪುರ: ಕೆ.ಆರ್. ಪುರ ಸಮೀಪದ ದೇವಸಂದ್ರದ ಮುಖ್ಯರಸ್ತೆಯಲ್ಲಿರುವ ವೇಣು-ಗೋಪಾಲಸ್ವಾಮಿ ದೇವಾಲಯದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ವಿಜೃಂಭಣೆಯಿಂದ ನಡೆಯಿತು.

ಅಭಿಷೇಕ, ವಿಶೇಷ ಪೂಜೆ, ಹೋಮ, ಹವನ ನೆರವೇರಿತು. ದೇವರಿಗೆ ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು. ದಿನವಿಡೀ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು.

ದೇವಸಂದ್ರ, ಅಯ್ಯಪ್ಪನಗರ, ರಾಮಮೂರ್ತಿನಗರ, ಬಸವನಪುರ, ಹೂಡಿ, ಭಟ್ಟರಹಳ್ಳಿ, ಟಿಸಿ ಪಾಳ್ಯ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ದೇವರ ದರ್ಶನ ಪಡೆದರು.

ವಿಧಾನ ಪರಿಷತ್ ಸದಸ್ಯ ಡಿ.ಟಿ. ಶ್ರೀನಿವಾಸ್, ಮಾಜಿ ಶಾಸಕಿ ಪೂರ್ಣಿಮಾ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ.ಕೆ. ಮೋಹನ್, ಮುಖಂಡರಾದ ಡಿ.ಎ. ಗೋಪಾಲ್, ಡಿ.ಕೆ.ದೇವೇಂದ್ರ ಇದ್ದರು.

'ಪ್ರಜಾ ಕವಿ ಗದ್ದರ್– ಪ್ರಥಮ ಪರಿನಿಬ್ಬಾಣ' ಕಾರ್ಯಕ್ರಮದಲ್ಲಿ ವೆನ್ನೆಲಾ ಅಭಿಪ್ರಾಯ

'ಎಲ್ಲ ಸಮುದಾಯದ ಮೇಲೂ ದೌರ್ಜನ್ಯ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಗದ್ದರ್ ಹಾದಿಯಲ್ಲಿ ಯುವ ಸಮೂಹ ನಡೆಯಲಿ
- ಸ್ವಾತಂತ್ರ್ಯಕ್ಕಾಗಿ ಮರು ಹೋರಾಟ
- ಭಾರತದ ರಾಜ್ಯಾಂಗ ರಕ್ಷಣೆಯಾಗಲಿ

ಬೆಂಗಳೂರು: 'ದೇಶದಲ್ಲಿ ದಲಿತರ ಮೇಲಷ್ಟೇ ಅಲ್ಲ, ಎಲ್ಲ ಸಮುದಾಯದ ಮೇಲೂ ದೌರ್ಜನ್ಯ ನಡೆಯುತ್ತಿದೆ. ಅದನ್ನು ಯುವಜನಾಂಗ ಮೆಟ್ಟಿ ನಿಲ್ಲಬೇಕು' ಎಂದು ಗದ್ದರ್ ಪುತ್ರಿ ವೆನ್ನೆಲಾ ಹೇಳಿದರು.

'ಪ್ರಜಾ ಕವಿ, ಪ್ರಜಾ ಗಾಯಕ ಗದ್ದರ್– ಪ್ರಥಮ ಪರಿನಿಬ್ಬಾಣ' ಕಾರ್ಯಕ್ರಮದಲ್ಲಿ ಸೋಮವಾರ ಮಾತನಾಡಿದ ಅವರು, 'ಗದ್ದರ್ ಅವರು ದೌರ್ಜನ್ಯದ ವಿರುದ್ಧ ಹೇಗೆ ಹೋರಾಟ ಮಾಡಬೇಕು ಎಂಬ ಮಾರ್ಗಸೂಚಿ ನೀಡಿದ್ದಾರೆ. ಆ ಹಾದಿಯಲ್ಲಿ ಯುವಕರು ನಡೆಯಬೇಕಿದೆ' ಎಂದರು.

'ಭಾರತದ ರಾಜ್ಯಾಂಗ ರಕ್ಷಣೆಯಾಗಬೇಕು. ನಮಗೆ ನಮ್ಮ ಹಕ್ಕು ದೊರೆಯಬೇಕು. ಸ್ವಾತಂತ್ರ್ಯಕ್ಕಾಗಿ ಮರು ಹೋರಾಟ ಮಾಡಬೇಕಿದೆ. ಪ್ರಜೆಗಳಿಗಾಗಿ ಗದ್ದರ್ ಅವರು ಮಾಡಿದ ಹೋರಾಟವನ್ನು ಮುಂದುವರಿಸುತ್ತಿರುವ ನಿಮ್ಮೆಲ್ಲರ ಜೊತೆಗೆ ನಾನೂ ಬರುತ್ತೇನೆ' ಎಂದು ಹೇಳಿದರು.

'ದೇಶದಲ್ಲಿ 'ದಕ್ಷಿಣ ಭಾರತದ ಸಾಂಸ್ಕೃತಿಕ ಕ್ರಾಂತಿ' ಆಗಬೇಕಿದೆ. ಇದಕ್ಕಾಗಿ ಹೋರಾಟ ಮಾಡುತ್ತಿದ್ದೇವೆ. ಲೋಕಸಭೆ ಚುನಾವಣೆಗೂ ಸ್ಪರ್ಧಿಸಿದ್ದೆ. ಸೋತರೂ ನಾನು ಹೋರಾಟ ನಿಲ್ಲಿಸುವುದಿಲ್ಲ' ಎಂದು ತಿಳಿಸಿದರು.

ಗದ್ದರ್ ಫೌಂಡೇಷನ್‌ನ ಸಂಸ್ಥಾಪಕ ಕಾರ್ಯದರ್ಶಿ ಹಾಗೂ ಗದ್ದರ್ ಪುತ್ರ ಸೂರ್ಯಕಿರಣ್ ಮಾತನಾಡಿ, 'ಗದ್ದರ್ ಅವರ ಕಲಾ ಸಾಹಿತ್ಯವನ್ನು ದೇಶದ ಎಲ್ಲ ಮೂಲೆಗಳಿಗೆ ತಲುಪಿಸುವ ಉದ್ದೇಶದಿಂದ ಎರಡು ಪುಸ್ತಕವನ್ನು ಹೊರತರಲಾಗಿದೆ. ಇನ್ನೂ 50 ಪುಸ್ತಕಗಳನ್ನು ಪ್ರತಿಷ್ಠಾನದಿಂದ ಪ್ರಕಟಿಸಲಾಗುತ್ತದೆ' ಎಂದು ಹೇಳಿದರು.

'ಗದ್ದರ್ ಅವರ ಧ್ಯೇಯೋದ್ದೇಶಗಳನ್ನು ಎಲ್ಲ ಪ್ರಜೆಗಳಿಗೆ ತಲುಪಿಸಲು 'ಅಖಿಲ ಭಾರತ ಗದ್ದರ್ ಸಾಂಸ್ಕೃತಿಕ ವೇದಿಕೆ'ಯನ್ನು ಸ್ಥಾಪಿಸುವ ಚಿಂತನೆ ನಡೆದಿದೆ' ಎಂದು ತಿಳಿಸಿದರು.

ಗದ್ದರ್ ಗೀತೆಗಳನ್ನು ಕನ್ನಡಕ್ಕೆ ಅನುವಾದ ಮಾಡಿರುವ ಕೋಟಿಗಾನಹಳ್ಳಿ ರಾಮಯ್ಯ ಮಾತನಾಡಿ, 'ಗದ್ದರ್ ಅವರ 80ರ ದಶಕದ ಆಲೋಚನೆಗಳು ಇಂದಿಗೆ ಪ್ರಸ್ತುತವಾಗಿಲ್ಲ. ಅವರ ಆಶಯಗಳನ್ನು ಮುಂದುವರಿಸಲು ರಾಜಕೀಯವಾದ ಬಲ ತಂದುಕೊಳ್ಳಬೇಕಿದೆ' ಎಂದರು.

'ವ್ಯವಸ್ಥೆಯ ವಿರುದ್ಧ ಹೋರಾಟ ಮಾಡುವುದು ಪ್ರವಾಹದ ವಿರುದ್ಧ ದಿಕ್ಕಿನಲ್ಲಿ ಈಜುವಂತಿರುತ್ತದೆ. ಇದನ್ನು ಗದ್ದರ್ ಮಾಡಿದರು. ತುಳಿತಕ್ಕೆ ಒಳಗಾಗಿರುವ ಸಮುದಾಯಕ್ಕೆ ಅಕ್ಷರದ ಅರಿವಾದರೆ ಅವರು ಮನುಷ್ಯರಾಗುತ್ತಾರೆ. ನಂತರ ದೌರ್ಜನ್ಯದಿಂದ ಹೊರಬರುತ್ತಾರೆ ಎಂದು ಅವರು ಭಾವಿಸಿದ್ದರು' ಎಂದು ಲೇಖಕ ಎಲ್. ಹನುಮಂತಯ್ಯ ಹೇಳಿದರು.

'ಗದ್ದರ್ ಅವರನ್ನು 'ಕವಿ' ಎಂದು ವಿದ್ವತ್ ಲೋಕ ಒಪ್ಪಿಕೊಂಡಿರಲಿಲ್ಲ. ಪಟ್ಟಭದ್ರ ಹಿತಾಸಕ್ತಿಗಳನ್ನು ಪ್ರಶ್ನೆ ಮಾಡದೆ, ಹೌದೌದು ಎಂದು ಹೇಳಿಕೊಂಡರಷ್ಟೇ ಅದು ವಿದ್ವತ್ ಲೋಕ' ಎಂದು ಅಭಿಪ್ರಾಯಪಟ್ಟರು.

ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಸಂಘಟನಾ ಕಾರ್ಯದರ್ಶಿ ಮಾವಳ್ಳಿ ಶಂಕರ್, ಕೋಲಾರದ ಜನವಾದಿ ಮಹಿಳಾ ಸಂಘಟನೆಯ ಗೀತಾ, ಹೋರಾಟಗಾರರಾದ ಎನ್. ವೆಂಕಟೇಶ್, ಅಂಬಣ್ಣ ಅರೋಲಿಕರ್ ಭಾಗವಹಿಸಿದ್ದರು.

ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಕಲಾ ತಂಡಗಳ ಗಾಯಕರು ಗದ್ದರ್ ಅವರ ಗೀತೆಗಳನ್ನು ಕನ್ನಡ ಹಾಗೂ ತೆಲುಗಿನಲ್ಲಿ ಹಾಡಿದರು.

'ಪ್ರಜಾ ಕವಿ, ಪ್ರಜಾ ಗಾಯಕ ಗದ್ದರ್– ಪ್ರಥಮ ಪರಿನಿಬ್ಬಾಣ' ಕಾರ್ಯಕ್ರಮದಲ್ಲಿ ಗೀತಾ, ಅಂಬಣ್ಣ ಆರೋಲಿಕರ್, ಎನ್. ವೆಂಕಟೇಶ್, ಸೂರ್ಯ ಕಿರಣ್, ಎಲ್. ಹನುಮಂತಯ್ಯ ಅವರು ಗದ್ದರ್ ಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು

ಹಣದ ವಿಚಾರಕ್ಕೆ ಕೊಲೆ ಯತ್ನ: 6 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣದ ವಿಚಾರಕ್ಕೆ ಸ್ನೇಹಿತರಿಬ್ಬರ ಮಧ್ಯೆ ನಡೆದ ಗಲಾಟೆಯಲ್ಲಿ ಶೋಯಬ್ ಎಂಬುವರ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿ ಕೊಲೆಗೆ ಪ್ರಯತ್ನಿಸಿದ ಆರೋಪದ ಮೇರೆಗೆ ಆರು ಮಂದಿಯನ್ನು ಬಾಣಸವಾಡಿ ಪೊಲೀಸರು ಬಂಧಿಸಿದ್ದಾರೆ. ಮೂವರು ತಲೆಮರೆಸಿಕೊಂಡಿದ್ದಾರೆ.

ಲಿಂಗರಾಜಪುರದ ನಿವಾಸಿಗಳಾದ ನಫೀಸ್, ನಿಸಾರ್ ಪಾಷ, ಮನ್ಸೂರ್, ಫಿರೋಜ್ ಪಾಷ, ಮೆಹಬೂಬ್, ರಜಾಕ್ ಎಂಬುವವರನ್ನು ಬಂಧಿಸಲಾಗಿದೆ.

ದಾವೂದ್ ಮತ್ತು ಶೋಯೆಬ್ ಕಾಲೇಜು ಸಹಪಾಠಿಗಳು. ದಾವೂದ್ ಚಹಾ ಅಂಗಡಿ ಇಟ್ಟುಕೊಂಡಿದ್ದರು. ನಿರುದ್ಯೋಗಿಯಾಗಿದ್ದ ಶೋಯಬ್, ದಾವೂದ್‌ನಿಂದ ₹1.7 ಲಕ್ಷ ಹಣ ಪಡೆದಿದ್ದ. ಹಣ ವಾಪಸ್ ನೀಡುವ ವಿಚಾರಕ್ಕೆ ಇಬ್ಬರ ಮಧ್ಯೆ ಜಗಳ ನಡೆದಿದೆ. ಈ ವೇಳೆ ದಾವೂದ್, ಶೋಯಬ್‌ಗೆ ಮಚ್ಚಿನಿಂದ ಹಲ್ಲೆ ನಡೆಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಮತ್ತೊಬ್ಬ ಆರೋಪಿಯ ಸೆರೆ

ಬೆಂಗಳೂರು: ಶಾಸಕ ಶಾಮನೂರು ಶಿವಶಂಕರಪ್ಪ ಅವರ ನಕಲಿ ಲೆಟರ್ ಹೆಡ್ ಮತ್ತು ಸಹಿ ಬಳಸಿಕೊಂಡು ಆಪ್ತ ಸಹಾಯಕಿ ಹುದ್ದೆ ಗಿಟ್ಟಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಧಾನಸೌಧ ಠಾಣಾ ಪೊಲೀಸರು ಮತ್ತೊಬ್ಬ ಆರೋಪಿ ರಾಮನಗರದ ಅಂಜನ್ ಕುಮಾರ್ (28) ಎಂಬಾತನನ್ನು ಬಂಧಿಸಿದ್ದಾರೆ.

ಶಾಸಕರ ಆಪ್ತ ಸಹಾಯಕಿ ಹುದ್ದೆ ಗಿಟ್ಟಿಸಿದ್ದ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಸೋಲೂರು ನಿವಾಸಿ ಕೆ.ಸಿ.ವಿನುತಾ ಅವರ ಪತಿ ಸ್ವಾಮಿಯನ್ನು ಭಾನುವಾರ ಬಂಧಿಸಿದ್ದರು. ವಿಚಾರಣೆ ವೇಳೆ ಆರೋಪಿ ಸ್ವಾಮಿ, ಶಾಸಕ ಎಸ್. ರಘು ಹೆಸರಿನಲ್ಲಿ ನಕಲಿ ಲೆಟರ್ ಹೆಡ್ ಸೃಷ್ಟಿಸಿ ಅಂಜನ್ ಕುಮಾರ್‌ಗೆ ಕೆಲಸ ಕೊಡಿಸಿದ್ದನ್ನು ತಿಳಿಸಿದ್ದ. ಇಬ್ಬರನ್ನೂ ಪೊಲೀಸರು ವಿಚಾರಣೆಗೆ ಒಳಪಡಿಸಿದ್ದಾರೆ. ವಿನುತಾಗೂ ನೋಟಿಸ್ ನೀಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಉಕ್ರೇನ್ ಭೇಟಿ ಕುರಿತು ವಿವರಿಸಿದ ಪ್ರಧಾನಿ

ಮೋದಿ– ಬೈಡನ್ ಮಾತುಕತೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರೊಂದಿಗೆ ದೂರವಾಣಿ ಸಂಭಾಷಣೆ ನಡೆಸಿದ್ದು, ತಮ್ಮ ಈಚೆಗಿನ ಉಕ್ರೇನ್ ಭೇಟಿ ಕುರಿತು ವಿವರಿಸಿದ್ದಾರೆ.

'ಉಕ್ರೇನ್‌ನಲ್ಲಿನ ಪರಿಸ್ಥಿತಿ ಸೇರಿದಂತೆ ವಿವಿಧ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಕುರಿತು ಅಭಿಪ್ರಾಯಗಳನ್ನು ಹಂಚಿಕೊಂಡಿದ್ದೇವೆ. ಉಕ್ರೇನ್‌ನಲ್ಲಿ ಶಾಂತಿ ಮತ್ತು ಸ್ಥಿರತೆ ಮರಳಲು ಭಾರತದ ಸಂಪೂರ್ಣ ಬೆಂಬಲವನ್ನು ನಾನು ಬೈಡನ್ ಅವರಲ್ಲಿ ಪುನರುಚ್ಚರಿಸಿದೆ' ಎಂದು ಮೋದಿ ಅವರು 'ಎಕ್ಸ್'ನಲ್ಲಿ ಹೇಳಿದ್ದಾರೆ.

ಮೋದಿ

ಜೋ ಬೈಡನ್

'ಬಾಂಗ್ಲಾದೇಶದ ಪರಿಸ್ಥಿತಿಯ ಬಗ್ಗೆಯೂ ಚರ್ಚಿಸಿದ್ದು, ಅಲ್ಲಿ ಸಹಜ ಸ್ಥಿತಿಯನ್ನು ಶೀಘ್ರವಾಗಿ ಮರುಸ್ಥಾಪಿಸುವ ಅಗತ್ಯದ ಬಗ್ಗೆ ಒತ್ತಿಹೇಳಿದ್ದೇನೆ. ಬಾಂಗ್ಲಾ ದೇಶದಲ್ಲಿ ಅಲ್ಪಸಂಖ್ಯಾತರ, ಅದರಲ್ಲೂ ವಿಶೇಷವಾಗಿ ಹಿಂದೂಗಳ ಸುರಕ್ಷತೆ ಮತ್ತು ಭದ್ರತೆಯನ್ನು ಖಚಿತಪಡಿಸಿಕೊಳ್ಳುತ್ತೇವೆ' ಎಂದಿದ್ದಾರೆ.

ದೂರವಾಣಿ ಸಂಭಾಷಣೆ ವೇಳೆ ಮೋದಿ ಅವರು ತಮ್ಮ ಉಕ್ರೇನ್ ಭೇಟಿಯ ಕುರಿತ ವಿವರಗಳನ್ನು ಬೈಡನ್ ಅವರಿಗೆ ನೀಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ಕ್ವಾಡ್' ಒಳಗೊಂಡಂತೆ ವಿವಿಧ ಶೃಂಗಗಳಲ್ಲಿ ಸಹಕಾರವನ್ನು ಮತ್ತಷ್ಟು ಬಲಪಡಿಸುವ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು. ಭಾರತ–ಅಮೆರಿಕ ಸಹಭಾಗಿತ್ವವು ಉಭಯ ದೇಶಗಳ ಜನರು ಹಾಗೂ ಇಡೀ ವಿಶ್ವಕ್ಕೆ ಪ್ರಯೋಜನ ನೀಡುವ ಗುರಿಯನ್ನು ಹೊಂದಿದೆ ಎಂಬುದನ್ನು ಮೋದಿ ಹಾಗೂ ಬೈಡನ್ ಒತ್ತಿ ಹೇಳಿದ್ದಾರೆ' ಎಂದು ಪ್ರಕಟಣೆ ವಿವರಿಸಿದೆ.

ಕಂಬಳ: 3 ಜೊತೆ ಕೋಣ ಓಡಿಸಲಷ್ಟೇ ಅವಕಾಶ

ಪ್ರಜಾವಾಣಿ ವಾರ್ತೆ

ಮಂಗಳೂರು: ಕಂಬಳವನ್ನು 24 ಗಂಟೆಗಳಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸುವ ಕಾಲಮಿತಿಯನ್ನು ಜಾರಿಗೊಳಿಸುವ ಉದ್ದೇಶದಿಂದ ಜಿಲ್ಲಾ ಕಂಬಳ ಸಮಿತಿಯು ಹೊಸ ಸೂತ್ರವನ್ನು ರೂಪಿಸಿದೆ. ಮೂರು ಜೊತೆ ಕೋಣ ಓಡಿಸಲು ಮಾತ್ರ ಅವಕಾಶ ಸೇರಿದಂತೆ ಸಮಿತಿ 14 ನಿಯಮಗಳನ್ನು ರೂಪಿಸಿದ್ದು, ಇವು ಈ ಋತುವಿನಿಂದಲೇ ಜಾರಿಯಾಗಲಿವೆ.

ಕಂಬಳವನ್ನು ಬೆಳಿಗ್ಗೆ 9ಕ್ಕೆ ಪ್ರಾರಂಭಿಸಿ ಮರುದಿನ ಬೆಳಿಗ್ಗೆ 9ರೊಳಗೆ ಮುಕ್ತಾಯಗೊಳಿಸಬೇಕು. ಸಾಂಪ್ರದಾಯಿಕ ಕಂಬಳವನ್ನು ಬೆಳಿಗ್ಗೆ 10.30ಕ್ಕೆ ಆರಂಭಿಸಿ ಮರುದಿನ ಬೆಳಿಗ್ಗೆ 10.30ಕ್ಕೆ ಮುಕ್ತಾಯಗೊಳಿಸಬೇಕು ಎಂದು ಸಮಿತಿಯು ಸೂಚಿಸಿದೆ.

'30ರಂದು ಚಂಪೈ ಬಿಜೆಪಿ ಸೇರ್ಪಡೆ'

ನವದೆಹಲಿ (ಪಿಟಿಐ): ಜೆಎಂಎಂ ನಾಯಕ, ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಚಂಪೈ ಸೊರೇನ್ ಅವರು ಬಿಜೆಪಿ ಸೇರಲಿದ್ದಾರೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಸೋಮವಾರ ರಾತ್ರಿ ಘೋಷಿಸಿದ್ದಾರೆ.

ಪಕ್ಷ ಸೇರ್ಪಡೆ ಕಾರ್ಯಕ್ರಮ ಆಗಸ್ಟ್ 30ರಂದು ರಾಂಚಿಯಲ್ಲಿ ನಡೆಯಲಿದೆ ಎಂದಿದ್ದಾರೆ. ಚಂಪೈ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ನವದೆಹಲಿಯಲ್ಲಿ ಭೇಟಿಯಾದ ಚಿತ್ರವನ್ನು ಹಿಮಂತ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಜಾರ್ಖಂಡ್ ಬಿಜೆಪಿಯ ಸಹ ಉಸ್ತುವಾರಿ ಆಗಿರುವ ಹಿಮಂತ ಅವರೂ ಜತೆಗಿದ್ದರು.

ಜೆಎಂಎಂ ನಾಯಕತ್ವದ ವಿರುದ್ಧ ಅಸಮಾಧಾನ ಹೊರಹಾಕಿದ್ದ ಚಂಪೈ, 'ಮುಂದಿನ ರಾಜಕೀಯ ನಡೆಯ ಬಗ್ಗೆ ಶೀಘ್ರದಲ್ಲೇ ನಿರ್ಧರಿಸುತ್ತೇನೆ' ಎಂದಿದ್ದರು. ಅವರು ಬಿಜೆಪಿ ಸೇರಲಿದ್ದಾರೆ ಎಂಬ ಊಹಾಪೋಹಗಳು ಹರಿದಾಡಿದ್ದವು.

ಬಿಜೆಪಿಯು ತಮ್ಮ ಪಕ್ಷದ ಶಾಸಕರನ್ನು ಖರೀದಿಸುತ್ತಿದೆ ಎಂದು ಜೆಎಂಎಂ ನಾಯಕ, ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಈಚೆಗೆ ಆರೋಪಿಸಿದ್ದರು.



ಚಂಪೈ ಸೊರೇನ್

ಬಿಜೆಪಿ, ಜೆಡಿಎಸ್ ಪ್ರಯತ್ನ ಖಂಡನೀಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವನ್ನು ರಾಜ್ಯಪಾಲರ ಮೂಲಕ ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿರುವ ಬಿಜೆಪಿ–ಜೆಡಿಎಸ್ ಪಕ್ಷಗಳ ನಡೆ ಖಂಡನೀಯ ಎಂದು ದಲಿತ ಸಂಘರ್ಷ ಸಮಿತಿ ಹೇಳಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರಗೋಡು, 'ರಾಷ್ಟ್ರಪತಿಗಳ ನೇರ ಸುಪರ್ದಿಯಲ್ಲಿ ಕಾರ್ಯನಿರ್ವಹಿಸಬೇಕಾದ ರಾಜ್ಯಪಾಲರು, ಪ್ರಧಾನಿ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಕೈಗೊಂಬೆಯಂತೆ ಕೆಲಸ ಮಾಡುತ್ತಿದ್ದಾರೆ. ಸಂವಿಧಾನ, ಪ್ರಜಾಪ್ರಭುತ್ವ ಹಾಗೂ ಒಕ್ಕೂಟ ವ್ಯವಸ್ಥೆಗೆ ಧಕ್ಕೆಯುಂಟು ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.

'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರು ನ್ಯಾಯಬದ್ಧವಾಗಿ ಪಡೆದುಕೊಂಡಿದ್ದಾರೆ. ಆದರೆ, ವಿರೋಧ ಪಕ್ಷಗಳ ಇದನ್ನು ಅಕ್ರಮವೆಂದು ಬಿಂಬಿಸುತ್ತಿವೆ. ತಳ ಸಮುದಾಯದ ಸಿದ್ದರಾಮಯ್ಯ ಅವರನ್ನು ರಾಜಕೀಯವಾಗಿ ಹಣಿಯಲು ಪ್ರಯತ್ನಿಸುತ್ತಿವೆ' ಎಂದು ದೂರಿದರು.

'ಸಿದ್ದರಾಮಯ್ಯ ಅವರು ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ತತ್ವ–ಸಿದ್ಧಾಂತಗಳಿಗೆ ಬಹಿರಂಗವಾಗಿ ಸವಾಲು ಹಾಕುವ ನಾಯಕರಾಗಿದ್ದಾರೆ. ವರ್ಣಾಶ್ರಮ, ಬ್ರಾಹ್ಮಣ್ಯವನ್ನು, ಮನುವಾದ ಹಾಗೂ ಆರ್‌ಎಸ್‌ಎಸ್‌ನ ಕುತಂತ್ರಗಳನ್ನು ಬಲವಾಗಿ ವಿರೋಧಿಸುತ್ತಾ ಬಂದಿದ್ದಾರೆ. ಈ ಕಾರಣದಿಂದ ಅವರನ್ನು ಇಕ್ಕಟ್ಟಿಗೆ ಸಿಲುಕಿಸಲು ಕುತಂತ್ರ ಮಾಡಲಾಗಿದೆ' ಎಂದು ಸಮಿತಿಯ ಮುಖಂಡ ಇಂದೂಧರ್ ಹೊನ್ನಾಪುರ ಹೇಳಿದರು.

ರಾಜ್ಯಪಾಲರ ಕ್ರಮ ವಿರೋಧಿಸಿ, ಸೆ. 3ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಮಟ್ಕಾ ದಂಧೆ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಟ್ಕಾ ದಂಧೆ ನಡೆಸುತ್ತಿದ್ದ ಆರೋಪದ ಮೇಲೆ ರೌಡಿ ಶೀಟರ್ ಸೈಯದ್ ನವಾಬ್ ಎಂಬಾತನನ್ನು ಸಿಸಿಬಿ ಪೊಲೀಸರು ಗೂಂಡಾ ಕಾಯ್ದೆಯಡಿ ಬಂಧಿಸಿದ್ದಾರೆ.

ಬನಶಂಕರಿ ಪೊಲೀಸ್ ಠಾಣೆಯಲ್ಲಿ ರೌಡಿಶೀಟರ್ ಆಗಿದ್ದು, ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾದ ಆರೋಪಕ್ಕೆ ಸಂಬಂಧಿಸಿ ಈತನ ವಿರುದ್ಧ ವಿವಿಧ ಠಾಣೆಗಳಲ್ಲಿ ಏಳು ಪ್ರಕರಣಗಳು ದಾಖಲಾಗಿವೆ.

ಮೂರು ಪ್ರಕರಣದಲ್ಲಿ ನ್ಯಾಯಾಲಯ ಈತನಿಗೆ ಶಿಕ್ಷೆ ವಿಧಿಸಿದೆ. ಇನ್ನೂ ನಾಲ್ಕು ಪ್ರಕರಣಗಳ ವಿಚಾರಣೆ ನಡೆದಿದೆ. ಜಾಮೀನಿನ ಮೇಲೆ ಹೊರ ಬಂದು ಮತ್ತೆ ಮಟ್ಕಾ ದಂಧೆ ಹಾಗೂ ಸಮಾಜಘಾತುಕ ಚಟುವಟಿಕೆಯಲ್ಲಿ ಭಾಗಿಯಾಗುತ್ತಿದ್ದ. ಕಾನೂನು ಬಾಹಿರ ಕೃತ್ಯಗಳನ್ನು ನಿಯಂತ್ರಿಸುವುದು ಕಷ್ಟವಾದ ಕಾರಣ ಮತ್ತೆ ಈತನನ್ನು ಪ್ರತಿಬಂಧಕ ಕಾಯಿದೆ ಅಡಿ ಬಂಧನದಲ್ಲಿಡಲು ಸಿಸಿಬಿ ಅಧಿಕಾರಿಗಳು ನಗರ ಪೊಲೀಸ್ ಕಮೀಷನರ್‌ಗೆ ಪ್ರಸ್ತಾವ ಸಲ್ಲಿಸಿದ್ದರು.

ಪೊಲೀಸ್ ಕಮೀಷನರ್ ಬಿ. ದಯಾನಂದ ಅವರ ಆದೇಶದಂತೆ ಆರೋಪಿಯನ್ನು ಬಂಧಿಸಿ, ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಲಾಕೃತಿಗಳ ಪ್ರದರ್ಶನ

ಕರ್ನಾಟಕ ಚಿತ್ರಕಲಾ ಪರಿಷತ್ತು ವತಿಯಿಂದ ಕಲಾವಿದ ವಿ.ಜಿ. ಅಂದಾನಿ ಅವರ ಕಲಾಕೃತಿಗಳ ಪ್ರದರ್ಶನ ಸೋಮವಾರ ಆರಂಭಗೊಂಡಿತು. ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, ಕಲಾವಿದರಾದ ಪ.ಸ. ಕುಮಾರ್, ಕೆ.ವಿ. ಸುಬ್ರಹ್ಮಣ್ಯ, ಎಂ.ಜೆ. ಕಮಲಾಕ್ಷಿ ಭಾಗವಹಿಸಿದ್ದರು. ಸೆ.1ರವರೆಗೆ ಪ್ರದರ್ಶನ ಇರಲಿದೆ ಪ್ರಜಾವಾಣಿ ಚಿತ್ರ

ಸಹಾಯವಾಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಪೊಲೀಸ್ ಕಮಿಷನರ್ ಕಚೇರಿಗೆ ಹೊಂದಿಕೊಂಡಿರುವ ಕಮಾಂಡ್ ಸೆಂಟರ್ ವಿಭಾಗದಲ್ಲಿ ಹಿರಿಯರ ಸಹಾಯವಾಣಿ ಕರ್ತವ್ಯ ನಿರ್ವಹಿಸುತ್ತಿದೆ.

60 ವರ್ಷ ಮೇಲ್ಪಟ್ಟವರಿಗೆ ಕಾನೂನಿಗೆ ಸಂಬಂಧಿಸಿದಂತೆ, ಯಾವುದಾದರೂ ಸಮಸ್ಯೆ ಇದ್ದರೆ, ಪ್ರತಿ ಶನಿವಾರ ಮಧ್ಯಾಹ್ನ 2.30ರಿಂದ ಸಂಜೆ 4.30ರವರೆಗೆ ನುರಿತ ವಕೀಲರು ಉಚಿತ ಕಾನೂನು ಸಲಹೆ ನೀಡುವರು. ಹಿರಿಯರು ಈ ಸೌಲಭ್ಯ ಬಳಸಿಕೊಳ್ಳಬೇಕು ಎಂದು ಪೊಲೀಸ್ ಕಮಿಷನರ್ ಕಚೇರಿಯ ಪ್ರಕಟಣೆ ತಿಳಿಸಿದೆ.

ಮಾಹಿತಿಗೆ ದೂರವಾಣಿ ಸಂಖ್ಯೆ 080–23352833 ಅಥವಾ ಮೊಬೈಲ್ ಸಂಖ್ಯೆ 7899241090.

ಕಾಣೆಯಾಗಿದ್ದಾರೆ



ಪುಟ್ಟಬಸಪ್ಪ

ದಿನಾಂಕ: 14–08–2024 ರಂದು ಮಧ್ಯಾಹ್ನ 2:30ಕ್ಕೆ ಬೆಂಗಳೂರಿನ ವಿಜಯನಗರದಿಂದ ಕಾಣೆಯಾಗಿದ್ದಾರೆ. ಕಾಣೆಯಾದ ವ್ಯಕ್ತಿಯ ವಿವರ: ವಯಸ್ಸು–71, ಎತ್ತರ – 5' 2" ಅಡಿ. ಇವರು ತುಂಬು ತೋಳಿನ ಬಿಳಿ ಶರ್ಟ್, ಗಾಢ ಕಾಫಿ ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ. ಸಾಧಾರಣ ಮೈಕಟ್ಟು, ಗೋಧಿ ಮೈಬಣ್ಣ, ಬಿಳಿ ಕೂದಲು, ವಯೋಸಹಜ ಮರೆವು ಇದೆ. ಇವರನ್ನು ಯಾರಾದರೂ ಕಂಡಲ್ಲಿ ಹತ್ತಿರದ ಪೋಲೀಸ್ ಠಾಣೆಗೆ ಅಥವಾ ಈ ಕೆಳಗಿನ ಮೊಬೈಲ್ ಸಂಖ್ಯೆಗಳಿಗೆ ಕರೆ ಮಾಡಿ ತಿಳಿಸಲು ಕೋರಲಾಗಿದೆ. 8197078109, 7406061404

ಸೂಚನೆ: ಸೂಕ್ತ ಬಹುಮಾನ ಕೊಡಲಾಗುವುದು.

ಮಲಬಾರ್ ಜ್ಯುವೆಲ್ಲರಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ಗೆ 2023–24ನೇ ಸಾಲಿನ ರೆಸ್ಪಾನ್ಸಿಬಲ್ ಜ್ಯುವೆಲ್ಲರಿ ಹೌಸ್ ಅವಾರ್ಡ್ ಲಭಿಸಿದೆ.

ಬೆಂಗಳೂರಿನ ಹಿಲ್ಟನ್ ಮಾನ್ಯತಾ ಬ್ಯುಸಿನೆಸ್ ಪಾರ್ಕ್‌ನಲ್ಲಿ ನಡೆದ ಸಮಾರಂಭದಲ್ಲಿ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಪರವಾಗಿ ಭಾರತದ ಕಾರ್ಯಾಚರಣೆಯ ವ್ಯವಸ್ಥಾಪಕ ನಿರ್ದೇಶಕ ಒ.ಐಶರ್ ಅವರು ಇಂಡಿಯಾ ಗೋಲ್ಡ್ ಪಾಲಿಸಿ ಸೆಂಟರ್‌ನ (ಐಜಿಸಿ) ಅಧ್ಯಕ್ಷರಾದ ಸುಂದರವಲ್ಲಿ ನಾರಾಯಣಸ್ವಾಮಿ ಅವರಿಂದ ಪ್ರಶಸ್ತಿಯನ್ನು ಸ್ವೀಕರಿಸಿದರು.

ಮಲಬಾರ್ ಗೋಲ್ಡ್ ಎಲ್ಎಲ್‌ಸಿ ಬ್ಯುಸಿನೆಸ್ ಡೆವಲಪ್‌ಮೆಂಟ್‌ನ ಮುಖ್ಯಸ್ಥರಾದ ಸೀತಾರಾಮನ್ ವರದರಾಜನ್, ದಿಲೀಪ್ ನಾರಾಯಣನ್, ಕರ್ನಾಟಕದ ಮುಖ್ಯಸ್ಥ ಫಿಲ್ಸರ್ ಬಾಬು, ಫಿನ್ಮೆಟ್ ಪಿಟಿಇ ಲಿಮಿಟೆಡ್ ನಿರ್ದೇಶಕ ಸುನೀಲ್ ಕಶ್ಯಪ್, ರ‍್ಯಾಂಡ್ ರಿಫೈನರಿ ಸಿಇಒ ಪ್ರವೀಣ್ ಬೈಜನಾಥ್ ಉಪಸ್ಥಿತರಿದ್ದರು.

'ಭಾರತೀಯ ಆಭರಣ ಕ್ಷೇತ್ರದಲ್ಲಿ ಪ್ರತಿಷ್ಠಿತ ಪ್ರಶಸ್ತಿಯಾಗಿರುವ ಐಜಿಸಿಯ ರೆಸ್ಪಾನ್ಸಿಬಲ್ ಜ್ಯುವೆಲ್ಲರಿ ಹೌಸ್ ಅವಾರ್ಡ್ ಸ್ವೀಕರಿಸುತ್ತಿರುವುದು ಸಂತಸ ಉಂಟು ಮಾಡಿದೆ. ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಬದ್ಧತೆಗೆ ಈ ಪ್ರಶಸ್ತಿ ಸಂದಿದೆ' ಎಂದು ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ.ಅಹ್ಮದ್ ಹೇಳಿದ್ದಾರೆ.

ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಪರವಾಗಿ ಒ.ಐಶರ್ ಅವರು ಐಜಿಸಿ ಅಧ್ಯಕ್ಷರಾದ ಸುಂದರವಲ್ಲಿ ನಾರಾಯಣಸ್ವಾಮಿ ಅವರಿಂದ ಪ್ರಶಸ್ತಿ ಸ್ವೀಕರಿಸಿದರು

ಲೋಕಾಯುಕ್ತ ಬಲೆಗೆ ಪಿಡಿಒ

ಕೊಪ್ಪಳ: ಕುಕನೂರು ತಾಲ್ಲೂಕಿನ ಬೆಣಕಲ್ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿ (ಪಿಡಿಒ) ಕೃಷ್ಣರಡ್ಡಿ ಭಾವಿಕಟ್ಟಿ ಸೋಮವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಬೆಣಕಲ್ ಗ್ರಾಮದ ಕೊಟ್ರೇಶ್ ಗೊನ್ನಿ ಎಂಬುವವರು ತಮ್ಮ ಜಮೀನಿನ ಅಭಿವೃದ್ಧಿಗಾಗಿ ಫಾರಂ 9/11 ನೀಡುವಂತೆ ಕೃಷ್ಣರೆಡ್ಡಿ ಬಳಿ ಹೋದಾಗ ₹50 ಸಾವಿರ ಲಂಚ ನೀಡುವಂತೆ ಕೇಳಿದ್ದರು. ಚೌಕಾಸಿ ಮಾಡಿದ ಬಳಿಕ ₹40 ಸಾವಿರಕ್ಕೆ ಒಪ್ಪಿಕೊಂಡಿದ್ದರು. ಪಿಡಿಒ ಖಾಸಗಿ ವ್ಯಕ್ತಿಯ ಮೂಲಕ ಲಂಚ ಪಡೆಯುವಾಗ ಅಧಿಕಾರಿಗಳು ದಾಳಿ ನಡೆಸಿದರು ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ.

ಕೆ.ಆರ್. ಪುರ ಸಾರ್ವಜನಿಕರ ಆಕ್ರೋಶ

ದುರಸ್ತಿಯಾಗದ ಪಾಲಿಕೆ ತಡೆಗೋಡೆ

• ಶಿವರಾಜ್ ಮೌರ್ಯ

ಕೆ.ಆರ್.ಪುರ: ಬಿಬಿಎಂಪಿಯ ಕೆ.ಆರ್. ಪುರ ಉಪವಿಭಾಗದ ಕಚೇರಿ ಆವರಣದ ತಡೆಗೋಡೆ ಕುಸಿದು ಹಲವು ತಿಂಗಳಾದರೂ, ದುರಸ್ತಿಯಾಗಿಲ್ಲ.

ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತಿರುವ ಕೆ.ಆರ್. ಪುರ ಉಪವಿಭಾಗದ ಕಚೇರಿಯ ತಡೆಗೋಡೆ ಎರಡು ಸ್ಥಳಗಳಲ್ಲಿ ಕುಸಿದಿದೆ. ಬಸ್ ನಿಲ್ದಾಣ ಪಕ್ಕದ ತಡೆಗೋಡೆ ಕುಸಿದು ಹಲವು ತಿಂಗಳಾಗಿವೆ. ತಡೆಗೋಡೆ ನಿರ್ಮಿಸದೆ ಮರದ ಕೊಂಬೆಗಳನ್ನು ಹಗ್ಗದಿಂದ ಕಟ್ಟಿರುವುದರಿಂದ ಕಚೇರಿಗೆ ಅಭದ್ರತೆ ಕಾಡತೊಡಗಿದೆ.

'ಕಂದಾಯ, ಖಾತಾ, ತೆರಿಗೆ, ನಕ್ಷೆ ಹಾಗೂ ವಿವಿಧ ಕೆಲಸಗಳಿಗಾಗಿ ನಿತ್ಯ ನೂರಾರು ಜನರು ಕಚೇರಿಗೆ ಬರುತ್ತಾರೆ. ಬಿಎಂಟಿಸಿ ಬಸ್ ನಿಲ್ದಾಣಕ್ಕೆ ಹೊಂದಿಕೊಂಡಿರುವ ತಡೆಗೋಡೆಯೂ ಕುಸಿದಿದ್ದರೂ ದುರಸ್ತಿ ಕಾರ್ಯ ಮಾಡುತ್ತಿಲ್ಲ. ಅಧಿಕಾರಿ ನಿರ್ಲಕ್ಷ್ಯದಿಂದ ನಾಗರಿಕರು ಆತಂಕದಿಂದ ಸಂಚರಿಸಬೇಕಿದೆ' ಎಂದು ಸ್ಥಳೀಯರು ದೂರಿದರು.

'ಸಾವಿರಾರು ರೂಪಾಯಿ ಬೆಲೆ ಬಾಳುವ ಕಂಪ್ಯೂಟರ್, ಪ್ರಿಂಟರ್, ಚುನಾವಣೆಗೆ ಸಂಬಂಧಿಸಿದ ಮಹತ್ವದ ದಾಖಲೆಗಳು ಕಚೇರಿಯಲ್ಲಿವೆ. ಆದರೂ ತಡೆಗೋಡೆ ದುರಸ್ತಿಗೊಳಿಸಿಲ್ಲ' ಎಂದು ಸ್ಥಳೀಯ ನಿವಾಸಿ ರಮೇಶ್ ಆರೋಪಿಸಿದರು.

'ಮಹದೇವಪುರ ವಲಯದ ಜಂಟಿ ಆಯುಕ್ತೆ ದಾಕ್ಷಾಯಣಿ ಅವರು ಕೆ.ಆರ್.ಪುರ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಹಲವು ಬಾರಿ ಸಭೆ ನಡೆಸಿದ್ದಾರೆ. ಆದರೆ, ಅವರೂ ತಡೆಗೋಡೆ ದುರಸ್ತಿ ಬಗ್ಗೆ ಕ್ರಮ ಕೈಗೊಂಡಿಲ್ಲ. ಇಲ್ಲಿ ಹಲವು ವಿಭಾಗಗಳಿದ್ದು ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ದಾಖಲೆ ಕಳೆದು ಹೋದರೆ ಯಾರು ಜವಾಬ್ದಾರರು' ಎಂದು ಹೆಸರು ಹೇಳಲಿಚ್ಛಿಸದ ಅಧಿಕಾರಿಯೊಬ್ಬರು ಪ್ರಶ್ನಿಸಿದರು.

ಕೆ.ಆರ್.ಪುರ ಬಸ್ ನಿಲ್ದಾಣದ ಪಕ್ಕದ ಬಿಬಿಎಂಪಿ ಕಚೇರಿಯ ತಡೆಗೋಡೆ ಕುಸಿದಿದೆ

ಕ್ಷೇಮ ಕುಶಲ

ರೋಗಗಳ ಪತ್ತೆಯಲ್ಲಿ 'ಲ್ಯಾಬ್ ಟೆಸ್ಟ್'ಗಳ ಪಾತ್ರ ದೊಡ್ಡದು. ಆದರೆ ಅವಷ್ಟೆ ಅಂತಿಮವೂ ಅಲ್ಲ....

ಪ್ರಯೋಗಾಲಯದ ಪರೀಕ್ಷೆಗಳ ಪರೀಕ್ಷೆ!

ಡಾ. ವಿನಯ ಶ್ರೀನಿವಾಸ್

ಇತ್ತೀಚೆಗೆ ಪರಿಚಿತರ ಮಗನನ್ನು ಜ್ವರ, ವಾಂತಿ ಮತ್ತು ಹೊಟ್ಟೆನೋವು ಎಂಬ ಕಾರಣಕ್ಕಾಗಿ ಆಸ್ಪತ್ರೆಗೆ ಕರೆತಂದಿದ್ದರು. ಆತ ತೀರ ನಿತ್ರಾಣನಾಗಿದ್ದರಿಂದ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಿಸಿದ ವೈದ್ಯರು ಕೆಲವು ರಕ್ತಪರೀಕ್ಷೆಗಳನ್ನು ಸೂಚಿಸಿದ್ದರು. ಮರುದಿನ ಪ್ರಯೋಗಾಲಯದ ವರದಿಯಲ್ಲಿ ಜಾಂಡೀಸ್ ಹಾಗೂ ಇಲಿಜ್ವರ ಕಾಯಿಲೆಗೆ 'ಪಾಸಿಟೀವ್ ರಿಪೋರ್ಟ್' ಬಂದದ್ದನ್ನು ನೋಡಿ ಪರಿಚಿತರು ಗಾಬರಿಯಿಂದ ನನಗೆ ಕರೆ ಮಾಡಿದ್ದರು. 'ಇದೇನಿದು, ಮಗನಿಗೆ ಎರಡು ಕಾಯಿಲೆಗಳಿವೆಯೇ – ಎಂದು ಆತಂಕವನ್ನು ವ್ಯಕ್ತಪಡಿಸಿದ್ದರು. 'ರೋಗಿಯ ದೇಹದಲ್ಲಿ ಉತ್ಪತ್ತಿಯಾಗುವ ಪ್ರತಿಕಾಯಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾಗ ಒಮ್ಮೊಮ್ಮೆ ವಿಜಾತಿಯ ಪ್ರತಿಜನ್ಯದೊಂದಿಗೂ ಕೂಡಿ ಇಂತಹ ಪ್ರತಿಕ್ರಿಯೆಗಳು ನಡೆಯಬಹುದು. ಇಂತಹ ಸಂದರ್ಭದಲ್ಲಿ ನಾವು ಇತರ ಅಂಶಗಳನ್ನು ಗಮನಿಸಬೇಕಾಗುತ್ತದೆ. ನಿಮ್ಮ ಮಗ ಹಾಸ್ಟೆಲ್ ಮತ್ತು ಹೋಟೆಲ್ ಊಟದ ಮೇಲೆ ಅವಲಂಬಿತನಾಗಿರುವುದರಿಂದ ಹೆಚ್ಚಿನಾಂಶ ಇದು ಜಾಂಡಿಸ್ ಕಾಯಿಲೆ ಇರಬಹುದು' ಎಂದು ಸಮಾಧಾನ ಮಾಡಿದ್ದೆ.

ಹೌದು, ಮಳೆಗಾಲದ ಈ ದಿನಗಳಲ್ಲಿ ಜ್ವರದ ಸಮಸ್ಯೆಗಾಗಿ ಆಸ್ಪತ್ರೆಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಾಗಿದೆ. ಜ್ವರ ಎಂಬುದು ಕೇವಲ ಕಾಯಿಲೆಯ ಗುಣಲಕ್ಷಣವಷ್ಟೆ. ಅದರ ಹಿಂದಿರುವ ಮೂಲಕಾರಣವನ್ನು ಪತ್ತೆ ಮಾಡಿದರೆ ಮಾತ್ರ ಕಾಯಿಲೆಗೆ ಸೂಕ್ತ ಚಿಕಿತ್ಸೆಯನ್ನು ಕೊಡುವುದು ಸಾಧ್ಯ. ಪ್ರಯೋಗಾಲಯದಲ್ಲಿಯ ರಕ್ತ, ಮೂತ್ರ, ಎಕ್ಸ್-ರೇ, ಸ್ಕ್ಯಾನಿಂಗ್ ಮತ್ತಿತರ ಪರೀಕ್ಷೆಗಳು ಕಾಯಿಲೆಯ ಪತ್ತೆಗೆ ನೆರವಾಗುವುದರಲ್ಲಿ ಸಂಶಯವಿಲ್ಲ. ಆದರೆ ಇದರೊಂದಿಗೆ ರೋಗಿಯನ್ನು ಬಾಧಿಸುತ್ತಿರುವ ಇತರ ಗುಣಲಕ್ಷಣಗಳು, ಆತನ ಹಿನ್ನೆಲೆ, ಉದ್ಯೋಗ ಮತ್ತಿತರ ಅಂಶಗಳು ಕಾಯಿಲೆಯ ನಿಖರವಾದ ಪತ್ತೆಗೆ ಮಹತ್ವದ ಕೊಡುಗೆಯನ್ನು ನೀಡಬಲ್ಲವು. ಹಾಗೆಂದೇ ವೈದ್ಯಕೀಯ ಶಿಕ್ಷಣದಲ್ಲಿ ರೋಗಿಯಿಂದ ಕಾಯಿಲೆಯ ಬಗ್ಗೆ ತಿಳಿದುಕೊಳ್ಳುವಾಗ ಆತನ ಊರು, ವಿಳಾಸ, ಉದ್ಯೋಗ, ಕುಟುಂಬ, ವೈಯಕ್ತಿಕ ಅಭ್ಯಾಸಗಳು, ಸಮಸ್ಯೆಯ ಸಂಪೂರ್ಣ ವಿವರ ಮತ್ತಿತರ ವಿಷಯಗಳ ಬಗ್ಗೆ ವಿವರವಾಗಿ ದಾಖಲಿಸಿ ಇಡುವುದನ್ನು ಕಲಿಸಲಾಗುತ್ತದೆ. ಹಾಗೆಯೇ ಸಂಪೂರ್ಣ ದೈಹಿಕ ಪರೀಕ್ಷೆ, ಎಂದರೆ ಕಣ್ಣಿನಿಂದ ಹಿಡಿದು ಕಾಲಿನ ಉಗುರಿನವರೆಗೂ, ಪರೀಕ್ಷೆಯನ್ನು ಮಾಡಿ ಅದನ್ನೂ ವಿವರವಾಗಿ ಬರೆದಿಡುವ ಪದ್ಧತಿಗೆ ಒತ್ತು ಕೊಡಲಾಗುತ್ತದೆ.

> ಡೆಂಗಿಜ್ವರದಲ್ಲಿ 'ಪ್ಲೇಟ್‌ಲೆಟ್'ಗಳ ಮೇಲೆ, ಹಾಗೆಯೇ ಜಾಂಡಿಸ್ ಕಾಯಿಲೆಯಲ್ಲಿ ರಕ್ತದಲ್ಲಿನ 'ಬಿಲಿರುಬಿನ್' ಅಂಶದ ಮೇಲೆಯೂ ನಿಗಾ ಇಡಬೇಕಾಗುತ್ತದೆ.

ಈ ಎಲ್ಲ ಅಂಶಗಳನ್ನು ವೈದ್ಯರು ತಮ್ಮ ವೃತ್ತಿಜೀವನದಲ್ಲಿ ತಪ್ಪದೇ ಅನುಸರಿಸಬೇಕು. ಪ್ರಯೋಗಾಲಯ ಪರೀಕ್ಷೆಗಳ ವರದಿಯ ಜೊತೆಯಲ್ಲಿ ಗುಣಲಕ್ಷಣಗಳನ್ನು ತಾಳೆ ಮಾಡಿ ಕಾಯಿಲೆಗೆ ಸೂಕ್ತ ಚಿಕಿತ್ಸೆಯನ್ನು ಆರಂಭಿಸಬೇಕು. ಆರಂಭಿಕ ಹಂತಗಳಲ್ಲಿ ರೋಗಾಣುಗಳಿಗೆ ನಿರ್ದಿಷ್ಟ ಪ್ರತಿಕಾಯಗಳು ಸಾಕಷ್ಟು ಪ್ರಮಾಣದಲ್ಲಿ ಉತ್ಪತ್ತಿಯಾಗದಿದ್ದಾಗಲೂ ಪ್ರಯೋಗಾಲಯ ಪರೀಕ್ಷೆಗಳು 'ನೆಗೆಟೀವ್' ವರದಿಯನ್ನು ತೋರಿಸುತ್ತವೆ. ಅಂತಹ ಸಂದರ್ಭದಲ್ಲಿಯೂ ರೋಗಿಯನ್ನು ಬಾಧಿಸುವ ಲಕ್ಷಣಗಳೇ ವೈದ್ಯರಿಗೆ ಸೂಕ್ತ ಚಿಕಿತ್ಸೆಯ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳಲು ಸಹಕರಿಸುತ್ತವೆ. ರೋಗಿಗಳು ಸಹ ತಮ್ಮನ್ನು ಕಾಡುವ ಎಲ್ಲ ಸಮಸ್ಯೆಗಳನ್ನೂ ವಿವರವಾಗಿ ವೈದ್ಯರಿಗೆ ತಿಳಿಸುವುದನ್ನು ಮರೆಯಬಾರದು.

ಇನ್ನು ಒಳರೋಗಿಯಾಗಿ ದಾಖಲಿಸಿ ಕಾಯಿಲೆಗೆ ಸೂಕ್ತ ಚಿಕಿತ್ಸೆಯನ್ನು ಆರಂಭಿಸಿದ ನಂತರವೂ ಕೆಲವೊಮ್ಮೆ ರಕ್ತದ ಕೆಲವು ಅಂಶಗಳಿಗಾಗಿ ದಿನವೂ ತಪಾಸಣೆ ಮಾಡಬೇಕಾಗುತ್ತದೆ. ಉದಾಹರಣೆಗೆ, ಡೆಂಗಿಜ್ವರದಲ್ಲಿ 'ಪ್ಲೇಟ್‌ಲೆಟ್'ಗಳ ಮೇಲೆ, ಹಾಗೆಯೇ ಜಾಂಡಿಸ್ ಕಾಯಿಲೆಯಲ್ಲಿ ರಕ್ತದಲ್ಲಿನ 'ಬಿಲಿರುಬಿನ್' ಅಂಶದ ಮೇಲೆಯೂ ನಿಗಾ ಇಡಬೇಕಾಗುತ್ತದೆ. ಇಂತಹ ಸನ್ನಿವೇಶಗಳಲ್ಲಿಯೂ ಕೇವಲ ಪರೀಕ್ಷೆಗಳ ವರದಿಯನ್ನು ಮಾತ್ರ ಅವಲಂಬಿಸದೆ ರೋಗಿಯ ಪರಿಸ್ಥಿತಿಯಲ್ಲಿ ಸುಧಾರಣೆಯನ್ನು ಗಮನಿಸುವುದು ಸೂಕ್ತ. ಏಕೆಂದರೆ ಜೀವಕೋಶಗಳ ಸಂಖ್ಯೆ ಹಾಗೂ ಜೀವರಾಸಾಯನಿಕಗಳ ಅಂಶಗಳು ಪ್ರಯೋಗಾಲಯದ ಉಪಕರಣಗಳ ನೆರವಿನಿಂದ ಪತ್ತೆ ಮಾಡುವಂಥವು. ಅಪರೂಪದ ಸಂದರ್ಭಗಳಲ್ಲಿ ತಾಂತ್ರಿಕ ಹಾಗೂ ಮನುಷ್ಯ ಮಾಡುವ ತಪ್ಪುಗಳಾಗಿ ವರದಿಯಲ್ಲಿ ವ್ಯತ್ಯಾಸವಾಗಬಹುದು. ಅದಕ್ಕಿಂತಲೂ ಹೆಚ್ಚಾಗಿ ಕೆಲವು ರಾಸಾಯನಿಕಗಳು ದೇಹದಿಂದ ತಕ್ಷಣ ಹೊರಹಾಕಲ್ಪಡದೆ, ಅದರ ಪ್ರಮಾಣ ಕ್ರಮೇಣ ಕಡಿಮೆಯಾಗಬಹುದು. ಆಗಲೂ ವೈದ್ಯರು ರೋಗಿಯ ಪರಿಸ್ಥಿತಿಯ ಸುಧಾರಣೆಯನ್ನೇ ಗಮನಿಸಿ ಚಿಕಿತ್ಸೆಯಲ್ಲಿ ಬದಲಾವಣೆಯನ್ನು ಸೂಚಿಸಬೇಕಾಗುತ್ತದೆ; ಅಥವಾ ರೋಗಿಯನ್ನು ಆಸ್ಪತ್ರೆಯಿಂದ ಮನೆಗೆ ಕಳುಹಿಸುವುದರ ಬಗ್ಗೆ ನಿರ್ಧರಿಸಬೇಕಾಗುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ ಕಾಯಿಲೆಯ ಸಂಭವನೀಯ ಅಪಾಯಗಳನ್ನು ಮನದಲ್ಲಿಟ್ಟುಕೊಂಡು, ಅದರ ಬಗ್ಗೆ ನಿಗಾ ವಹಿಸಬೇಕಾಗುತ್ತದೆ. ಗುಣಮುಖನಾದಂತೆ ಕಂಡರೂ ಅಂಥ ಸಂದರ್ಭಗಳಲ್ಲಿ ರೋಗಿಯನ್ನು ಆಸ್ಪತ್ರೆಯಲ್ಲಿ ಒಂದೆರಡು ದಿನ ಇರಲು ವೈದ್ಯರು ಸೂಚಿಸಬಹುದು. ರೋಗಿಯು ಮನೆಗೆ ತೆರಳಿ ಮತ್ತೆ ಗಾಬರಿಗೊಂಡು ಪುನಃ ಆಸ್ಪತ್ರೆಗೆ ಬರುವುದನ್ನು ತಪ್ಪಿಸಲು ವೈದ್ಯರು ಈ ರೀತಿ ಸೂಚಿಸಬಹುದು. ಇಂತಹ ಸಂದರ್ಭಗಳಲ್ಲಿ ರೋಗಿಯ ಕಡೆಯವರು ಸಹನೆಯಿಂದ ವೈದ್ಯರ ಆದೇಶಗಳನ್ನು ಪಾಲಿಸಬೇಕು. ❖

ಸಂತೋಷವೇ ಹಬ್ಬ

ರಮ್ಯಾ ಶ್ರೀಹರಿ

ಜೀವನವನ್ನು ತುಂಬಾ ಆಳವಾಗಿ ವಿಮರ್ಶಿಸಿದಾಗ ಏನು ಕಾಣಿಸುತ್ತದೆ? ಈ ಜೀವನದ ಜಂಜಾಟದಲ್ಲೂ ಪಡೆಯಲು ಯೋಗ್ಯವಾಗಿರುವ ಏನೋ ಒಂದು ಇದೆ; ಅದು ದೊರೆಯುವುದು ಸುಲಭವಲ್ಲ. ಆದರೆ ಅದು ದೊರೆತಾಗ ಆಗುವ ಧನ್ಯತೆಯೂ ಸಾಮಾನ್ಯವಾದುದಲ್ಲ; ದುರ್ಲಭವಾದ್ದೊಂದನ್ನು ಪಡೆಯುವ ಪ್ರಯತ್ನವೇ ಬದುಕಿಗೊಂದು ಅರ್ಥಪೂರ್ಣತೆಯನ್ನು, ಮೌಲ್ಯವನ್ನು ತಂದುಕೊಡುತ್ತದೆ ಎನ್ನುವುದು ಕಾಣಿಸುತ್ತದೆ. ಈ ಶಾಶ್ವತವಾದ ಸ್ಥಿತಿಯೊಂದರ ಅನ್ವೇಷಣೆಯೇ ಬದುಕಿಗೆ ಸೌಂದರ್ಯವನ್ನು ಕೊಡುತ್ತದೆ; ಬದುಕಿನ ಏರುಪೇರುಗಳನ್ನು ಸಹಿಸಿಕೊಳ್ಳುವ ಮನೋದಾರ್ಢ್ಯವನ್ನೂ ತಂದುಕೊಡುತ್ತದೆ.

ಎಂದೂ ವಿಕಾರಗೊಳ್ಳದ, ಸದಾ ಆನಂದವನ್ನು, ಶಾಂತಿಯನ್ನು ತರುವ ವಸ್ತುವಿನ / ಸ್ಥಿತಿಯ ಸ್ವರೂಪವನ್ನು ಅರಿಯುವ ಪ್ರಯತ್ನದಲ್ಲಿ, ಆ ವಸ್ತು /ಸ್ಥಿತಿಯನ್ನು ದಕ್ಕಿಸಿಕೊಳ್ಳುವ ಮಾರ್ಗದಲ್ಲಿ ನಮ್ಮನ್ನು ತೊಡಗಿಸುವುದನ್ನೇ ಎಲ್ಲ ಧರ್ಮಗಳೂ ಗುರಿಯಾಗಿಸಿಕೊಂಡಿವೆ. ಬದುಕಿಗೇನೂ ಆತ್ಯಂತಿಕವಾದ ಅರ್ಥವಿಲ್ಲ ಎನ್ನುವವರು ಕೂಡ ಬದುಕಿನ ಅರ್ಥಹೀನತೆಯನ್ನು ಸಹ್ಯಮಾಡಿಕೊಳ್ಳಲಾದರೂ ತಾತ್ಕಾಲಿಕವಾದ ಅರ್ಥವೊಂದನ್ನು ಹುಡುಕಿಕೊಳ್ಳುವ ಪ್ರಯತ್ನದಲ್ಲಿರುತ್ತಾರೆ. ಬದುಕಿನ ಮೂಲಭೂತ ಅರ್ಥಹೀನತೆಯನ್ನು ಕಂಡೂ ಬದುಕಿನಿಂದ ಓಡಿಹೋಗದೇ, ಭ್ರಮನಿರಸನಗೊಳ್ಳದೆ ಮತ್ತೆ ಮತ್ತೆ ಹೊಸ ಹೊಸ ಅರ್ಥಗಳನ್ನು ಕಂಡುಕೊಳ್ಳುವುದೂ ಧೈರ್ಯವಂತರಿಗೆ ಉಚಿತವಾದದ್ದೇ ಹೌದು. ಯಾವ ಅರ್ಥವೂ ಶಾಶ್ವತವಲ್ಲದಿದ್ದರೂ ಅರ್ಥವನ್ನು ಹುಡುಕುವ ಪ್ರಯತ್ನವಾದರೂ ಶಾಶ್ವತವಿದ್ದೀತು. ಒಟ್ಟಿನಲ್ಲಿ ಮನುಷ್ಯನಿಗೆ ಒಂದಲ್ಲ ಒಂದು ಬಗೆಯಲ್ಲಿ ಶಾಶ್ವತತೆ, ನಿತ್ಯತ್ವದ ಹಂಬಲವಿದೆ.

> ಹಬ್ಬಗಳು ಬದುಕಿನಲ್ಲಿ ನಮಗಿರಬೇಕಾದ ಸಮತೋಲನ, ಸಂಭ್ರಮ, ಸೌಂದರ್ಯಗಳನ್ನು ನೆನಪಿಸುತ್ತವೆ...

ಹೀಗೆ ಶಾಶ್ವತವಾದುದರ ಹಿಂದೆ ಓಡುವುದು, ಬೆನ್ನಟ್ಟುವುದು ಮನುಷ್ಯನ ಮೂಲಸ್ವಭಾವವೇ ಇರಬೇಕು. ಕ್ಷಣಿಕತೆಯನ್ನು, ಕಾಲದ ನಿರಂತರ ಹೊಡೆತವನ್ನು ಸಹಿಸುವುದು ಒಂದು ಬಗೆಯ ಯಾತನೆ. ಹಾಗಾಗಿಯೇ ಕ್ಷಣಿಕವಾದ ಬದುಕಿನಲ್ಲೂ ಕಾಲಾತೀತವಾದ ಏನೋ ಒಂದನ್ನು ಹಿಡಿದಿಟ್ಟುಕೊಳ್ಳುವ ಬಯಕೆ ಮನುಷ್ಯನದು. ಸಂತೋಷ ಎನ್ನುವುದು ಮೂಲತಃ ಇಂತಹ ಕಾಲಾತೀತವಾದ್ದನ್ನು ಕಂಡುಕೊಳ್ಳುವ ಅನ್ವೇಷಣೆಗೆ, ಪ್ರಯತ್ನಕ್ಕೆ, ಆ ಪ್ರಯತ್ನಕ್ಕಾಗಿ ಒದಗಿ ಬರುವ ಒಂದು ಕ್ರಿಯಾಶೀಲ ಮನಃಸ್ಥಿತಿಗೆ ಸಂಬಂಧಪಟ್ಟದ್ದು.

ನಮಗೆ ಬೇಕಾದ್ದೇನೋ ಸಿಕ್ಕಿದಾಗ, ನಾವು ಕಾತರದಿಂದ ಕಾಯುತ್ತಿದ್ದುದ್ದು ಘಟಿಸಿದಾಗ ನಮಗೆ ಸಂತೋಷವಾಗುವುದೇನೋ ನಿಜ; ಆದರೆ ಅದು ಕ್ಷಣಿಕ; ಅದು ಮತ್ತೊಂದು ಬಯಕೆ ಹುಟ್ಟುವವರೆಗೆ ಮಾತ್ರ. ಅಷ್ಟೇ ಅಲ್ಲದೆ, ಅತಿಯಾದ ಸಂತೋಷದಲ್ಲಿರುವಾಗ ನಮಗೆ ವಿಚಾರಮಾಡುವ ಶಕ್ತಿಯೂ ಕಡಿಮೆಯಾಗಿರುತ್ತದೆ. ಮುಂದೆ ಇಂತಹದ್ದೇ ಗೆಲುವುಗಳನ್ನು ಪಡೆಯಬೇಕೆಂಬ ಚಡಪಡಿಕೆಯೂ, ಮತ್ತಷ್ಟು ಪಡೆಯಬೇಕೆಂಬ ದಾಹವೂ, ನಾವು ಬಯಸಿದ್ದು ನಡೆದೇ ಹೋಯಿತಲ್ಲ ಎನ್ನುವ ಅಹಂಕಾರವೂ ಸೇರಿ, ಒಂದು ಬಗೆಯ ತಾತ್ಕಾಲಿಕವಾದ ಹುಚ್ಚು ಹಿಡಿದಂತಾಗುವುದೂ ಇದೆ.

ಸಾಧಕರು, ದಾರ್ಶನಿಕರು ಹೇಳುವ ಸಂತೋಷ ಈ ಬಗೆಯ ರೋಚಕತೆಯಲ್ಲ, ಭಾವಾತಿರೇಕವಲ್ಲ. ಸಂತೋಷ ಎನ್ನುವುದು ಒಂದು ಸಮಾಧಾನದ ಸ್ಥಿತಿಯೇ ಹೊರತು ಉದ್ರಿಕ್ತತೆ, 'ಎಕ್ಸೈಟ್ಮೆಂಟ್' ಅಲ್ಲ. ಸಂತೋಷ ಎನ್ನುವುದು ಶಾಶ್ವತವಾದುದರ, ಮೌಲಿಕವಾದುದರ ಅನ್ವೇಷಣೆಯಲ್ಲಿ ಆಗುವ ತೃಪ್ತಿ, ಸಮಾಧಾನ. ಮನುಷ್ಯ ಯಾವುದೋ ಒಂದರ ಬೆನ್ನಟ್ಟುವುದಂತೂ ಹೌದು. ಆದರೆ ಯಾವುದರ ಬೆನ್ನಟ್ಟುವುದು ಯೋಗ್ಯ, ಯಾವುದನ್ನು ನಿಜಕ್ಕೂ ಪಡೆಯಲೇಬೇಕು ಎನ್ನುವುದರ ಬಗೆಗೆ ಸ್ಪಷ್ಟತೆ ಇರಬೇಕು. ಈ ವಿಷಯದಲ್ಲಿ ನಮ್ಮ ಹಬ್ಬಗಳು, ಧಾರ್ಮಿಕ ಆಚರಣೆಗಳು ನಮಗೆ ದಾರಿತೋರಬಲ್ಲವು. ನಮ್ಮೆಲ್ಲಾ ಹಬ್ಬಗಳು ಈ ಶಾಶ್ವತ ಸತ್ಯವೊಂದರ ಹುಡುಕಾಟದಲ್ಲಿ ನಮ್ಮನ್ನು ತೊಡಗಿಸುವಂಥದ್ದೇ ಆಗಿವೆ, ಆದ್ದರಿಂದಲೇ ಹಬ್ಬಗಳನ್ನು ಕೇವಲ ಆಚರಣೆಗಳಿಗೆ ಸೀಮಿತಗೊಳಿಸಿದರೆ ಸಾಲದು, ತತ್ವಚಿಂತನೆಯ ಕಡೆಗೂ ಹಬ್ಬಗಳ ಪರಿಧಿಯನ್ನು ವಿಸ್ತರಿಸಬೇಕು.

ನಮಗೆಲ್ಲಾ ತಿಳಿದಿರುವಂತೆ ಕೆಲವು ಹಬ್ಬಗಳು ಭವಬಂಧನದ ಬಿಡುಗಡೆಗಾಗಿ ಅಲೌಕಿಕ ತತ್ವವೊಂದರ ಬಗೆಗಿನ ಭಕ್ತಿಯನ್ನು, ಪ್ರೀತಿಯನ್ನು ಬೆಳೆಸುವಂಥದ್ದಾದರೆ ಮತ್ತೆ ಕೆಲವು ಹಬ್ಬಗಳು ಬದುಕಿನಲ್ಲಿ ನಮಗಿರಬೇಕಾದ ಸಮತೋಲನ, ಸಂಭ್ರಮ, ಸೌಂದರ್ಯಗಳನ್ನು ನೆನಪಿಸುವ ಹಬ್ಬ. ಯಾವುದೇ ಹಬ್ಬವಾದರೂ ಅದು ವ್ಯಕ್ತಿ ಮತ್ತು ಸಮುದಾಯದ ನಡುವಿನ ಅವಿಚ್ಛಿನ್ನ ಬಾಂಧವ್ಯವನ್ನು ನೆನಪಿಸುವುದಕ್ಕೆ ಇರುವ ನೆಪವೂ ಹೌದು.

ಒಟ್ಟಾರೆ ಹೇಳಬೇಕೆಂದರೆ ಹಬ್ಬವೆಂದರೆ ಶಾಶ್ವತ ಸತ್ಯ / ಸ್ಥಿತಿ / ವಸ್ತು / ಮೌಲ್ಯ / ತತ್ವ – ಇವುಗಳ ಅನ್ವೇಷಣೆ, ಅನುಸಂಧಾನ. ಆ ಅನ್ವೇಷಣೆಯಲ್ಲಿ ಎಲ್ಲರನ್ನೂ ಒಳಗೊಂಡು ಅದರಿಂದ ದೊರಕಬಹುದಾದ ಸುಖ, ಶಾಂತಿ, ತೃಪ್ತಿ, ಪ್ರೀತಿಗಳನ್ನು ಆಚರಣೆಯ ರೂಪದಲ್ಲೂ, ಚಿಂತನೆಯ ರೂಪದಲ್ಲೂ ಎಲ್ಲರಿಗೂ ಹಂಚುವುದು, ಮುಂದಿನ ಪೀಳಿಗೆಗೂ ಇದು ನಿರಂತರವಾಗಿರುವಂತೆ ಅವರಲ್ಲಿ ಈ ಅನ್ವೇಷಣೆಯ ಬಗೆಗೆ ಅಭಿರುಚಿ ಹುಟ್ಟಿಸುವುದು - ಇದೆ ಅಲ್ಲವೇ ಹಬ್ಬದ ತಿರುಳು? ಸಂತೋಷದ ಒಳತಿರುಳೂ ಇದೇ! ಶಾಶ್ವತವಾದನ್ನು ಕಂಡುಕೊಳ್ಳುವ ಹಾದಿಯಲ್ಲಿ ಶ್ರದ್ಧೆ, ಭಕ್ತಿ, ಪ್ರೀತಿ ಇಟ್ಟುಕೊಳ್ಳುವುದು - ಇದೇ ಸಂತೋಷದ ಮೂಲ.

ಹಬ್ಬದ ಸಮಯದಲ್ಲಿ ಸಂತೋಷ ಗರಿಗೆದರುತ್ತದೆ, ಸಂಭ್ರಮ ಮನದಲ್ಲಿ ಮನೆಮಾಡಿರುತ್ತದೆ. ಹಬ್ಬ ಮುಗಿದ ತಕ್ಷಣ ಖಾಲಿತನ ಆವರಿಸಬೇಕಿಲ್ಲ. ಏಕೆಂದರೆ ಹಬ್ಬ ಯಾವುದು ಕಾಲಾತೀತವೋ ಅದರೆಡೆಗೆ ನಮ್ಮಲ್ಲಿ ಪ್ರೀತಿ, ಶ್ರದ್ಧೆಯ ಹಣತೆಯೊಂದನ್ನು ಹಚ್ಚಿಟ್ಟಿರುತ್ತದೆಯಲ್ಲಾ – ಅದು ಹಬ್ಬದ ಸಾರ್ಥಕತೆಯೇ ಅಲ್ಲವೇ? ಯಾವುದೇ ತತ್ವವನ್ನು ಎಷ್ಟೇ ಗಹನವಾಗಿ ಅರಿತಿದ್ದರೂ ಅದು ಕಾಲಾಂತರದಲ್ಲಿ ಮರೆವಿಗೆ ಸಂದಿರುತ್ತದೆ, ಮನಃಪಟಲದಿಂದ ಹೇಗೋ ಜಾರಿಹೋಗಿ ಮಸುಕಾಗಿರುತ್ತದೆ. ಹಬ್ಬಗಳು ನಾವು ಅರಿತ ಸತ್ಯಗಳನ್ನು, ನಮ್ಮ ಮೌಲ್ಯಗಳನ್ನು ಮತ್ತೆ ನಮಗೇ ಮನವರಿಕೆಯಾಗುವಂತೆ ಗಟ್ಟಿಯಾಗಿ ಹೇಳಿಕೊಳ್ಳುವ ಪ್ರಕ್ರಿಯೆ. ಯಾವುದು ಭೂಮವೋ ಶ್ರೇಷ್ಠವೋ ನಿತ್ಯವೋ ಅದನ್ನು ಒಮ್ಮೆ ಮಾತ್ರ ಕಂಡು, ಕೇಳಿ, ಹೇಳಿ, ಆಚರಿಸಿ ಸುಮ್ಮನಿರಲಾಗುವುದೇ? ಈ ದೃಷ್ಟಿಯಿಂದ ಕಂಡಾಗ ಹಬ್ಬವೆಂದರೆ ನಿಜವಾದ ಸಂತೋಷದ ಅರಿವು; ಸಂತೋಷವೆಂದರೆ ಶಾಶ್ವತವಾದದ್ದನ್ನು ಸಂಭ್ರಮಿಸುವ ಹಬ್ಬ ಎಂದೆನಿಸದೆ ಇರದು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಗಣಿತ

ವಾಸ್ತವ ಸಂಖ್ಯೆಗಳು

ಅಭ್ಯಾಸ 1.1

2) ಕೆಳಗೆ ನೀಡಿರುವ ಜೋಡಿ ಲಸಾಅ ಮತ್ತು ಮಸಾಅ ಕಂಡು ಹಿಡಿದು ಲಸಾಅXಮಸಾಅ= ಆ ಎರಡು ಸಂಖ್ಯೆಗಳ ಗುಣಲಬ್ಧ ಎಂಬುದನ್ನು ತಾಳೆ ನೋಡಿ (1) 26 ಮತ್ತು 91 (2) 510 ಮತ್ತು 92 (3) 336 ಮತ್ತು 54

ಉತ್ತರ:– (1) 26 ಮತ್ತು 91

a = 26: 2|26, 13|13, 1

b = 91: 7|91, 13|13, 1

$\therefore 26 = 2 \times 13$

$91 = 7 \times 13$

ಎರಡು ಸಂಖ್ಯೆಗಳ ಮಸಾಅ=13

ಎರಡು ಸಂಖ್ಯೆಗಳ ಲಸಾಅ $= 2 \times 7 \times 13 = 14 \times 13 = 182$

ಲಸಾಅ x ಮಸಾಅ = a x b

$13 \times 182 = 26 \times 91$

$2366 = 2366$

ಉತ್ತರ:– (2) 510 ಮತ್ತು 92

a = 510: 2|510, 5|255, 3|51, 17|17, 1

b = 92: 2|92, 2|46, 23|23, 1

$\therefore 510 = 2 \times 5 \times 3 \times 17 = 2 \times 3 \times 5 \times 17$

$92 = 2 \times 2 \times 23 = 2^2 \times 23$

ಎರಡು ಸಂಖ್ಯೆಗಳ ಮಸಾಅ = 2

ಎರಡು ಸಂಖ್ಯೆಗಳ ಲಸಾಅ $= 2 \times 2 \times 3 \times 5 \times 17 \times 23 = 4 \times 3 \times 5 \times 17 \times 23 = 60 \times 17 \times 23 = 23460$

ಲಸಾಅ x ಮಸಾಅ = a x b

(a b) x (a b) = a x b

$2 \times 23460 = 510 \times 92$

$46920 = 46920$

ಉತ್ತರ:– (3) 336 ಮತ್ತು 54

a = 336: 2|336, 2|168, 2|84, 2|42, 3|21, 7|7, 1

b = 54: 2|54, 3|21, 3|9, 3|3, 1

$\therefore 336 = 2 \times 2 \times 2 \times 2 \times 3 \times 7 = 2^4 \times 3 \times 7$

$54 = 2 \times 3 \times 3 \times 3 = 2 \times 3^3$

ಎರಡು ಸಂಖ್ಯೆಗಳ ಮಸಾಅ $= 2 \times 3 = 6$

ಎರಡು ಸಂಖ್ಯೆಗಳ ಲಸಾಅ $= 2 \times 2 \times 2 \times 2 \times 3 \times 3 \times 3 \times 7 = 2^4 \times 3^3 \times 7 = 3024$

ಲಸಾಅ X ಮಸಾಅ = a x b

(a b) x (a b) = a x b

$6 \times 3024 = 336 \times 54$

$18144 = 18144$

3) ಕೆಳಗಿನ ಪೂರ್ಣಾಂಕಗಳ ಲ.ಸಾ.ಅ ಮತ್ತು ಮ.ಸಾ.ಅ ಗಳನ್ನು ಅವಿಭಾಜ್ಯ ಅಪವರ್ತನ ವಿಧಾನದಿಂದ ಕಂಡುಹಿಡಿಯಿರಿ

1) 12, 15 ಮತ್ತು 21

2) 17, 23 ಮತ್ತು 29

3) 8, 9, ಮತ್ತು 25

ಉತ್ತರ:– (1) 12, 15 ಮತ್ತು 21

$12 = 2 \times 2 \times 3$

$15 = 3 \times 5$

$21 = 3 \times 7$

ಮ. ಸಾ.ಅ. = 3

ಲ.ಸಾ.ಅ $= 3 \times 2 \times 2 \times 5 \times 7 = 420$

ಉತ್ತರ(2) 17, 23 ಮತ್ತು 29

$17 = 17 \times 1$

$23 = 23 \times 1$

$29 = 29 \times 1$

ಮ. ಸಾ.ಅ. = 1

ಲ.ಸಾ.ಅ $= 17 \times 23 \times 29 = 11339$

ಉತ್ತರ(3) 8, 9 ಮತ್ತು 25

$8 = 2 \times 2 \times 2 = 2^3$

$9 = 3 \times 3 = 3^2$

$25 = 5 \times 5 = 5^2$

ಮ. ಸಾ.ಅ. = 1

ಲ.ಸಾ.ಅ $= 2^3 \times 3^2 \times 5^2 = 8 \times 9 \times 25 = 1800$

4) (306, 657)ರ ಮ.ಸಾ.ಅ = 9 ಆದರೆ ಅವುಗಳ ಲ.ಸಾ.ಅ ವನ್ನು ಕಂಡುಹಿಡಿಯಿರಿ.

ಉತ್ತರ:– ಲಸಾಅ(a, b) x ಮಸಾಅ(a, b) = a x b

9 x ಲಸಾಅ = 306x 657

$$LCM = \frac{306 \times 657}{9} = 22338$$

(306, 657)ರ ಮ.ಸಾ.ಅ = 9 ಆದರೆ ಅವುಗಳ ಲ.ಸಾ.ಅ= 22338

5) nದ ಯಾವುದೇ ಬೆಲೆಗೆ 6^n ಇದು ಸೊನ್ನೆಯಿಂದ ಕೊನೆಗೊಳ್ಳಬಹುದೇ ಪರೀಕ್ಷಿಸಿ. ಇಲ್ಲಿ n ಒಂದು ಸ್ವಾಭಾವಿಕ ಸಂಖ್ಯೆಯಾಗಿದೆ.

ಉತ್ತರ:– ಸೊನ್ನೆಯಿಂದ ಕೊನೆಗೊಳ್ಳುವ ಸಂಖ್ಯೆಗಳಿಗೆ ಉದಾ ಎಂದರೆ (ಅ) 10 (ಆ)100 ಮೊದಲಾದವು

10ರ ಅವಿಭಾಜ್ಯ ಅಪವರ್ತನ= 2 x 5

100ರ ಅವಿಭಾಜ್ಯ ಅಪವರ್ತನ= 2 x2 x 5 x5

ಸೊನ್ನೆಯಿಂದ ಕೊನೆಗೊಳ್ಳುವ ಸಂಖ್ಯೆಗಳ ಅವಿಭಾಜ್ಯ ಅಪವರ್ತನ 2 ಮತ್ತು 5 ಆದರೆ 2 x 3ಗಳು 6ರ ಅವಿಭಾಜ್ಯ ಅಪವರ್ತನಗಳಾಗಿವೆ ಆದರೆ ಇಲ್ಲಿ 5 ಇಲ್ಲ, ಹೀಗಾಗಿ ಸಾಧ್ಯವಿಲ್ಲ

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC PHYSICS

CURRENT ELECTRICITY

17. Find out the magnitude of resistance X in the circuit shown in the figure. When no current flows through the 5Ω resistor.



Ans:– If no current flows through the 5Ω resistor, the circuit represents a balanced Wheatstone bridge.

$$\therefore \frac{X}{18} = \frac{2}{6}$$

$$\Rightarrow X = \frac{2}{6} \times 18 = 6\Omega$$

18. The resistance in the left gap of a metre bridge is 10 ohms and the balance point is 40 cm from the left end. Calculate the value of the unknown resistance.

Soln:- Here, $l = 40$ cm, $R = 10\,\Omega$

$$\text{Now, } X = R \times \frac{100 \times l}{1} = 10 \times \frac{100-40}{40}$$

$$\Rightarrow X = \frac{60}{40} \times 10 = 15\Omega$$

19. Mention the steps of analysis of a network to find the currents in various branches and the potential differences across the various circuit components.

Ans:- The steps of analysis of a network to find the currents in various branches and the potential differences across the various circuit components are

(a) The directions of the currents are first arbitrarily assigned in various branches.

(b) The number of the unknown currents is minimised by applying the current law.

(c) The voltage law is applied at various meshes to get as many equations as the number of unknown currents.

(d) The equation is solved by the known methods.

(e) If the current so obtained is +ve than the assigned direction of flow to the current is correct and if the current so obtained is - ve than the assigned direction of flow to the current is the opposite direction.

20. In a wheatstone's network the value of R for balance is 25 Ω. On interchanging P and Q the value of R for balance is 20Ω. Calculate the value of S and the ratio P/Q.

Ans:- Before interchange R = 25Ω for balance.

$$\frac{P}{Q} = \frac{R}{S} \Rightarrow \frac{P}{Q} = \frac{25}{S} \text{.......(i)} \quad (\because R = 25\Omega)$$

After interchange R = 20Ω, for balance

$$\frac{Q}{P} = \frac{R}{S} \Rightarrow \frac{Q}{P} = \frac{20}{S} \text{.......(ii)} \quad (\because R = 20\Omega)$$

multiplying the eqns (1) and (2)

$$\frac{P}{Q} \times \frac{Q}{P} = \frac{25}{S} \times \frac{20}{S} \Rightarrow S^2 = 500 \Rightarrow S = 22.36\Omega$$

$$\text{From (1), } \frac{P}{Q} = \frac{25}{S} = \frac{25}{22.36} = 1.118$$

21. What is the resistance between the points A and B in the circuit shown in the figure.



Ans:- The network represents a balanced Wheatstone's bridge and hence the resistance of 5Ω connected across the diagonal points can be considered as an open path.

The above network is equivalent to the circuit shown below-



The network is now a parallel combination of two resistive paths. The resistance of each resistive path is 5 + 5. That is 10 Ω. Hence, the net resistance between the points A and B,

$$\frac{1}{R} = \frac{1}{10} + \frac{1}{10} = \frac{1}{5} \Rightarrow R = 5\Omega$$

22. If each of the resistances in the network is R as shown in the fig, what is the resistance between A and B?



The given network can be reduced to the network shown below. *(Contd……)*

ಕಾರ್ಕಳ ಅತ್ಯಾಚಾರ ಪ್ರಕರಣ: 3ನೇ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಉಡುಪಿ: ಕಾರ್ಕಳದಲ್ಲಿ ಯುವತಿ ಮೇಲೆ ನಡೆದ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿ ಮೂರನೇ ಆರೋಪಿಯನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಕಾರ್ಕಳದ ಅಭಯ್ (23) ಬಂಧಿತ ಆರೋಪಿ. ಪ್ರಕರಣಕ್ಕೆ ಸಂಬಂಧಿಸಿ ಬಂಗ್ಲೆಗುಡ್ಡೆ ನಿವಾಸಿ ಅಲ್ತಾಫ್ (34) ಮತ್ತು ಕ್ಸೇವಿಯರ್ ರಿಚರ್ಡ್ ಕ್ವಾಡ್ರಸ್ (35) ಎಂಬುವವರನ್ನು ಪೊಲೀಸರು ಈ ಹಿಂದೆ ಬಂಧಿಸಿದ್ದರು.

'ಬಂಧಿತ ಅಭಯ್, ಪ್ರಥಮ ಆರೋಪಿ ಅಲ್ತಾಫ್‌ಗೆ ಮಾದಕ ವಸ್ತು ಕೊಟ್ಟಿದ್ದಾನೆ ಎಂಬುದು ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕುಮಾರ್ ತಿಳಿಸಿದ್ದಾರೆ.

'ಕೃತ್ಯ ಎಸಗಿದ ಮೇಲೆ ಅಲ್ತಾಫ್ ತಪ್ಪಿಸಿಕೊಳ್ಳಲು ಅಭಯ್ ಸಹಕಾರ ನೀಡಲು ಯತ್ನಿಸಿರುವುದು ಕೂಡ ತನಿಖೆಯಿಂದ ತಿಳಿದು ಬಂದಿದೆ. ಅಭಯ್‌ನನ್ನು ಮಂಗಳವಾರ ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಕಸ್ಟಡಿಗೆ ಪಡೆದುಕೊಂಡು ಹೆಚ್ಚಿನ ವಿಚಾರಣೆ ನಡೆಸಲಾಗುವುದು' ಎಂದೂ ಹೇಳಿದ್ದಾರೆ.

ಅಂಗವಿಕಲ ಮಹಿಳೆ ಮೇಲೆ ಅತ್ಯಾಚಾರ

ಗೌರಿಬಿದನೂರು: ತಾಲ್ಲೂಕಿನ ಗ್ರಾಮವೊಂದರಲ್ಲಿ ಅಂಗವಿಕಲ ಮಹಿಳೆಯೊಬ್ಬರಿಗೆ ತಿಂಡಿ ಆಸೆ ತೋರಿಸಿ ಅತ್ಯಾಚಾರ ಎಸಗಿದ ಆರೋಪಿಯನ್ನು ಗ್ರಾಮಾಂತರ ಠಾಣೆ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ರಾಮಾಂಜಿ ಬಂಧಿತ ಆರೋಪಿ. ನಾಲ್ಕು ವರ್ಷದ ಮಗುವಿರುವ 27 ವರ್ಷದ ಶ್ರವಣ ದೋಷವುಳ್ಳ ಮಹಿಳೆಗೆ ಎದುರು ಮನೆಯ ಆರೋಪಿ ತಿಂಡಿ ಮತ್ತು ಹಣದ ಆಸೆ ತೋರಿಸಿ ಅತ್ಯಾಚಾರ ಎಸಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆ ಸಂಬಂಧ ಪ್ರಕರಣ ದಾಖಲಾಗಿದೆ.

ಸಿಬಿಐ ಸೋಗಿನಲ್ಲಿ ಕರೆ ₹1.27 ಕೋಟಿ ವಂಚನೆ

ಚಿತ್ರದುರ್ಗ: ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ಕರೆ ಮಾಡಿದ್ದ ಸೈಬರ್ ವಂಚಕರು, ನಗರದ ವೈದ್ಯರೊಬ್ಬರಿಗೆ ₹1.27 ಕೋಟಿ ವಂಚಿಸಿದ್ದಾರೆ.

ಹಣ ಕಳೆದುಕೊಂಡ ಬಗ್ಗೆ ವೈದ್ಯರೊಬ್ಬರು ಇಲ್ಲಿನ ಸಿಇಎನ್ (ಸೈಬರ್, ಎಕನಾಮಿಕ್ ಆ್ಯಂಡ್ ನಾರ್ಕೋಟಿಕ್) ಅಪರಾಧ ಪೊಲೀಸ್ ಠಾಣೆಗೆ ಶನಿವಾರ ದೂರು ನೀಡಿದ್ದಾರೆ.

ಆಗಸ್ಟ್ 21ರಂದು ವೈದ್ಯರಿಗೆ ವಾಟ್ಸ್‌ಆ್ಯಪ್ ಮೂಲಕ ಕರೆ ಮಾಡಿದ್ದ ವಂಚಕರು, 'ನಿಮ್ಮ ಖಾತೆಯಲ್ಲಿರುವ ಹಣ ಅಕ್ರಮವಾಗಿ ವರ್ಗಾವಣೆಯಾಗಿದೆ. ಅದಕ್ಕೆ ಲೆಕ್ಕಪರಿಶೋಧನೆಯ ಅಗತ್ಯವಿದೆ. ತಕ್ಷಣವೇ ಪ್ರತ್ಯೇಕ ಖಾತೆಯೊಂದಕ್ಕೆ ನೀವು ಹಣ ಹಾಕಬೇಕು. ಇಲ್ಲದಿದ್ದರೆ ನಿಮ್ಮ ಮೇಲೆ ದಾಳಿಯಾಗುವ ಸಾಧ್ಯತೆ ಇದೆ' ಎಂದು ಬೆದರಿಸಿದ್ದಾರೆ.

ಇದನ್ನು ನಂಬಿದ ವೈದ್ಯರು ಆಗಸ್ಟ್ 22ರಂದು ವಂಚಕರು ಹೇಳಿದ ಪ್ರತ್ಯೇಕ ಖಾತೆಗೆ ₹1.27 ಕೋಟಿ ಹಣ ವರ್ಗಾಯಿಸಿದ್ದಾರೆ. ನಂತರ ತಮ್ಮ ಹಣದ ಬಗ್ಗೆ ಯಾವುದೇ ಮಾಹಿತಿ ಬಾರದಿದ್ದಾಗ ವಂಚನೆಗೆ ಒಳಗಾಗಿರುವ ವಿಷಯ ಗೊತ್ತಾಗಿದ್ದು, ಪ್ರಕರಣ ದಾಖಲಾಗಿದೆ.

ನದಿಗಳ ನೀರಿನ ಮಟ್ಟ ದಿಢೀರ್ ಏರಿಕೆ • ಹಾರಂಗಿ ಜಲಾಶಯಕ್ಕೆ ಒಳಹರಿವು ಹೆಚ್ಚಳ

ಸತತ ಮಳೆ: ಸೇತುವೆ ಮುಳುಗಡೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಮಹಾರಾಷ್ಟ್ರದ ಪಶ್ಚಿಮ ಘಟ್ಟ ಪ್ರದೇಶ ಮತ್ತು ಬೆಳಗಾವಿ ಜಿಲ್ಲೆಯ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ನಿರಂತರ ಮಳೆಯಿಂದ ಕೃಷ್ಣಾ, ದೂಧಗಂಗಾ ಹಾಗೂ ವೇದಗಂಗಾ ನದಿಗಳ ನೀರಿನ ಮಟ್ಟ ಸೋಮವಾರ ದಿಢೀರ್ ಏರಿಕೆಯಾಗಿದೆ. ನದಿ ತೀರದ ಜನರಿಗೆ ಎಚ್ಚರಿಕೆ ನೀಡಲಾಗಿದೆ.

ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ರಾಜಾಪುರ ಬ್ಯಾರೇಜಿನಿಂದ ಕೃಷ್ಣಾ ನದಿಗೆ 47,250 ಕ್ಯುಸೆಕ್ ಹೊರ ಹರಿವು ಇದೆ. ದೂಧಗಂಗಾ ನದಿಗೆ 15,840 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ-ಯಡೂರ ಬ್ಯಾರೇಜ್ ಬಳಿಯಲ್ಲಿ ಕೃಷ್ಣಾ ನದಿಗೆ 63,090 ಕ್ಯುಸೆಕ್ ನೀರು ಹರಿದು ಬರುತ್ತಿದೆ. ಮಲಿಕವಾಡ– ದತ್ತವಾಡ ಸೇತುವೆ ಹಾಗೂ ನಿಪ್ಪಾಣಿ ತಾಲ್ಲೂಕಿನ ಆರು ಕಿರು ಸೇತುವೆಗಳು ಜಲಾವೃತಗೊಂಡಿದೆ.

ಘಟಪ್ರಭಾ ನದಿ ನೀರಿನ ಹರಿವು ಹೆಚ್ಚಾಗಿದ್ದು, ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರದ ಢವಳೇಶ್ವರ ಸೇತುವೆ ಮುಳುಗಡೆಯಾಗಿದೆ. ನಂದ-ಗಾಂವ-ಅವರಾದಿ ಸೇತುವೆ ಸಹ ಮುಳುಗಡೆ ಆಗಿದೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಭಟ್ಕಳ, ಹೊನ್ನಾವರ, ಕುಮಟಾದಲ್ಲಿ ಬಿರುಸಿನ ಮಳೆಯಾದರೆ, ಕ್ಯಾಸಲ್‌ರಾಕ್ ಪ್ರದೇಶದ ನಿರಂತರವಾಗಿ ಮಳೆ ಸುರಿಯುತ್ತಿದೆ.

ಕೊಡಗಿನ ಕೆಲವೆಡೆ ಜೋರು ಮಳೆ (ಮಡಿಕೇರಿ ವರದಿ): ಕೊಡಗು ಜಿಲ್ಲೆಯ ಕೆಲವೆಡೆ ಭಾನುವಾರ ರಾತ್ರಿಯಿಂದ ಮಳೆ ಬಿರುಸುಗೊಂಡಿದೆ.

ಭಾಗಮಂಡಲದಲ್ಲಿ 5 ಸೆಂ.ಮೀ. ಹಾಗೂ ಸೋಮವಾರಪೇಟೆ ತಾಲ್ಲೂಕಿನ ಶಾಂತಳ್ಳಿಯಲ್ಲಿ 4 ಸೆಂ.ಮೀ. ಮಳೆ ಸುರಿದಿದೆ. ಮಡಿಕೇರಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಬಿಟ್ಟು ಬಿಟ್ಟು ಜೋರು ಮಳೆ ಬಿದ್ದಿತು. ಪರಿಣಾಮ, ಹಾರಂಗಿ ಜಲಾಶಯಕ್ಕೆ 2ಸಾವಿರ ಕ್ಯುಸೆಕ್ ನೀರು ಹರಿದುಬರುತ್ತಿದೆ.

ಉಡುಪಿ ವರದಿ: ಉಡುಪಿ ಜಿಲ್ಲೆಯಾದ್ಯಂತ ಸೋಮವಾರ ಸಂಜೆ ಧಾರಾಕಾರ ಮಳೆ ಸುರಿಯಿತು. ಅಷ್ಟಮಿ ಅಂಗವಾಗಿ ಉಡುಪಿಯ ಕೃಷ್ಣ ಮಠಕ್ಕೆ ಸಂಜೆ ಭೇಟಿ ನೀಡಿದ್ದ ಭಕ್ತರಿಗೆ ತೊಂದರೆಯಾಯಿತು. ರಥಬೀದಿಯಲ್ಲಿನ ವ್ಯಾಪಾರಿಗಳಿಗೂ ಸಮಸ್ಯೆಯಾಯಿತು. ಮಂಗಳೂರು ನಗರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಕೆಲವೆಡೆ ಸಾಧಾರಣ ಮಳೆಯಾಯಿತು.

ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಮಲಿಕವಾಡ– ದತ್ತವಾಡ ಸೇತುವೆ ಮುಳುಗಡೆಯಾಗಿದೆ –ಪ್ರಜಾವಾಣಿ ಚಿತ್ರ: ಚಂದ್ರಶೇಖರ ಎಸ್. ಚಿನಕೇಕರ

ಶಿರೂರು ದುರಂತ: ಪಿಎಂ ನಿಧಿಯಿಂದ ತಲಾ ₹2 ಲಕ್ಷ ಪರಿಹಾರ

ಕಾರವಾರ: 'ಅಂಕೋಲಾ ತಾಲ್ಲೂಕಿನ ಶಿರೂರಿನಲ್ಲಿ ಗುಡ್ಡ ಕುಸಿತ ದುರಂತದಲ್ಲಿ ಮೃತರ ಕುಟುಂಬಗಳಿಗೆ ತಲಾ ₹2 ಲಕ್ಷ ಮತ್ತು ಗಾಯಗೊಂಡವರಿಗೆ ₹50 ಸಾವಿರ ಪರಿಹಾರವನ್ನು ಪ್ರಧಾನಿ ನರೇಂದ್ರ ಮೋದಿ ಮಂಜೂರು ಮಾಡಿದ್ದಾರೆ' ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದ್ದಾರೆ.

'ಶಿರೂರು ದುರ್ಘಟನೆಯಲ್ಲಿ ಸಂತ್ರಸ್ತರಾದ ಕುಟುಂಬಗಳಿಗೆ ಅಗತ್ಯ ಪರಿಹಾರ ನೀಡಲು ಪ್ರಧಾನಿಯವರಿಗೆ ಕೋರಿದ್ದೆ. ಅದಕ್ಕೆ ಸ್ಪಂದಿಸಿದ ಅವರು ಪ್ರಧಾನ ಮಂತ್ರಿ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಡಿ ಪರಿಹಾರ ಬಿಡುಗಡೆ ಮಾಡಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

'ಕೇಂದ್ರ ಸರ್ಕಾರವು ಉತ್ತರ ಕನ್ನಡ ಜಿಲ್ಲಾಧಿಕಾರಿಗೆ ಸಂತ್ರಸ್ತರ ಮಾಹಿತಿಯನ್ನು ಎಕ್ಸ್–ಗ್ರೇಶಿಯಾ ಪೋರ್ಟಲ್‌ನಲ್ಲಿ ನಮೂದಿಸಲು ಸೂಚಿಸಿ ಆದೇಶಿಸಿದೆ. ಪರಿಹಾರ ಮೊತ್ತವು ನೇರವಾಗಿ ಸಂತ್ರಸ್ತರ ಖಾತೆಗೆ ಪಾವತಿಯಾಗಲಿದೆ ಎಂದೂ ತಿಳಿಸಿದೆ' ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123,73	4,537	4,189
ಹಾರಂಗಿ	2,859	2,858.14	2,156	400
ಕಬಿನಿ	2,284.00	2,282.30	2,611	2,350
ಹೇಮಾವತಿ	2,922	2,921.17	7,473	5,525
ಲಿಂಗನಮಕ್ಕಿ	1,819	1,817.25	20,967	20,000
ಸೂಪಾ (ಮೀ)	564	559.37	23,853	4,544
ಮಾಣಿ	595	589.48	1,878	0
ತುಂಗಭದ್ರಾ	1,633	1,628.04	17,311	10,075
ಮಲಪ್ರಭಾ	2,079.50	2,078.00	11,615	9,444
ಘಟಪ್ರಭಾ	2,175	2,173.83	14,588	16,833
ಭದ್ರಾ *	186	180.7	5,614	3,241
ಆಲಮಟ್ಟಿ (ಮೀ)	519.60	519.54	66,211	79,221
ನಾರಾಯಣಪುರ (ಮೀ)	492.25	491.64	1,10.000	1,20,800

* ನೆಲಮಟ್ಟದಿಂದ

ಕರಾವಳಿಯಲ್ಲಿ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಉಡುಪಿ, ದಕ್ಷಿಣ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮಂಗಳವಾರ ಮತ್ತು ಬುಧವಾರ ಭಾರಿ ಮಳೆಯಾಗಲಿದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಈ ಜಿಲ್ಲೆಗಳಲ್ಲಿ 'ಆರೆಂಜ್ ಅಲರ್ಟ್' ಘೋಷಿಸಿದೆ.

ಈ ಜಿಲ್ಲೆಗಳ ಒಂದೆರಡು ಸ್ಥಳಗಳಲ್ಲಿ ಭಾರಿ ಮಳೆಯೊಂದಿಗೆ ಗಾಳಿಯ ವೇಗವು ಪ್ರತಿ ಗಂಟೆಗೆ 30ರಿಂದ 40 ಕಿ.ಮೀ ತಲುಪುವ ಸಾಧ್ಯತೆಯಿದೆ. ಬೆಳಗಾವಿ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಕರಾವಳಿಯಲ್ಲಿ ಗಂಟೆಗೆ 35 ಕಿ.ಮೀ.ಗಳಿಂದ 55 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಂಭವವಿದೆ. ಆದ್ದರಿಂದ ಮೀನುಗಾರರು ಮುನ್ನೆಚ್ಚರಿಕೆ ವಹಿಸಬೇಕು ಎಂದು ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಶ್ರೀಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಉಡುಪಿಯ ಕೃಷ್ಣ ಮಠದಲ್ಲಿ ಪರ್ಯಾಯ ಪುತ್ತಿಗೆ ಮಠದ ಸುಗುಣೇಂದ್ರತೀರ್ಥ ಸ್ವಾಮೀಜಿ ಸೋಮವಾರ ದೇವರಿಗೆ ಮಹಾಪೂಜೆ ನೆರವೇರಿಸಿದರು

ಮಠಾಧೀಶರ ಬದಲು ಭಕ್ತರಿಗೆ ಕೃಷ್ಣನ ತೊಟ್ಟಿಲು ತೂಗುವ ಅವಕಾಶ

ಪ್ರಜಾವಾಣಿ ವಾರ್ತೆ

ಉಡುಪಿ: ಶ್ರೀಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಉಡುಪಿಯ ಕೃಷ್ಣ ಮಠಕ್ಕೆ ಸೋಮವಾರ ಅಪಾರ ಸಂಖ್ಯೆಯ ಭಕ್ತರು ಭೇಟಿ ನೀಡಿದರು. ಬೆಳಿಗ್ಗೆಯಿಂದಲೇ ಸರದಿಯಲ್ಲಿ ನಿಂತು ದೇವರ ದರ್ಶನ ಪಡೆದರು.

ಶ್ರೀಕೃಷ್ಣ ಜನ್ಮಾಷ್ಟಮಿಯಂದು ಬಾಲಕೃಷ್ಣನ ತೊಟ್ಟಿಲು ತೂಗುವ ಕಾಯಕ ಪರ್ಯಾಯ ಮಠಾಧೀಶರದ್ದಾಗಿತ್ತು. ಆದರೆ, ಈ ಬಾರಿ ಪುತ್ತಿಗೆ ಮಠದ ಸುಗುಣೇಂದ್ರತೀರ್ಥ ಸ್ವಾಮೀಜಿ ಅವರ ಚತುರ್ಥ ಪರ್ಯಾಯದ ಮೊದಲ ಕೃಷ್ಣ ಜನ್ಮಾಷ್ಟಮಿ ಮಹೋತ್ಸವದಲ್ಲಿ ಭಕ್ತಾದಿಗಳಿಗೆ ಕೃಷ್ಣನ ತೊಟ್ಟಿಲು ತೂಗುವ ಅವಕಾಶ ನೀಡಲಾಯಿತು.

ಮಧ್ವಮಂಟಪದಲ್ಲಿ ಅಲಂಕೃತ ತೊಟ್ಟಿಲಲ್ಲಿ ಶ್ರೀಕೃಷ್ಣನ ವಿಗ್ರಹ ಇರಿಸಿ, ವಿದ್ವಾನ್ ಗೋಪಾಲಾಚಾರ್ಯ ದಂಪತಿ ತೊಟ್ಟಿಲು ತೂಗುವ ಮೂಲಕ ಡೋಲೋತ್ಸವಕ್ಕೆ ಚಾಲನೆ ನೀಡಿದರು.

ಕಾಂಗ್ರೆಸ್ ಶಾಸಕರಿಗೆ ಆಫರ್ ಬಿಜೆಪಿಯಿಂದ ದೂರು

ಪ್ರಜಾವಾಣಿ ವಾರ್ತೆ

ಮಂಡ್ಯ: 'ಕಾಂಗ್ರೆಸ್ ಶಾಸಕರಿಗೆ ಪಕ್ಷ ಬಿಟ್ಟು ಬರಲು ಬಿಜೆಪಿಯ ಕೇಂದ್ರ ನಾಯಕರು ₹100 ಕೋಟಿ ಆಫರ್ ಮಾಡುತ್ತಿದ್ದಾರೆ' ಎಂದು ಆಧಾರರಹಿತ ಮತ್ತು ದುರುದ್ದೇಶ ಪೂರ್ವಕ ಆರೋಪ ಮಾಡಿರುವ ಮಂಡ್ಯ ಶಾಸಕ ಪಿ.ರವಿಕುಮಾರ್ (ರವಿ ಗಣಿಗ) ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳ-ಬೇಕು' ಎಂದು ಬಿಜೆಪಿ ರಾಜ್ಯ ಘಟಕದ ವಕ್ತಾರ ಅಶ್ವತ್ಥನಾರಾಯಣ ಮತ್ತು ಜಿಲ್ಲಾ ಘಟಕದ ವಕ್ತಾರ ಸಿ.ಟಿ.ಮಂಜುನಾಥ್ ನೇತೃತ್ವದಲ್ಲಿ ಪಕ್ಷದ ಮುಖಂಡರು ಇಲ್ಲಿನ ಪಶ್ಚಿಮ ಪೊಲೀಸ್ ಠಾಣೆಗೆ ಸೋಮವಾರ ದೂರು ಸಲ್ಲಿಸಿದರು.

'ಕಾಂಗ್ರೆಸ್ ಸರ್ಕಾರ ಪತನಗೊಳಿಸಲು ಆಪರೇಷನ್ ಕಮಲ ನಡೆಸುತ್ತಿದ್ದಾರೆ ಎಂದು ಬಿಜೆಪಿಯ ಕೇಂದ್ರ ನಾಯಕರ ವಿರುದ್ಧ ಸುಳ್ಳು ಹೇಳಿಕೆ ನೀಡಲಾಗಿದೆ. ಶಾಸಕರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ದಾಖಲೆಗಳಿವೆ': ದೂರಿನ ಬಗ್ಗೆ ಪ್ರತಿಕ್ರಿಯಿಸಿದ ರವಿಕುಮಾರ್, 'ಬಿಜೆಪಿಯವರು ಪ್ರಜಾಪ್ರಭುತ್ವವನ್ನು ಹಾಳು ಮಾಡುತ್ತಿದ್ದಾರೆ. ₹2 ಸಾವಿರ ಕೋಟಿ ಆರೋಪ ಮಾಡಿದ್ದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ವಿರುದ್ಧ ಬಿಜೆಪಿ ದೂರು ಕೊಡಲಿ. ಶ್ರೀನಿವಾಸಗೌಡ ವಿರುದ್ಧವೂ ದೂರು ಕೊಡಬೇಕು' ಎಂದು ತಿರುಗೇಟು ನೀಡಿದರು.

'ಕಾಂಗ್ರೆಸ್ ಶಾಸಕರಿಗೆ ಆಫರ್ ಮಾಡಿರುವ ಬಗ್ಗೆ ನನ್ನ ಬಳಿ ದಾಖಲೆಗಳಿವೆ. ಅದನ್ನು ಮುಖ್ಯಮಂತ್ರಿ ಅವರಿಗೆ ಕೊಡುತ್ತೇನೆ ಎಂದರು.

'ಶಾಸಕರ ವಿರುದ್ಧ ಮಾನನಷ್ಟ ಮೊಕದ್ದಮೆ'

ಹುಬ್ಬಳ್ಳಿ: 'ರಾಜ್ಯ ಸರ್ಕಾರ ಉರುಳಿಸಲು ಬಿಜೆಪಿ ನಾಯಕರು ಕಾಂಗ್ರೆಸ್ ಶಾಸಕರಿಗೆ ಆಮಿಷವೊಡ್ಡಿದ್ದಾರೆ ಎಂದು ಆರೋಪಿಸಿರುವ ಮಂಡ್ಯ ಶಾಸಕ ಪಿ.ರವಿಕುಮಾರ್ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಲಾಗುವುದು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಬಿಜೆಪಿಯ 66 ಶಾಸಕರಿದ್ದು, ಅದರಲ್ಲಿ ಇಬ್ಬರು ಪಕ್ಷದ್ರೋಹ ಎಸಗಿದ್ದಾರೆ. ಸರ್ಕಾರ ರಚನೆಗೆ ನಮಗೆ ಇನ್ನೂ 64 ಶಾಸಕರ ಅಗತ್ಯವಿದೆ. ಅವರ ಆರೋಪದ ಪ್ರಕಾರ ಶಾಸಕರಿಗೆ ₹6,600 ಕೋಟಿ ಕೊಡಬೇಕು. ಅಷ್ಟು ಹಣ ಎಲ್ಲಿಂದ ಬರುತ್ತದೆ? ಅವರ ಆರೋಪ ಬಾಲಿಶತನದ್ದು' ಎಂದರು.

ರಥದ ಕಳಶ ಬಿದ್ದು ಬಾಲಕ ಸಾವು

ಚಚಡಿ (ಬೆಳಗಾವಿ ಜಿಲ್ಲೆ): ಸವದತ್ತಿ ತಾಲ್ಲೂಕಿನ ಚಚಡಿ ಗ್ರಾಮದಲ್ಲಿ ಸೋಮವಾರ, ರಥೋತ್ಸವ ವೇಳೆ ರಥದ ಮೇಲಿನ ಬೆಳ್ಳಿಯ ನವಿಲು ಬಿದ್ದು ಶಿವಾನಂದ ರಾಜಕುಮಾರ ಸಾವಳಗಿ (13) ಎಂಬ ಬಾಲಕ ಮೃತಪಟ್ಟಿದ್ದಾನೆ.

ಪ್ರತಿ ವರ್ಷದ ವಾಡಿಕೆಯಂತೆ ಶ್ರಾವಣದ ಪ್ರಯುಕ್ತ ಸಂಗಮೇಶ್ವರ ರಥೋತ್ಸವಕ್ಕೆ ಸಿದ್ಧತೆಯಾಗಿತ್ತು. 30 ಅಡಿ ಎತ್ತರದ ರಥದ ಮೇಲಿನ ಕಳಸದ ಮೇಲೆ 5 ಕೆ.ಜಿ ತೂಕದ ಬೆಳ್ಳಿಯ ನವಿಲು ಪ್ರತಿಷ್ಠಾಪಿಸಲಾಗಿತ್ತು. ಸಾವಿರ ವರ್ಷಗಳ ಇತಿಹಾಸವುಳ್ಳ ಈ ಜಾತ್ರೆಯಲ್ಲಿ ಇದೇ ಮೊದಲ ಸಲ ಬೆಳ್ಳಿಯ ನವಿಲು ಪ್ರತಿಷ್ಠಾಪಿಸಲಾಗಿತ್ತು. ರಥೋತ್ಸವವನ್ನು ಅರ್ಧಕ್ಕೆ ನಿಲ್ಲಿಸಲಾಯಿತು ಎಂದು ಗ್ರಾಮದ ಮುಖಂಡರು ತಿಳಿಸಿದರು.

ಹಣ ಅಕ್ರಮ ವರ್ಗಾವಣೆ: ಇಬ್ಬರು ಸರ್ಕಾರಿ ನೌಕರರ ಬಂಧನ

ಶಿವಕುಮಾರ

ಉದಯ ಕುಮಾರ

ಬಾಗಲಕೋಟೆ: ಐಡಿಬಿಐ ಬ್ಯಾಂಕ್‌ನಲ್ಲಿ ಸರ್ಕಾರದ ವಿವಿಧ ಇಲಾಖೆಗಳ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಭಾಗಿಯಾದ ಆರೋಪದ ಮೇಲೆ ಇಬ್ಬರು ಸರ್ಕಾರಿ ನೌಕರರನ್ನು ಬಂಧಿಸಲಾಗಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರವಾಸೋದ್ಯಮ ಇಲಾಖೆಯ ಪ್ರಥಮ ದರ್ಜೆ ಸಹಾಯಕ ಶಿವಕುಮಾರ (ಈಗ ವಿಜಯಪುರ ಜಿಲ್ಲೆಯಲ್ಲಿ ಕಾರ್ಯನಿರ್ವಹಣೆ) ಮತ್ತು ಹಿಂದುಳಿದ ವರ್ಗಗಳ ಇಲಾಖೆಯ ದ್ವಿತೀಯ ದರ್ಜೆ ಸಹಾಯಕ ಉದಯಕುಮಾರ ಅವರನ್ನು ಬಂಧಿಸಿ, ವಿಚಾರಣೆ ನಡೆಸಲಾಗುತ್ತಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ ತಿಳಿಸಿದ್ದಾರೆ.

ಐಡಿಬಿಐ ಬ್ಯಾಂಕ್‌ನಲ್ಲಿ ಖಾತೆಗಳಲ್ಲಿದ್ದ ಪ್ರವಾಸೋದ್ಯಮ ಸೇರಿ ಐದು ಇಲಾಖೆಗಳಲ್ಲಿನ ₹6.08 ಕೋಟಿ ಮೊತ್ತವನ್ನು ಐಡಿಬಿಐ ಬ್ಯಾಂಕ್ ಅಧಿಕಾರಿಗಳು ಸ್ನೇಹಿತರ, ಸಂಬಂಧಿಗಳ ಖಾತೆಗೆ ವರ್ಗಾವಣೆ ಮಾಡಿಕೊಂಡಿದ್ದರು. ₹4.79 ಕೋಟಿ ಹಣವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಕರ್ನಾಟಕ ಸರ್ಕಾರ
ಉಪವಿಭಾಗಾಧಿಕಾರಿಯವರ ಕಾರ್ಯಾಲಯ, ಹಾಸನ ಉಪವಿಭಾಗ, ಹಾಸನ.
ದೂ.ಸಂಖ್ಯೆ: 08172-268403 E-mail hsn.sub@gmail.com
ನಂ. ಡಿವಿಎಸ್/18/24-25 ದಿನಾಂಕ 23-08-2024
ಟೆಂಡರ್ ಪ್ರಕಟಣೆ
2024 ನೇ ಸಾಲಿನ ಶ್ರೀ ಹಾಸನಾಂಬ ಮತ್ತು ಶ್ರೀ ಸಿದ್ದೇಶ್ವರ ಜಾತ್ರಾ ಮಹೋತ್ಸವಕ್ಕೆ ಮುದ್ರಣ ವಸ್ತುಗಳು ಮತ್ತು ಸಾಮಗ್ರಿಗಳನ್ನು ಸರಬರಾಜು ಮಾಡುವ ಅವಶ್ಯಕತೆ ಇದ್ದು, ಈ ಸಂಬಂಧ ದಿನಾಂಕ 13-08-2024 ರಂದು ಮಾನ್ಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ಪೂರ್ವ ಭಾವಿ ಸಭೆಯಲ್ಲಿ ತೀರ್ಮಾನಿಸಿದೆ. ಸದರಿ ಐಟಂಗಳಿಗೆ ಸಂಬಂಧಿಸಿದಂತೆ ಟೆಂಡರ್ ಪ್ರಕಟಣೆಯು ಈ ಕೆಳಕಂಡಂತೆ ಇರುತ್ತದೆ. ಕ್ರ.ಸಂ.1)ಐಟಂನ ವಿವರ: 2024-25ನೇ ಸಾಲಿನ ಶ್ರೀ ಹಾಸನಾಂಬ ಮತ್ತು ಶ್ರೀ ಸಿದ್ದೇಶ್ವರ ಜಾತ್ರಾ ಮಹೋತ್ಸವಕ್ಕೆ ಮುದ್ರಣ ವಸ್ತುಗಳು ಮತ್ತು ಸಾಮಗ್ರಿಗಳನ್ನು ಸರಬರಾಜು ಮಾಡುವುದು. ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)80.00 ಇ.ಎಂ.ಡಿ ಮೊತ್ತ (ರೂ.ಲಕ್ಷಗಳಲ್ಲಿ): 1.60 ಆಸಕ್ತ ಮತ್ತು ಅರ್ಹ ಟೆಂಡರ್‌ದಾರರು/ಬಿಡ್‌ದಾರರು ನಿಗದಿಪಡಿಸಿದ ಹಿಂದಿರುಗಿಸದೇ ಇರುವ ಟೆಂಡರ್ ಶುಲ್ಕವನ್ನು ಆನ್‌ಲೈನ್ ಮೂಲಕ ಜಮೆ ಮಾಡಿ, ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಪ್ರಕಟಣೆ ದಾಖಲಾತಿಯನ್ನು ಹಾಗೂ ಟೆಂಡರ್ ಸಲ್ಲಿಸುವ ದಿನಾಂಕವನ್ನು ಕರ್ನಾಟಕ ಸರ್ಕಾರದ ಇ-ಪೋರ್ಟಲ್ ಜಾಲತಾಣ https://kppp.karnataka.gov.in/ ರಲ್ಲಿ ಟೆಂಡರ್‌ದಾರರ ಲಾಗಿನ್‌ನಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/-ಜೆ.ಬಿ ಮಾರುತಿ ಕೆ.ಎ.ಎಸ್ ಉಪವಿಭಾಗಾಧಿಕಾರಿ, ಹಾಗೂ ಕಾರ್ಯನಿರ್ವಾಹಕಾಧಿಕಾರಿ, ಹಾಸನಾಂಬ ದೇವಸ್ಥಾನ, ಹಾಸನ ಉಪವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/349/ಕೆಎಸ್‌ಎಂಸಿಎ/2024-25

ಕರ್ನಾಟಕ ಸರ್ಕಾರ
ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ದೇವಗಿರಿ-ಯಲ್ಲಾಪುರ, ಹಾವೇರಿ-581110
Website : https://himshaveri.karnataka.gov.in
E-mail : himshvr@gmail.com
ಸಂ: ಹಿಮ್ಸ್/ಶುಶ್ರೂಷಕರು/10/2024-25, ದಿನಾಂಕ : 22/08/2024
ಟೆಂಡರ್ ಪ್ರಕಟಣೆ
ವಿಷಯ : 2024-25 ನೇ ಸಾಲಿಗಾಗಿ ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾವೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಶುಶ್ರೂಷಕ ಸಿಬ್ಬಂದಿಗಳನ್ನು ಒದಗಿಸುವ ಸಂಬಂಧ ಟೆಂಡರ್ ಕರೆಯುವ ಬಗ್ಗೆ.
ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾವೇರಿಯಲ್ಲಿ 2024-25 ನೇ ಸಾಲಿಗಾಗಿ ಶುಶ್ರೂಷಕ ಸಿಬ್ಬಂದಿಗಳನ್ನು ಕಾರ್ಯಾದೇಶ ನೀಡಿದ ದಿನಾಂಕದಿಂದ 31/03/2025 ರ ಅವಧಿಗೆ ಹೊರ ಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೋಕ್ಯೂರ್‌ಮೆಂಟ್ (https://kppp.karnataka.gov.in) Portal ಮೂಲಕ ಟೆಂಡರ ಕರೆಯಲಾಗಿದೆ. (1) ಟೆಂಡರ್ ಪ್ರಕಟಣೆ ದಿನಾಂಕ : 22/08/2024 (2) ಟೆಂಡರ್‌ನ ಒಟ್ಟು ಅಂದಾಜು ಮೌಲ್ಯ : ರೂ. 68 ಲಕ್ಷ (3) ಆನ್‌ಲೈನ್‌ನಲ್ಲಿ ಟೆಂಡರ್ ಅನ್ನು KPP Portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ : 05/09/2024 ಅಪರಾಹ್ನ 4:30 (4) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ : 06/09/2024 ಅಪರಾಹ್ನ 4:30 (5) ತಾಂತ್ರಿಕ ಲಕೋಟೆಯ ದಾಖಲೆಗಳ ಪರಿಶೀಲನೆ ತಿಳಿಸಲಾಗುವುದು (6) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ : ತಿಳಿಸಲಾಗುವುದು (7) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಶೇ 2.5% ರಷ್ಟು : ರೂ. 1,70,000.00/- (8) E-Procurement Portal Processing Fees : https://kppp.karnataka.gov.in Portal ನಲ್ಲಿ ನಿಗದಿಪಡಿಸಿರುವಂತೆ (9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ ರಜಾ ದಿನಗಳನ್ನು ಹೊರತುಪಡಿಸಿ : ಡೀನ್ ಮತ್ತು ನಿರ್ದೇಶಕರು, ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾವೇರಿ ದೂರವಾಣಿ ಸಂಖ್ಯೆ: 08375-200015,
ಸಹಿ/- ಡೀನ್ ಮತ್ತು ನಿರ್ದೇಶಕರು, ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾವೇರಿ
ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/244/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗೋವಿಂದರಾಜನಗರ ವಿಭಾಗ, 2ನೇ ಮಹಡಿ, ಶಕ್ತಿ ಸೌಧ, 13ನೇ ಅಡ್ಡರಸ್ತೆ, 4ನೇ ಬಿ ಮುಖ್ಯರಸ್ತೆ, ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು - 560040.
ಸಂಖ್ಯೆ: ಕಾಅ(ಜಿಆರ್‌ಎನ್)/ಟೆಂಡರ್/ಜಿಎಲ್-04/2024-25 ದಿನಾಂಕ: 26-08-2024
ದೀರ್ಘಾವಧಿ ಟೆಂಡರ್ ಅಧಿಸೂಚನೆ
(ಜಿಟಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗೆ ಬಿಬಿಎಂಪಿಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿತ ಗುತ್ತಿಗೆದಾರರಿಂದ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
	ದ್ವಿ-ಲಕೋಟೆ ಕಾಮಗಾರಿಗಳು
1	ಗೋವಿಂದರಾಜನಗರ ಮತಕ್ಷೇತ್ರದಲ್ಲಿ ಬಸ್ ನಿಲ್ದಾಣ ಉದ್ಯಾನವನ ಮತ್ತು ಆಟದ ಮೈದಾನದಲ್ಲಿ ಕುಡಿಯುವ ನೀರಿನ ಪಾಯಿಂಟ್‌ಗಳ ನಿರ್ಮಾಣ ಹಾಗೂ ರಸ್ತೆಗಳು, ಪಾದಚಾರಿ ಮಾರ್ಗ, ಚರಂಡಿಗಳ ಸುಧಾರಣೆಗಳು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 800.00, ಇ.ಎಂ.ಡಿ (ರೂ. ಲಕ್ಷಗಳಲ್ಲಿ): 8.00
2	ಗೋವಿಂದರಾಜನಗರ ಮತಕ್ಷೇತ್ರದಲ್ಲಿ ಮಳೆ ನೀರು ಕೊಯ್ಲು ಮತ್ತು ರೀಚಾರ್ಜ್ ಹೊಂಡಗಳ ನಿರ್ಮಾಣ ಹಾಗೂ ರಸ್ತೆಗಳು, ಪಾದಚಾರಿ ಮಾರ್ಗ, ಚರಂಡಿಗಳ ಸುಧಾರಣೆಗಳು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 800.00, ಇ.ಎಂ.ಡಿ (ರೂ. ಲಕ್ಷಗಳಲ್ಲಿ): 8.00
3	ಚಂದ್ರಾಲೇಔಟ್ ಉಪ ವಿಭಾಗದಲ್ಲಿ ಈಜುಕೊಳ ನಿರ್ಮಾಣ ಹಾಗೂ ಇತರೆ ಮೂಲಸೌಕರ್ಯ ಕಾಮಗಾರಿಗಳು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 800.00, ಇ.ಎಂ.ಡಿ (ರೂ. ಲಕ್ಷಗಳಲ್ಲಿ): 8.00

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಟಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: 02-09-2024 ರಂದು 16.30 ಗಂಟೆಗೆ. 3) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: 06-09-2024 ರಂದು 16.00 ಗಂಟೆವರೆಗೆ. 4) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: 09-09-2024 ರಂದು 16.30 ಗಂಟೆಯ ನಂತರ. 5) ಆರ್ಥಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: ತಾಂತ್ರಿಕ ಪ್ರಸ್ತಾವನೆಗಳ ಅನುಮೋದನೆಯ ನಂತರ ಕೆಪಿಪಿ ಪೋರ್ಟಲ್ ಮೂಲಕ). ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು ಗೋವಿಂದರಾಜನಗರ ವಿಭಾಗ, ಬಿಬಿಎಂಪಿ.

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ವಿಜಯನಗರ
E-mail:dhovijayanagara21@gmail.com. Telephone: 08394-227040
ಸಂಖ್ಯೆ:ಜಿಆಕುಕ/ಟೆಂಡರ್ ಪ್ರಕಟಣೆ/ವೈ.ಯು/01/2023-24 ದಿನಾಂಕ: 23-08-2024
ಟೆಂಡರ್ ಪ್ರಕಟಣೆ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ವಿಜಯನಗರ ಇದರ ಅಧಿನದ 05 ಸಾರ್ವಜನಿಕ ಆಸ್ಪತ್ರೆಗಳಿಗೆ ಹಾಗೂ 01 ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಹೊಸಪೇಟೆ ಕೇಂದ್ರಗಳಿಗೆ 2023-24 ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಅನುದಾನದಡಿಯಲ್ಲಿ ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಲು e-procurement (https://kppp.karnataka.gov.in) ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಅರ್ಜಿದಾರರು / ಸಂಸ್ಥೆದಾರರು ದಿನಾಂಕ:23-08-2024 ರಿಂದ ದಿನಾಂಕ:03-09-2024 ರ ಸಮಯ ಸಾಯಂಕಾಲ 05:00 ವರೆಗೆ ಅರ್ಜಿಗಳನ್ನು ಅಪ್‌ಲೋಡ್ ಮಾಡಬಹುದಾಗಿದೆ. (ಟೆಂಡರ್ ಮೊತ್ತ ರೂ.200.54 ಲಕ್ಷ) (INDENT NUMBER: DHFWS/2024-25/IND0909)
ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 08394-227040 ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ಮುದ್ದಾಂ ಪಡೆಯಬಹುದಾಗಿದೆ.
ಸಹಿ/-ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ವಿಜಯನಗರ
ವಾ.ಸಾ.ಸಂ.ಇ/ವಿಜಯನಗರ/2024-25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/216

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆ)
ಬನ್ನೇರುಘಟ್ಟ ರಸ್ತೆ, ಬೆಂಗಳೂರು - 560 069.
ದೂರವಾಣಿ: +91-80-22977666/276/433/216/217 ಟೆಲಿ-ಫ್ಯಾಕ್ಸ್:080-26534477
ಇ-ಮೇಲ್: director.sjicr@gmail.com
ಇ-ಟೆಂಡರ್ ಪ್ರಕಟಣೆ
ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ದ್ವಿ-ಲಕೋಟೆ ಪದ್ಧತಿಯನ್ವಯ ಈ ಕೆಳಕಂಡ ಸೇವೆಗಳನ್ನು ಒದಗಿಸಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	ವಿವರಗಳು
1	ಎಸ್‌ಜೆಐಸಿಆರ್/2024-25/ಎಸ್‌ಇ 0009, ದಿನಾಂಕ: 26-08-2024	ಬೆಂಗಳೂರಿನ ಬನ್ನೇರಘಟ್ಟ ರಸ್ತೆಯಲ್ಲಿರುವ ಎಸ್‌ಜೆಐಸಿಆರ್‌ನಲ್ಲಿ ವಾಹನ ನಿಲ್ದಾಣದ ನಿರ್ವಹಣೆ.
2	ಎಸ್‌ಜೆಐಸಿಆರ್/2024-25/ಎಸ್‌ಇ 0010, ದಿನಾಂಕ: 26-08-2024	ಮೈಸೂರಿನ ಕೆ.ಆರ್.ಎಸ್. ರಸ್ತೆಯಲ್ಲಿರುವ ಎಸ್‌ಜೆಐಸಿಆರ್‌ನಲ್ಲಿ ವಾಹನ ನಿಲ್ದಾಣದ ನಿರ್ವಹಣೆ.

ಟೆಂಡರ್‌ದಾರರು ಟೆಂಡರ್ ದಸ್ತಾವೇಜುಗಳನ್ನು https://kppp.karnataka.gov.in ವೆಬ್‌ಸೈಟ್‌ನಿಂದ ದಿನಾಂಕ: 27.08.2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ : 05.09.2024 ರ ಸಂಜೆ 4.00 ಗಂಟೆಯವರೆಗೆ.
1. ಪ್ರಿ-ಬಿಡ್ ಮೀಟಿಂಗ್ ದಿನಾಂಕ : 02.09.2024 ರ ಬೆಳಿಗ್ಗೆ 11:30 ಗಂಟೆಗೆ.
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 06.09.2024 ರ ಸಂಜೆ 4:00 ಗಂಟೆಗೆ.
3. ಇ.ಎಂ.ಡಿ. : ಟೆಂಡರ್ ದಸ್ತಾವೇಜಿನಲ್ಲಿ ಉಲ್ಲೇಖಿಸಿರುವಂತೆ.
4. ಹೆಚ್ಚಿನ ವಿವರಗಳಿಗಾಗಿ ನಮ್ಮ ವೆಬ್‌ಸೈಟ್: www.jayadevacardiology.com ನ್ನು ನೋಡಬಹುದು.
5. ಟೆಂಡರನ್ನು ಯಾವುದೇ ಕಾರಣ ನೀಡದೆ ಭಾಗಶಃ / ಪೂರ್ಣವಾಗಿ ಒಪ್ಪಿಕೊಳ್ಳುವ/ ತಿರಸ್ಕರಿಸುವ/ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಕಾಯ್ದಿರಿಸಿದೆ.
ಸಹಿ/- ಮುಖ್ಯ ಆಡಳಿತಾಧಿಕಾರಿಗಳು.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ
1ನೇ ಮಹಡಿ, ಬೆಳ್ಳಿಮಹೋತ್ಸವ ಕಟ್ಟಡ, ಪಾವಟೆನಗರ, ಧಾರವಾಡ-580003 ಕರ್ನಾಟಕ-ಭಾರತ
Mo.No: (0836) 2215311 www.kud.ac.in pmeb@kud.ac.in
Ref. No. : KU/PMEB/2024-25/90 Date: 22/08/2024
ಇ-ಟೆಂಡರ್ ಪ್ರಕಟಣೆ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಮಹಾಯೋಗಿ ವೇಮನ ಪೀಠಕ್ಕೆ ಪೀಠೋಪಕರಣ ಖರೀದಿಸುವ ಕುರಿತು (ಮಹಾಯೋಗಿ ವೇಮನ ಪೀಠದ ಖಾತೆ ಅಡಿಯಲ್ಲಿ ಸನ್ 2024-25 ರಲ್ಲಿ ಭರಿಸುವುದು)
ಮಹಾಯೋಗಿ ವೇಮನ ಪೀಠಕ್ಕೆ ವಿವಿಧ ಪೀಠೋಪಕರಣಗಳನ್ನು ಪೂರೈಸಿ ಅಳವಡಿಸಲು 15 ದಿನಗಳ ಟೆಂಡರನ್ನು ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-03 ಇವರಿಂದ ಆಹ್ವಾನಿಸಲಾಗಿದೆ. ಟೆಂಡರಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ 09-09-2024 ಹೆಚ್ಚಿನ ವಿವರಗಳಿಗಾಗಿ ಅಂತರ್ಜಾಲ https://eproc.karnataka.gov.in. ನ್ನು ನೋಡುವುದು.
ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ವೇಳಾಪಟ್ಟಿಯು ಈ ಕೆಳಗಿನಂತಿರುತ್ತದೆ.

1.	ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಹಾಗೂ ವೇಳೆ	09-09-2024, 5:00 PM
2.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಹಾಗೂ ವೇಳೆ	11-09-2024, 11:30 AM
3.	ಆರ್ಥಿಕ ಬಿಡ್ ತೆರೆಯುವ ದಿನಾಂಕ ಹಾಗೂ ವೇಳೆ	13-09-2024, 11:30 AM

ಸಹಿ/- ಕುಲಸಚಿವರು ಕವಿವಿ ಧಾರವಾಡ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು
ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)
ಐ.ಎಫ್.ಟಿ ಸಂಖ್ಯೆ 04/2024-25 ದಿನಾಂಕ: 23.08.2024
ಟೆಂಡರ್ ಅಧಿಸೂಚನೆ
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಹುಣಸೂರು ಲೋಕೋಪಯೋಗಿ ವಿಶೇಷ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೋಕೋಪಯೋಗಿ ಇಲಾಖೆಯಲ್ಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ನೊಂದಾಯಿತ 4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" ನಲ್ಲಿನ ಷರತ್ತುಗಳಿಗನುಗುಣವಾಗಿ ವಿವಿಧ ಲೆಕ್ಕಶೀರ್ಷಿಕೆ ಅಡಿಯಲ್ಲಿ ಒಟ್ಟು 7 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಅಧಿಸೂಚನೆಯಂತೆ ಕ್ರ.ಸಂ 1-2 ದಿ: 23.08.2024 ಮತ್ತು ಕ್ರ.ಸಂ 3-7 ದಿ: 26.08.2024 ರಿಂದ ಟೆಂಡರು ದಾಖಲಾತಿಗಳನ್ನು https://kppp.karnataka.gov.in ವೆಬ್ ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರಿಗಿಟ್ಟ ಮೊತ್ತ ಗರಿಷ್ಠ 487.13 ಲಕ್ಷಗಳು ಮತ್ತು ಕನಿಷ್ಠ 21.00 ಲಕ್ಷಗಳು, ಗರಿಷ್ಠ ಇ.ಎಂ.ಡಿ ರೂ.7,30,800/-ಮತ್ತು ಕನಿಷ್ಠ ರೂ.50,000/-ಗುತ್ತಿಗೆ ಕಾಲಾವಧಿ ಗರಿಷ್ಠ 12-ತಿಂಗಳು ಮತ್ತು ಕನಿಷ್ಠ 6-ತಿಂಗಳು ಆಗಿರುತ್ತದೆ. ಹಾಗೂ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಲ್ಲಿಸಲು ಕ್ರ.ಸಂ 1-2 ದಿ: 31.08.2024 ಮತ್ತು ಕ್ರ.ಸಂ 3-7 ದಿ: 02.09.2024 ಎಂದು ನಿಗಧಿಪಡಿಸಲಾಗಿದೆ. ಹಾಗೂ ಟೆಂಡರು ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್
DIPR/DDMYS-467/KSMCA-314/2024-25

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ: ಬೆಂಗಳೂರು
ಸಂ: ಕರಾಸಾ/ವಿನಿ/ಕೆಂಬನಿ/ವಾ/518/2024-25 ದಿನಾಂಕ: 24.08.2024
ಇ-ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ: 01/2024-25
ಕೆಂಪೇಗೌಡ ಬಸ್ ನಿಲ್ದಾಣದ ಟರ್ಮಿನಲ್ 1, 2, 2ಎ ಮತ್ತು ಟರ್ಮಿನಲ್-3 ರಲ್ಲಿ ಖಾಲಿ ಇರುವ/ಖಾಲಿಯಾಗಲಿರುವ ಮಳಿಗೆ ಸಂಖ್ಯೆ 46, 58, 59, 124, 01, ದ್ವಿಚಕ್ರ ವಾಹನ ನಿಲುಗಡೆ (ಟರ್ಮಿನಲ್-2), ಕಾರು & ದ್ವಿಚಕ್ರ ವಾಹನ ನಿಲುಗಡೆ (ಟರ್ಮಿನಲ್-3 ರ ಮುಖ್ಯದ್ವಾರದ ಎಡಭಾಗ & ಬಲಭಾಗದಲ್ಲಿರುವ ಖಾಲಿ ಜಾಗ & ಇಂದಿರಾ ಕ್ಯಾಂಟೀನ್‌ನ ಹಿಂಭಾಗ ಹಾಗೂ ಪಕ್ಕದಲ್ಲಿರುವ ಖಾಲಿ ಜಾಗ) ಮತ್ತು ಮೈಸೂರು ರಸ್ತೆ ಬಸ್ ನಿಲ್ದಾಣದ ಮಳಿಗೆ ಸಂಖ್ಯೆ 18, 21, 30ಕ್ಕೆ ಹಾಗೂ ಶ್ರೀ ಬಸವೇಶ್ವರ ಬಸ್ ನಿಲ್ದಾಣದ (ಪೀಣ್ಯ) ಕೆಳಮಹಡಿ, ನೆಲಮಹಡಿ, ಮೊದಲನೇ, ಎರಡನೇ ಮಹಡಿ ಮತ್ತು ಒಟ್ಟಾರೆ ಬಸ್ ನಿಲ್ದಾಣದ ವಾಣಿಜ್ಯ ಸ್ಥಳಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಕೆಪಿಪಿ ಪೋರ್ಟಲ್ ಮೂಲಕ ಹಾಗೂ ಕೆಂಪೇಗೌಡ ಬಸ್ ನಿಲ್ದಾಣದಲ್ಲಿರುವ ಸಾಮಾನ್ಯ ಮಳಿಗೆ ಸಂಖ್ಯೆ 48 ಮತ್ತು ಮೈಸೂರು ರಸ್ತೆ ಬಸ್ ನಿಲ್ದಾಣದಲ್ಲಿರುವ ಮಳಿಗೆ ಸಂಖ್ಯೆ 06, 09, 15 ಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನದ (ಮಾತುಕತೆ) ಮೂಲಕ ದಿನಾಂಕ: 27.08.2024 ರಿಂದ 18.09.2024 ರವರೆಗೆ ಟೆಂಡರ್/ಸಂಧಾನದ ಮೂಲಕ ಆಸಕ್ತಿದಾರರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ-ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಕ.ರಾ.ರ.ಸಾ.ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು-560009, ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ 7760870222, 7760990557 ಮತ್ತು ಕೆಪಿಪಿ ಪೋರ್ಟಲ್ ಸಹಾಯವಾಣಿ ಸಂಖ್ಯೆ +91-8046010000/+91-8068948777.
ಸಹಿ/- ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ, ಕೆಂ.ಬ.ನಿ ವಿಭಾಗ, ಬೆಂಗಳೂರು
ವಾಸಾಸಂಇ/ವಾಪ್ರ/1667/ಎಎಎ/2024-25

ತುಮಕೂರು ಮಹಾನಗರ ಪಾಲಿಕೆ, ತುಮಕೂರು
ದೂ-2278480, ಫ್ಯಾಕ್ಸ್: 2275106, ಇ-ಮೇಲ್: itstaff_ulb_tumkur@yahoo.com ವೆಬ್‌ಸೈಟ್:www.tumkur city. mrc. gov.in
ಸಂ:ತುಮಪಾ/ತಾಂಶಾ/ಸಿವಿಲ್ ಶಾಖೆ/ಸಿಆರ್/05/2024-25 ದಿನಾಂಕ: 23.08.2024
ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ತುಮಕೂರು ಮಹಾನಗರ ಪಾಲಿಕೆಗೆ 2024-25ನೇ ಸಾಲಿನ 15ನೇ ಹಣಕಾಸು ಹಾಗೂ 2021-22ನೇ ಸಾಲಿನ Non Million Plus Cities (NMPCs) ಅನುದಾನದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಸ್ಟ್ಯಾಂಡರ್ ಟೆಂಡರ್ ಡಾಕ್ಯುಮೆಂಟ್‌ನ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗೆ ಈ ಕಛೇರಿಯ www.tumkurcity.mrc.gov.in ವೆಬ್‌ಸೈಟ್‌ನಲ್ಲಿ ನೋಡಬಹುದು.
ಇ-ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.
1. ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ :27-08-2024 ರಿಂದ ದಿನಾಂಕ:10-09-2024 ರವರೆಗೆ. 2. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:10-09-2024 ರಂದು ಸಾಯಂಕಾಲ 4.30 ಗಂಟೆವರೆಗೆ. 3. ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯುವ ದಿನಾಂಕ: 11-09-2024ರ ಸಾಯಂಕಾಲ 4.35 ಗಂಟೆ ನಂತರ
ಸಹಿ/- ಕಾರ್ಯಪಾಲಕ ಅಭಿಯಂತರರು ತುಮಕೂರು ಮಹಾನಗರ ಪಾಲಿಕೆ, ತುಮಕೂರು
DIPR/TUM/279/KSMCA/2024-25

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ವಾಗ್ದಾಳಿ

‘ಟಾರ್ಚ್ ಬಿಟ್ಟು ನೋಡುವ ಪರಿಸ್ಥಿತಿ ಬೇಕಿತ್ತಾ?’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಸಿದ್ದರಾಮಯ್ಯನವರು ಸುಳ್ಳು ದಾಖಲೆ ಸೃಷ್ಟಿಸಿ ಸರ್ಕಾರಿ ಜಾಗವನ್ನು ಲಪಟಾಯಿಸಿದ್ದಾರೆ. ₹67 ಕೋಟಿಯನ್ನು ಲೂಟಿ ಮಾಡಿದ್ದಾರೆ. ಮುಖ್ಯಮಂತ್ರಿಗೆ ತಪ್ಪಿನ ಅರಿವಿಲ್ಲ. ಆ ಜಾಗ ಯಾರದ್ದು ಎಂಬುದನ್ನು ಮೊದಲು ಹೇಳಲಿ. ದಾಖಲೆಗಳನ್ನು ವೈಟ್ನರ್ ಹಾಕಿ ಅಳಿಸಿ, ಈಗ ಟಾರ್ಚ್ ಬಿಟ್ಟು ನೋಡುವ ಪರಿಸ್ಥಿತಿ ಬೇಕಿತ್ತಾ?’ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್‌.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಇಲ್ಲಿ ಮಾಧ್ಯಮದವರೊಂದಿಗೆ ಸೋಮವಾರ ಮಾತನಾಡಿದ ಅವರು, ‘ದಾಖಲೆಗಳನ್ನು ಕಾರಲ್ಲಿ ಏಕೆ ಇಟ್ಟುಕೊಂಡಿದ್ದೀರಿ, ಜನರ ಮುಂದೆ ಇಡಿ’ ಎಂದು ಸವಾಲು ಹಾಕಿದರು.

‘ನನ್ನ ಮೇಲೆ ಸಿದ್ದರಾಮಯ್ಯನವರು ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ. ಪೊಲೀಸ್ ಇಲಾಖೆ ಬಿಟ್ಟು ಏನೇನು ನಡೆಸುತ್ತಿದ್ದಾರೆ ಎಂಬುದು ಗೊತ್ತಿದೆ. ನಾನು ಜೈಲಿಗೆ ಹೋಗುವಂಥದ್ದು ಏನೂ ಮಾಡಿಲ್ಲ. ಅವರು ನೂರು ಜನ್ಮ ಎತ್ತಿ ಬಂದರೂ ನನ್ನನ್ನು ಏನೂ ಮಾಡಲು ಆಗುವುದಿಲ್ಲ’ ಎಂದು ಗುಡುಗಿದರು. ‘ಸಾಯಿ ವೆಂಕಟೇಶ್ವರ ಪ್ರಕರಣ ಸತ್ತು ಹೋಗಿದೆ’ ಎಂದು ಹೇಳಿದರು.

ಸರ್ಕಾರ ಬೀಳಿಸಲು ಎಚ್‌ಡಿಕೆ ಷಡ್ಯಂತ್ರ ಮಾಡುತ್ತಿದ್ದಾರೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿ, ‘ಸರ್ಕಾರ ತೆಗೆಯಲು ಒಟ್ಟು ₹5 ಸಾವಿರ ಕೋಟಿ ಎಂದರೆ ಯಾರಾದರೂ ನಂಬುತ್ತಾರಾ? ಕುಮಾರಸ್ವಾಮಿ ಭಜನೆ ಮಾಡದೆ ಸುಮ್ಮನಿರಲು ಅವರಿಗೆ ಸಾಧ್ಯವಿಲ್ಲ. ಸರ್ಕಾರ ಬೀಳುತ್ತದೆ ಎಂದು ಅವರೇ ಹೇಳುತ್ತಿದ್ದಾರೆ’ ಎಂದು ಕಾಂಗ್ರೆಸ್ ನಾಯಕರಿಗೆ ತಿರುಗೇಟು ನೀಡಿದರು.

ಚನ್ನಪಟ್ಟಣಕ್ಕೆ ಎನ್‌ಡಿಎ ಅಭ್ಯರ್ಥಿ: ‘ಚನ್ನಪಟ್ಟಣ ಅಭ್ಯರ್ಥಿ ಬಗ್ಗೆ ಹೈಕಮಾಂಡ್ ತೀರ್ಮಾನಿಸಲಿದೆ. ಚುನಾವಣೆ ಗೆಲ್ಲಲು ಬೇಕಾದ ತೀರ್ಮಾನವನ್ನು ನಾನು ಮಾಡುತ್ತೇನೆ. ಜೆಡಿಎಸ್‌ನಲ್ಲೂ ಸಮರ್ಥ ಕಾರ್ಯಕರ್ತರಿದ್ದಾರೆ. ಸಿ.ಪಿ.ಯೋಗೇಶ್ವರ್ ಜೆಡಿಎಸ್‌ಗೆ ಬರೋ ಬಗ್ಗೆ ನನ್ನ ಬಳಿ ಚರ್ಚೆ ನಡೆದಿಲ್ಲ. ನಿಖಿಲ್ ಹೆಸರು ಯಾಕೆ ತರ್ತೀರಾ? ನಿಖಿಲ್‌ಗೆ ರಾಜಕೀಯ ಭವಿಷ್ಯ ಇದೆ. ಆತುರ ಯಾಕೆ? ಒಟ್ಟಿನಲ್ಲಿ ಚನ್ನಪಟ್ಟಣದಲ್ಲಿ ಎನ್‌ಡಿಎ ಅಭ್ಯರ್ಥಿ ಕಣದಲ್ಲಿರುತ್ತಾರೆ’ ಎಂದರು.

‘ವೈಟ್ನರ್’ ಹಿಂದಿರುವ ಅಕ್ಷರಗಳಿಗೆ ವಿಡಿಯೊ ನೋಡಿ– ಸಿಎಂ

ಬೆಂಗಳೂರು: ‘ಮುಡಾ ಅಕ್ರಮವಾಗಿ ಸ್ವಾಧೀನಪಡಿಸಿಕೊಂಡ ನಮ್ಮ ಕುಟುಂಬದ ಜಮೀನಿಗೆ ಬದಲಿ ಭೂಮಿ ನೀಡುವಂತೆ ನನ್ನ ಪತ್ನಿ ಸಲ್ಲಿಸಿದ್ದ ಅರ್ಜಿಯಲ್ಲಿ ನಾಲ್ಕೈದು ಪದಗಳಿಗೆ ವೈಟ್ನರ್ ಹಾಕಿದ್ದನ್ನೇ ದೊಡ್ಡ ಅಪರಾಧ ಎಂಬಂತೆ ಬಿಂಬಿಸಲಾಗಿದೆ. ವೈಟ್ನರ್ ಹಿಂದಿರುವ ಅಕ್ಷರಗಳು ಯಾವವು ಎಂಬುದು ಈ ವಿಡಿಯೊ ತುಣುಕಿನಲ್ಲಿದೆ’ ಎಂದು ಬಿಜೆಪಿ – ಜೆಡಿಎಸ್ ನಾಯಕರನ್ನು ಉದ್ದೇಶಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಅಲ್ಲದೆ, ತಮ್ಮ ‘ಎಕ್ಸ್’ ಖಾತೆಯಲ್ಲಿ ವಿಡಿಯೊ ಬಿಡುಗಡೆ ಮಾಡಿರುವ ಅವರು, ‘ನಿಮ್ಮ ದ್ವೇಷದ ಕನ್ನಡಕ ಕಳಚಿಟ್ಟು ಸರಿಯಾಗಿ ಕಣ್ಣು ಬಿಟ್ಟು ನೋಡಿ’ ಎಂದು ಕೆಣಕಿದ್ದಾರೆ.

‘ತಮ್ಮ ರಾಜಕೀಯ ಜೀವನದಲ್ಲಿ ಒಂದೇ ಒಂದು ಕಪ್ಪುಚುಕ್ಕೆ ಇಲ್ಲ ಎನ್ನುತ್ತಿರುವ ಸಿದ್ದರಾಮಯ್ಯ, ಮುಡಾಕ್ಕೆ ಸಲ್ಲಿಸಿದ್ದ ಅರ್ಜಿಯಲ್ಲಿ ವೈಟ್ನರ್ ಹಾಕಿ, ಕಪ್ಪುಚುಕ್ಕೆ ತೆಗೆಯುವ ವ್ಯರ್ಥ ಪ್ರಯತ್ನ ಮಾಡಿದ್ದೇಕೆ’ ಎಂದು ಇತ್ತೀಚೆಗೆ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಪ್ರಶ್ನಿಸಿದ್ದರು.

ಅದಕ್ಕೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ, ‘ನನ್ನ ಪತ್ನಿ ಬದಲಿ ಭೂಮಿ ಕೇಳಿದ್ದು ತನ್ನದೇ ಜಮೀನನ್ನು ಮುಡಾ ವಶಕ್ಕೆ ಪಡೆದು ಅಭಿವೃದ್ಧಿಪಡಿಸಲಾದ ದೇವನೂರು 3ನೇ ಹಂತದ ಬಡಾವಣೆಯಲ್ಲಿ ಅಥವಾ ನಂತರ ಅಭಿವೃದ್ಧಿಪಡಿಸಿದ ಸಮಾನಾಂತರ ಬಡಾವಣೆಯಲ್ಲಿ. ಅಲ್ಲಿ ನಿವೇಶನಗಳು ಲಭ್ಯ ಇರದ ಕಾರಣ, ‘ದೇವನೂರು 3ನೇ ಹಂತದ ಬಡಾವಣೆಯಲ್ಲಿ ಅಥವಾ ನಂತರ’ ಎಂಬ ನಾಲ್ಕೈದು ಪದಗಳಿಗೆ ವೈಟ್ನರ್ ಹಾಕಿ, ಪ್ರಾಧಿಕಾರ ಅಭಿವೃದ್ಧಿಪಡಿಸಿದ ಸಮಾನಾಂತರ ಬಡಾವಣೆಯಲ್ಲಿ ನಿವೇಶನ ನೀಡಬೇಕೆಂಬ ಮನವಿ ಮಾಡಿದ್ದಾರೆ. ಇದರಲ್ಲಿ ಟಿಪ್ಪಣಿಯೂ ಇಲ್ಲ, ಆದೇಶವೂ ಇಲ್ಲ, ಅಪ್ಪಣೆಯೂ ಇಲ್ಲ. ತನಗೆ ಸೇರಿದ ಭೂಮಿಯಲ್ಲೇ ನಿವೇಶನ ಕೊಡಿ ಎಂಬ ಮನವಿ ಅಷ್ಟೆ’ ಎಂದಿದ್ದಾರೆ.

‘ವೈಟ್ನರ್ ಹಚ್ಚಿ ಕಪ್ಪು ಚುಕ್ಕೆ ಅಳಿಸಿಕೊಳ್ಳಲು ಸಾಧ್ಯವಿಲ್ಲ. ಮುಖ್ಯಮಂತ್ರಿ ಪತ್ನಿ ನಿವೇಶನ ಕೇಳಿದ್ದು ವಿಜಯನಗರದಲ್ಲಿ. ಮುಡಾ ವಿಚಾರ ಚರ್ಚೆಗೆ ಬಂದ ಬಳಿಕ ಸಿದ್ದರಾಮಯ್ಯ ಪರವಾಗಿ ಯಾರೊ ಹೋಗಿ ವೈಟ್ನರ್ ಹಚ್ಚಿ ಬಂದಿದ್ದಾರೆ’ ಎಂದು ಬೊಬ್ಬೆ ಹಾಕುತ್ತಿದ್ದ ಸ್ವಯಂಘೋಷಿತ ಕಾನೂನು ಪಂಡಿತರು ಈಗೇನು ಹೇಳುತ್ತಾರೆ? ಆತುರದಲ್ಲಿ ಮೂಗು ಕತ್ತರಿಸಿಕೊಂಡು, ರಾತ್ರಿಯೆಲ್ಲ ಕನ್ನಡಿ ಮುಂದೆ ನಿಂತು ಕಣ್ಣೀರು ಹಾಕಿದ್ದರಂತೆ. ಹಾಗಾಯಿತು ಕೆಲವು ಅತಿ ಬುದ್ಧಿವಂತರ ಕತೆ’ ಎಂದೂ ಕುಟುಕಿದ್ದಾರೆ

‘ಕಪೋಲ ಕಲ್ಪಿತ ಕಟ್ಟುಕತೆಗಳ ಮೂಲಕ ನನ್ನನ್ನು ಮತ್ತು ನನ್ನ ಕುಟುಂಬವನ್ನು ವಿನಾ ಕಾರಣ ಅಪರಾಧಿಗಳಂತೆ ಬಿಂಬಿಸಿ ಬಾಯಿಗೆ ಬಂದಂತೆ ಮಾತನಾಡಿರುವ ಬಿಜೆಪಿ – ಜೆಡಿಎಸ್‌ನ ವಿವೇಕ ಶೂನ್ಯ ನಾಯಕರು ಜನರೆದುರು ಬೆತ್ತಲಾಗಿದ್ದಾರೆ’ ಎಂದಿದ್ದಾರೆ.

29ರಂದು ದಸಂಸ ಪ್ರತಿಭಟನೆ

ವಿಜಯಪುರ: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬೆಂಬಲಿಸಿ ಮತ್ತು ರಾಜ್ಯ ಸರ್ಕಾರ ಅಸ್ಥಿರಗೊಳಿಸಲು ಯತ್ನಿಸಿರುವ ಬಿಜೆಪಿ, ಜೆಡಿಎಸ್ ಷಡ್ಯಂತ್ರ ಖಂಡಿಸಿ ಆಗಸ್ಟ್ 29ರಂದು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ದಲಿತ ಸಂಘರ್ಷ ಸಮಿತಿ (ದಸಂಸ) ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು’ ಎಂದು ಸಮಿತಿಯ ರಾಜ್ಯ ಘಟಕದ ಸಂಚಾಲಕ ಡಿ.ಜಿ. ಸಾಗರ್ ಹೇಳಿದರು.

‘ಸಿದ್ದರಾಮಯ್ಯ ಅವರ ವಿರುದ್ಧ ತನಿಖೆಗೆ ಅವಕಾಶ ನೀಡುವ ಮೂಲಕ ಸಂವಿಧಾನ ಬಾಹಿರವಾಗಿ ನಡೆದುಕೊಂಡಿರುವ ರಾಜ್ಯಪಾಲರನ್ನು ವಾಪಸ್ ಕರೆಸಿಕೊಳ್ಳಲು ಒತ್ತಾಯಿಸಲಾಗುವುದು. ಸುಳ್ಳು ಆರೋಪಗಳನ್ನು ಮಾಡಿ, ಬಿಜೆಪಿ ಮತ್ತು ಜೆಡಿಎಸ್ ಮುಖಂಡರು ರಾಜ್ಯದಲ್ಲಿ ರಾಜಕೀಯ ಅಸ್ಥಿರತೆ ಉಂಟು ಮಾಡುವ ಹುನ್ನಾರ ನಡೆಸಿದ್ದಾರೆ.’ ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

ಸುದ್ದಿ 2 ನಿಮಿಷ

‘ಸೆ. 15ಕ್ಕೆ ಬೃಹತ್ ಮಾನವ ಸರಪಳಿ’

ಬೆಂಗಳೂರು: ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವಾದ ಸೆ. 15ರಂದು ಬೀದರ್‌ನಿಂದ ಚಾಮರಾಜನಗರದವರೆಗೆ ಬೃಹತ್ ಮಾನವ ಸರಪಳಿ ನಿರ್ಮಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

‘ಬೆಳಿಗ್ಗೆ 8.30ಕ್ಕೆ ಆರಂಭವಾಗಲಿರುವ ಈ ಕಾರ್ಯಕ್ರಮದಲ್ಲಿ ಸುಮಾರು 40 ಲಕ್ಷ ಜನರು ಭಾಗವಹಿಸುವ ನಿರೀಕ್ಷೆ ಇದೆ. ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಮಾನವ ಸರಪಳಿಯ ಜವಾಬ್ದಾರಿ ವಹಿಸಲಿದ್ದಾರೆ’ ಎಂದು ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ತಿಳಿಸಿದರು.

‘ಮಾನವ ಸರಪಳಿ ನಿರ್ಮಿಸುವ ಮೂಲಕ ಪ್ರಜಾಪ್ರಭುತ್ವದ ಮೌಲ್ಯಗಳನ್ನು ದಾರಿಯುದ್ದಕ್ಕೂ ಪಸರಿಸುವ ಉದ್ದೇಶ ಹೊಂದಲಾಗಿದೆ’ ಎಂದರು.

‘ಭಾರತದ ಮುಂದಿನ ಪೀಳಿಗೆಯು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಅನುಗುಣವಾಗಿ ಶಕ್ತವಾಗಬೇಕಿದೆ. ಈ ಕಾರಣಕ್ಕೆ ಪ್ರಜಾಪ್ರಭುತ್ವದ ಮೌಲ್ಯಗಳ ಕುರಿತ ಅರಿವು ಮೂಡಿಸಬೇಕಿದೆ. ಈ ಹಿನ್ನೆಲೆಯಲ್ಲಿ, ಮಾನವ ಸರಪಳಿ ರಚಿಸುವ ಮೂಲಕ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ವಿಭಿನ್ನವಾಗಿ ಆಚರಿಸಲು ನಿರ್ಧರಿಸಲಾಗಿದೆ’ ಎಂದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ–3 25,347 ವಿದ್ಯಾರ್ಥಿಗಳು ತೇರ್ಗಡೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ–3 ಫಲಿತಾಂಶ ಸೋಮವಾರ ಪ್ರಕಟವಾಗಿದ್ದು, 25,347 ವಿದ್ಯಾರ್ಥಿಗಳು (ಶೇ25.88) ಉತ್ತೀರ್ಣರಾಗಿದ್ದಾರೆ.

ಆ.2ರಿಂದ 9ರವರೆಗೆ 410 ಕೇಂದ್ರಗಳಲ್ಲಿ ನಡೆದಿದ್ದ ಪರೀಕ್ಷೆಯನ್ನು 97,952 ವಿದ್ಯಾರ್ಥಿಗಳು ಬರೆದಿದ್ದರು. ಪರೀಕ್ಷೆಗೆ ಹಾಜರಾಗಿದ್ದ 30,223 ಬಾಲಕಿಯರಲ್ಲಿ 8,583 ಮಂದಿ (ಶೇ28.4) ಉತ್ತೀರ್ಣರಾಗಿದ್ದಾರೆ. ಶೇ 24.75ರಷ್ಟು ಬಾಲಕರು ತೇರ್ಗಡೆಯಾಗಿದ್ದಾರೆ.

ಖಾಸಗಿ ಶಾಲೆಗಳು ಶೇ 30.66, ಅನುದಾನಿತ ಶೇ 25.19 ಹಾಗೂ ಸರ್ಕಾರಿ ಶಾಲೆಗಳು ಶೇ 24.3ರಷ್ಟು ಫಲಿತಾಂಶ ಪಡೆದಿವೆ. ಮೂರನೇ ಪರೀಕ್ಷೆಯಲ್ಲೂ ಗ್ರಾಮೀಣ ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ತೇರ್ಗಡೆಯಾಗಿದ್ದಾರೆ. ಪರೀಕ್ಷೆ ಬರೆದಿದ್ದ 38,056 ವಿದ್ಯಾರ್ಥಿಗಳಲ್ಲಿ 10,462 (ಶೇ 27.49) ಹಾಗೂ ನಗರ ಪ್ರದೇಶದ 59,896 ವಿದ್ಯಾರ್ಥಿಗಳಲ್ಲಿ 14,885 (ಶೇ 24.85) ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಸೆ. 4 ಕೊನೆಯ ದಿನ: ಉತ್ತರ ಪತ್ರಿಕೆಗಳ ಛಾಯಾ ಪ್ರತಿ ಪಡೆಯಲು ಆ. 30 ಕೊನೆಯ ದಿನ. ನಿಗದಿತ ಶುಲ್ಕ ಪಾವತಿಸಿದವರು ಆ.26ರಿಂದ 31ರ ಒಳಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು. ಮರು ಎಣಿಕೆ, ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಸೆ. 4 ಕೊನೆಯ ದಿನವಾಗಿರುತ್ತದೆ.

‘ಎಚ್‌ಡಿಕೆಯಷ್ಟು ಸುಳ್ಳುಗಾರ ದೇಶದಲ್ಲೇ ಇಲ್ಲ’

ಬೆಳಗಾವಿ: ‘ಮುಡಾ ಪ್ರಕರಣದಿಂದ ನಾನು ಹೆದರಿದ್ದೇನೆ. ನನ್ನ ಕಾರಿನಲ್ಲೇ ದಾಖಲೆಗಳನ್ನು ಇಟ್ಟುಕೊಂಡು ಓಡಾಡುತ್ತಿದ್ದೇನೆ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಹೇಳಿದ್ದಾರೆ. ಬಹುಶಃ ಅವರಷ್ಟು ಸುಳ್ಳು ಹೇಳುವವರು ಈ ದೇಶದಲ್ಲೇ ಹುಟ್ಟಿಲ್ಲ. ಬೇಕಾದರೆ ನೀವೇ ನನ್ನ ಕಾರಿನಲ್ಲಿ ಬಂದು ನೋಡಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದರು.

ನಗರದಲ್ಲಿ ಸೋಮವಾರ ಸಂಜೆ ಮಾತನಾಡಿದ ಅವರು, ‘ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನೇ ವಿಶೇಷ ತನಿಖಾ ಆಯೋಗ ರಚಿಸಿದ್ದೇನೆ. ಕುಮಾರಸ್ವಾಮಿ ಬಳಿ ದಾಖಲೆಯಿದ್ದರೆ, ಆ ಆಯೋಗಕ್ಕೆ ಕೊಡಲಿ. ಅವರು ಸುಮ್ಮನೇ ‘ಹಿಟ್ ಅಂಡ್ ರನ್’ ಮಾಡುತ್ತಾರೆ. ಯಾವುದನ್ನೂ ತಾರ್ತಿಕ ಅಂತ್ಯಕ್ಕೆ ಒಯ್ದ ಉದಾಹರಣೆ ಇಲ್ಲ’ ಎಂದರು.

‘ನನ್ನ ಪತ್ನಿಯ ಗಮನಕ್ಕೆ ತಾರದೇ ನಮ್ಮ ಭೂಮಿ ನಿವೇಶನವಾಗಿ ಪರಿವರ್ತಿಸಿ ಹಂಚಿಕೆ ಮಾಡಿದ್ದಾರೆ. ಅದನ್ನು ಹಂಚಿಕೆ ಮಾಡಿದವರು ಹಾಗೂ ಆಗ ಮುಡಾ ಅಧ್ಯಕ್ಷರಿದ್ದವರೂ ಬಿಜೆಪಿಯವರೇ. ಆಗ ಬಿಜೆಪಿಯದ್ದೇ ಸರ್ಕಾರ ಇತ್ತು. ಆದರೆ, ಈಗ ನನ್ನ ಮೇಲೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ’ ಎಂದರು.

ಸಂಗೊಳ್ಳಿ ರಾಯಣ್ಣನ ಬದುಕಿನೊಂದಿಗೆ ತಮ್ಮ ಪರಿಸ್ಥಿತಿ ಹೋಲಿಸಿಕೊಂಡ ಸಿ.ಎಂ

‘ದೇಶದ್ರೋಹಿಗಳು ಈಗಲೂ ಇದ್ದಾರೆ’

ಪ್ರಜಾವಾಣಿ ವಾರ್ತೆ

ಕೌಜಲಗಿ (ಬೆಳಗಾವಿ ಜಿಲ್ಲೆ): ‘ನಮ್ಮವರ ಕುತಂತ್ರದಿಂದ ಸಂಗೊಳ್ಳಿ ರಾಯಣ್ಣನನ್ನು ಬ್ರಿಟಿಷರು ಸೆರೆ ಹಿಡಿದರು. ಒಳ್ಳೆಯ ಕೆಲಸ ಮಾಡುವವರ ಹಿಂದೆ ಇಂಥವರು ಇರುತ್ತಾರೆ. ಹಿಂದುಳಿದ ಸಮುದಾಯಕ್ಕೆ ಸೇರಿದ ನಾನು ಮುಖ್ಯಮಂತ್ರಿ ಆಗಿರುವುದು ಬಿಜೆಪಿಯವರಿಗೆ ಸಹಿಸಲು ಆಗುತ್ತಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಗ್ರಾಮದಲ್ಲಿ ಸೋಮವಾರ ಸಂಗೊಳ್ಳಿ ರಾಯಣ್ಣನ ಪ್ರತಿಮೆ ಮತ್ತು ಕೋಟೆ ಉದ್ಘಾಟಿಸಿದ ಅವರು, ಸಂಗೊಳ್ಳಿ ರಾಯಣ್ಣನ ಬದುಕಿಗೂ ಮತ್ತು ತಮ್ಮ ಇಂದಿನ ಪರಿಸ್ಥಿತಿಗೂ ಹೆಚ್ಚು ವ್ಯತ್ಯಾಸವಿಲ್ಲ ಎಂಬರ್ಥದಲ್ಲಿ ಮಾತನಾಡಿದರು.

‘ರಾಯಣ್ಣನನ್ನು ಬ್ರಿಟಿಷರಿಗೆ ಹಿಡಿದು ಕೊಟ್ಟ ದೇಶದ್ರೋಹಿಗಳು ಈಗಲೂ ಇಲ್ಲಿದ್ದಾರೆ. ಹಿಂದುಳಿದ ಸಮುದಾಯದವರು ಅಧಿಕಾರದಲ್ಲಿ ಇರಬಾರದು ಎಂಬುದೇ ಅವರ ಸಿದ್ಧಾಂತ. ಇದೇ ಕಾರಣಕ್ಕೆ ಯಾವುದೇ ತಪ್ಪು ಮಾಡದಿದ್ದರೂ ನನ್ನ ವಿರುದ್ಧ ಕುತಂತ್ರ ಮಾಡಿದ್ದಾರೆ’ ಎಂದು ಅವರು ಆರೋಪಿಸಿದರು.

ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಕಳ್ಳಿಗುದ್ದಿ ಗ್ರಾಮದಲ್ಲಿ ಸೋಮವಾರ ಸಂಗೊಳ್ಳಿ ರಾಯಣ್ಣನ ಪ್ರತಿಮೆ ಉದ್ಘಾಟನಾ ಸಮಾರಂಭದಲ್ಲಿ ಸಚಿವರಾದ ಲಕ್ಷ್ಮಿ ಹೆಬ್ಬಾಳಕರ, ಸತೀಶ ಜಾರಕಿಹೊಳಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಸಕ ಅಶೋಕ ಪಟ್ಟಣ, ಶಿವಲಿಂಗ ಮುರುಘರಾಜೇಂದ್ರ ಸ್ವಾಮೀಜಿ ಪಾಲ್ಗೊಂಡಿದ್ದರು

‘ಬಿಜೆಪಿಯ ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ನನ್ನ ಪರ ಇದ್ದರೆ, ಅವರ ಸಹಪಾಠಿಗಳು (ಬಿಜೆಪಿಯವರು) ನನ್ನ ವಿರುದ್ಧ ಇದ್ದಾರೆ. ಹೇಗಾದರೂ ಮಾಡಿ ನನ್ನನ್ನು ಅಧಿಕಾರದಿಂದ ಕೆಳಗಿಳಿಸಲು ಪ್ರಯತ್ನ ನಡೆಸಿದ್ದಾರೆ’ ಎಂದರು.

ಸಚಿವರಾದ ಸತೀಶ ಜಾರಕಿಹೊಳಿ, ಲಕ್ಷ್ಮಿ ಹೆಬ್ಬಾಳಕರ, ಮುಖ್ಯಸಚೇತಕ ಅಶೋಕ ಪಟ್ಟಣ, ಶಾಸಕ ಬಾಲಚಂದ್ರ ಜಾರಕಿಹೊಳಿ, ಬಾಗೋಜಿಕೊಪ್ಪ ಮಠದ ಶಿವಲಿಂಗ ಮುರುಘರಾಜೇಂದ್ರ ಸ್ವಾಮೀಜಿ ಇದ್ದರು. ನಂತರ ಅವರು, ಗೋಕಾಕ ತಾಲ್ಲೂಕಿನ ಕಳ್ಳಿಗುದ್ದಿ, ಮೂಡಲಗಿ ತಾಲ್ಲೂಕಿನ ಯಾದವಾಡ, ಕಲ್ಲೋಳಿ ಗ್ರಾಮದಲ್ಲೂ ರಾಯಣ್ಣನ ಪ್ರತಿಮೆ ಅನಾವರಣ ಮಾಡಿದರು.

> ಸಂಗೊಳ್ಳಿ ರಾಯಣ್ಣನ ಅಭಿಮಾನಿಗಳ ಆಶೀರ್ವಾದ ನನ್ನ ಮತ್ತು ನಮ್ಮ ಸರ್ಕಾರದ ಮೇಲೆ ಇರುವವರೆಗೆ ನನ್ನನ್ನು ಕೆಳಗಿಳಿಸಲು ಆಗುವುದಿಲ್ಲ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಎನ್‌ಸಿ, ಕಾಂಗ್ರೆಸ್ ಸೀಟು ಹಂಚಿಕೆ ಪೂರ್ಣ

ಶ್ರೀನಗರ (ಪಿಟಿಐ): ಜಮ್ಮು–ಕಾಶ್ಮೀರ ವಿಧಾನಸಭೆ ಚುನಾವಣೆಗಾಗಿ ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಮತ್ತು ಕಾಂಗ್ರೆಸ್ ನಡುವೆ ಸೀಟು ಹಂಚಿಕೆ ಒಪ್ಪಂದ ಅಂತಿಮಗೊಂಡಿದೆ.

ಈ ಒಪ್ಪಂದದ ಪ್ರಕಾರ ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು 51 ಸ್ಥಾನಗಳಲ್ಲಿ, ಕಾಂಗ್ರೆಸ್ ಪಕ್ಷವು 32 ಸ್ಥಾನಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಿದೆ.

ಆಸ್ತಿ ನೋಂದಣಿ: ಇನ್ನು ಜಿಲ್ಲಾ ವ್ಯಾಪ್ತಿಗೆ ವಿಸ್ತಾರ

ಒಂದನೇ ಪುಟದಿಂದ...

ಬೆಂಗಳೂರು ವ್ಯಾಪ್ತಿಯಲ್ಲಿ ಐದು ಕಂದಾಯ ನೋಂದಣಿ ಜಿಲ್ಲೆಗಳಿದ್ದು, ಆಯಾ ವ್ಯಾಪ್ತಿಯ ಯಾವುದೇ ನೋಂದಣಿ ಕಚೇರಿಯಲ್ಲಿ ನೋಂದಣಿಗೆ ವರ್ಷದ ಹಿಂದೆಯೇ ಅವಕಾಶ ಮಾಡಿಕೊಡಲಾಗಿತ್ತು ಎಂದು ವಿವರ ನೀಡಿದರು.

ರಾಜ್ಯದಲ್ಲಿ 252 ಉಪ ನೋಂದಣಾಧಿಕಾರಿ ಕಚೇರಿಗಳು ಇದ್ದರೂ, ಸುಮಾರು 50 ಕಚೇರಿಗಳಲ್ಲಿ ಮಾತ್ರ ಕೆಲಸದ ಒತ್ತಡವಿದೆ. ಹೊಸ ನೀತಿ ಜಾರಿಯಿಂದಾಗಿ ಕಾರ್ಯ ಒತ್ತಡ ಹಂಚಿಕೆಯಾಗಲಿದೆ. ಜನರಿಗೆ ಸಮಯದ ಉಳಿತಾಯವಾಗಲಿದೆ. ಆಸ್ತಿ ನೋಂದಣಿ ಬಯಸುವವರು ಕಾವೇರಿ-2 ತಂತ್ರಾಂಶದ ಮೂಲಕ ತಮಗೆ ಅನುಕೂಲವಾಗುವ ಹಾಗೂ ಜನಸಂದಣಿ ಇಲ್ಲದ ಯಾವುದೇ ಉಪ ನೋಂದಣಿ ಕಚೇರಿ ಆಯ್ಕೆ ಮಾಡಿಕೊಳ್ಳಬಹುದು ಎಂದರು.

ಆಸ್ತಿ ಅಡಮಾನ ಪ್ರಕ್ರಿಯೆಯನ್ನು ಆಯಾ ಬ್ಯಾಂಕ್‌ಗಳಲ್ಲೇ ನಿರ್ವಹಿಸಲು, ರೇರಾ ನೋಂದಣಿಯನ್ನು ಆಯಾ ನಿರ್ಮಾಣ ಕಂಪನಿಗಳಲ್ಲೇ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು. ಇದರಿಂದ ಅನಗತ್ಯ ಅಲೆದಾಟ, ವಿಳಂಬ ತಪ್ಪಿಸಲು ಸಹಕಾರಿಯಾಗಲಿದೆ ಎಂದು ಹೇಳಿದರು.

ಆರ್‌ಟಿಸಿ–ಆಧಾರ್ ಜೋಡಣೆ

ಅಮಾಯಕರ ಜಮೀನುಗಳನ್ನು ವ್ಯವಸ್ಥಿತವಾಗಿ ದೋಚುವ ಪ್ರಕರಣಗಳಿಗೆ ಸಂಪೂರ್ಣ ಕಡಿವಾಣ ಹಾಕಲು, ಸಾಮಾನ್ಯ ರೈತರ ಜಮೀನಿನ ಹಕ್ಕು ಸಂರಕ್ಷಿಸಲು ಆರ್‌ಟಿಸಿ (ಪಹಣಿ)–ಆಧಾರ್ ಜೋಡಣಾ ಕಾರ್ಯಕ್ಕೆ ಚಾಲನೆ ನೀಡಲಾಗಿದೆ ಎಂದು ಕೃಷ್ಣ ಬೈರೇಗೌಡ ಹೇಳಿದರು.

ವಂಚನೆಗೆ ಒಳಗಾದವರು ನಿತ್ಯವೂ ತಾಲ್ಲೂಕು ಕಚೇರಿ, ಕೋರ್ಟ್‌ಗಳಿಗೆ ಅಲೆಯುತ್ತಿದ್ದಾರೆ. ಹಾಗಾಗಿ, ಆಧಾರ್ ಜೋಡಣಾ ಅಭಿಯಾನ ರೂಪಿಸಲಾಗಿದೆ. ಮೂರು ತಾಲ್ಲೂಕುಗಳಲ್ಲಿ ಪ್ರಾಯೋಗಿಕವಾಗಿ ಚಾಲನೆ ನೀಡಲಾಗಿತ್ತು. ಆ.26ರಿಂದ ರಾಜ್ಯದ ಎಲ್ಲೆಡೆ ಆಧಾರ್ ಜೋಡಣಾ ಅಭಿಯಾನ ಆರಂಭಿಸಲಾಗಿದೆ ಎಂದರು. ರಾಜ್ಯದಲ್ಲಿ 4.05 ಕೋಟಿ ಪಹಣಿಗಳಿವೆ. ಅವುಗಳಲ್ಲಿ ಸುಮಾರು 50 ಸಾವಿರದಷ್ಟು ನಿವೇಶನಗಳಾಗಿ ಪರಿವರ್ತಿತವಾಗಿದ್ದರೂ, ಈಗಲೂ ಜಮೀನು ಎಂದು ನಮೂದಿಸಿ, ಸರ್ಕಾರಿ ಸೌಲಭ್ಯ, ಬ್ಯಾಂಕ್ ಸಾಲ ಪಡೆಯಲಾಗುತ್ತಿದೆ. ಅಂತಹ ಪಹಣಿಗಳಲ್ಲಿ ‘ನಿವೇಶನ’ ಎಂದು ನಮೂದಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ನಿಗದಿತ ಬೆಲೆಗೆ ಹಂಚಿಕೆ: ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ

‘ನಿಯಮಾನುಸಾರ ಸಿ.ಎ. ನಿವೇಶನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಪುತ್ರ ರಾಹುಲ್ ಖರ್ಗೆ ಅವರ ಸಿದ್ಧಾರ್ಥ ವಿಹಾರ ಶಿಕ್ಷಣ ಟ್ರಸ್ಟ್‌ಗೆ ಏರೋಸ್ಪೇಸ್ ಪಾರ್ಕ್‌ನಲ್ಲಿ ನಾಗರಿಕ ಸೌಲಭ್ಯಗಳಿಗೆ (ಸಿಎ) ಮೀಸಲಾದ ನಿವೇಶನವನ್ನು ಕಾನೂನು ಪ್ರಕಾರ ನಿಗದಿತ ಬೆಲೆಗೆ ಹಂಚಿಕೆ ಮಾಡಲಾಗಿದೆ’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಹಂಚಿಕೆಯಾದ ನಿವೇಶನದಲ್ಲಿ ಸಂಶೋಧನೆ ಮತ್ತು ತರಬೇತಿ ಕೇಂದ್ರ ಸ್ಥಾಪಿಸುವುದಾಗಿ ಅವರು ತಿಳಿಸಿದ್ದಾರೆ. ಈ ವಿಚಾರದಲ್ಲಿ ಬಿಜೆಪಿ ನಾಯಕ ಲಹರ್ ಸಿಂಗ್ ಸಿರೋಯಾ ಅವರು ಆರೋಪಿಸಿರುವಂತೆ ಯಾವುದೇ ನಿಯಮ ಉಲ್ಲಂಘನೆ ಆಗಿಲ್ಲ’ ಎಂದರು.

‘ರಾಹುಲ್ ಖರ್ಗೆ ಐಐಟಿ ಪದವೀಧರ. ಅವರ ಕುಟುಂಬವು ವಿವಿಧ ಶೈಕ್ಷಣಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದೆ. ಕೆಐಎಡಿಬಿ ನಿಯಮಗಳ ಪ್ರಕಾರ ಸಿ.ಎ ನಿವೇಶನಗಳಲ್ಲಿ ಆರ್ ಆ್ಯಂಡ್ ಡಿ ಕೇಂದ್ರಗಳು, ಉತ್ಕೃಷ್ಟತಾ ಕೇಂದ್ರಗಳು, ತಾಂತ್ರಿಕ ಸಂಸ್ಥೆಗಳು, ಕೌಶಲಾಭಿವೃದ್ಧಿ, ಸರ್ಕಾರಿ ಕಚೇರಿಗಳು, ಬ್ಯಾಂಕು, ಆಸ್ಪತ್ರೆ, ಹೋಟೆಲ್, ಪೆಟ್ರೋಲ್ ಬಂಕ್, ಕ್ಯಾಂಟೀನ್, ವಸತಿ ಸೌಲಭ್ಯ ಇತ್ಯಾದಿಗಳ ಅಭಿವೃದ್ಧಿಗೆ ಅವಕಾಶವಿದೆ. ಆಸಕ್ತರು ಇದಕ್ಕೆ ಪ್ರಯತ್ನಿಸಬಹುದು’ ಎಂದರು.

‘ಈ ಹಿಂದೆ ಕೆಐಎಡಿಬಿ ಮಂಡಳಿಯೇ ಸಿ.ಎ. ನಿವೇಶನಗಳನ್ನು ಹಂಚುತ್ತಿತ್ತು. ನಾನು ಕೈಗಾರಿಕಾ ಸಚಿವನಾದ ಬಳಿಕ, ಪಾರದರ್ಶಕ ವ್ಯವಸ್ಥೆ ಜಾರಿಗೆ ತರುವ ಉದ್ದೇಶದಿಂದ ರಾಜ್ಯಮಟ್ಟದ ಏಕ ಗವಾಕ್ಷಿ ಸಮಿತಿ ಅನುಮೋದನೆ ಕಡ್ಡಾಯಗೊಳಿಸಲಾಗಿದೆ. ಮೊದಲ ಬಾರಿಗೆ ಸಿ.ಎ ನಿವೇಶನಗಳ ಹಂಚಿಕೆಯಲ್ಲೂ ಪರಿಶಿಷ್ಟರಿಗೆ ಶೇ 24.10ರಷ್ಟು ಮೀಸಲಾತಿ ಕಲ್ಪಿಸಲಾಗಿದೆ. ಈ ಸತ್ಯವನ್ನು ಅರಿತು ಲಹರ್ ಸಿಂಗ್ ಮಾತನಾಡಬೇಕು’ ಎಂದರು.

‘ಕೌಶಲಾಭಿವೃದ್ಧಿ ಕೇಂದ್ರ ಸ್ಥಾಪಿಸುವುದು ತಪ್ಪೇ?’

ಪ್ರಿಯಾಂಕ್ ಖರ್ಗೆ

‘ಏರೋಸ್ಪೇಸ್ ಪಾರ್ಕ್‌ನಲ್ಲಿ ಶೈಕ್ಷಣಿಕ ಉದ್ದೇಶಗಳಿಗೆ ಮೀಸಲಿಟ್ಟ ನಿವೇಶನವನ್ನು ರಾಹುಲ್ ಖರ್ಗೆ ಅವರ ಸಿದ್ಧಾರ್ಥ ವಿಹಾರ ಶಿಕ್ಷಣ ಟ್ರಸ್ಟ್‌ಗೆ ಹಂಚಿಕೆ ಮಾಡಲಾಗಿದೆ. ನಾಗರಿಕ ಸೌಲಭ್ಯಕ್ಕೆಂದೇ (ಸಿಎ) ಒದಗಿಸಿದ ನಿವೇಶನದಲ್ಲಿ ಬಹು ಕೌಶಲ ಅಭಿವೃದ್ಧಿ ಕೇಂದ್ರ ಸ್ಥಾಪಿಸುವುದು ತಪ್ಪೇ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದ್ದಾರೆ.

ತಮ್ಮ ಸಹೋದರನಿಗೆ ಸಿಎ ನಿವೇಶನ ಹಂಚಿಕೆ ವಿವಾದದ ಸ್ವರೂಪ ಪಡೆದಿರುವ ಹಿನ್ನೆಲೆಯಲ್ಲಿ ತಮ್ಮ ‘ಎಕ್ಸ್’ ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಪ್ರಿಯಾಂಕ್, ‘ಈ ನಿವೇಶನ ಪಡೆಯಲು ಟ್ರಸ್ಟ್‌ಗೆ ಯಾವುದೇ ಸಹಾಯಧನ ನೀಡಿಲ್ಲ. ನಿವೇಶನದ ದರವನ್ನೂ ಕಡಿಮೆ ಮಾಡಿಲ್ಲ. ಹಣ ಪಾವತಿ ನಿಯಮಗಳಲ್ಲಿಯೂ ಯಾವುದೇ ರಿಯಾಯಿತಿ ನೀಡಿಲ್ಲ’ ಎಂದು ಅವರು ಹೇಳಿದ್ದಾರೆ.

‘ಉತ್ತಮ ಗುಣಮಟ್ಟದ ಮತ್ತು ಕೈಗೆಟುಕುವ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ನಿರ್ವಹಿಸುವ ಹಿನ್ನೆಲೆ ಇರುವವರು ಟ್ರಸ್ಟಿಗಳಾಗಿದ್ದಾರೆ. ಯುವಕರಿಗೆ ಉದ್ಯೋಗ ಒದಗಿಸುವ ಕೇಂದ್ರಗಳನ್ನು ನಮ್ಮ ಟ್ರಸ್ಟ್‌ಗಳು ಸ್ಥಾಪಿಸಬಾರದೇ’ ಎಂದೂ ಕೇಳಿರುವ ಅವರು, ‘ಆರೆಸ್ಸೆಸ್ ಬೆಂಬಲಿತ ರಾಷ್ಟ್ರೋತ್ಥಾನ ಮತ್ತು ಚಾಣಕ್ಯ ವಿಶ್ವವಿದ್ಯಾನಿಲಯಕ್ಕೆ ನಿಮ್ಮ ಸರ್ಕಾರವು ರಾಜ್ಯದಾದ್ಯಂತ ಭೂಮಿ ನೀಡಿದ್ದು ಹೇಗೆ? ಆಗ ಯಾಕೆ ಮೌನ ವಹಿಸಿದಿರಿ?’ ಎಂದು ಬಿಜೆಪಿ ನಾಯಕರನ್ನು ಪ್ರಶ್ನಿಸಿದ್ದಾರೆ.

ಪ್ರಿಯಾಂಕ್ ಖರ್ಗೆ ವಜಾಕ್ಕೆ ಆಗ್ರಹ

ಕೋಲಾರ: ‘ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕುಟುಂಬದವರು ಸಿದ್ಧಾರ್ಥ ವಿಹಾರ ಶಿಕ್ಷಣ ಟ್ರಸ್ಟ್‌ಗೆ ಕೆಐಎಡಿಬಿಯಿಂದ ಐದು ಎಕರೆ ಜಾಗ ಪಡೆದುಕೊಂಡಿದ್ದಾರೆ. ಸಚಿವರಾಗಿ ಪ್ರಿಯಾಂಕ್ ಖರ್ಗೆ ಅಧಿಕಾರ ದುರುಪಯೋಗಪಡಿಸಿಕೊಂಡಿದ್ದಾರೆ. ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಿ ಜಮೀನು ವಾಪಸ್ ಪಡೆಯಬೇಕು. ಈ ಸಂಬಂಧ ದೂರು ಕೊಡಲಿದ್ದೇವೆ, ರಾಜ್ಯಪಾಲರನ್ನೂ ಭೇಟಿ ಮಾಡುತ್ತೇವೆ’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ತಿಳಿಸಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಮಲ್ಲಿಕಾರ್ಜುನ ಖರ್ಗೆ, ಅವರ ಪತ್ನಿ, ಪುತ್ರರಾದ ರಾಹುಲ್ ಖರ್ಗೆ, ಪುತ್ರ ಪ್ರಿಯಾಂಕ್ ಖರ್ಗೆ ಹಾಗೂ ಅಳಿಯ ರಾಧಾಕೃಷ್ಣ ಅವರಿಗೆ ಸೇರಿದ ಟ್ರಸ್ಟ್ ಇದಾಗಿದೆ’ ಎಂದರು. ‘ಕೇಂದ್ರ ಸಚಿವ ಕುಮಾರಸ್ವಾಮಿ ವಿರುದ್ಧ ತನಿಖೆಗೆ ಅನುಮತಿ ಕೊಡಬಾರದು ಎಂದು ರಾಜ್ಯಪಾಲರಿಗೆ ನಾವೇನು ಹೇಳಿಲ್ಲ. ಬಿಜೆಪಿಯವರು ತಪ್ಪು ಮಾಡಿದ್ದರೆ ತನಿಖೆ ನಡೆಸಲಿ’ ಎಂದರು.

ದರ್ಶನಾತಿಥ್ಯ: 3 ಎಫ್‌ಐಆರ್

ಒಂದನೇ ಪುಟದಿಂದ.

ಮಲ್ಲಿಕಾರ್ಜುನ್ ಸ್ವಾಮಿ

ಶೇಷುಮೂರ್ತಿ

ದರ್ಶನ್ ಸೇರಿ ಫೋಟೊದಲ್ಲಿರುವ ವಿಚಾರಣಾಧೀನ ಕೈದಿಗಳನ್ನು ಬೆಳಗಾವಿ ಅಥವಾ ಬಳ್ಳಾರಿಯ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸುವ ಸಾಧ್ಯತೆಯಿದೆ. ಮಾಲಿನಿ ಕೃಷ್ಣಮೂರ್ತಿ ಅವರು ಅಲ್ಲಿನ ಜೈಲು ಅಧೀಕ್ಷಕರ ಜತೆಗೆ ಸಮಾಲೋಚನೆ ನಡೆಸಿದ್ದು, ಭದ್ರತೆಯ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ. ನ್ಯಾಯಾಲಯ ಅನುಮತಿ ನೀಡಿದರೆ ಎರಡು ದಿನಗಳಲ್ಲಿ ಸ್ಥಳಾಂತರಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಟೀ ಪಾರ್ಟಿ: ಈಗ ಸಾಮಾಜಿಕ ಮಾಧ್ಯಮ ದಲ್ಲಿ ಹರಿದಾಡುತ್ತಿರುವ ಫೋಟೊ ತೆಗೆದಿರುವುದು ಆಗಸ್ಟ್ 22ರ ಸಂಜೆ ನಡೆದ ‘ಟೀ ಪಾರ್ಟಿ’ಯದ್ದು ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ.

‘ಕೈದಿಗಳಿಗೆ ಸಕಲ ಸೌಲಭ್ಯದ ವ್ಯವಸ್ಥೆ ಮಾಡಲು ಜೈಲು ಸಿಬ್ಬಂದಿಯೇ ಕೆಲವು ಸಿಸಿಟಿವಿ ಕ್ಯಾಮೆರಾಗಳನ್ನು ಮುಚ್ಚಿರುವುದು ಮತ್ತು ಹಾನಿ ಮಾಡಿರುವುದು ಪ್ರಾಥಮಿಕ ತನಿಖೆ ಯಿಂದ ತಿಳಿದುಬಂದಿದೆ. ಪ್ರವೇಶ ದ್ವಾರ ಹೊರತುಪಡಿಸಿದರೆ ಬಹುತೇಕ ಕಡೆ ಕ್ಯಾಮೆರಾಗಳು ಕೆಲಸ ಮಾಡುತ್ತಿಲ್ಲ’ ಎಂದು ಮೂಲಗಳು ತಿಳಿಸಿವೆ. ಬ್ಯಾರಕ್‌ನ ಹೊರಗೆ ಕುರ್ಚಿಯಲ್ಲಿ ಕುಳಿತು ಟೀ ಕುಡಿಯುತ್ತಾ, ಸಿಗರೇಟ್ ಸೇದುತ್ತಾ ಹರಟೆ ಹೊಡೆಯುತ್ತಿರುವ ದರ್ಶನ್, ರೌಡಿ ವಿಲ್ಸನ್ ಗಾರ್ಡನ್ ನಾಗ, ಕುಳ್ಳ ಸೀನ, ದರ್ಶನ್ ವ್ಯವಸ್ಥಾಪಕ ನಾಗರಾಜ್, ಕರ್ತವ್ಯ ಲೋಪ ಎಸಗಿರುವ ಜೈಲು ಅಧಿಕಾರಿಗಳು, ಸಿಬ್ಬಂದಿ, ಹೊರಗಿನಿಂದ ವಿಡಿಯೊ ಕರೆ ಮಾಡಿದ್ದ ವ್ಯಕ್ತಿ ವಿರುದ್ಧ 3 ಎಫ್‌ಐಆರ್ ದಾಖಲಾಗಿವೆ.

ದರ್ಶನ್‌ಗೆ ಮಟನ್ ಬಿರಿಯಾನಿ!

ಒಂದನೇ ಪುಟದಿಂದ...

‘ಪ್ರಸಿದ್ಧ ನಟ–ನಟಿಯರು, ದೊಡ್ಡ ರೌಡಿಗಳು ಬಂದರೆ ಇದೇ ತಂಡ ವಿಶೇಷ ಆತಿಥ್ಯ ಕಲ್ಪಿಸುತ್ತದೆ. ಯಾರಿಗೆ ಯಾವ ಬ್ಯಾರಕ್ ನೀಡಬೇಕು ಎಂಬುದನ್ನೂ ಈ ಗುಂಪು ತೀರ್ಮಾನಿಸುತ್ತದೆ’ ಎಂದು ಮೂಲಗಳು ಹೇಳಿವೆ.

ಕೈದಿಗಳನ್ನು ಮಾತನಾಡಿಸಲು ಬರುವ ಸಂಬಂಧಿಕರು, ಆಪ್ತರಿಂದ ನಗದು ರೂಪದಲ್ಲಿ ಮಾತ್ರ ಹಣ ಪಡೆಯಲಾಗುತ್ತಿದೆ. ಫೋನ್ ಪೇ ಹಾಗೂ ಗೂಗಲ್ ಪೇಯಿಂದ ಹಣ ಪಡೆಯುತ್ತಿಲ್ಲ. ಅಲ್ಲದೇ ‘ಬೆಡ್ ಮಸಾಜ್’ ವ್ಯವಸ್ಥೆಯೂ ಇದೆ. ಇದಕ್ಕೂ ಪ್ರತ್ಯೇಕ ದರವಿದೆ ಎಂಬುದು ಮೂಲಗಳಿಂದ ಗೊತ್ತಾಗಿದೆ.

ಕೈದಿಗಳು ಮೊಬೈಲ್ ಬಳಸುತ್ತಿದ್ದಾರೆ ಎಂಬ ಆರೋಪ ಬಂದಾಗ ಜಾಮರ್ ಅಳವಡಿಸಲಾಗಿತ್ತು. ಅಧಿಕ ಸಾಮರ್ಥ್ಯದ (ಹೈ ಫ್ರೀಕ್ವೆನ್ಸಿ) ಜಾಮರ್‌ನಿಂದ ತಮಗೆ ತೊಂದರೆ ಆಗುತ್ತಿದೆ ಎಂದು ಸುತ್ತಮುತ್ತಲ ನಿವಾಸಿಗಳು ಪ್ರತಿಭಟನೆ ನಡೆಸಿದ್ದರು. ಪ್ರತಿಭಟನೆಯ ಬಳಿಕ ಜಾಮರ್‌ನ ಫ್ರೀಕ್ವೆನ್ಸಿ ಕಡಿಮೆ ಮಾಡಲಾಗಿತ್ತು. ಅದಾದ ಮೇಲೆ ಜೈಲಿನ ಒಳಗೆ ಮೊಬೈಲ್ ಬಳಕೆ ನಿರಾತಂಕವಾಗಿ ನಡೆಯುತ್ತಿದೆ ಎಂಬುದು ಗೊತ್ತಾಗಿದೆ. ‘ವಿಲ್ಸನ್ ಗಾರ್ಡನ್ ನಾಗ ಜೈಲಿನ ಒಳಗೆ ವಿಚಾರಣಾಧೀನ ಕೈದಿಗಳ 20 ಮಂದಿಯ ತಂಡ ರಚಿಸಿಕೊಂಡಿದ್ದಾನೆ. ಅವರನ್ನು ಗುರುತಿಸುವ ರೀತಿಯಲ್ಲಿ ಬಟ್ಟೆ, ಚಪ್ಪಲಿ ನೀಡಲಾಗಿದೆ. ಈ ತಂಡದಲ್ಲಿರುವವರು ಈತನಿಗೆ ಬೇಕಾದುದನ್ನು ಪೂರೈಸುತ್ತಿದ್ದಾರೆ’ ಎಂಬ ಆರೋಪ ಸೋಮವಾರದಿಂದ ಜೋರಾಗಿ ಸದ್ದು ಮಾಡುತ್ತಿದೆ. ಜೈಲಿನ ಒಳಗೆ ಜನ್ಮದಿನ ಆಚರಿಸಿಕೊಳ್ಳಲು ಕೈದಿಗಳಿಗೆ ಕೇಕ್ ಸಹ ಪೂರೈಕೆ ಆಗುತ್ತಿದೆ. ಇತ್ತೀಚೆಗೆ ಕುಳ್ಳ ಸೀನನ ಜನ್ಮ ದಿನಾಚರಣೆ ಜೈಲಿನ ಒಳಗೆ ನಡೆದಿತ್ತು ಎಂದು ಹೇಳಲಾಗಿದೆ. ರಿವಾಲ್ವರ್ ಮಾದರಿಯ ಕೇಕ್ ಕತ್ತರಿಸಿ ಸಂಭ್ರಮಾಚರಣೆ ನಡೆಸಿರುವ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

ಆಗಲೂ ಅಧಿಕಾರಿಗಳ ಪಾತ್ರದ ಬಗ್ಗೆ ತನಿಖಾ ವರದಿಯಲ್ಲಿ ಉಲ್ಲೇಖ

ಭಾರಿ ಸದ್ದು ಮಾಡಿದ್ದ ಶಶಿಕಲಾ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ಪ್ರಕರಣದಲ್ಲಿ ಬಂಧನದಲ್ಲಿದ್ದ ಎಐಎಡಿಎಂಕೆ ನಾಯಕಿ ಶಶಿಕಲಾ ಮತ್ತು ಸಹಚರರಿಗೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ವಿಶೇಷ ಆತಿಥ್ಯ ನೀಡಿದ್ದ ಪ್ರಕರಣ 2017ರಲ್ಲಿ ಭಾರಿ ಸದ್ದು ಮಾಡಿತ್ತು.

ಆಗ ತನಿಖೆ ನಡೆಸಿದ್ದ ಕಾರಾಗೃಹ ಇಲಾಖೆ ಡಿಐಜಿ ಡಿ. ರೂಪಾ ಅವರು ಇಲಾಖೆಯ ಅಧಿಕಾರಿಗಳೇ ಪ್ರಕರಣದಲ್ಲಿ ಶಾಮೀಲಾಗಿದ್ದನ್ನು ಬಹಿರಂಗಪಡಿಸಿದ್ದರು.

‘ಶಶಿಕಲಾ ಸೇರಿ ಹಲವರಿಂದ ಹಣ ಪಡೆದು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ವಿಶೇಷ ಆತಿಥ್ಯ ನೀಡಲಾಗುತ್ತಿತ್ತು. ಈ ಅಕ್ರಮದಲ್ಲಿ ನೇರವಾಗಿ ಕಾರಾಗೃಹಗಳ ಇಲಾಖೆಯ ಅಂದಿನ ಪೊಲೀಸ್ ಮಹಾನಿರ್ದೇಶಕರ ಪಾತ್ರವೂ ಇತ್ತು’ ಎಂದು ರೂಪಾ ವರದಿಯಲ್ಲಿ ಹೇಳಿದ್ದರು.

ಈ ವರದಿಯಲ್ಲಿ ಉಲ್ಲೇಖಿಸಿದ ಅಂಶಗಳ ಕುರಿತು ಹೆಚ್ಚಿನ ವಿಚಾರಣೆಗಾಗಿ ನಿವೃತ್ತ ಐಎಎಸ್ ಅಧಿಕಾರಿ ವಿನಯ್ ಕುಮಾರ್ ನೇತೃತ್ವದ ಸಮಿತಿ ರಚಿಸಲಾಗಿತ್ತು. 2017ರ ಅಕ್ಟೋಬರ್ 21ರಂದು ವರದಿ ಸಲ್ಲಿಸಿದ್ದ ಸಮಿತಿ ‘ಜೈಲು ಅಕ್ರಮ’ದ ಬಗ್ಗೆ ಉಲ್ಲೇಖಿಸಿತ್ತು.

‘ಶಶಿಕಲಾ ಹಾಗೂ ಅವರ ಸಂಬಂಧಿ ಇಳವರಸಿ ಅವರಿಗೆ ಶಿಕ್ಷೆಗೆ ಗುರಿಯಾದ ದಿನದಿಂದಲೂ ‘ಎ’ ದರ್ಜೆ ಸೌಲಭ್ಯ ನೀಡಲಾಗಿದ್ದು, ಅಡುಗೆಗೆ ಪ್ರತ್ಯೇಕ ಕೊಠಡಿ ಸೇರಿ ಐದು ಕೊಠಡಿಯನ್ನು ಒದಗಿಸಲಾಗಿತ್ತು’ ಎಂದು ವಿನಯ್ ಕುಮಾರ್ ಸಮಿತಿ ವರದಿಯಲ್ಲಿ ಹೇಳಿತ್ತು.

‘ಶಶಿಕಲಾ ಭೇಟಿಗೆ ಬರುವ ಸಂಬಂಧಿಕರು ಹಾಗೂ ಸ್ನೇಹಿತರೊಂದಿಗೆ ಮಾತನಾಡಲು ಒಂದು ಕೊಠಡಿ ಬಳಸಲಾಗುತ್ತಿತ್ತು. ಅಲ್ಲದೇ ಇವರ ಕೊಠಡಿಯಲ್ಲಿ ಮಂಚ, ಹೊದಿಕೆ, ಹಾಗೂ ಎಲ್‌ಇಡಿ ಟಿ.ವಿ ಸಹ ಇಡಲಾಗಿತ್ತು. ಶಶಿಕಲಾ ಅವರಿಗೆ ‘ಎ’ ದರ್ಜೆ ಸೌಲಭ್ಯ ನೀಡುವಂತಿಲ್ಲ ಎಂದು ನ್ಯಾಯಾಲಯ ಹೇಳಿದ್ದರೂ ಸೌಲಭ್ಯ ಹಿಂಪಡೆದಿರಲಿಲ್ಲ. ಇದು ಜೈಲು ಅಧಿಕಾರಿಗಳ ಕರ್ತವ್ಯ ಲೋಪ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿತ್ತು.

ಈ ವರದಿ ಸಲ್ಲಿಕೆಯಾದ ಹಲವು ವರ್ಷಗಳ ಬಳಿಕ ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಗಳಿಗೆ ವಿಶೇಷ ಆತಿಥ್ಯ ನೀಡಿರುವ ವಿಚಾರ ಈಗ ಮುನ್ನೆಲೆಗೆ ಬಂದಿದೆ. ಕಾರಾಗೃಹದಲ್ಲಿ ಬಂಧನದಲ್ಲಿರುವವರು ಹಣ ಮತ್ತು ಪ್ರಭಾವ ಬಳಸಿ ಹೇಗೆಲ್ಲಾ ಸೌಲಭ್ಯಗಳನ್ನು ಪಡೆಯಬಹುದು ಎಂಬ ಚರ್ಚೆ ಈಗ ಬಿರುಸಾಗಿದೆ.

ಜೈಲು ಮುಖ್ಯ ಅಧೀಕ್ಷಕರಿಗೆ ಪತ್ರ ಬರೆದಿದ್ದ ಡಿಜಿಪಿ

ಕಾರಾಗೃಹದ ಬಂಧಿಗಳ ಮೇಲೆ ನಿಗಾ ವಹಿಸುವಂತೆ ಹಾಗೂ ಬಿಗಿ ಕ್ರಮಗಳನ್ನು ಕೈಗೊಳ್ಳುವಂತೆ ಕಾರಾಗೃಹಗಳು ಮತ್ತು ಸುಧಾರಣಾ ಸೇವೆಗಳ ಇಲಾಖೆ ಪೊಲೀಸ್ ಮಹಾನಿರ್ದೇಶಕಿ (ಡಿಜಿಪಿ) ಮಾಲಿನಿ ಕೃಷ್ಣಮೂರ್ತಿ ಅವರು, ಆಗಸ್ಟ್ 14ರಂದೇ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕರಿಗೆ ಪತ್ರ ಬರೆದಿದ್ದರು.

ಚಿತ್ರನಟ ದರ್ಶನ್ ಇತರ ವಿಚಾರಣಾಧೀನ ಕೈದಿಗಳ ಜತೆ ಹರಟೆ ಹೊಡೆಯುತ್ತಿರುವ ಫೋಟೊ ಬಹಿರಂಗವಾದ ಬೆನ್ನಲ್ಲೇ ಮಾಲಿನಿ ಕೃಷ್ಣಮೂರ್ತಿ ಅವರು ಬರೆದಿದ್ದ ಪತ್ರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

‘ಕಾರಾಗೃಹದ ಭದ್ರತಾ ವಿಭಾಗ, ಬ್ಯಾರಕ್, ಸೆಲ್‌ಗಳಲ್ಲಿರುವ ರೌಡಿಶೀಟರ್‌ಗಳು, ಉಗ್ರರು, ನಕ್ಸಲ್ ಬಂಧಿಗಳ ಭದ್ರತೆಯನ್ನು ನಿತ್ಯ ಖುದ್ದು ಪರಿಶೀಲಿಸಬೇಕು. ಯಾವುದೇ ನಿಷೇಧಿತ ವಸ್ತುಗಳು ದೊರೆಯದಂತೆ ನಿಗಾವಹಿಸಬೇಕು. ಅಹಿತಕರ ಘಟನೆ ನಡೆಯದಂತೆ ಕ್ರಮ ಕೈಗೊಳ್ಳಬೇಕು.

ಕಾರಾಗೃಹಗಳ ಡಿಐಜಿಗೆ ಪ್ರತಿನಿತ್ಯ ವರದಿ ಸಲ್ಲಿಸಬೇಕು. ಈ ವಿಚಾರದಲ್ಲಿ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿತನ ತೋರಿದಲ್ಲಿ ಕರ್ತವ್ಯಲೋಪವೆಂದು ಪರಿಗಣಿಸಲಾಗುವುದು. ಮುಖ್ಯ ಅಧೀಕ್ಷಕರಾದ ನಿಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು’ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

‘ಸರ್ಕಾರವೇ ಹೊಣೆ’

ಮಂಡ್ಯ: ‘ದುಡ್ಡು ಇದ್ರೆ ಏನು ಬೇಕಾದರೂ ಕೊಂಡುಕೊಳ್ಳಬಹುದು ಎಂಬಂತಾಗಿದೆ. ರೇಣುಕಸ್ವಾಮಿ ಕುಟುಂಬಸ್ಥರು ನೋವಿನಲ್ಲಿದ್ದಾರೆ. ಗೃಹ ಸಚಿವ ಪರಮೇಶ್ವರ ಪ್ರತಿ ದಿನ ಒಂದೊಂದು ಕತೆ ಹೇಳ್ತಾರೆ. ಪಾರದರ್ಶಕ ಮತ್ತು ಹೈಟೆಕ್ ಸರ್ಕಾರ ನಮ್ಮದು ಅಂತಾರೆ. ಪರಪ್ಪನ ಅಗ್ರಹಾರದಲ್ಲಿ ಕೊಡ್ತಾ ಇರುವುದಾ ಹೈಟೆಕ್ಕು? ಇದಕ್ಕೆ ಸರ್ಕಾರವೇ ಹೊಣೆ ಆಗಬೇಕು’ ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ದೂರಿದರು.

‘ಈ ಸರ್ಕಾರದ ಮೇಲೆ ಜನರಿಗೆ ನಂಬಿಕೆ ಇಲ್ಲ. ಅಧಿಕಾರಿಗಳಿಂದ ನ್ಯಾಯ ಸಿಗುವುದಿಲ್ಲ. ನ್ಯಾಯಾಲಯದಿಂದ ಮಾತ್ರ ನ್ಯಾಯ ಸಿಗಬೇಕು’ ಎಂದರು.

ಜೈಲು ಅಧಿಕಾರಿಗಳಿಗೆ ಪರಮೇಶ್ವರ ತರಾಟೆ

ಗೃಹ ಸಚಿವ ಜಿ.ಪರಮೇಶ್ವರ ಅವರು ಸೋಮವಾರ ಮಧ್ಯಾಹ್ನ ಕಾರಾಗೃಹಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ಅಲ್ಲಿನ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

‘ರೇಣುಕಸ್ವಾಮಿ ಕೊಲೆ ಪ್ರಕರಣದ ತೀವ್ರತೆ ಗೊತ್ತಿದೆ. ಆದರೂ ನಿಯಮಗಳನ್ನು ಮೀರಿ ಆರೋಪಿಗಳಿಗೆ ಟೀ, ಸಿಗರೇಟ್ ಮತ್ತಿತರ ಸವಲತ್ತು ಪೂರೈಕೆ ಆಗಿವೆ. ದಿನದ 24 ಗಂಟೆಯೂ ವಾರ್ಡರ್‌ಗಳು ಕರ್ತವ್ಯದಲ್ಲಿ ಇರುತ್ತಾರೆ. ಎಲ್ಲರ ಕಣ್ತಪ್ಪಿ ಇಂತಹ ಘಟನೆ ನಡೆಯಲು ಹೇಗೆ ಸಾಧ್ಯ’ ಎಂದು ಪ್ರಶ್ನಿಸಿದರು. ಸಿಸಿಬಿ ಪೊಲೀಸರು ದಾಳಿ ನಡೆಸಿದಾಗ ಯಾವ ವಸ್ತುಗಳೂ ಪತ್ತೆ ಆಗಿಲ್ಲ. ಜೈಲಿನಲ್ಲಿ ಮೊಬೈಲ್ ಬಳಕೆ ಆಗುತ್ತಿದೆ ಎಂಬುದು ಕಂಡು ಬಂದಿದೆ. ಹೈ ಫ್ರೀಕ್ವೆನ್ಸಿ ಜಾಮರ್, ಅತ್ಯುತ್ತಮ ಗುಣಮಟ್ಟದ ಮೆಟಲ್ ಡಿಟೆಕ್ಟರ್ ಯಂತ್ರ, ಸಿಸಿಟಿವಿ. ಕ್ಯಾಮೆರಾ ಅಳವಡಿಸಲಾಗಿದೆ. ಇಷ್ಟೆಲ್ಲಾ ಬಂದೋಬಸ್ತ್, ಪರಿಶೀಲನೆ ನಡುವೆಯೂ ಕಾರಾಗೃಹದೊಳಗೆ ಸಿಗರೇಟ್, ಮೊಬೈಲ್ ತಲುಪಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು. ‘ಯಾವುದೇ ರೀತಿಯಲ್ಲೂ ಈ ಪ್ರಕರಣದ ತನಿಖೆಯನ್ನು ದುರ್ಬಲಗೊಳಿಸಲು ಅವಕಾಶ ನೀಡುವುದಿಲ್ಲ. ಕಾನೂನು ಪ್ರಕಾರ ಈವರೆಗೆ ಕ್ರಮ ತೆಗೆದುಕೊಂಡಿದ್ದೇವೆ. ಮುಂದೆಯೂ ಕಾನೂನು ಪ್ರಕಾರವೇ ಕ್ರಮ ಜರುಗಲಿದೆ’ ಎಂದು ಪರಮೇಶ್ವರ ಹೇಳಿದರು.

ಸ್ಲ್ಯಾಬ್‌ಗಳ ಸಂಖ್ಯೆ ಇಳಿಕೆ ● ಆ.23ಕ್ಕೆ ಪ್ರಕಟವಾಗಿದ್ದ ಅಂತಿಮ ಅಧಿಸೂಚನೆ

ದುಬಾರಿ ಮದ್ಯ ಇಂದಿನಿಂದ ಅಗ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುಬಾರಿ ದರದ (ಪ್ರೀಮಿಯಂ) ಬ್ರ್ಯಾಂಡ್‌ಗಳ ಮದ್ಯದ ಮೇಲಿನ ಹೆಚ್ಚುವರಿ ಅಬಕಾರಿ ತೆರಿಗೆಯನ್ನು ಇಳಿಕೆ ಮಾಡಿ ಅಬಕಾರಿ ಇಲಾಖೆ ಆದೇಶ ಹೊರಡಿಸಿದೆ. ಮಂಗಳವಾರದಿಂದಲೇ ಪ್ರೀಮಿಯಂ ಬ್ರ್ಯಾಂಡ್‌ಗಳ ಮದ್ಯದ ದರದಲ್ಲಿ ಶೇ.15 ರಿಂದ ಶೇ 20ರಷ್ಟು ಇಳಿಕೆಯಾಗಲಿದೆ.

ದುಬಾರಿ ಬೆಲೆಯ ಮದ್ಯದ ದರಗಳನ್ನು ನೆರೆಯ ರಾಜ್ಯಗಳಿಗೆ ಸರಿಸಮನಾಗಿ ಪರಿಷ್ಕರಣೆ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2024–25ರ ಬಜೆಟ್‌ನಲ್ಲಿ ಪ್ರಕಟಿಸಿದ್ದರು. ಜೂನ್‌ನಲ್ಲೇ ಕರಡು ಅಧಿಸೂಚನೆ ಹೊರಡಿಸಿದ್ದ ಅಬಕಾರಿ ಇಲಾಖೆ, ಜುಲೈ 1ರಿಂದ ದರ ಇಳಿಕೆಗೆ ಮುಂದಾಗಿತ್ತು. ಆರ್ಥಿಕ ಇಲಾಖೆಯ ಸೂಚನೆಯಂತೆ ದರ ಪರಿಷ್ಕರಣೆ ತಡೆ ಹಿಡಿಯಲಾಗಿತ್ತು.

ಆಕ್ಷೇಪಣೆ ಮತ್ತು ಸಲಹೆಗಳನ್ನು ಪರಿಶೀಲಿಸಿ ವಿಲೇವಾರಿ ಮಾಡಿರುವ ಅಬಕಾರಿ ಇಲಾಖೆ, ಮದ್ಯದ ಮೇಲಿನ ಹೆಚ್ಚುವರಿ ಅಬಕಾರಿ ತೆರಿಗೆಯನ್ನು ಪರಿಷ್ಕರಿಸಿ ಆಗಸ್ಟ್ 23ರಂದು ಅಂತಿಮ ಅಧಿಸೂಚನೆ ಹೊರಡಿಸಿದೆ. ಮಂಗಳವಾರದಿಂದ (ಆ.27) ಪರಿಷ್ಕೃತ ದರಗಳು ರಾಜ್ಯದಾದ್ಯಂತ ಜಾರಿಗೆ ಬರಲಿವೆ.

ಸ್ಲ್ಯಾಬ್‌ಗಳ ಸಂಖ್ಯೆ ಇಳಿಕೆ: ರಾಜ್ಯದಲ್ಲಿ ಈವರೆಗೆ 18 ಸ್ಲ್ಯಾಬ್‌ಗಳಲ್ಲಿ ಮದ್ಯದ ಮೇಲೆ ಅಬಕಾರಿ ತೆರಿಗೆ ವಿಧಿಸಲಾಗುತ್ತಿತ್ತು. ಈಗ ಸ್ಲ್ಯಾಬ್‌ಗಳ ಸಂಖ್ಯೆಯನ್ನು 16ಕ್ಕೆ ಇಳಿಸಲಾಗಿದೆ.

ಪ್ರತಿ ಬಲ್ಕ್ ಲೀಟರ್ ಮದ್ಯದ ಘೋಷಿತ ಉತ್ಪಾದನಾ ದರ ₹449 ಮೊದಲ ಸ್ಲ್ಯಾಬ್‌ನಲ್ಲಿದ್ದರೆ, ₹15,001ರಿಂದ ಮೇಲಿನ ಘೋಷಿತ ದರದ ಎಲ್ಲ ಮದ್ಯಗಳನ್ನು 18ನೇ ಸ್ಲ್ಯಾಬ್‌ನಲ್ಲಿಡಲಾಗಿತ್ತು. ಪರಿಷ್ಕೃತ ಪಟ್ಟಿಯ ಪ್ರಕಾರ, ಪ್ರತಿ ಬಲ್ಕ್ ಲೀಟರ್‌ನ ಘೋಷಿತ ಉತ್ಪಾದನಾ ದರ ₹ 450 ಹೊಂದಿರುವ ಮದ್ಯ ಮೊದಲ ಸ್ಲ್ಯಾಬ್‌ನಲ್ಲಿದ್ದರೆ, ₹20,001 ಮತ್ತು ಅದಕ್ಕಿಂತ ಹೆಚ್ಚಿನ ಘೋಷಿತ ಉತ್ಪಾದನಾ ದರ ಹೊಂದಿರುವ ಮದ್ಯವನ್ನು 16ನೇ ಸ್ಲ್ಯಾಬ್‌ಗೆ ಸೇರಿಸಲಾಗಿದೆ.

‘ಐದರಿಂದ 16ನೇ ಸ್ಲ್ಯಾಬ್‌ವರೆಗಿನ ಮದ್ಯದ ದರಗಳಲ್ಲಿ ಇಳಿಕೆಯಾಗಲಿದೆ. ಅಂದಾಜಿನ ಪ್ರಕಾರ, ಈವರೆಗಿನ ದರಕ್ಕೆ ಹೋಲಿಸಿದರೆ ಶೇ 15ರಿಂದ ಶೇ 20ರಷ್ಟು ದರ ಇಳಿಕೆ ಆಗಲಿದೆ’ ಎಂದು ಅಬಕಾರಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಬಿಯರ್ ದರ ಏರಿಕೆ

ಆಲ್ಕೋಹಾಲ್ ಪ್ರಮಾಣಕ್ಕೆ ಅನುಗುಣವಾಗಿ ಬಿಯರ್ ಮೇಲೆ ಹೆಚ್ಚುವರಿ ಅಬಕಾರಿ ತೆರಿಗೆ ವಿಧಿಸುವ ಹೊಸ ಪದ್ಧತಿ ಜಾರಿಗೆ ಅಬಕಾರಿ ಇಲಾಖೆ ಆ.23ರಂದು ಕರಡು ಅಧಿಸೂಚನೆ ಹೊರಡಿಸಿದೆ.

ಶೇ 5ರವರೆಗೆ ಆಲ್ಕೋಹಾಲ್ ಹೊಂದಿರುವ ಪ್ರತಿ ಬಲ್ಕ್ ಲೀಟರ್ ಬಿಯರ್‌ಗೆ ₹10, ಶೇ 5ರಿಂದ ಶೇ 6.5ರವರೆಗೆ ಆಲ್ಕೋಹಾಲ್ ಹೊಂದಿರುವ ಪ್ರತಿ ಬಲಕ್ ಲೀಟರ್ ಬಿಯರ್‌ಗೆ ₹16 ಮತ್ತು ಶೇ 6.5ರಿಂದ ಶೇ 8ರವರೆಗೆ ಆಲ್ಕೋಹಾಲ್ ಹೊಂದಿರುವ ಪ್ರತಿ ಬಲ್ಕ್ ಲೀಟರ್ ಬಿಯರ್‌ಗೆ ₹20 ಹೆಚ್ಚುವರಿ ಅಬಕಾರಿ ತೆರಿಗೆ ವಿಧಿಸುವ ಪ್ರಸ್ತಾವ ಕರಡು ಅಧಿಸೂಚನೆಯಲ್ಲಿದೆ.

ಚೆಕ್‌ಬೌನ್ಸ್: ನಟಿ ಪದ್ಮಜಾ ರಾವ್‌ಗೆ 3 ತಿಂಗಳು ಜೈಲು

ಪ್ರಜಾವಾಣಿ ವಾರ್ತೆ

ಮಂಗಳೂರು: ಚೆಕ್ ಬೌನ್ಸ್ ಪ್ರಕರಣದಲ್ಲಿ ಸಿನಿಮಾ ಹಾಗೂ ಧಾರಾವಾಹಿ ನಟಿ ಪದ್ಮಜಾ ರಾವ್ ಅವರಿಗೆ ಮೂರು ತಿಂಗಳು ಸಾದಾ ಕಾರಾಗೃಹ ಶಿಕ್ಷೆ ಹಾಗೂ ₹40.20 ಲಕ್ಷ ದಂಡ ವಿಧಿಸಿ ಇಲ್ಲಿನ 8ನೇ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರಾದ ಫವಾಜ್ ಪಿ.ಎ ಅವರು ಆದೇಶಿಸಿದ್ದಾರೆ. ಇದರಲ್ಲಿ ₹40.17 ಲಕ್ಷವನ್ನು ದೂರುದಾರರಿಗೆ ನೀಡಬೇಕು. ₹3 ಸಾವಿರವನ್ನು ಸರ್ಕಾರಕ್ಕೆ ಪಾವತಿಸಬೇಕು’ ಎಂದಿದ್ದಾರೆ.

‘ಪದ್ಮಜಾ ರಾವ್ ಅವರು ₹40 ಲಕ್ಷ ಕೈ ಸಾಲ ಪಡೆದಿದ್ದರು. ಇದಕ್ಕೆ ಭದ್ರತೆಯಾಗಿ 2020ರ ಜೂನ್ 17ರಂದು ಐಸಿಐಸಿಐ ಬ್ಯಾಂಕಿನ ಬೆಂಗಳೂರಿನ ಬನಶಂಕರಿ ಶಾಖೆಯಲ್ಲಿರುವ ತಮ್ಮ ಖಾತೆಯ ಚೆಕ್ ನೀಡಿದ್ದರು. ಈ ಚೆಕ್ ಅನ್ನು ನಗದೀಕರಿಸಲು ಹಾಕಿದಾಗ, ಪದ್ಮಜಾ ರಾವ್ ಅವರ ಖಾತೆಯಲ್ಲಿ ಅಷ್ಟೊಂದು ಮೊತ್ತ ಇರಲಿಲ್ಲ. 15 ದಿನಗಳ ಒಳಗೆ ಸಾಲದ ಹಣ ಪಾವತಿಸುವಂತೆ 2020ರ ಜೂನ್ 30ರಂದು ಪದ್ಮಜಾ ರಾವ್ ಅವರಿಗೆ ನೋಟಿಸ್ ನೀಡಿದರೂ ಹಣ ಪಾವತಿಸಿರಲಿಲ್ಲ’ ಎಂದು ‘ವೀರೂ ಟಾಕೀಸ್’ ಸಂಸ್ಥೆಯ ಮಾಲೀಕ, ವೀರೇಂದ್ರ ಶೆಟ್ಟಿ ಕೋರ್ಟ್ ಮೊರೆ ಹೋಗಿದ್ದರು.

ಸಮನ್ಸ್ ಜಾರಿ ಬಳಿಕ ವಿಚಾರಣೆಗೆ ಹಾಜರಾಗಿದ್ದ ಪದ್ಮಜಾ ರಾವ್ ಅವರು ‘ದೂರುದಾರರಿಂದ ಸಾಲ ಪಡೆದಿಲ್ಲ, ಅವರಿಗೆ ಯಾವುದೇ ಚೆಕ್ ನೀಡಿಲ್ಲ’ ಎಂದಿದ್ದರು. ‘₹52.70 ಲಕ್ಷ ವಂಚಿಸಿದ ಬಗ್ಗೆ ವೀರೇಂದ್ರ ಶೆಟ್ಟಿ ವಿರುದ್ಧ ಬೆಂಗಳೂರಿನ ಜೆ.ಪಿ.ನಗರ ಠಾಣೆಯಲ್ಲಿ 2020 ಮಾ. 23ರಂದು ದೂರು ದಾಖಲಿಸಿದ್ದಕ್ಕೆ ಪ್ರತಿಯಾಗಿ ತಮ್ಮ ಕಕ್ಷಿದಾರರ ವಿರುದ್ಧ ಈ ಆರೋಪ ಮಾಡಿದ್ದಾರೆ. ಅವರ ಮನೆಯಿಂದ ಚೆಕ್ ಕಳವು ಮಾಡಿ ಸಹಿಯನ್ನು ಫೋರ್ಜರಿ ಮಾಡಲಾಗಿದೆ’ ಎಂದು ಪದ್ಮಜಾ ರಾವ್ ಪರ ವಕೀಲರು ವಾದಿಸಿದ್ದರು. ಆದರೆ, ಇದಕ್ಕೆ ಪೂರಕ ಪುರಾವೆ ಒದಗಿಸಿರಲಿಲ್ಲ.

ಬಿಜೆಪಿ ಬೆಂಬಲದಿಂದ ಕಾಂಗ್ರೆಸ್ ಸದಸ್ಯರಿಗೆ ಅಧಿಕಾರ ಭಾಗ್ಯ!

ಗಂಗಾವತಿ (ಕೊಪ್ಪಳ ಜಿಲ್ಲೆ): ಇಲ್ಲಿನ ನಗರಸಭೆಯ ಅಧಿಕಾರದ ಚುಕ್ಕಾಣಿ ಹಿಡಿಯಲು ಬಹುಮತಕ್ಕೆ ಬೇಕಾಗುವಷ್ಟು ಬಲವಿದ್ದರೂ ಕ್ಷೇತ್ರದ ಶಾಸಕ ಜನಾರ್ದನ ರೆಡ್ಡಿ ಅವರು ವಿಧಾನಸಭಾ ಚುನಾವಣಾ ಸಮಯದಲ್ಲಿ ತಮಗೆ ನೆರವಾಗಿದ್ದ ಕಾಂಗ್ರೆಸ್ ಸದಸ್ಯರನ್ನು ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನಾಗಿ ಮಾಡಿದ್ದಾರೆ.

ಕಾಂಗ್ರೆಸ್ ಸದಸ್ಯರಾಗಿರುವ ಮೌಲಾಸಾಬ್ ದಾದೇಸಾಬ್ ಅಧ್ಯಕ್ಷರಾಗಿ ಮತ್ತು ಪಾರ್ವತಮ್ಮ ದುರಗೇಶ ದೊಡ್ಡಮನಿ ಉಪಾಧ್ಯಕ್ಷೆಯಾಗಿ ಆಯ್ಕೆಯಾದರು. ಇವರಿಗೆ ತಲಾ 28 ಮತಗಳು ಬಂದವು. ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿಗಳಾಗಿದ್ದ ಖಾಸೀಂಸಾಬ್ ಗದ್ವಾಲ್ ಹಾಗೂ ಹುಲಿಗೆಮ್ಮ ಕಿರಿಕಿರಿ ಉಪಾಧ್ಯಕ್ಷೆ ಸ್ಥಾನಕ್ಕೆ ಸ್ಪರ್ಧಿಸಿದ್ದರು. ಇವರಿಗೆ ತಲಾ ಎಂಟು ಮತಗಳು ಲಭಿಸಿದವು.

ಚಿತ್ರದುರ್ಗ ವರದಿ: ಚಿತ್ರದುರ್ಗ ನಗರಸಭೆಯಲ್ಲಿ ಕೇವಲ ಐದು ಸದಸ್ಯ ಬಲ ಹೊಂದಿರುವ ಕಾಂಗ್ರೆಸ್, ಅಧ್ಯಕ್ಷ–ಉಪಾಧ್ಯಕ್ಷರ ಚುನಾವಣೆಯಲ್ಲಿ ಗೆದ್ದು ಗದ್ದುಗೆ ಏರಿತು. ಬಿಜೆಪಿಯೊಳಗಿನ ಒಡಕು, ಮೈತ್ರಿಪಕ್ಷ ಜೆಡಿಎಸ್ ಜೊತೆ ವಿಶ್ವಾಸದ ಕೊರತೆಯ ಕಾರಣಗಳಿಂದಾಗಿ ಕಾಂಗ್ರೆಸ್‌ಗೆ ಅಧಿಕಾರ ಒಲಿಯಿತು. ಕಾಂಗ್ರೆಸ್‌ನ ಬಿ.ಎನ್. ಸುಮಿತಾ ಅಧ್ಯಕ್ಷೆಯಾಗಿ, ಜಿ.ಎಸ್.ಶ್ರೀದೇವಿ ಉಪಾಧ್ಯಕ್ಷೆಯಾಗಿ ಆಯ್ಕೆಯಾದರು.

ಕೆಪಿಎಸ್‌ಸಿ: ಪೂರ್ವಭಾವಿ ಪರೀಕ್ಷೆ ಇಂದು

ಒಂದನೇ ಪುಟದಿಂದ...

ಪತ್ರಿಕೆ–1 ಪರೀಕ್ಷೆ ಬೆಳಿಗ್ಗೆ 10ರಿಂದ 12 ಗಂಟೆವರೆಗೆ, ಪತ್ರಿಕೆ –2 ಪರೀಕ್ಷೆಯು ಮಧ್ಯಾಹ್ನ 2ರಿಂದ 4ಗಂಟೆವರೆಗೆ ನಡೆಯಲಿದೆ. ಪರೀಕ್ಷೆ ಆರಂಭ ಆಗುವುದಕ್ಕಿಂತ ಎರಡು ಗಂಟೆ ಮುಂಚಿತವಾಗಿ ಅಭ್ಯರ್ಥಿಗಳು ಪರೀಕ್ಷಾ ಉಪ ಕೇಂದ್ರದ ಬಳಿ ಹಾಜರಿರಬೇಕು ಎಂದು ಕೆಪಿಎಸ್‌ಸಿ ತಿಳಿಸಿದೆ.

ಕೆಲಸ ಇರುವ ದಿನ (ಮಂಗಳವಾರ) ಪೂರ್ವಭಾವಿ ಪರೀಕ್ಷೆ ನಡೆಯುತ್ತಿರುವುದರಿಂದ ಎಲ್ಲ ಪರೀಕ್ಷಾ ಉಪ ಕೇಂದ್ರಗಳಿಗೆ ಅನ್ವಯವಾಗುವಂತೆ ಒಂದು ದಿನದ ವಿಶೇಷ ಸಾರ್ವತ್ರಿಕ ರಜೆ ಘೋಷಿಸಲಾಗಿದೆ. ಪರೀಕ್ಷೆಗೆ ಹಾಜರಾಗುವ ಸರ್ಕಾರಿ ನೌಕರರಿಗೂ ವಿಶೇಷ ಸಾಂದರ್ಭಿಕ ರಜೆ ಮಂಜೂರು ಮಾಡಲಾಗಿದೆ.

ಪಾರದರ್ಶಕ ಪರೀಕ್ಷೆ: ಕಟ್ಟುನಿಟ್ಟಿನ ಕ್ರಮ

ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಕೊಠಡಿಯೊಳಗೆ ಮೊಬೈಲ್, ಬ್ಲೂಟೂತ್, ಕ್ಯಾಲ್ಕುಲೇಟರ್, ವೈಟ್ ಫ್ಲೂಯಿಡ್, ವೈರ್‌ಲೆಸ್ ಸೆಟ್, ಪೇಪರ್, ಪುಸ್ತಕಗಳನ್ನು ತೆಗೆದುಕೊಂಡು ಹೋಗುವಂತಿಲ್ಲ. ತುಂಬು ತೋಳಿನ ಶರ್ಟ್, ಯಾವುದೇ ಆಭರಣಗಳು (ಮಂಗಳ ಸೂತ್ರ ಮತ್ತು ಕಾಲುಂಗುರವನ್ನು ಹೊರತುಪಡಿಸಿ), ಪುಲ್‌ಓವರ್ಸ್, ಜಾಕೆಟ್, ಸ್ವೆಟರ್ ಧರಿಸುವುದನ್ನು ನಿಷೇಧಿಸಲಾಗಿದೆ. ಲೋಹದ ಅಥವಾ ಪಾರದರ್ಶಕವಲ್ಲದ ನೀರಿನ ಬಾಟಲಿ ತೆಗೆದುಕೊಂಡು ಹೋಗುವುದಕ್ಕೂ ನಿರ್ಬಂಧ ವಿಧಿಸಲಾಗಿದೆ. ಕಿವಿ, ಬಾಯಿ ಮುಚ್ಚಿಕೊಳ್ಳುವಂತೆ ಅಥವಾ ಯಾವುದೇ ರೀತಿಯ ಫಿಲ್ಟರ್ ಇರುವ ಫೇಸ್ ಮಾಸ್ಕ್ ಧರಿಸಿ ಪರೀಕ್ಷಾ ಕೊಠಡಿಗೆ ಪ್ರವೇಶಿಸುವಂತಿಲ್ಲ. ಪರೀಕ್ಷಾ ಕೇಂದ್ರದ ಒಳಗೆ ಪ್ರವೇಶಿಸುವ ಮೊದಲು ಅಭ್ಯರ್ಥಿಗಳನ್ನು ತೀವ್ರ ಪರಿಶೋಧನೆಗೆ ಒಳಪಡಿಸಲಾಗುವುದು ಎಂದು ಕೆಪಿಎಸ್‌ಸಿ ತಿಳಿಸಿದೆ.

ಹೆದ್ದಾರಿ ಯೋಜನೆಗೆ ‘ಭೂ ಗ್ರಹಣ’

ಒಂದನೇ ಪುಟದಿಂದ...

ಸಚಿವರ ಅಸಮಾಧಾನ: ರಾಜ್ಯದ ರಾಷ್ಟ್ರೀಯ ಹೆದ್ದಾರಿ ಯೋಜನೆಗಳ ಬಗ್ಗೆ ನಿತಿನ್ ಗಡ್ಕರಿ ಅವರು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರದ ಸಚಿವರು ಹಾಗೂ ರಾಜ್ಯದ ಅಧಿಕಾರಿಗಳ ಜತೆಗೆ ಇತ್ತೀಚೆಗೆ ಸಭೆ ನಡೆಸಿದ್ದಾರೆ.

ರಾಜ್ಯದಲ್ಲಿ ಕಾಮಗಾರಿಗಳು ನಿಧಾನಗತಿಯಲ್ಲಿ ನಡೆಯುತ್ತಿರುವ ಬಗ್ಗೆ ಹಾಗೂ ಭೂಸ್ವಾಧೀನ ಕಗ್ಗಂಟಾಗಿರುವ ಕುರಿತು ಗಡ್ಕರಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. 15 ದಿನಗಳಲ್ಲಿ ಮತ್ತೆ ರಾಜ್ಯ ಸರ್ಕಾರದೊಂದಿಗೆ ಸಭೆ ನಡೆಸಿ ಕಾಮಗಾರಿಗಳ ತೊಡಕುಗಳನ್ನು ನಿವಾರಿಸುವ ಬಗ್ಗೆ ತೀರ್ಮಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮೈಸೂರು–ಮಡಿಕೇರಿ ಹೆದ್ದಾರಿ

ಯೋಜನೆ	(ಕಿ.ಮೀ)	ಮೊತ್ತ (₹ಕೋಟಿಗಳಲ್ಲಿ)
ಪ್ಯಾಕೇಜ್ 2	22.7	909
ಪ್ಯಾಕೇಜ್ 3	24	883
ಪ್ಯಾಕೇಜ್ 4	26	1,062
ಪ್ಯಾಕೇಜ್ 5	18.98	1,272

ಆಮೆಗತಿಯಲ್ಲಿ ಹೆದ್ದಾರಿ ಕಾಮಗಾರಿಗಳು

ಹೆದ್ದಾರಿ	ವೆಚ್ಚ (₹ಕೋಟಿಗಳಲ್ಲಿ)	ಕಿ.ಮೀ	ಪ್ರಗತಿ (ಶೇ)
ಹುಬ್ಬಳ್ಳಿ–ಧಾರವಾಡ (ಆರುಪಥ)	1,135	30.35	42.70
ಹಾಸನ–ಮಾರೇನಹಳ್ಳಿ	701	45	77
ಹೊಸಪೇಟೆ–ಬಳ್ಳಾರಿ–ಆಂಧ್ರಗಡಿ	1,340	95	39.30
ಹಾವೇರಿ–ಶಿರಸಿ	313	74	12.80
ಕಾರ್ಕಳ–ಮಂಗಳೂರು	1,409	45	41
ನೆಲಮಂಗಲ–ತುಮಕೂರು (ಆರು ಪಥ)	2,032	44	41
ಪಟ್ಟದಕಲ್ಲು–ಶಿರೂರು ತಿರುವು	264	26	1
ಗೌರಿಬಿದನೂರು–ಚಿಕ್ಕಬಳ್ಳಾಪುರ	398	51.5	50
ಶರಾವತಿ ಹಿನ್ನೀರಿನಲ್ಲಿ ಸೇತುವೆ ನಿರ್ಮಾಣ, ಹೆದ್ದಾರಿ ವಿಸ್ತರಣೆ	313	13	5
ಬಾಣಾಪುರ–ಗದ್ದನಕೇರಿ	445	26	9.5
ಕಡೂರು–ಹೊಸದುರ್ಗ	471	48	0

ಯೋಜನೆಗಳಿಗೆ ಭೂಮಿ ಅಲಭ್ಯ

ಬೆಳಗಾವಿ–ಹುನಗುಂದ–ರಾಯಚೂರು ಹೆದ್ದಾರಿ (ರಾಷ್ಟ್ರೀಯ ಹೆದ್ದಾರಿ 748ಎ)

ಯೋಜನೆ	ಉದ್ದ (ಕಿ.ಮೀ)	ಮೊತ್ತ (₹ಕೋಟಿಗಳಲ್ಲಿ)
ಪ್ಯಾಕೇಜ್ 1	43.8	1,452
ಪ್ಯಾಕೇಜ್ 2	46	1,427
ಪ್ಯಾಕೇಜ್ 3	46	1,363
ಪ್ಯಾಕೇಜ್ 4	46	1,311
ಪ್ಯಾಕೇಜ್ 5	46	1,142
ಪ್ಯಾಕೇಜ್ 6	44	1,246
ಬಳ್ಳಾರಿ–ಬೈರಾಪುರ ಹೆದ್ದಾರಿ	13	604
ಹೊನ್ನಾವರ ಬಂದರು–ಕಾಸರಕೋಡ್	4.58	172

ಕರ್ನಾಟಕ ಸರ್ಕಾರ
ನಗರಸಭೆ ಕಾರ್ಯಾಲಯ, ಶಹಾಪೂರ
ಜಿ: ಯಾದಗಿರಿ. ಕರ್ನಾಟಕ ರಾಜ್ಯ.
Website:www.shahapurcity.gov.in e-mail: itstaff_ulb_shahapur@yahoo.com,

ಕ್ರ.ಸಂ/ನಸಶ/ಟೆಂಡರ್/2024–25 ದಿನಾಂಕ: 23.08.2024

–: ಟೆಂಡರ್ ಪ್ರಕಟಣೆ : –

ಶಹಾಪುರ ನಗರಸಭೆ IDSMT 2024–25 ಅನುದಾನದಲ್ಲಿ ತೆಗೆದುಕೊಂಡ ಈ ಕೆಳಕಂಡ ಕಾಮಗಾರಿಯ ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ.
1) **ಕಾಮಗಾರಿಯ ಹೆಸರು:** Construction of Protection wall for Nala of proposed IDSMT (Right Side of Nala) layout of shahapur city.ಇಂಡೆಂಟ್ ನಂಬರ್: DMA/2024-25/FP/WORK_INDENT27714. ಅಂದಾಜು ಮೊತ್ತ(ರೂ. ಲಕ್ಷಗಳಲ್ಲಿ): 99.00. ಇ.ಎಂ.ಡಿ (ರೂ.ಗಳಲ್ಲಿ): As per E Portel. **ಕಾಮಗಾರಿಯ ಅವದಿ:** 06 ತಿಂಗಳು. **ಗುತ್ತಿಗೆದಾರರ ದರ್ಜೆ:** 3ನೇ ದರ್ಜೆ ಮೇಲ್ಪಟ್ಟು.
2) **ಕಾಮಗಾರಿಯ ಹೆಸರು:** Construction of compound wall and Tin shed with CC bed at DWCC site in shahapur.ಇಂಡೆಂಟ್ ನಂಬರ್: DMA/2024-25/OW/WORK_INDENT27717. ಅಂದಾಜು ಮೊತ್ತ(ರೂ. ಲಕ್ಷಗಳಲ್ಲಿ): 50.00. ಇ.ಎಂ.ಡಿ (ರೂ.ಗಳಲ್ಲಿ): As per E Portel. **ಕಾಮಗಾರಿಯ ಅವದಿ:** 06 ತಿಂಗಳು. **ಗುತ್ತಿಗೆದಾರರ ದರ್ಜೆ:** 3ನೇ ದರ್ಜೆ ಮೇಲ್ಪಟ್ಟು.
1) ಭರ್ತಿ ಮಾಡಿದ ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 02.09.2024 ಸಾಯಂಕಾಲ 5–00 ಘಂಟೆಗೆ 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 03.09.2024 ಸಾಯಂಕಾಲ 5–10 ಘಂಟೆಗೆ 3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 06.09.2024 ಬೆಳಿಗ್ಗೆ 12.00 ಘಂಟೆಗೆ 4) ವಿಳಾಸ: www.kppp.karnatak.gov.in

ಸಹಿ/– ಪೌರಾಯುಕ್ತರು
ನಗರಸಭೆ ಶಹಾಪುರ
ವಾ.ಸಾ.ಸಂ.ಇ/ಯಾದಗಿರಿ/174/ಕೆ.ಎಸ್.ಎಂ.ಸಿ.ಎ/2024–25

ಕರ್ನಾಟಕ ಸರ್ಕಾರ
ಪಟ್ಟಣ ಪಂಚಾಯತ ಕಾರ್ಯಾಲಯ ಯಡ್ರಾಮಿ
ತಾ. ಯಡ್ರಾಮಿ, ಜಿ. ಕಲಬುರಗಿ, Phone No. :08442 200014 E mail:- co.tpyadrami@gmail.com

ಸಂ/ಪ.ಪಂ.ಯ./ಕಾಮಗಾರಿ/2024–25 ದಿನಾಂಕ: 20.08.2024

:: ಅಲ್ಪಾವಧಿ ಇ–ಪ್ರಕ್ಯೊರಮೆಂಟ್ ಪ್ರಕಟಣೆ ::

1) ಕಾಮಗಾರಿ / ಸರಕು / ಸೇವೆಯ / ವಿವರ : **15th Finance 2024-25**: 1) DMA/2024-25/RD/WORK_INDENT26157, 2) DMA/2024-25/BD/WORK_INDENT26124, 3) DMA 2024-25/RD/WORK_INDENT26156, 4) DMA/2024-25/OW/WORK_INDENT26158 5) DMA/2024-25/OW/WORK_INDENT26338, 6) DMA/2024-25/SE3196, 7) DMA/2024-25/IND3115, 8) DMA/2024-25/IND3016, 9) DMA/2024-25/IND3138, 10) DMA/2024-25/IND3124, 11) DMA/2024-25/OW/WORK_INDENT26339, 2) ಕಾಮಗಾರಿ/ಸರಕು/ಅಂದಾಜು ಮೊತ್ತ /ಟೆಂಡರ ಮೊತ್ತದ ವಿವರ : ಕಾಮಗಾರಿಯ ಟೆಂಡರಗೆ ಇಟ್ಟ ಮೊತ್ತ: 1. 17.16 Lakhs, 2. 19.18 Lakhs, 3. 17.61 Lakhs, 4. 09.77 Lakhs, 5. 21.62 Lakhs, 6. 3.15 Lakhs, 7. 12.00 Lakhs, 8. 12.16 Lakhs, 9. 1.80 Lakhs, 10. 65.08 Lakhs, 11. 54.28 Lakhs, 3) ಗುತ್ತಿಗೆದಾರರ ಅರ್ಹತೆ: 03ನೇ ದರ್ಜೆ& ಮೇಲ್ಪಟ್ಟು, 02ನೇ ದರ್ಜೆ& ಮೇಲ್ಪಟ್ಟು 01ನೇ & ದರ್ಜೆ, 4) ಖಾಲಿ ಟೆಂಡರ ಫಾರ್ಮಗಳಿಗೆ ಅರ್ಜಿ ಸಲ್ಲಿಸಲು ಹಾಗೂ ಶೆಡ್ಯೂಲ–ಬಿ ಯನ್ನು ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: sl.no 1 to 6 : **28.08.2024 up to 17:00:00 Hours**, sl.no 7 to 9 : **10.09.2024 up 17:00**, Sl no 10 to 11 : **30.9.2024 up 17:00,** 5) ಟೆಂಡರ ಅರ್ಜಿಯ ಬೆಲೆ ಮತ್ತು ಇಎಂಡಿ ಮೊತ್ತದ ವಿವರ: ಇ–ಪ್ರಕ್ಯೊರಮೆಂಟ್ ಟೆಂಡರ್ ನಿಯಮದ ಪ್ರಕಾರ ಸಲ್ಲಿಸತಕ್ಕದ್ದು, 6) ಟೆಂಡರ ತೆರೆಯುವ ದಿನಾಂಕ: sl.no 1 to 6 : **30.08.2024 up to 17:00:00 Hours,** sl.no 7 to 9 : **12.09.2024 up 17:00,** Sl no 10 to 11 : **03.10.2024 up 17:00,** 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ ದೂರವಾಣಿ ಸಂಖ್ಯೆ: ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಯಡ್ರಾಮಿ **9972430009,** 8) ಇ–ಮೇಲ್ ವಿಳಾಸ: E-mail: co.tpyadrami@gmail.com

ಸಹಿ/– ಮುಖ್ಯಾಧಿಕಾರಿ
ಪಟ್ಟಣ ಪಂಚಾಯತ ಯಡ್ರಾಮಿ
ವಾ.ಸಾ.ಸಂ.ಇ/ಕಲಬುರಗಿ/374/ಕೆ.ಎಸ್.ಎಂ.ಸಿ.&ಎ/2024–25

ಕರ್ನಾಟಕ ಸರ್ಕಾರ
ಕಾರ್ಯದರ್ಶಿಗಳ ಕಾರ್ಯಾಲಯ, ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
ಮಹದೇಶ್ವರಬೆಟ್ಟ, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ
ದೂರವಾಣಿ ಸಂಖ್ಯೆ : 08225–272128 ಫ್ಯಾಕ್ಸ್ ಸಂಖ್ಯೆ : 08225–272123 Email : sec.mmtemple@gmail.com

ಸಂಖ್ಯೆ : ಶ್ರೀ ಮ.ಮ.ಕ್ಷೇತ್ರ.ಅ.ಪ್ರಾ/ಗುತ್ತಿಗೆ/8/ಪಿಆರ್/16/2024–25 ದಿನಾಂಕ : 12–08–2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಕರ್ನಾಟಕ ಸಾರ್ವಜನಿಕ ಇ–ಪ್ರಕ್ಯೂರ್‌ಮೆಂಟ್ ಮತ್ತು ಬಹಿರಂಗ ಹರಾಜು ಪ್ರಕಟಣೆ

ಕ್ರ. ಸಂ.	ಹಕ್ಕುಬಾಧ್ಯತೆಗಳ ವಿವರ	ಗುತ್ತಿಗೆ ಅವಧಿ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1	ಶ್ರೀ ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ರಾಜಗೋಪುರ, ಮುಖ್ಯಗೋಪುರ, ಆಲಂಬಾಡಿ, ಶ್ರೀ ಬಸವೇಶ್ವರ ಸನ್ನಿಧಿ ಹಾಗೂ ತಾಳುಬೆಟ್ಟ ಮುಖ್ಯದ್ವಾರದ ಮುಂಭಾಗ ಭಕ್ತಾಧಿಗಳು ಒಡೆಯುವ ಈಡುಗಾಯಿ ಶೇಖರಣೆಯ ಹಕ್ಕುಬಾಧ್ಯತೆಯನ್ನು 2024–25ನೇ ಸಾಲಿಗೆ ಇ–ಟೆಂಡರ್ ಕಂ ಬಹಿರಂಗ ಹರಾಜಿನಲ್ಲಿ ಬಿಡುವ ಬಗ್ಗೆ.	1 ವರ್ಷ	25.00	50,000=00
2	ಶ್ರೀ ಮಲೈ ಮಹದೇಶ್ವರಸ್ವಾಮಿಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಮಾಸ್ಟರ್ ಪ್ಲಾನ್ ಆವರಣದಲ್ಲಿ ಪ್ರಾಧಿಕಾರ ನಿಗಧಿಪಡಿಸಿದ 4 ಕಡೆಗಳಲ್ಲಿ ಅಂದರೆ 1) ಸಂಕಮ್ಮ ನಿಲಯ ರಸ್ತೆಯ ಆವರಣ 2) ಡಿ–ಮಾದರಿ ಕುಠೀರ ಎದುರು 3) ಅಂತರಗಂಗೆ ತಂಗುದಾಣ 4) ರಂಗಮಂದಿರದ ಬಳಿ ಭಕ್ತಾಧಿಗಳಿಗೆ ರಾತ್ರಿ ವೇಳೆಯಲ್ಲಿ ಮಲಗಲು ಚಾಪೆ, ರಗ್ಗು, ದಿಂಬು ಗಳನ್ನು ಬಾಡಿಗೆ ಮೇರೆ ಶುಲ್ಕ ವಸೂಲು ಮಾಡುವ ಹಕ್ಕು ಬಾಧ್ಯತೆ 2024–25ನೇ ಸಾಲಿಗೆ ಇ– ಟೆಂಡರ್ ಕಂ ಬಹಿರಂಗ ಹರಾಜಿನಲ್ಲಿ ಬಿಡುವ ಬಗ್ಗೆ.	1 ವರ್ಷ	24.00	50,000=00
3	ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ದರ್ಪಣ ಮಂದಿರ ವೀಕ್ಷಿಸುವ ಭಕ್ತಾಧಿಗಳಿಂದ ಪ್ರವೇಶ ಶುಲ್ಕ ಮತ್ತು ಭಾವಚಿತ್ರ ತೆಗೆಸಲು ಅಪೇಕ್ಷೆ ಪಡುವ ಭಕ್ತಾಧಿಗಳಿಂದ ಪ್ರಾಧಿಕಾರ ನಿಗಧಿಪಡಿಸಿರುವ ಶುಲ್ಕ ವಸೂಲಾತಿ ಮಾಡುವ ಹಕ್ಕು ಬಾಧ್ಯತೆಯನ್ನು 2024–25ನೇ ಸಾಲಿಗೆ ಇ-ಟೆಂಡರ್ ಕಂ ಬಹಿರಂಗ ಹರಾಜಿನಲ್ಲಿ ಬಿಡುವ ಬಗ್ಗೆ.	1 ವರ್ಷ	12.00	50,000=00
4	ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಚಂಡಿಬಸವೇಶ್ವರ ವೃತ್ತದಲ್ಲಿನ ಉಪಹಾರ ದರ್ಶಿನಿಯನ್ನು 2024–25, 2025–26ನೇ ಸಾಲಿಗೆ ಇ–ಟೆಂಡರ್ ಕಂ ಬಹಿರಂಗ ಹರಾಜಿನಲ್ಲಿ ಬಿಡುವ ಬಗ್ಗೆ	2 ವರ್ಷ	9.00	50,000=00
5	ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಅಂತರಗಂಗೆ ರಸ್ತೆಯ ಮುಡುಶೆಡ್ ಮುಂಭಾಗದ ಟೀ ಸ್ಟಾಲ್‌ನ್ನು 2024–25, 2025–26 ನೇ ಸಾಲಿಗೆ ಇ–ಟೆಂಡರ್ ಕಂ ಬಹಿರಂಗ ಹರಾಜಿನಲ್ಲಿ ಬಿಡುವ ಬಗ್ಗೆ.	2 ವರ್ಷ	5.00	50,000=00
6	ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಶಿವದರ್ಶಿನಿ ವಸತಿ ಗೃಹದ ಮುಂಭಾಗದ ಟೀ ಸ್ಟಾಲ್‌ನ್ನು 2024–25, 2025–26 ನೇ ಸಾಲಿಗೆ ಇ–ಟೆಂಡರ್ ಕಂ ಬಹಿರಂಗ ಹರಾಜಿನಲ್ಲಿ ಬಿಡುವ ಬಗ್ಗೆ.	2 ವರ್ಷ	3.00	50,000=00
7	ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ **ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂಭಾಗ** ಹೊಸದಾಗಿ ನಿರ್ಮಿಸಿರುವ **ಪಾರ್ಕಿಂಗ್ ಯಾರ್ಡ್‌**ನಲ್ಲಿ ವಾಹನ ನಿಲುಗಡೆ ಶುಲ್ಕ **ವಸೂಲಾತಿ** ಹಕ್ಕುಬಾಧ್ಯತೆಯನ್ನು 2024–25 ನೇ ಸಾಲಿಗೆ ಇ–ಟೆಂಡರ್‌ನಲ್ಲಿ ಬಿಡುವ ಬಗ್ಗೆ.	1 ವರ್ಷ	10.00	50,000=00

ಕ್ರ. ಸಂ.	ಮಳಿಗೆಗಳ ವಿವರ	ಇ.ಎಂ.ಡಿ.	ವರ್ಗ ಮತ್ತು ಮಳಿಗೆ ಸಂಖ್ಯೆ
8	ಬಸ್ ನಿಲ್ದಾಣದ ವಾಣಿಜ್ಯ ಸಂಕೀರ್ಣ ಮಳಿಗೆಗಳ ಪೈಕಿ 8 ಮಳಿಗೆಗಳು 11 ತಿಂಗಳು ಮಾತ್ರ	10,000.00	ಸಾ.ವರ್ಗ : 17, 18, 19, 22, 24, 26, 28 ಪರಿಶಿಷ್ಟ ಜಾತಿ : 29
	ತಂಬಡಿಗೇರಿಗೆ ಹೋಗುವ ರಸ್ತೆಯ ವಾಣಿಜ್ಯ ಸಂಕೀರ್ಣ–02 11 ತಿಂಗಳು ಮಾತ್ರ	30,000.00	ಸಾ.ವರ್ಗ : ಮಳಿಗೆ ನಂ: 1, 2
9	ಬಸ್ ನಿಲ್ದಾಣದ ಹತ್ತಿರ ಗುಂಜುಮಲೆ ವಾಣೀಜ್ಯ ಸಂಕೀರ್ಣ ಮಳಿಗೆಗಳ ಪೈಕಿ 10 ಮಳಿಗೆಗಳು 11 ತಿಂಗಳು ಮಾತ್ರ	30,000.00	ಸಾ.ವರ್ಗ : 1, 6, 7, 12, 15, 16, 19 ಪರಿಶಿಷ್ಟ ಜಾತಿ : 4, 21 ಪರಿಶಿಷ್ಟ ಪಂಗಡ : 11
10	ಬಸ್ ನಿಲ್ದಾಣದ ಹತ್ತಿರದ ನಿರ್ಮಿಸಿರುವ ನಡುಮಲೆ 90 ಎ.ಸಿ. ಶೀಟ್‌ಮಳಿಗೆಗಳ ಪೈಕಿ 47 ಮಳಿಗೆಗಳು 11 ತಿಂಗಳು ಮಾತ್ರ	30,000.00	ಸಾ.ವರ್ಗ : 2, 3, 8, 6, 7, 10, 11, 14, 15, 16, 18, 19, 28, 32, 35, 37, 41, 44, 49, 50, 52, 53, 55, 56, 57, 58, 61, 64, 65, 67, 72, 73, 79, 84,86, 89 ಪರಿಶಿಷ್ಟ ಜಾತಿ : 4, 20, 25, 34, 62, 66, 77, 85 ಪರಿಶಿಷ್ಟ ಪಂಗಡ : 45, 82 ಅಂಗವಿಕಲರಿಗೆ : 24
11	ಮೂಡಲ ಮಲೆ ವಾಣಿಜ್ಯ ಸಂಕೀರ್ಣ 8 ಮಳಿಗೆಗಳು 11 ತಿಂಗಳು ಮಾತ್ರ	30,000.00	ಸಾ.ವರ್ಗ : 2, 11, 15, 27, 41, 45, 46 ಪರಿಶಿಷ್ಟ ಜಾತಿ : 34
12	ಅಂತರಗಂಗೆ ಸಾಲು ಮಳಿಗೆಗಳ ಪೈಕಿ 13 ಮಳಿಗೆ 11 ತಿಂಗಳು ಮಾತ್ರ.	30,000.00	ಸಾ.ವರ್ಗ : 4, 5, 7, 9, 12, 15, 18, 24, 25, 28 ಪರಿಶಿಷ್ಟ ಜಾತಿ : 8, 22 ಪರಿಶಿಷ್ಟ ಪಂಗಡ : 20

ವಿವರಗಳನ್ನು https://kppp.karnataka.gov.in/ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಹೆಚ್ಚಿನ ವಿವರಗಳಿಗೆ ಕಛೇರಿಯ ಅವಧಿಯಲ್ಲಿ ಸ್ಪಷ್ಟೀಕರಣಬೇಕಾದಲ್ಲಿ ಉಪಕಾರ್ಯದರ್ಶಿಯವರ **ಮೊಬೈಲ್ ನಂ. 9902593369.** ವಿಷಯ ನಿರ್ವಾಹಕರು **ಮೊಬೈಲ್ ನಂ. 8277244893** ಸಂಪರ್ಕಿಸತಕ್ಕದ್ದು.

ಇ–ಪ್ರಕ್ಯೂರ್‌ಮೆಂಟ್ ಮತ್ತು ಬಹಿರಂಗ ಹರಾಜು ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತಿದೆ

ಕ್ರ.ಸಂ.	ವಿವರ	ದಿನಾಂಕ	ಷರಾ
1	ಇ–ಪೋರ್ಟಲ್‌ನಲ್ಲಿ ಟೆಂಡರ್ ಪ್ರಕ್ರಿಯೆಗಳು ಚಾಲ್ತಿಗೆ ಬರುವ ದಿನಾಂಕ	14–08–2024	ರ ನಂತರ
2	ಇ–ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ವೇಳೆ	29–08–2024	ಸಂಜೆ 4.00 ಗಂಟೆವರೆಗೆ
3	ಬಹಿರಂಗ ಹರಾಜು ಕ್ರಮ ಸಂಖ್ಯೆ 8, 9, 11 & 12	30–08–2024	ಸ್ಥಳ : ಬಸ್ ನಿಲ್ದಾಣದ ವಾಣೀಜ್ಯ ಸಂಕೀರ್ಣ ಬೆಳಗ್ಗೆ 10.00 ರಿಂದ ಸಂಜೆ 5.30 ರವರೆಗೆ
4	ಬಹಿರಂಗ ಹರಾಜು ಕ್ರಮ ಸಂಖ್ಯೆ 1 ರಿಂದ 7 ಮತ್ತು 10	31–08–2024	ಸ್ಥಳ : ಬಸ್ ನಿಲ್ದಾಣದ ವಾಣೀಜ್ಯ ಸಂಕೀರ್ಣ ಬೆಳಗ್ಗೆ 10.00 ರಿಂದ ಸಂಜೆ 5.30 ರವರೆಗೆ
5.	ಇ–ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ	02–09–2024	ಇ–ಟೆಂಡರ್ ಸಂಜೆ 5.00 ಗಂಟೆಯ ನಂತರ ತೆರೆಯಲಾಗುವುದು

ಸಂ : ವಾಸಾಸಂಇ:ಚಾನಗರ:196:2024–25
ಸಹಿ/– ಕಾರ್ಯದರ್ಶಿ, ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರ ಬೆಟ್ಟ

ಕರ್ನಾಟಕ ಸರ್ಕಾರ
ಗಣಿ ಮತ್ತು ಭೂವಿಜ್ಞಾನ ಇಲಾಖೆ
ನಿರ್ದೇಶಕರ ಕಛೇರಿ ನಂ.49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001. ಫೋನ್ ನಂ. 22384134/35

ಸಂಖ್ಯೆ: ಗಭೂಇ/ಟಿಎಸ್/ಪಿ.ಸಿ/2024–25 ದಿನಾಂಕ: 26.08.2024

ಟೆಂಡರ್ ಪ್ರಕಟಣೆ

ಕೇಂದ್ರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ಇಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೆರಳಚ್ಚು ಪ್ರತಿಗಳನ್ನು (Photocopying) ತೆಗೆಯಲು ಅರ್ಹ ಸಂಸ್ಥೆಗಳಿಂದ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್ ಅರ್ಜಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in/ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 11.09.2024 ಸಮಯ 17.30 ಗಂಟೆಯವರೆಗೆ, ಬಿಡ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮುಖಾಂತರ ಸಲ್ಲಿಸುವುದು.

ಸಹಿ/– ಟೆಂಡರ್ ಆಹ್ವಾನ ಪ್ರಾಧಿಕಾರಿ
ಗಣಿ ಮತ್ತು ಭೂವಿಜ್ಞಾನ ಇಲಾಖೆ
DIPR/CP/1656/Zen/2024-25

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಕಾಮಗಾರಿ ವಿಭಾಗ: ಹಾಸನ
ಕ.ರಾ.ರ.ಸಾ.ನಿ ಪ್ರಾದೇಶಿಕ ತರಬೇತಿ ಕೇಂದ್ರ ಕಟ್ಟಡ, ಡೈರಿ ವೃತ್ತದ ಹತ್ತಿರ, ರಿಂಗ್ ರಸ್ತೆ, ಹಾಸನ – 573 201.
ದೂರವಾಣಿ: 08172–295262. e-mail:eehsn@ksrtc.org

ಸಂ:ಕರಾಸಾ/ಕಾವಿಹಾ/ಕಾನಿಅ/ಕಿಅ/309/2024–25 ದಿನಾಂಕ: 23.08.2024

ಟೆಂಡರ್ ಪ್ರಕಟಣೆ ಸಂ: 02/2024–25 (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ ಪದ್ಧತಿಯಲ್ಲಿ)

ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಕೆಪಿಡಬ್ಲ್ಯೂಡಿ/ಸಿಪಿಡಬ್ಲ್ಯೂಡಿ/ಎಂಇಎಸ್ ನಲ್ಲಿ ನೋಂದಾಯಿತರಾಗಿರುವ ಅರ್ಹ ಕಾಮಗಾರಿ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿ ಕೆಲಸಗಳಿಗೆ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ’ಇ’ ಆಡಳಿತದೊಡನೆ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಲು ಕೋರಲಾಗಿದೆ.

ಟೆಂಡರ್ ಪ್ರಕಟಣೆ ಮತ್ತು ಹೆಚ್ಚಿನ ವಿವರಗಳನ್ನು ಯಾವುದೇ ವೆಚ್ಚವಿಲ್ಲದೇ https://kppp.karnataka.gov.in ವೆಬ್‌ಸೈಟ್‌ಗೆ ಲಾಗಿಇನ್ ಮಾಡಿ **ದಿನಾಂಕ: 26–08–2024ರ ನಂತರ** ವಿವರಗಳನ್ನು ಪಡೆದುಕೊಳ್ಳಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಮುಂಗಡ ಠೇವಣಿ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ
1.	ಮಂಗಳೂರು ಬಸ್ ನಿಲ್ದಾಣದಲ್ಲಿ ಸಾರ್ವಜನಿಕ ಪ್ರಯಾಣಿಕರಿಗೆ ಮೂಲಭೂತ ಸೌಲಭ್ಯಕ್ಕಾಗಿ ಶೌಚಾಲಯದ ಕಟ್ಟಡವನ್ನು ಆಧುನೀಕರಿಸುವುದು.	33.39	66,783/–	11–09–2024

ಹೆಚ್ಚಿನ ಮಾಹಿತಿಗಳನ್ನು ಕಾರ್ಯನಿರ್ವಾಹಕ ಅಭಿಯಂತರರು, ಕ.ರಾ.ರ.ಸಾ.ನಿಗಮ, ಕಾಮಗಾರಿ ವಿಭಾಗ, ಕ.ರಾ.ರ.ಸಾ.ನಿಗಮ ಪ್ರಾದೇಶಿಕ ತರಬೇತಿ ಕಟ್ಟಡ, ಡೈರಿ ವೃತ್ತ ಹತ್ತಿರ, ರಿಂಗ್ ರಸ್ತೆ, ಹಾಸನ, ಇಲ್ಲಿ ಕಚೇರಿ ದಿನಗಳಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ವಾಸಾಸಂಇ/ವಾ.ಪ್ರ/1666/ಎಂಎಎ/2024–25
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕ.ರಾ.ರ.ಸಾ.ನಿಗಮ, ಕಾಮಗಾರಿ ವಿಭಾಗ, ಹಾಸನ.

ಕರ್ನಾಟಕ ಗೃಹ ಮಂಡಳಿ
ಕರ್ನಾಟಕ ಗೃಹ ಮಂಡಳಿ ಸಮುದಾಯ ನಿರ್ಮಾಣದತ್ತ
ಗೃಹ ಆಯುಕ್ತರ ಕಛೇರಿ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು–560 009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಪ.ಪ್ರ/2024–25 ದಿನಾಂಕ: 26–08–2024

ಸಾರ್ವಜನಿಕ ಪ್ರಕಟಣೆ

ಕರ್ನಾಟಕಗೃಹ ಮಂಡಳಿ ವತಿಯಿಂದ ಈ ಕೆಳಕಂಡ ಬಡಾವಣೆಗಳಲ್ಲಿ ಅಭಿವೃದ್ಧಿಪಡಿಸಿರುವ ಮನೆ/ನಿವೇಶನಗಳನ್ನು ಈಗಾಗಲೇ ಹಂಚಿಕೆ ಮಾಡಲಾಗಿದೆ. ಹಂಚಿಕೆ ನಂತರ ಉಳಿದಿರುವ ಮನೆ/ನಿವೇಶನಗಳನ್ನು ವಿಲೇವಾರಿ ಮಾಡಲು ಆನ್‌ಲೈನ್ ಮುಖಾಂತರ ಸಾರ್ವಜನಿಕರಿಂದ ಆರಂಭಿಕ ಠೇವಣಿಯೊಂದಿಗೆ ಹೊಸದಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಸಾರ್ವಜನಿಕರು e-payment ಮೂಲಕ ಅರಂಭಿಕ ಠೇವಣಿ ಹಣವನ್ನು ಪಾವತಿ ಮಾಡಿ **ದಿನಾಂಕ: 30–08–2024** ರಿಂದ **ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 12–09–2024** ಆಗಿರುತ್ತದೆ.

ಮನೆ/ನಿವೇಶನಗಳಿಗೆ ಪಾವತಿಸಬೇಕಾಗಿರುವ ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಮೊತ್ತ
ರೂ. EWS-25,300/-, LIG-50,500/-, MIG-76,000/-, HIG-I - 1,01,500/- HIG-II - 1,26,500/-

ಕ್ರ ಸಂ	ಬಡಾವಣೆ	ಮಾದರಿ	ವರ್ಗವಾರು ಲಭ್ಯವಿರುವ ಅಂದಾಜು ಸ್ವತ್ತುಗಳು						ಮಂಡಳಿಯ ದರ ಪ್ರತಿ ಚದರ ಅಡಿಗೆ
			EWS	LIG	MIG	HIG-I	HIG-II	ಒಟ್ಟು	
1.	ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲ್ಲೂಕು ಚಿಕ್ಕಬಾದವಾಡಗಿ	ನಿವೇಶನ	-	-	30	04	01	35	600/-
2.	ಬಾಗಲಕೋಟೆ ಜಿಲ್ಲೆ, ಬೀಳಗಿ	ನಿವೇಶನ	-	-	03	01	-	04	500/-
3.	ವಿಜಯಪುರ ಜಿಲ್ಲೆ, ಬಬಲೇಶ್ವರ	ನಿವೇಶನ	-	03	28	09	-	40	475/-
4.	ವಿಜಯಪುರ ಜಿಲ್ಲೆ, ಮಹಲ್‌ಬಗಾಯತ್	ಮನೆ	-	20	02	-	-	22	LIG-16,00,000/- MIG-19,00,000/-
5.	ವಿಜಯಪುರ ಜಿಲ್ಲೆ, ಮುದ್ದೇಬಿಹಾಳ 2ನೇ ಹಂತ	ನಿವೇಶನ	-	29	69	32	02	132	600/-
6.	ಚಿಕ್ಕಮಗಳೂರು ಜಿಲ್ಲೆ, ಕಡೂರು	ನಿವೇಶನ	-	14	-	05	-	19	1150/-
7.	ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಅನಂತನಹಳ್ಳಿ & ಮೆಳ್ಳಿಕಟ್ಟೆ	ನಿವೇಶನ	-	-	02	04	06	12	650/-
8.	ದಾವಣಗೆರೆ ಜಿಲ್ಲೆ, ಕುಂದುವಾಡ–ದಾವಣಗೆರೆ	ನಿವೇಶನ	-	03	01	10	02	16	1300/-
9.	ಕಲಬುರಗಿ ಜಿಲ್ಲೆ, ಕಾಳಗನೂರು ಕುಸನೂರು 1ನೇ ಹಂತ	ಮನೆ	-	10	02	-	-	12	LIG-13,50,000/- MIG-18,50,000/-
10.	ಕಲಬುರಗಿ ಜಿಲ್ಲೆ, ಚಿಂಚೋಳ್ಳಿ ಸರ್ವೆ ನಂ. 155/5, 155/7	ನಿವೇಶನ	01	05	27	02	-	35	500/- (for EWS Rs. 250/-)
11.	ಬೆಳಗಾವಿ ಜಿಲ್ಲೆ, ಬಸವನಕುಡಚಿ 1ನೇ ಹಂತ	ನಿವೇಶನ	-	05	12	08	-	25	1900/-
12.	ಬೆಳಗಾವಿ ಜಿಲ್ಲೆ, ಬಸವನಕುಡಚಿ 2ನೇ ಹಂತ	ನಿವೇಶನ	-	03	01	23	-	27	1900/-
13.	ಬೀದರ್ ಜಿಲ್ಲೆ, ಔರಾದ್	ನಿವೇಶನ	-	03	09	-	-	12	650/-
14.	ದಕ್ಷಿಣ ಕನ್ನಡ ಜಿಲ್ಲೆ, ಅಮ್ಟಾಡಿ–ಬಂಟ್ವಾಳ	ನಿವೇಶನ	10	-	-	-	-	10	EWS Rs. 200/-
15.	ಯಾದಗಿರಿ ಜಿಲ್ಲೆ, ಎಂ. ಹೊಸಹಳ್ಳಿ	ಮನೆ	-	01	02	-	-	03	LIG-15,00,000/- MIG-18,00,000/-
16.	ಯಾದಗಿರಿ ಜಿಲ್ಲೆ, ಸುರಪುರ 2ನೇ ಹಂತ (ಕವಡಿಮಟ್ಟಿ)	ನಿವೇಶನ	25	108	32	16	-	181	650/- (for EWS Rs. 325/-)
17.	ರಾಯಚೂರು ಜಿಲ್ಲೆ, ಮಾನ್ವಿ 2ನೇ ಹಂತ	ನಿವೇಶನ	04	79	166	03	-	252	350/- (for EWS Rs. 175/-)
18.	ಧಾರವಾಡ ಜಿಲ್ಲೆ, ಹಿರೇಮಲ್ಲಿಗೆವಾಡ	ನಿವೇಶನ	48	97	75	15	-	235	675/- (for EWS Rs. 338/-)

ಅರ್ಜಿ ನೋಂದಣಿ ಮತ್ತು ಆರಂಭಿಕ ಠೇವಣಿ ಹಣವನ್ನು e-payment ಮೂಲಕ ಪಾವತಿಸಲು ಹಾಗೂ ನಿಯಮ ಮತ್ತು ಷರತ್ತುಗಳ **ಪೂರ್ಣ ವಿವರಗಳಿಗಾಗಿ ಮಂಡಳಿಯ ವೆಬ್‌ಸೈಟ್ https://www.khb.karnataka.gov.in** ಸಂಪರ್ಕಿಸುವುದು. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ಅಧಿಕಾರಿ ವರ್ಗದವರನ್ನು ಸಂಪರ್ಕಿಸಬಹುದು.

ಕ್ರ ಸಂ	ಜಿಲ್ಲಾ ಯೋಜನಾ ಕಛೇರಿ	ಹೆಸರು & ಹುದ್ದೆ	ಮೊಬೈಲ್ ನಂ.
1.	ಬಾಗಲಕೋಟೆ	ಶ್ರೀ ವಿಜಯದೇಸಿಂಗೆ, ಸ.ಕಾ.ಅ ಶ್ರೀ ಮಂಜುನಾಥ್ ಹರಿಪಲ್ಲೆದ್, ಸ.ಕಾ.ಅ.	9742085271 9980256660
2.	ವಿಜಯಪುರ	ಶ್ರೀ ಮಹಮದ್ ಸಾಧಿಕ್ ಸ.ಕಾ.ಅ. ಶ್ರೀ ಸುರೇಶ್ ಪಟ್ಟಣ್, ಸ.ಕಂ.ಅ.	8050147939 9480552203
3.	ದಾವಣಗೆರೆ	ಶ್ರೀ ಸುಧೀರ್ ಪಿ. ಬನಾರೆ, ಸ.ಕಾ.ಅ. ಶ್ರೀ ಗೋವಿಂದರಾಜ್, ಸ.ಕಂ.ಅ.	9448214736 9164580748
4.	ಕಲಬುರಗಿ	ಶ್ರೀ ಶಶಿಕಾಂತ್ ಸ.ಕಾ.ಅ. ಶ್ರೀ ರಾಜಶೇಖರ್, ಸ.ಕಂ.ಅ.	9886593773 9008440431
5.	ಚಿಕ್ಕಮಗಳೂರು	ಶ್ರೀಮತಿ ಗೀತಾ, ಸ.ಕಾ.ಅ. ಶ್ರೀಮತಿ ತೇಜಶ್ವಿನಿ, ಸ.ಕಂ.ಅ.	9945496117 9972040603
6.	ಬೆಳಗಾವಿ	ಶ್ರೀಮತಿ ಜ್ಯೋತಿ ನಜಾರೆ, ಸ.ಕಾ.ಅ.	9844849319
7.	ಬೀದರ್	ಶ್ರೀ ಶಶಿಕಾಂತ್, ಸ.ಕಾ.ಅ.	9886593773
8.	ಯಾದಗಿರಿ	ಶ್ರೀ ಗಿರೀಶ್, ಸ.ಕಾ.ಅ. ಶ್ರೀ ತಿಪ್ಪಣ್ಣ, ಸ.ಕಂ.ಅ.	9886446026 7619454817
9.	ಮಂಗಳೂರು	ಶ್ರೀ ವಿಜಯಕುಮಾರ್ ಬಂಡಾರಿ, ಸ.ಕಾ.ಅ. ಶ್ರೀ ಪ್ರದೀಪ್ ರಾವ್, ಸ.ಅ.	9448000447 9945373779
10.	ರಾಯಚೂರು	ಶ್ರೀ ತನುಜೇಂದ್ರ, ಸ.ಕಾ.ಅ.	9916852116
11.	ಹುಬ್ಬಳ್ಳಿ	ಶ್ರೀ ಆರ್.ಬಿ. ನಂದಿ, ಸ.ಕಾ.ಅ.	9448193438
12.	ಕೇಂದ್ರ ಕಛೇರಿ	ಶ್ರೀ ಉಮೇಶ್ ಅರ್ ಗಡ್ಡಿ. ಕಂ.ಅ. ಹಂಚಿಕೆ ಶಾಖೆ, ಶ್ರೀ ಎಂ.ಎನ್. ಜೀವಣ್ಣ, ಕಂ.ಅ. ಹಂಚಿಕೆ ಶಾಖೆ, ದೂರವಾಣಿ ಸಂಖ್ಯೆ: 080–22273511 ವಿಸ್ತರಣೆ: 307	9916350888 9481688845

ಸಹಿ/– ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/RO1668/AAPL/2024-25

ಸುಭಾಷಿತ

ಅಜ್ಞಾನ ಮತ್ತು ಅಶಿಸ್ತು ಮನುಷ್ಯನ ತೊಂದರೆಗೆ ಮುಖ್ಯ ಕಾರಣಗಳು.

– ಚಾಣಕ್ಯ

ಲೈಂಗಿಕ ದೌರ್ಜನ್ಯ: ಬೇಕು ಅಂಕುಶ ತಪ್ಪಿತಸ್ಥರಿಗೆ ತ್ವರಿತವಾಗಿ ಶಿಕ್ಷೆಯಾಗಲಿ

ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಕೃತ್ಯಗಳಲ್ಲಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ದೊರೆಯುವಂತೆ ಮಾಡಲು ಕಾಯ್ದೆಗಳನ್ನು ಇನ್ನಷ್ಟು ಬಲಪಡಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಮಹಿಳೆಯರ ಮೇಲಿನ ದೌರ್ಜನ್ಯ ಕೃತ್ಯಗಳು ಕ್ಷಮಿಸಲಾರದ ಪಾಪವಾಗಿದ್ದು, ತಪ್ಪಿತಸ್ಥರು ಶಿಕ್ಷೆಯಿಂದ ಪಾರಾಗಬಾರದು ಎಂದು ಪ್ರಧಾನಿ ಅಭಿಪ್ರಾಯಪಟ್ಟಿದ್ದಾರೆ. ಕೋಲ್ಕತ್ತದಲ್ಲಿ ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ ಸೇರಿದಂತೆ ದೇಶದ ವಿವಿಧ ಭಾಗಗಳಿಂದ ಲೈಂಗಿಕ ದೌರ್ಜನ್ಯದ ಪ್ರಕರಣಗಳು ವ್ಯಾಪಕವಾಗಿ ವರದಿಯಾಗುತ್ತಿರುವ ವಿದ್ಯಮಾನಕ್ಕೆ ಪ್ರತಿಕ್ರಿಯೆ ರೂಪದಲ್ಲಿ ಪ್ರಧಾನಿಯವರ ಹೇಳಿಕೆಯನ್ನು ಗಮನಿಸಬಹುದು. ಅತ್ಯಾಚಾರಿಗಳ ಅಟ್ಟಹಾಸವನ್ನು ತಡೆಗಟ್ಟುವ ದಿಸೆಯಲ್ಲಿ ಕಠಿಣ ಕಾಯ್ದೆಗಳು ಅಗತ್ಯ ಎನ್ನುವುದು ಕೇಂದ್ರ ಸರ್ಕಾರಕ್ಕೆ ವಿಳಂಬವಾಗಿಯಾದರೂ ಮನವರಿಕೆಯಾದಂತಿರುವುದು ಸ್ವಾಗತಾರ್ಹ. 2012ರಲ್ಲಿ ದೆಹಲಿಯಲ್ಲಿ ಯುವತಿಯೊಬ್ಬಳ ಮೇಲೆ ಚಲಿಸುವ ಬಸ್‌ನಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ಹಾಗೂ ಕೊಲೆ 'ನಿರ್ಭಯಾ ಪ್ರಕರಣ'ದ ಹೆಸರಿನಲ್ಲಿ ವಿಶ್ವದ ಗಮನ ಸೆಳೆದಿತ್ತು. ಅತ್ಯಾಚಾರದ ವಿರುದ್ಧ ಮಹಿಳೆಯರ ಪ್ರತಿಭಟನೆ ಮತ್ತು ಜಾಗೃತಿಯ ರೂಪದಲ್ಲಿ ಗುರುತಿಸಲಾಗುತ್ತಿರುವ 'ನಿರ್ಭಯಾ ಪ್ರಕರಣ'ಕ್ಕೆ ಹನ್ನೆರಡು ವರ್ಷಗಳು ತುಂಬಿದರೂ ಅತ್ಯಾಚಾರ ಪ್ರಕರಣಗಳ ನಿಗ್ರಹದ ಉದ್ದೇಶವು ನಿರೀಕ್ಷಿತ ಮಟ್ಟವನ್ನು ಮುಟ್ಟಿಲ್ಲ ಎನ್ನುವುದು ಕಳವಳ ಹುಟ್ಟಿಸುವ ಸಂಗತಿ. ಒಂದು ತಿಂಗಳ ಅವಧಿಯಲ್ಲಿ ದೇಶದ ವಿವಿಧ ಭಾಗಗಳಿಂದ ವರದಿಯಾಗಿರುವ ಅತ್ಯಾಚಾರದ ಪ್ರಕರಣಗಳು, ಭಾರತೀಯ ಮಹಿಳೆಯ ಸುರಕ್ಷತೆಯ ಬಗ್ಗೆ ಆತಂಕ ಮೂಡಿಸುವಂತಿವೆ. ಕೋಲ್ಕತ್ತದಲ್ಲಿ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಿರುವುದು, ಮಹಾರಾಷ್ಟ್ರದಲ್ಲಿ ಇಬ್ಬರು ಪುಟ್ಟ ಬಾಲಕಿಯರ ಮೇಲೆ ನಡೆದಿರುವ ಲೈಂಗಿಕ ಕಿರುಕುಳ, ಉತ್ತರಪ್ರದೇಶದಲ್ಲಿ ದಾದಿಯ ಮೇಲೆ ವೈದ್ಯನಿಂದಲೇ ನಡೆದಿದೆ ಎನ್ನಲಾದ ಅತ್ಯಾಚಾರ, ತಮಿಳುನಾಡಿನಲ್ಲಿ ವಿದ್ಯಾರ್ಥಿನಿಯ ಮೇಲೆ ಎನ್‌ಸಿಸಿ ಶಿಬಿರದ ಸಂಯೋಜಕ ಅತ್ಯಾಚಾರ ಎಸಗಿದ್ದಾನೆ ಎಂಬ ಆರೋಪ, ಶಿವಮೊಗ್ಗ ಜಿಲ್ಲೆಯ ವಸತಿ ಶಾಲೆಯೊಂದರಲ್ಲಿ ವಿದ್ಯಾರ್ಥಿನಿಯರ ಮೇಲೆ ಶಿಕ್ಷಕ ಎಸಗಿದ್ದಾನೆ ಎನ್ನಲಾದ ಲೈಂಗಿಕ ದೌರ್ಜನ್ಯ, ಚಿಂತಾಮಣಿಯಲ್ಲಿ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಮಲಗಿದ್ದ ವೃದ್ಧೆಯ ಮೇಲೆ ನಡೆದಿರುವ ಅತ್ಯಾಚಾರ... ಹೀಗೆ ಪಟ್ಟಿ ಮಾಡಿದಷ್ಟೂ ಮುಗಿಯದ ಅಮಾನುಷ ಲೈಂಗಿಕ ದೌರ್ಜನ್ಯಗಳು, ಹೆಣ್ಣುಮಕ್ಕಳ ಜಂಘಾಬಲವನ್ನೇ ಉಡುಗಿಸುವಂತಿವೆ ಹಾಗೂ ನಾಗರಿಕ ಸಮಾಜ ಲಜ್ಜೆಯಿಂದ ತಲೆ ತಗ್ಗಿಸಬೇಕಾದ ಕೃತ್ಯಗಳಾಗಿವೆ. ಪುಂಡು ಪೋಕರಿಗಳು ಮಾತ್ರವಲ್ಲ, ಧಾರ್ಮಿಕ ಗುರುಗಳು ಸೇರಿದಂತೆ ಸಮಾಜದಲ್ಲಿ ಗೌರವಾನ್ವಿತ ಪೋಷಾಕಿನಲ್ಲಿರುವವರೂ ಲೈಂಗಿಕ ದೌರ್ಜನ್ಯ ಕೃತ್ಯಗಳಲ್ಲಿ ಭಾಗಿಯಾಗಿದ್ದಾರೆ. 135 ಶಾಸಕರು ಹಾಗೂ 16 ಸಂಸದರು ಸೇರಿದಂತೆ ಒಟ್ಟು 151 ಜನಪ್ರತಿನಿಧಿಗಳು ಮಹಿಳೆಯರ ಮೇಲೆ ದೌರ್ಜನ್ಯವೆಸಗಿದ ಆರೋಪ ಎದುರಿಸುತ್ತಿದ್ದಾರೆ.

ಪ್ರಕರಣಗಳು ತ್ವರಿತಗತಿಯಲ್ಲಿ ಕೊನೆಗೊಳ್ಳುವಂತೆ ಕಾನೂನು ವ್ಯವಸ್ಥೆಯನ್ನು ಮಾನವೀಯಗೊಳಿಸ ಬೇಕಾಗಿದೆ

ಅತ್ಯಾಚಾರ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಸಂದರ್ಭದಲ್ಲೇ, ತಪ್ಪಿತಸ್ಥರು ಕಾನೂನಿನ ಕುಣಿಕೆಯಿಂದ ಪಾರಾಗುತ್ತಿರುವುದು ಕಳವಳ ಹುಟ್ಟಿಸುವ ಸಂಗತಿ. ಈ ವರ್ಷದ ಆರಂಭದ 7 ತಿಂಗಳಲ್ಲಿಯೇ 340 ಅತ್ಯಾಚಾರ ಪ್ರಕರಣಗಳು ರಾಜ್ಯದಲ್ಲಿ ವರದಿಯಾಗಿವೆ. 2023ರಲ್ಲಿ 537 ಅತ್ಯಾಚಾರ ಪ್ರಕರಣಗಳು ದಾಖಲಾಗಿದ್ದವು. ಇವುಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗುತ್ತದೆಂದು ಹೇಳಲಾಗದು. ಅತ್ಯಾಚಾರ ಪ್ರಕರಣಗಳನ್ನು ನಮ್ಮ ವ್ಯವಸ್ಥೆ ಹೇಗೆ ನಿರ್ವಹಿಸುತ್ತಿದೆ ಎನ್ನುವುದಕ್ಕೆ ನಿದರ್ಶನವಾಗಿ, 2013ರಿಂದ 2023ರವರೆಗಿನ ಹತ್ತು ವರ್ಷಗಳ ಅವಧಿಯಲ್ಲಿ ಬೆಂಗಳೂರಿನಲ್ಲಿ ದಾಖಲಾದ 1,322 ಅತ್ಯಾಚಾರ ಪ್ರಕರಣಗಳಲ್ಲಿನ ಶಿಕ್ಷೆಯ ಅಂಕಿಅಂಶವನ್ನು ಗಮನಿಸಬಹುದು. 1,322ರಲ್ಲಿ ಈವರೆಗೆ 10 ಪ್ರಕರಣಗಳಲ್ಲಷ್ಟೇ ದಂಡನೆ ದೊರೆತಿದ್ದು, ಶಿಕ್ಷೆಯ ಪ್ರಮಾಣ ಕೇವಲ ಶೇ 0.76ರಷ್ಟಿದೆ. 713 ಪ್ರಕರಣಗಳ ವಿಚಾರಣೆ ನಡೆಯುತ್ತಿದ್ದರೆ, 230 ಪ್ರಕರಣಗಳು ತನಿಖಾ ಹಂತದಲ್ಲಿವೆ. 259 ಪ್ರಕರಣಗಳಲ್ಲಿ ಆರೋಪಿಗಳು ಖುಲಾಸೆಗೊಂಡಿದ್ದರೆ, 110 ಪ್ರಕರಣಗಳಲ್ಲಿ ಸಾಕ್ಷ್ಯಗಳಿಲ್ಲದೆ 'ಬಿ' ರಿಪೋರ್ಟ್ ಸಲ್ಲಿಸಲಾಗಿದೆ. ಈ ಅಂಕಿಅಂಶಗಳು ಕಾನೂನು ಸುವ್ಯವಸ್ಥೆಯಲ್ಲಿನ ಲೋಪಗಳಿಗೆ ಕನ್ನಡಿ ಹಿಡಿಯುವಂತಿವೆ. ಅತ್ಯಾಚಾರ ಪ್ರಕರಣಗಳು ನ್ಯಾಯಾಲಯದಲ್ಲಿ ಗಟ್ಟಿಯಾಗಿ ನಿಲ್ಲದಿರಲು ಸಾಕ್ಷ್ಯ ಕೊರತೆ ಮುಖ್ಯ ಕಾರಣವಾಗಿದೆ. ಬಹುತೇಕ ಪ್ರಕರಣಗಳಲ್ಲಿ ಸಂತ್ರಸ್ತೆಯರೇ ಪ್ರತಿಕೂಲ ಸಾಕ್ಷಿಗಳಾಗಿ ಬದಲಾಗುವುದಿದೆ. ನ್ಯಾಯಾಲಯದಾಚೆ ನಡೆಯುವ ರಾಜಿ ಪಂಚಾಯಿತಿಗಳಿಂದಾಗಿಯೂ ಅತ್ಯಾಚಾರ ಪ್ರಕರಣಗಳು ಜೀವ ಕಳೆದುಕೊಳ್ಳುತ್ತವೆ. ಇವೆಲ್ಲಕ್ಕೂ ಮಿಗಿಲಾಗಿ ಆತಂಕ ಹುಟ್ಟಿಸುವುದು, ತನಿಖೆ ಮತ್ತು ವಿಚಾರಣೆಯಲ್ಲಿನ ವಿಳಂಬಗತಿ. ಪ್ರಕರಣವೊಂದರ ವಿಚಾರಣೆ ವರ್ಷಗಟ್ಟಲೆ ನಡೆದಾಗ, ದೀರ್ಘಕಾಲದವರೆಗೆ ಸಂತ್ರಸ್ತೆಯರು ಹೋರಾಟದ ಮನೋಭಾವ ಉಳಿಸಿಕೊಳ್ಳುವುದು ಸುಲಭವಲ್ಲ. ಪ್ರಕರಣ ನಡೆಯುವಷ್ಟೂ ಕಾಲ ಅತ್ಯಾಚಾರದ ನೋವು ಮರುಕಳಿಸುತ್ತಿರುತ್ತದೆ. ಹಾಗಾಗಿ, ಪ್ರಕರಣಗಳು ತ್ವರಿತಗತಿಯಲ್ಲಿ ಕೊನೆಗೊಳ್ಳುವಂತೆ ಕಾನೂನು ವ್ಯವಸ್ಥೆಯನ್ನು ಮಾನವೀಯಗೊಳಿಸಬೇಕಾಗಿದೆ. ಕಾಯ್ದೆಗಳನ್ನು ಬಲಪಡಿಸುವುದರ ಜೊತೆಗೆ, ಅತ್ಯಾಚಾರ ಘಟನೆಗಳನ್ನು ರಾಜಕೀಯಗೊಳಿಸದಿರುವ ಸಂವೇದನೆಯನ್ನು ಸಮಾಜದಲ್ಲಿ ರೂಪಿಸುವ ಆಂದೋಲನವೂ ತುರ್ತಾಗಿ ನಡೆಯಬೇಕಾಗಿದೆ. ಜಾತಿ, ಧರ್ಮ, ಹಣ ಹಾಗೂ ಅಧಿಕಾರ ಬಲ ಕೂಡ ಕೆಲವೊಮ್ಮೆ ತಪ್ಪಿತಸ್ಥರ ಪರವಾಗಿ ಕೆಲಸ ಮಾಡಿರುವ ಉದಾಹರಣೆಗಳಿವೆ. ಉತ್ತರಪ್ರದೇಶದ ಹಾಥರಸ್‌ನಲ್ಲಿ 2020ರಲ್ಲಿ ನಡೆದ ದಲಿತ ಯುವತಿ ಮೇಲಿನ ಸಾಮೂಹಿಕ ಅತ್ಯಾಚಾರ ಹಾಗೂ ಕೊಲೆ ಪ್ರಕರಣದಲ್ಲಿ ಪೊಲೀಸರು ನಡೆದುಕೊಂಡ ರೀತಿ ಕಾನೂನು ಸುವ್ಯವಸ್ಥೆಯ ಮೇಲೆ ಜನಸಾಮಾನ್ಯರಿಗೆ ನಂಬಿಕೆ ಕುಸಿದುಹೋಗುವಂತೆ ಇತ್ತು. ಇತ್ತೀಚೆಗೆ ಕೋಲ್ಕತ್ತದಲ್ಲಿ ನಡೆದ ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ–ಕೊಲೆ ಪ್ರಕರಣದಲ್ಲಿ ಪೊಲೀಸರು ಅನುಸರಿಸಿದ ವಿಳಂಬ ನೀತಿಯ ಬಗ್ಗೆ ಸುಪ್ರೀಂ ಕೋರ್ಟ್ ಅತೃಪ್ತಿ ವ್ಯಕ್ತಪಡಿಸಿದೆ. ಇನ್ನು ಮೇಲಾದರೂ ಇಂಥ ಅಲಕ್ಷ್ಯ ಕೊನೆಗೊಳ್ಳಬೇಕು. ಕಾಯ್ದೆಗಳನ್ನು ಬಲಪಡಿಸುವ ಕೇಂದ್ರದ ಉದ್ದೇಶ ಸ್ವಾಗತಾರ್ಹ. ಕಾನೂನನ್ನು ಬಲಪಡಿಸುವ ಪ್ರಕ್ರಿಯೆ ವಿಳಂಬವಿಲ್ಲದೆ ನಡೆಯುವಂತೆ ನೋಡಿಕೊಳ್ಳಬೇಕಾದುದು ಕೇಂದ್ರ ಸರ್ಕಾರದ ಹೊಣೆಗಾರಿಕೆ.

ದಿನದ ಟ್ವೀಟ್

ವೋಟಿನ ಮಹತ್ವ!

ಮಹಾರಾಷ್ಟ್ರ ಚುನಾವಣೆಗೆ ಈಗ ದಿನಾಂಕ ಘೋಷಿಸುವ ಸಾಧ್ಯತೆ ಇದೆ. ರಾಜ್ಯದಲ್ಲಿ 2024ರ ಮಾರ್ಚ್‌ನಿಂದ ಅನ್ವಯವಾಗುವಂತೆ ಏಕೀಕೃತ ಪಿಂಚಣಿ ಯೋಜನೆಯನ್ನು (ಯುಪಿಎಸ್) ಜಾರಿಗೊಳಿಸುವುದಾಗಿ ರಾಜ್ಯ ಸರ್ಕಾರ ಇಂದು ಹೇಳಿದೆ.

ಎಂ.ಕೆ.ವೇಣು, ಪತ್ರಕರ್ತ

ಕಿಡಿನುಡಿ

ಸಿನಿಮಾ ಉದ್ಯಮದ ಮಿನುಗುವ ಪರದೆಯ ಹಿಂದಿನ ಎಲ್ಲಾ ಕೊಳಕುಗಳನ್ನು ಲಾಗಾಯ್ತಿನಿಂದಲೂ ರಕ್ಷಿಸಿಕೊಂಡು ಬರಲಾಗುತ್ತಿದೆ ಎಂಬುದು ಸಾಮಾನ್ಯರಿಗೆ ಗೊತ್ತಿರುವಂತಹದ್ದೇ. ಇದೀಗ ತಾರಾಪಟ್ಟದ ಪದರಗಳು ಕಳಚಿ ಬೀಳುತ್ತಿರುವುದನ್ನು ನೋಡಲು ಸಂತೋಷವಾಗುತ್ತಿದೆ.

ಅಶ್ವಿನ್ ರಜನೇಶ್, ವೈದ್ಯ

25 ವರ್ಷಗಳ ಹಿಂದೆ

ಶುಕ್ರವಾರ, 27-8-1999

• **ಬಾವಿಗೆ ಬಸ್ ಬಿದ್ದು 50 ಜನರ ಸಾವು**

ಹರಪನಹಳ್ಳಿ, ಆ. 26– ಇಲ್ಲಿಗೆ ಸಮೀಪದ ಉಚ್ಚಂಗಿದುರ್ಗದಲ್ಲಿ ಪ್ರಯಾಣಿಕರಿಂದ ತುಂಬಿದ್ದ ಖಾಸಗಿ ಬಸ್‌ವೊಂದು ರಸ್ತೆ ಪಕ್ಕದ ಬಾವಿಯಲ್ಲಿ ಮುಳುಗಿ 50ಕ್ಕೂ ಹೆಚ್ಚು ಮಂದಿ ಜಲಸಮಾಧಿ ಆಗಿರಬಹುದೆಂದು ಶಂಕಿಸಲಾಗಿದೆ.

ದಾವಣಗೆರೆ ಜಿಲ್ಲೆ ಹರಪನಹಳ್ಳಿಯಿಂದ 30 ಕಿ.ಮೀ. ದೂರದ ಉಚ್ಚಂಗಿದುರ್ಗದಲ್ಲಿರುವ ನೂರು ಚದರಡಿ ವಿಸ್ತೀರ್ಣದ 'ಅರಿಸಿನ ಬಾವಿ'ಯಲ್ಲಿ ಈ ಬಸ್ ಮುಳುಗಿದೆ. ಬಸ್ಸಿನ ಮೇಲೆ ಸುಮಾರು ಏಳು ಅಡಿಯಷ್ಟು ನೀರಿದ್ದು ರಕ್ಷಣಾ ಕಾರ್ಯಕ್ಕೆ ಹೊಂಡದ ಗಲೀಜು ನೀರಿನಿಂದ ತೊಂದರೆಯಾಗಿದೆ.

50 ವರ್ಷಗಳ ಹಿಂದೆ

ಮಂಗಳವಾರ, 27-8-1974

• **ಗೂಡ್ಸ್‌ಶೆಡ್‌ನಲ್ಲಿ 7 ದಿನ ಬಿಟ್ಟ ಅಗತ್ಯ ವಸ್ತುಗಳು ಸರ್ಕಾರದ ಸ್ವಾಧೀನಕ್ಕೆ**

ನವದೆಹಲಿ, ಆ. 26– ವರ್ತಕರು ಗೂಡ್ಸ್ ವ್ಯಾಗನ್‌ಗಳಲ್ಲಿ ಮತ್ತು ಶೆಡ್‌ಗಳಲ್ಲಿ ಒಂದು ವಾರಕ್ಕಿಂತ ಹೆಚ್ಚು ಕಾಲ ತಡೆಹಿಡಿದಿಟ್ಟುಕೊಂಡಿರುವ ಅಗತ್ಯ ವಸ್ತುಗಳನ್ನು ಸೂಪರ್ ಬಜಾರ್ ಮತ್ತು ಸಹಕಾರ ಸಂಘಗಳ ಮೂಲಕ ಸಾರ್ವಜನಿಕರಿಗೆ ವಿತರಣೆ ಮಾಡಲಾಗುವುದು.

ಇದಕ್ಕಾಗಿ ರೈಲ್ವೆ ಶಾಸನದ ನಿಯಮಗಳನ್ನು ತಿದ್ದುಪಡಿ ಮಾಡಲಾಗುತ್ತಿದೆ ಎಂದು ರೈಲ್ವೆ ಉಪಸಚಿವ ಮಹಮದ್ ಷಫಿ ಖುರೇಷಿ ಅವರು ಇಂದು ಲೋಕಸಭೆಯಲ್ಲಿ ಹರ್ಷ ಧ್ವನಿಗಳ ನಡುವೆ ತಿಳಿಸಿದರು.

ಎ.ಬಿ. ವಾಜಪೇಯಿ ಮತ್ತಿತರರ ಗಮನ ಸೆಳೆಯುವ ಸೂಚನೆಯೊಂದಕ್ಕೆ ಉತ್ತರ ನೀಡುತ್ತಿದ್ದ ಸಚಿವರು, 'ಯಾವುದಕ್ಕೂ ಹೇಸದ ಈ ವರ್ತಕರು ಧಾನ್ಯಗಳನ್ನು ತಡೆಹಿಡಿದಿಟ್ಟುಕೊಂಡು ದರ ಏರಿಕೆ ಮತ್ತು ಅಭಾವಗಳಿಗೆ ಕಾರಣರಾಗುತ್ತಿದ್ದಾರೆ' ಎಂಬ ಸದಸ್ಯರ ಕಳವಳ ಸಮರ್ಥನೀಯವಾದುದು ಎಂದರು.

ಜಮ್ಮು– ಕಾಶ್ಮೀರ ವಿಧಾನಸಭಾ ಚುನಾವಣೆ ಬಿಜೆಪಿಗೆ ಪ್ರತಿಷ್ಠೆಯ ಕಣವಾಗಲಿದೆ

ಕಣಿವೆ ನಾಡು ಸೊಲ್ಲೆತ್ತಲು ಸಜ್ಜು

ವಿಶ್ಲೇಷಣೆ

ಬಿ.ಎಸ್.ಅರುಣ್

ಜಮ್ಮು-ಕಾಶ್ಮೀರದ ಮತದಾರರು 90 ಸದಸ್ಯರನ್ನು ಒಳಗೊಂಡ ಹೊಸ ವಿಧಾನಸಭೆಗೆ ಸದ್ಯದಲ್ಲೇ ತಮ್ಮ ಪ್ರತಿನಿಧಿಗಳನ್ನು ಚುನಾಯಿಸಲಿದ್ದಾರೆ. 2014ರ ನಂತರ ಅಲ್ಲಿ ವಿಧಾನಸಭಾ ಚುನಾವಣೆ ನಡೆದಿರಲಿಲ್ಲ. ಅಂದರೆ ಒಂದು ದಶಕದ ನಂತರ ಅಲ್ಲಿ ವಿಧಾನಸಭೆಗೆ ಚುನಾವಣೆ ನಡೆಯುತ್ತಿದೆ. ಕ್ಷೋಭೆಗೊಳಗಾಗಿರುವ ಈ ಪ್ರದೇಶದಲ್ಲಿ ಸೆಪ್ಟೆಂಬರ್ 18, 25 ಹಾಗೂ ಅಕ್ಟೋಬರ್ 1ರಂದು ಮೂರು ಹಂತದ ಮತದಾನ ನಿಗದಿಯಾಗಿದೆ.

ಭಾರತದ ಉತ್ತರದ ತುದಿಯ ಈ ರಾಜ್ಯ, ಕೇಂದ್ರಾಡಳಿತ ಪ್ರದೇಶವಾದ ಮೇಲೆ ಮೊದಲ ಬಾರಿಗೆ ವಿಧಾನಸಭಾ ಚುನಾವಣೆ ನಡೆಯಲಿದೆ. ಈ ಮುನ್ನ 2019 ಹಾಗೂ 2024ರಲ್ಲಿ ಲೋಕಸಭೆ ಚುನಾವಣೆಗಳು ನಡೆದಿವೆ. ಈ ವರ್ಷದ ಏಪ್ರಿಲ್- ಮೇ ತಿಂಗಳಲ್ಲಿ ನಡೆದ ಚುನಾವಣೆಯಲ್ಲಿ ಈ ಪ್ರದೇಶದಲ್ಲಿ ಅಭೂತಪೂರ್ವ ಎನ್ನಬಹುದಾದ ಶೇ 58ರಷ್ಟು ಮತದಾನವಾಯಿತು. ಇದಕ್ಕೆ ಹೋಲಿಸಿದರೆ, 2019ರಲ್ಲಿ ಬರೀ ಶೇ 19ರಷ್ಟು ಜನ ಮತ ಚಲಾಯಿಸಿದ್ದರು.

ಇತರ ರಾಜ್ಯಗಳಿಗಿಂತ ಜಮ್ಮು-ಕಾಶ್ಮೀರ ಬಹಳ ಭಿನ್ನ. ಪಾಕಿಸ್ತಾನದ ಜತೆ ಬಹಳ ಉದ್ದದ ಗಡಿಯನ್ನು ಹೊಂದಿರುವ ಈ ಪ್ರದೇಶ, ಅನೇಕ ದಶಕಗಳಿಂದ ನಡೆಯುತ್ತಿರುವ ಭಯೋತ್ಪಾದನಾ ಚಟುವಟಿಕೆಗಳಿಂದ ನಲುಗಿಹೋಗಿದೆ. ಭಾರತದ ಸಂವಿಧಾನದ ಅನೇಕ ನಿಬಂಧನೆಗಳು ಇಲ್ಲಿಗೆ ಅನ್ವಯಿಸುತ್ತಿರಲಿಲ್ಲ. ಇಲ್ಲಿಗೆ ಮಾತ್ರ ಅನ್ವಯಿಸುತ್ತಿದ್ದ ಹಾಗೂ ಸಂವಿಧಾನದ 370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನವನ್ನು 2019ರಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ರದ್ದುಗೊಳಿಸಿತು. ಜತೆಗೆ, ವಿಧಿ 35 (ಎ) ಅಡಿಯಲ್ಲಿ ನಾಗರಿಕರಿಗೆ ದೊರೆಯುತ್ತಿದ್ದ ವಿಶೇಷ ಹಕ್ಕುಗಳನ್ನು ಕೂಡ ರದ್ದು ಮಾಡಿತು. 2022ರಲ್ಲಿ ನಡೆದ ಕ್ಷೇತ್ರ ಮರುವಿಂಗಡಣೆಯಿಂದಾಗಿ ಹಿಂದೂಗಳೇ ಹೆಚ್ಚಾಗಿರುವ ಜಮ್ಮು ವಿಭಾಗಕ್ಕೆ 6 (37ರಿಂದ 43) ಹಾಗೂ ಮುಸ್ಲಿಮರು ಜಾಸ್ತಿ ಇರುವ ಕಾಶ್ಮೀರ ವಿಭಾಗಕ್ಕೆ 1 (46ರಿಂದ 47) ಕ್ಷೇತ್ರ ಹೆಚ್ಚುವರಿಯಾಗಿ ದೊರೆಯಿತು. ಕೇಂದ್ರ ಸರ್ಕಾರ ಜುಲೈ 17ರಂದು ಇಲ್ಲಿನ ಲೆಫ್ಟಿನೆಂಟ್ ಗವರ್ನರ್ (ಎಲ್.ಜಿ) ಅಧಿಕಾರವನ್ನು ಹೆಚ್ಚಿಸಿ, ದೆಹಲಿ ಎಲ್.ಜಿಯ ರೀತಿ ಅವರಿಗೆ ಪೊಲೀಸ್, ಐಪಿಎಸ್- ಐಎಎಸ್ ನೇಮಕಾತಿ, ಅಡ್ವೊಕೇಟ್ ಜನರಲ್ ನೇಮಕಾತಿ, ಪ್ರಾಸಿಕ್ಯೂಷನ್‌ಗೆ ಅನುಮತಿಯಂತಹ ಹೊಣೆಗಾರಿಕೆಯನ್ನು ಕೊಟ್ಟಿದೆ.

ಈ ನಿರ್ಧಾರಗಳನ್ನು ಜಾರಿ ಮಾಡಿದ ಬಿಜೆಪಿಗೆ ಮೇಲಿನ ಈ ಎಲ್ಲ ಕಾರಣಗಳಿಂದ ಹಾಲಿ ವಿಧಾನಸಭಾ ಚುನಾವಣೆ ಪ್ರತಿಷ್ಠೆಯ ಕಣವಾಗಲಿದೆ. ಇತ್ತೀಚಿನ ಲೋಕಸಭಾ ಚುನಾವಣೆಯ ಫಲಿತಾಂಶವನ್ನು ಗಮನಿಸಿದರೆ, ನ್ಯಾಷನಲ್ ಕಾನ್ಫರೆನ್ಸ್, ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ) ಹಾಗೂ ಕಾಂಗ್ರೆಸ್ ಪಕ್ಷವು ಬಿಜೆಪಿಗೆ ತೀವ್ರ ಸ್ಪರ್ಧೆ ಒಡ್ಡುವ ಸಾಧ್ಯತೆ ಹೆಚ್ಚು. ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 2 (3ರಲ್ಲಿ ಸ್ಪರ್ಧೆ, ಶೇ 24.36 ಮತ ಗಳಿಕೆ), ಎನ್‌ಸಿ 2 (3ರಲ್ಲಿ ಸ್ಪರ್ಧೆ, ಶೇ 22.3 ಮತ ಗಳಿಕೆ), ಸ್ವತಂತ್ರ ಅಭ್ಯರ್ಥಿ 1ರಲ್ಲಿ ಗೆಲುವಿನ ಪತಾಕೆ ಹಾರಿಸಿದ್ದಾರೆ. ಪಿಡಿಪಿ (3ರಲ್ಲಿ ಸ್ಪರ್ಧೆ, ಶೇ 8.48 ಮತ ಗಳಿಕೆ), ಕಾಂಗ್ರೆಸ್ (2ರಲ್ಲಿ ಸ್ಪರ್ಧೆ, ಶೇ 19.38 ಮತ ಗಳಿಕೆ) ಪಕ್ಷಗಳಿಗೆ ಜಯ ದೊರೆತಿರಲಿಲ್ಲ. ಬಿಜೆಪಿಯು ತನ್ನ ಭದ್ರಕೋಟೆಯಾದ ಜಮ್ಮು ವಿಭಾಗದಲ್ಲಿ ಎರಡು ಕ್ಷೇತ್ರಗಳನ್ನು ಹಾಗೂ ಕಾಶ್ಮೀರ ಕಣಿವೆಯಲ್ಲಿ ಎನ್‌ಸಿ ಎರಡು ಕ್ಷೇತ್ರಗಳನ್ನು ಗೆದ್ದವು. ಭಯೋತ್ಪಾದಕ ಚಟುವಟಿಕೆಗೆ ಹಣಕಾಸಿನ ನೆರವು ಒದಗಿಸಿದ ಆರೋಪ ಎದುರಿಸುತ್ತಿರುವ 'ಎಂಜಿನಿಯರ್ ರಶೀದ್' ಬಾರಾಮುಲ್ಲ ಕ್ಷೇತ್ರದಲ್ಲಿ ಎನ್‌ಸಿ ನಾಯಕ ಒಮರ್ ಅಬ್ದುಲ್ಲಾ ಅವರನ್ನು ಸೋಲಿಸಿದರು. 2014ರಲ್ಲಿ ನಡೆದ ಅಸೆಂಬ್ಲಿ ಸೆಣಸಾಟದಲ್ಲಿ ಪಿಡಿಪಿ 28, ಬಿಜೆಪಿ 25, ಎನ್‌ಸಿ 15 ಹಾಗೂ ಕಾಂಗ್ರೆಸ್ 12ರಲ್ಲಿ ಜಯ ಸಾಧಿಸಿದ್ದವು. ಪಿಡಿಪಿ-ಬಿಜೆಪಿ ಮೈತ್ರಿ ಏರ್ಪಟ್ಟು 2015ರಲ್ಲಿ ಸರ್ಕಾರ ರಚನೆಯಾಯಿತು. 2018ರಲ್ಲಿ ಬಿಜೆಪಿ 'ಭದ್ರತಾ ಪರಿಸ್ಥಿತಿ ಹದಗೆಡುತ್ತಿದೆ' ಎಂದು ಹೇಳಿ ಸಮ್ಮಿಶ್ರ ಸರ್ಕಾರಕ್ಕೆ ನೀಡಿದ್ದ ಬೆಂಬಲ ವಾಪಸ್ ಪಡೆದು ರಾಷ್ಟ್ರಪತಿ ಆಡಳಿತವನ್ನು ಹೇರಿತು. ಅದು ಇಂದಿನವರೆಗೂ ಜಾರಿಯಲ್ಲಿದೆ.

ಈ ಬಾರಿ ಜಮ್ಮು ವಿಭಾಗದ 43 ಕ್ಷೇತ್ರಗಳಲ್ಲಿ ಕೇಸರಿ ಪಕ್ಷ ಅತಿ ಹೆಚ್ಚು ಕ್ಷೇತ್ರಗಳಲ್ಲಿ ಜಯ ಸಾಧಿಸುವುದರಲ್ಲಿ ಬಹುಶಃ ಯಾರಿಗೂ ಸಂಶಯವಿಲ್ಲ. ಇದೇ ಕಾರಣಕ್ಕೆ ಜಮ್ಮು ವಿಭಾಗದ ಕ್ಷೇತ್ರಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ ಎಂದು ಬಿಜೆಪಿ ವಿರೋಧಿಗಳು ಹೇಳುತ್ತಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಗೆದ್ದ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿಯು ಕಾಂಗ್ರೆಸ್ಸನ್ನು ಸೋಲಿಸಿತ್ತು. ಎನ್‌ಸಿ ಗೆದ್ದ ಎರಡೂ ಕ್ಷೇತ್ರಗಳು ಕಾಶ್ಮೀರ ಕಣಿವೆಗೆ ಸೇರಿವೆ (ಈ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್, ಎನ್‌ಸಿ ಹಾಗೂ ಪಿಡಿಪಿ ಒಟ್ಟು 46 ಮತ್ತು ಬಿಜೆಪಿ- ಅಪ್ನಿ ಪಾರ್ಟಿ ಒಟ್ಟು 30 ವಿಧಾನಸಭಾ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದ್ದವು). ಆಶ್ಚರ್ಯವೆಂದರೆ, ಬಾರಾಮುಲ್ಲ ಕ್ಷೇತ್ರದಲ್ಲಿ ಎಂಜಿನಿಯರ್ ರಶೀದ್ ಅವರ ವಿಜಯ. ಈ ಫಲಿತಾಂಶ ವಿಧಾನಸಭಾ ಚುನಾವಣೆ ಮೇಲೂ ಪರಿಣಾಮ ಬೀರುವುದೇ? ಈ ಜಯದಿಂದ ಉತ್ತೇಜಿತಗೊಂಡು, ಪ್ರತ್ಯೇಕತಾವಾದಿ ಹೋರಾಟಗಳ ಜತೆ ಗುರುತಿಸಿಕೊಂಡಿರುವ ಜನ ಹೆಚ್ಚಿನ ಸಂಖ್ಯೆಯಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲ್ಲಬಹುದೇ?

ಎನ್‌ಸಿ ಹಾಗೂ ಕಾಂಗ್ರೆಸ್ ನಡುವಿನ ಮೈತ್ರಿ ಈಗಾಗಲೇ ಘೋಷಣೆಯಾಗಿದೆ. ಎನ್‌ಸಿಯ ಚುನಾವಣಾ ಪ್ರಣಾಳಿಕೆ ಬಹಳಷ್ಟು ವಿವಾದವನ್ನು ಹುಟ್ಟುಹಾಕಿದೆ. ಅಧಿಕಾರಕ್ಕೆ ಬಂದರೆ 370ನೇ ವಿಧಿಯಡಿ ಮತ್ತೆ ವಿಶೇಷ ಸ್ಥಾನಮಾನ ದೊರಕುವಂತೆ ಮಾಡುವುದು, ಪಾಕಿಸ್ತಾನದ ಜತೆ ಮಾತುಕತೆ, ಎಲ್ಲ ರಾಜಕೀಯ ಕೈದಿಗಳ ಬಿಡುಗಡೆಯಂತಹ ಭರವಸೆಗಳನ್ನು ಅದು ನೀಡಿದೆ.

ಈ ಬಗ್ಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಬಿಜೆಪಿ ನಾಯಕ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕಾಂಗ್ರೆಸ್‌ಗೆ 10 ಪ್ರಶ್ನೆಗಳನ್ನು ಕೇಳಿದ್ದಾರೆ. ಎನ್‌ಸಿಯ ಪ್ರಣಾಳಿಕೆ ಬಗ್ಗೆ ಸ್ಪಷ್ಟನೆ ನೀಡಬೇಕೆಂದು ಒತ್ತಾಯಿಸಿದ್ದಾರೆ.

'ಸುಪ್ರೀಂ ಕೋರ್ಟ್ ಈ ಬಗ್ಗೆ ಈಗಾಗಲೇ ತೀರ್ಪು ಕೊಟ್ಟಾಗಿದೆ ಹಾಗೂ ಈ ವಿಷಯದಲ್ಲಿ ಚರ್ಚೆಯ ಅಗತ್ಯವಿಲ್ಲ' ಎಂದು ಹಿಂದಿನ ವರ್ಷದ ಕೋರ್ಟ್ ತೀರ್ಪಿನ ನಂತರ ಕಾಂಗ್ರೆಸ್ ಹೇಳಿತ್ತು. ಆದರೆ ಎನ್‌ಸಿ ಪ್ರಣಾಳಿಕೆ ಬಗ್ಗೆ ಪಕ್ಷ ಈವರೆಗೂ ತನ್ನ ಪ್ರತಿಕ್ರಿಯೆ ನೀಡಿಲ್ಲ. 'ಚುನಾವಣೆ ಗೆದ್ದಾದ ನಂತರ ಸರ್ಕಾರ ರಚನೆಯ ವೇಳೆಗೆ ಎರಡೂ ಪಕ್ಷಗಳು ಸೇರಿ ಅಂತಿಮಗೊಳಿಸಿದ ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಪ್ರಕಟಿಸಲಾಗುವುದು' ಎಂದು ಕಾಂಗ್ರೆಸ್‌ನ ವಕ್ತಾರರೊಬ್ಬರು ಹೇಳಿದ್ದಾರೆ.

ಈ ವರ್ಷದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು ಕಣಿವೆ ಪ್ರದೇಶದಲ್ಲಿ ಸ್ಪರ್ಧಿಸಿರಲಿಲ್ಲ. ಆದರೆ ಅಪ್ನಿ ಪಾರ್ಟಿ, ಗುಲಾಮ್ ನಬಿ ಆಜಾದ್ ಅವರ ಪಕ್ಷ, ಸಜ್ಜದ್ ಲೋನ್ ಅವರ ಪೀಪಲ್ಸ್ ಕಾನ್ಫರೆನ್ಸ್ ಪಾರ್ಟಿಯಂತಹ ಚಿಕ್ಕ ಪಕ್ಷಗಳ ಜತೆ ಅಘೋಷಿತ ಒಪ್ಪಂದ ಮಾಡಿಕೊಂಡಿತ್ತೆಂದು ಹೇಳಲಾಗಿತ್ತು. ಈ ಬಾರಿ ಕಣಿವೆ ಭಾಗದಲ್ಲಿ ಬಿಜೆಪಿ ಸ್ಪರ್ಧಿಸುವುದೇ? ಈ ಬಗ್ಗೆ ಸ್ಪಷ್ಟನೆ ಇಲ್ಲ. ಜಮ್ಮು ವಿಭಾಗದಲ್ಲಿ ಉತ್ತಮ ಪ್ರದರ್ಶನ ನೀಡಿ, ಕಣಿವೆಯ ಕೆಲವು ಕ್ಷೇತ್ರಗಳಲ್ಲಿ ಮೇಲ್ಕಂಡ ಚಿಕ್ಕ ಪಕ್ಷಗಳು ಗೆದ್ದು, ಬಿಜೆಪಿ ಅಧಿಕಾರದ ಗದ್ದುಗೆ ಹಿಡಿದರೆ ಆಶ್ಚರ್ಯವಿಲ್ಲ. ಹಾಗಾದರೆ, ಅಲ್ಪಸಂಖ್ಯಾತ ಮುಸ್ಲಿಮರೇ ಹೆಚ್ಚಾಗಿರುವ ಈ ಕೇಂದ್ರಾಡಳಿತ ಪ್ರದೇಶಕ್ಕೆ ಒಬ್ಬ ಹಿಂದೂ ಮುಖ್ಯಮಂತ್ರಿಯಾಗಿ ಬರಬಹುದು. ಬಿಜೆಪಿಯು 2014ರ ಚುನಾವಣೆಯ ನಂತರ ಪಿಡಿಪಿ ಜತೆ ಕೈ ಜೋಡಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಹಾಗೂ ಇಲ್ಲಿನ ವಿವಿಧ ಕ್ಷೇತ್ರಗಳ ನಾಯಕರ ಜತೆ ಸಂಪರ್ಕ ಇಟ್ಟುಕೊಂಡಿರುವ ರಾಮ್ ಮಾಧವ್ ಅವರನ್ನು ಪಕ್ಷದ ಚುನಾವಣಾ ಉಸ್ತುವಾರಿಯಾಗಿ ಬಿಜೆಪಿ ನೇಮಿಸಿದೆ.

ಎನ್‌ಸಿ ನಾಯಕ ಒಮರ್ ಅಬ್ದುಲ್ಲಾ ಹಾಗೂ ಪಿಡಿಪಿ ನಾಯಕಿ ಮೆಹಬೂಬ ಮುಫ್ತಿ ಅವರು 370ನೇ ವಿಧಿಯಡಿ ಮತ್ತೆ ವಿಶೇಷ ಸ್ಥಾನಮಾನ ನೀಡುವವರೆಗೂ ತಾವು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಹೇಳಿದ್ದರು. ಈಗ ಬಂದಿರುವ ಸುದ್ದಿ ಪ್ರಕಾರ ಒಮರ್ ಅವರು ಗಾಂದರ್‌ಬಲ್ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ ಎಂದು ಎನ್‌ಸಿ ಘೋಷಿಸಿದೆ. ಮೆಹಬೂಬ ಅವರ ನಿಲುವು ಇನ್ನೂ ಹೊರಬಿದ್ದಿಲ್ಲ. ಹಿಂದಿನ 70ಕ್ಕೂ ಹೆಚ್ಚು ವರ್ಷಗಳಲ್ಲಿ ಅಬ್ದುಲ್ಲಾ ಅವರ ಕುಟುಂಬ 30 ವರ್ಷ ಜಮ್ಮು-ಕಾಶ್ಮೀರವನ್ನು ಆಳಿದೆ. ಮೆಹಬೂಬ ಮತ್ತು ಅವರ ತಂದೆ ಮುಫ್ತಿ ಮಹಮ್ಮದ್ ಸಯೀದ್ ಸುಮಾರು 6 ವರ್ಷಗಳ ಕಾಲ ರಾಜ್ಯವನ್ನು ಮುನ್ನಡೆಸಿದರು. ಉಳಿದ ಅವಧಿಯಲ್ಲಿ ದೆಹಲಿ ಆಡಳಿತವಿತ್ತು.

ಇತ್ತೀಚಿನ ವಿದ್ಯಮಾನಗಳನ್ನು ನೋಡಿದರೆ, ಈಗಿನ ಚುನಾವಣೆ ಜಮ್ಮು-ಕಾಶ್ಮೀರದ ಇತಿಹಾಸದಲ್ಲಿ ಒಂದು ಮೈಲಿಗಲ್ಲು ಆಗಬಹುದು. ಹೊಸ ಸರ್ಕಾರ ಸ್ಥಿರವಾದುದಾಗಿರಬೇಕು ಹಾಗೂ ಜನರ ಆಶೋತ್ತರಗಳನ್ನು ಗಮನದಲ್ಲಿ ಇಟ್ಟುಕೊಂಡು ಆಡಳಿತ ನಡೆಸಬೇಕಾಗುತ್ತದೆ. ಯಾವುದೇ ಪಕ್ಷ ಅಥವಾ ಮೈತ್ರಿಕೂಟದ ನೇತೃತ್ವದಲ್ಲಿ ಸರ್ಕಾರ ರಚನೆಯಾದರೂ ಇಲ್ಲಿನ ಹಾಗೂ ಕೇಂದ್ರದ ಸಂಬಂಧ ಮುಂದಿನ ದಿನಗಳಲ್ಲಿ ಮಹತ್ವಪೂರ್ಣದ್ದಾಗಿರುತ್ತದೆ.

ಚುರುಮುರಿ



ಜೈಲು ಹಬ್ಬ

• ಡಿ.ಎಸ್.ಲಿಂಗರಾಜು

'ಪರಪ್ಪನ ಅರಮನೇಲಿ ಜೈಲು ಹಬ್ಬ ಅದಂತೆ! ನೋಡಿಕ್ಯಂದು ಬರನೆ ಬಾ' ಅಂತಂದ ತುರೇಮಣೆ ಜೊತೆಗೆ ಹೊಂಟೆ. ಅಗ್ರಾರದೊಳಗೆ ಮುಕ್ಕಿರಿದಿದ್ದ ಜನ ಕಂಡುದ್ದೆಲ್ಲಾ ಕಂಡಾಬಟ್ಟೆ ಖರೀದಿ ಮಾಡ್ತಿದ್ರು.

'ಬರ್ರಿ ಸಾ, ಜೈಲಲ್ಲಿ ಥ್ರೀ ಡೇಸ್, ಟೂ ನೈಟ್ ಪ್ಯಾಕೇಜ್ ತಗಳಿ. ಕಾಸು ಕೊಟ್ರೆ ಮೊಬೈಲು, ಬಿರಿಯಾನಿ, ಸಿಗರೇಟು, ಗಾಂಜಾ, ಡ್ರಿಂಕ್ಸು, ಕೇಳಿದ್ದೆಲ್ಲಾ ಸಿಕ್ತವೆ!' ಜೈಲು ಬರ್ಡು ಕೂಗಿಕ್ಯತಿದ್ದ. ಮಗ್ಗುಲಗೇ ನಿಂತಿದ್ದ ಏಜೆಂಟು 'ಬನ್ನಿ ಸಾ, ಡ್ಯಾಗರ ಪಂಚಮಿಗೆ ಲಾಂಗು ಗಿಫ್ಟು ಕೊಡಿ. ರಾಡು, ಚೈನು, ಲಾಠಿ, ಮೆಗ್ಗರ್ ಬೇಕಾ? ಯಾರದಾದ್ರೂ ಕೈ-ಕಾಲು ಮುರಿಬೇಕಾ, ಎತ್ತಬೇಕಾ? ಅಡ್ವಾನ್ಸ್ ಕೊಟ್ಟು ಸ್ಲಾಟ್ ಬುಕ್ ಮಾಡ್ಕಳಿ' ಅಂತ ತಿವೀತಿದ್ದ.

'ಬಿಟ್ಟಿ ಭಾಗ್ಯಕ್ಕೆ ಕಳ್ಳ ನಿರಾಧಾರ್, ಸುಳ್ಳು ಬಿಪಿಎಲ್ ಕಾರ್ಡ್ ತಗಳಿ. ಒಂದು ತಗಂಡ್ರೆ ಇನ್ನೊಂದು ಫ್ರೀ. ಒಬ್ಬ ಕೂಗಿ ಕರೀತಿದ್ದ. 'ಕಾಸಿದ್ರೆ ನಮ್ಮಾಸ್ಪತ್ರಿಗೇ ಬರ್ರಿ ಸಾ. ಹಣ ನಮ್ಮದು, ಹೆಣ ನಿಮ್ಮದು' ಆಸ್ಪತ್ರೆಯೋನು ಚುಚ್ಚುತಿದ್ದ.

'ಜುಜುಬಿ ರೇಟಲ್ಲಿ ಏಕರೆಗಟ್ಲೆ ಜಾಗ ತಗಳಿ. ಸ್ಪಾಟ್ ಬುಕಿಂಗ್ ಮಾಡಿದ್ರೆ ಬಳ್ಳಾರಿಗೆ ಫ್ರೀ ಟ್ರಿಪ್. 50ಕ್ಕೆ 50 ಮೈಸೂರ್ ಸ್ಪೆಷಲ್ ಆಫರ್ ಬೇಕಾ? ಎ ಟು ಜಡ್ ಖಾತೆ ಸ್ಪಾಟಲ್ಲೇ ಸಿಕ್ತದೆ' ಅನ್‌ರಿಯಲ್ ಎಸ್ಟೇಟಿನೋನು ಗಬರಾಡ್ತಿದ್ದ. ಕೊನೇ ಸ್ಟಾಲಲ್ಲಿ ಒಣಗೋಗಿದ್ದ ಸತ್ಯ, ನ್ಯಾಯ, ಧರ್ಮ ಮಡಿಕಂಡು ಸತ್ತಪ್ಪ ನಿದ್ದೆ ಮಾಡ್ತಿದ್ದ. ಇಂಥವೇ ಸ್ಟಾಲು ಸುಮಾರು ಇದ್ದೋ.

'ಮೆದುಳು ಬೇಕಾ ಸಾ. ಬೆಂಗಳೂರೋರಿಗೆ ಫಿಟ್ಟಿಂಗ್ ಚಾರ್ಜು ಫ್ರೀ' ಅಂತಿದ್ದ ಕೊನೇ ಸ್ಟಾಲಲ್ಲಿದ್ದೋನು. 'ಇದು ಕಯ್ಯಾ ಮಾತು ಅಂದ್ರೆ. ನಮಗೇನು ಬುಲ್ಡೇಲಿ ಮೆದುಳಿಲ್ಲ ಅಂದ್ಕಂದಿದ್ದೀಯ?' ರೋಷದಲ್ಲಿ ಕೇಳಿದೆ. 'ಬುದ್ದಿಲ್ಲದ ವೊತ್ಗೇ ಅಲ್ಲುವರಾ ಬದುಕೇ ದುಬಾರಿಯಾದ್ರೂ ನೀವೆಲ್ಲಾ ಗುಮ್ಮಗಿರದು' ಅಂತ ಕ್ಯಾಕರಿಸಿ ಉಗಿದದ್ದು ಯಾರಿಗೂ ಕಾಣದಂಗೆ ಒರೆಸಿಕ್ಯಂದು ಆಚೆಗೆ ಕಡೆದೋ!

ಸಂಗತ

ವೈದ್ಯಕೀಯ ಕ್ಷೇತ್ರ: ಬೇಕು ಚಿಕಿತ್ಸೆ

ವೈದ್ಯಕೀಯ ಸಿಬ್ಬಂದಿಯ ಮೇಲೆ ನಡೆಯುವ ಹಲ್ಲೆಗಳನ್ನು ನಿಯಂತ್ರಿಸಬೇಕಾದರೆ, ವೈದ್ಯಕೀಯ ಕ್ಷೇತ್ರ ಎದುರಿಸುತ್ತಿರುವ ಸಮಸ್ಯೆಗಳನ್ನು ಸಮಗ್ರವಾಗಿ ಪರಿಗಣಿಸಬೇಕಾಗುತ್ತದೆ

• ಸದಾನಂದ ಆರ್.

ಕೋಲ್ಕತ್ತದ ಆಸ್ಪತ್ರೆಯೊಂದರಲ್ಲಿ ಇತ್ತೀಚೆಗೆ ನಡೆದಿರುವ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಆಕೆಯ ಕೊಲೆಯ ಅಮಾನವೀಯ ಪ್ರಕರಣವು ವೈದ್ಯರ ಸುರಕ್ಷತೆ ಕುರಿತು ಬಹಳಷ್ಟು ಪ್ರಶ್ನೆಗಳನ್ನು ದೇಶದ ಮುಂದಿಟ್ಟಿದೆ. ವೈದ್ಯಕೀಯ ಸಿಬ್ಬಂದಿಯ ಸುರಕ್ಷತೆಯ ವಿಚಾರವನ್ನು ಈ ಅಮಾನವೀಯ ಪ್ರಕರಣದ ಆಚೆಗೂ ನೋಡಿ ಅರ್ಥೈಸಿಕೊಳ್ಳಬೇಕಾದ ಅಗತ್ಯವಿದೆ. ಏಕೆಂದರೆ ಹಿಂಸೆಯ ಹಿಂದಿರುವ ಸ್ಥೂಲ ಚಿತ್ರಣದ ಸ್ಪಷ್ಟತೆ ದೊರೆಯದ ವಿನಾ ಈ ನಿರ್ದಿಷ್ಟ ಪ್ರಕರಣವನ್ನು ಬಿಡಿಸಿ ನೋಡಲು ಆಗುವುದಿಲ್ಲ.

ದೇಶದ ಆರೋಗ್ಯ ಸೇವಾ ವ್ಯವಸ್ಥೆಯ ಕ್ಷಮತೆಯ ಮೇಲೆ, ಪ್ರಜೆಯ ಒಟ್ಟಾರೆ ಆರೋಗ್ಯ ಸಂಬಂಧಿ ಖರ್ಚು-ವೆಚ್ಚ ಅವಲಂಬಿಸಿರುತ್ತದೆ. ಹಿಂದಿನ ಮೂರ್ನಾಲ್ಕು ದಶಕಗಳಿಂದ ಸಾರ್ವಜನಿಕ ಆರೋಗ್ಯ ಸೇವಾ ವ್ಯವಸ್ಥೆ ಕುಸಿಯುತ್ತಾ ಬರುತ್ತಿರುವುದನ್ನು ತಜ್ಞರು ಗುರುತಿಸಿದ್ದಾರೆ. ಭಾರತೀಯರು ಆರೋಗ್ಯ ಸೇವೆಯನ್ನು ಪಡೆಯಲು ತಮ್ಮ ಜೇಬಿನಿಂದ ಖರ್ಚು ಮಾಡಬೇಕಾದ ಹಣದ ಪ್ರಮಾಣ ಶೇ 62ರಷ್ಟು ಇದೆ ಎಂದು ಅಕಾಡೆಮಿ ಆಫ್ ಫ್ಯಾಮಿಲಿ ಫಿಜಿಷಿಯನ್ಸ್ ಆಫ್ ಇಂಡಿಯಾದ ನಿಯತಕಾಲಿಕ (2022ರ ನವೆಂಬರ್) ವರದಿ ಮಾಡಿದೆ. ಇದರ ಪ್ರಕಾರ, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಕ್ಕೆ ಸಾರ್ವಜನಿಕ ಆರೋಗ್ಯ ಸೇವೆಯಿಂದ ದೊರೆಯುವ ಉಚಿತ ಸೇವೆಯ ಪ್ರಮಾಣ ಶೇಕಡ 38ರಷ್ಟು ಮಾತ್ರ ಆಗಿರುತ್ತದೆ. ಇದು ಬಡವರ ಆರ್ಥಿಕ ಸ್ಥಿತಿಗತಿಯ ಮೇಲೆ ಬಹಳಷ್ಟು ಗಂಭೀರವಾದ ಪ್ರಭಾವವನ್ನು ಬೀರುತ್ತದೆ.

ಜೊತೆಗೆ, ಲಭ್ಯವಿರುವ ಸೇವೆಯನ್ನು ಉತ್ತಮವಾಗಿ ನೀಡಲಾಗದ ಸ್ಥಿತಿಯಲ್ಲಿ ಸಾರ್ವಜನಿಕ ಆಸ್ಪತ್ರೆಗಳು ಇರುತ್ತವೆ. ಆಸ್ಪತ್ರೆಗಳು ತಮ್ಮ ಸಾಮರ್ಥ್ಯವನ್ನು ಮೀರಿ ರೋಗಿಗಳನ್ನು ನಿಭಾಯಿಸಬೇಕಾದ ಪರಿಸ್ಥಿತಿ ಇದೆ. ಮೂಲ ಸೌಕರ್ಯಗಳ ಕೊರತೆಯ ಜೊತೆಗೆ ಮಾನವ ಸಂಪನ್ಮೂಲದ ತೀವ್ರ ಕೊರತೆಯನ್ನೂ ಈ ಆಸ್ಪತ್ರೆಗಳು ಎದುರಿಸುತ್ತಿವೆ. ಮಾನವ ಸಂಪನ್ಮೂಲದ ಕೊರತೆಯನ್ನು ನಿಭಾಯಿಸಲು ಬಹುತೇಕ ರಾಜ್ಯಗಳಲ್ಲಿ ಅಲ್ಲಿನ ಸರ್ಕಾರವು ಹೊರಗುತ್ತಿಗೆ ವ್ಯವಸ್ಥೆಯನ್ನು ಅವಲಂಬಿಸಿರುತ್ತದೆ. ಇದರಿಂದ ಆಸ್ಪತ್ರೆಯ ಆಡಳಿತಕ್ಕೆ ಮತ್ತು ಹೊರಗುತ್ತಿಗೆಯ ಮೂಲಕ ಬರುವ ಸಿಬ್ಬಂದಿಗೆ ಸಂವಹನದ ಕೊರತೆಯ ಜೊತೆಗೆ ಉತ್ತರದಾಯಿತ್ವದ ಕೊರತೆಯೂ ಉಂಟಾಗುತ್ತದೆ.

ಆಸ್ಪತ್ರೆಗಳಲ್ಲಿ ಸುರಕ್ಷತಾ ಕಾರ್ಯದ ಹೊಣೆಗಾರಿಕೆಯನ್ನು ಈಗ ಹೊರಗುತ್ತಿಗೆಯ ಮೂಲಕವೇ ನಿಭಾಯಿಸಲಾಗುತ್ತದೆ. ಅನೇಕ ವೇಳೆ ಸುರಕ್ಷತಾ ಸಿಬ್ಬಂದಿಯೇ ಭ್ರಷ್ಟಾಚಾರದ ಮೂಲಗಳಾಗಿಬಿಡುತ್ತಾರೆ. ಕೋಲ್ಕತ್ತದ ಪ್ರಕರಣದಲ್ಲಿ, ಬಂಧಿತ ವ್ಯಕ್ತಿಯು ಇಂತಹ ವ್ಯವಸ್ಥೆಯ ಭಾಗವಾಗಿದ್ದನೆಂದು ವರದಿಗಳು ಹೇಳುತ್ತವೆ.

ಸ್ಥಳೀಯ ಹಂತದಲ್ಲಿ ಸೂಕ್ತ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ಒದಗಿಸುವ ಗುಣಾತ್ಮಕ ಆರೋಗ್ಯ ಕೇಂದ್ರಗಳು ಇಲ್ಲದಿರುವ ಕಾರಣದಿಂದ, ಮೂರನೇ ಹಂತದ ಆರೋಗ್ಯ ಸೇವೆಯನ್ನು ಒದಗಿಸುವ ಜಿಲ್ಲಾ ಆಸ್ಪತ್ರೆಗಳು ಇಲ್ಲವೇ ವೈದ್ಯಕೀಯ ಕಾಲೇಜಿನ ಆಸ್ಪತ್ರೆಗಳ ಮೇಲೆ ಅತಿಯಾದ ಒತ್ತಡ ಉಂಟಾಗುತ್ತಿದೆ. ಪ್ರಾಥಮಿಕ ಆರೋಗ್ಯ ಸೇವೆ ಸಕಾಲಕ್ಕೆ ದೊರೆಯದಿದ್ದಾಗ ಆಗುವ ಸಮಸ್ಯೆಗಳು ಎರಡು: ಸಕಾಲಕ್ಕೆ ಚಿಕಿತ್ಸೆ ದೊರೆಯದ ಕಾರಣ, ರೋಗ ಉಲ್ಬಣವಾಗಿ ಮೂರನೇ ಹಂತದ ಆಸ್ಪತ್ರೆಯನ್ನು ಅವಲಂಬಿಸಬೇಕಾಗುತ್ತದೆ. ಪ್ರಾಥಮಿಕ ಹಂತದಲ್ಲಿ ಗುಣಾತ್ಮಕ ಸೇವೆ ದೊರೆತಾಗ, ಬಹುತೇಕ ರೋಗಗಳನ್ನು ಸ್ಥಳೀಯ ಹಂತದಲ್ಲೇ ಯಶಸ್ವಿಯಾಗಿ ನಿರ್ವಹಿಸಲಾಗುತ್ತದೆ. ಇದರಿಂದ ಅನಗತ್ಯವಾದ ಓಡಾಟ ಮತ್ತು ಹಣ ವ್ಯಯವಾಗುವುದನ್ನು ತಪ್ಪಿಸಲು ಸಾಧ್ಯವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ದೊಡ್ಡಾಸ್ಪತ್ರೆಗಳ ಮೇಲಿನ ಹೊರೆ ಕಡಿಮೆಯಾಗುತ್ತದೆ.

ಗುಣಾತ್ಮಕ ಪ್ರಾಥಮಿಕ ಆರೋಗ್ಯ ಸೇವೆಯ ಅನುಪಸ್ಥಿತಿ ಮತ್ತೊಂದು ಸಮಸ್ಯೆಗೆ ದಾರಿಯಾಗುತ್ತದೆ. ಮನೆಯ ಸಮೀಪದಲ್ಲಿರುವ ಔಷಧಿ ಅಂಗಡಿಗಳೇ ಅನೌಪಚಾರಿಕ ಆರೋಗ್ಯ ಸೇವಾ ಕೇಂದ್ರಗಳಾಗಿ ಕೆಲಸ ಮಾಡುತ್ತವೆ. ಔಷಧಿಗಳ ಮಾರಾಟದ ಮೇಲೆ ಕಟ್ಟುನಿಟ್ಟಾದ ನಿಯಂತ್ರಣ ಇರದ ಕಾರಣ, ವೈದ್ಯರ ಸಲಹಾ ಚೀಟಿಯಿಲ್ಲದೆ, ರೋಗಿ ಹೇಳುವ ವಿವರಣೆಯ ಆಧಾರದಲ್ಲಿ ಅಂಗಡಿಯ ಮಾಲೀಕನೇ ಔಷಧಿಯನ್ನು ವಿತರಿಸುತ್ತಾನೆ. ವ್ಯಾಪಾರದ ಲಾಭ ಅಂಗಡಿಯಾತನಿಗೆ ದೊರೆತರೆ, ಸಮಯ ಮತ್ತು ಹಣವನ್ನು ಉಳಿಸಿದ ನೆಮ್ಮದಿ ರೋಗಿಯ ಪಾಲಿಗೆ. ಇದರ ಒಟ್ಟಾರೆ ಪರಿಣಾಮ, ಎಷ್ಟೋ ಸಂದರ್ಭಗಳಲ್ಲಿ ಯಾವುದೋ ಕಾಯಿಲೆಗೆ ಯಾವುದೋ ಔಷಧ ಸೇವಿಸುವಂತಾಗಿ ವ್ಯಕ್ತಿಯ ಆರೋಗ್ಯ ಬಿಗಡಾಯಿಸುತ್ತದೆ.



ಔಷಧಿಗಳ ಅನಿಯಂತ್ರಿತ ಅಪಬಳಕೆಯ ಕಾರಣದಿಂದ ರೋಗಾಣುಗಳಲ್ಲಿ ಔಷಧಿನಿರೋಧಕ ಶಕ್ತಿ ಹೆಚ್ಚಾಗುತ್ತದೆ. ಆಗ ರೋಗಗಳ ನಿರ್ವಹಣೆ ವೈದ್ಯರಿಗೆ ಸವಾಲಾಗುತ್ತದೆ. ಔಷಧಿನಿರೋಧಕ ಶಕ್ತಿ ಬೆಳೆಸಿಕೊಂಡ ರೋಗಾಣುಗಳಿಂದ ರೋಗಿಗಳನ್ನು ರಕ್ಷಿಸಲು ಶಕ್ತಿಶಾಲಿಯಾದ ಔಷಧಿಗಳ ಮೊರೆ ಹೋಗಬೇಕಾಗುತ್ತದೆ. ಇದರಿಂದ ಔಷಧಿಗಳ ವೆಚ್ಚ ಹೆಚ್ಚಾಗುತ್ತದೆ. ಆಗ ರೋಗಿಯಲ್ಲಿ ಮತ್ತು ರೋಗಿಯ ಸಂಬಂಧಿಗಳಲ್ಲಿ ಹತಾಶೆ ಹೆಚ್ಚಾಗುತ್ತದೆ. ಆ ಸಿಟ್ಟು ಅನೇಕ ಸಂದರ್ಭಗಳಲ್ಲಿ ವೈದ್ಯಕೀಯ ಸಿಬ್ಬಂದಿಯ ವಿರುದ್ಧ ತಿರುಗುವ ಸಾಧ್ಯತೆ ಇರುತ್ತದೆ.

ಹಾಗಾಗಿ, ವೈದ್ಯಕೀಯ ಕ್ಷೇತ್ರವು ಒಟ್ಟಾರೆಯಾಗಿ ಎದುರಿಸುತ್ತಿರುವ ಸಮಸ್ಯೆಗಳನ್ನು ಸಮಗ್ರವಾಗಿ ಪರಿಗಣಿಸಬೇಕಾಗುತ್ತದೆ. ಹಾಗೆ ಮಾಡದಿದ್ದರೆ, ಆರೋಗ್ಯ ಸೇವೆಗಳನ್ನು ನೀಡುವ ಸಿಬ್ಬಂದಿಯ ಒಟ್ಟಾರೆ ಸುರಕ್ಷತೆಯನ್ನು ನಿಭಾಯಿಸುವುದು ಕಷ್ಟಸಾಧ್ಯವಾದ ಕಾರ್ಯವಾಗುತ್ತದೆ.

ಲೇಖಕ: ಉಪನ್ಯಾಸಕ, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಹುಣಸೂರು

ವಾಚಕರ ವಾಣಿ

ಎ.ಐ. ಮೇಲೆ ಅವಲಂಬನೆ: ವಿವೇಚನೆ ಅಗತ್ಯ

ಜನರೇಟಿವ್ ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನದ ಬಗ್ಗೆ ಹೆಚ್ಚು ಆಸಕ್ತಿ ಹೊಂದಿರುವ ತನ್ನ ಗ್ರಾಹಕರಿಗಾಗಿ, ಅದನ್ನು ಅಳವಡಿಸಿಕೊಳ್ಳಲು ಇನ್ಫೊಸಿಸ್ ಸಜ್ಜಾಗಿರುವುದು ಸರಿಯಷ್ಟೆ (ಪ್ರ.ವಾ., ಆ. 26). ಇದರ ಅಳವಡಿಕೆಯಿಂದಾಗಿ ಕಂಪನಿಯ ಕಾರ್ಯದಕ್ಷತೆಯಲ್ಲಿ ಹೆಚ್ಚಳ ಹಾಗೂ ವೆಚ್ಚದಲ್ಲಿ ಕಡಿತವಾಗುವಲ್ಲಿ ಕಿಂಚಿತ್ತೂ ಸಂದೇಹವಿಲ್ಲ. ಆದರೆ, ಎ.ಐ. ಅಳವಡಿಕೆ ಬಳಿಕ ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸುವುದಿಲ್ಲ ಎಂಬ ಸಿಇಒ ಸಲೀಲ್ ಪರೇಖ್ ಅವರ ಹೇಳಿಕೆಗೆ ಯಾವ ತಾರ್ಕಿಕ ಅಡಿಪಾಯವಿದೆ ಎಂಬುದು ತಿಳಿಯುತ್ತಿಲ್ಲ. ಜನರೇಟಿವ್ ಎ.ಐ. ಅಳವಡಿಕೆಯಿಂದ ಜಾಗತಿಕ ಉದ್ಯಮಗಳಿಗೆ ಉತ್ತಮ ಸೇವೆ ನೀಡಲು ಸಾಧ್ಯವಾಗುವುದೆಂಬ ಕಂಪನಿಯ ಆಶಾಭಾವನೆ ತಪ್ಪಲ್ಲ. ಆದರೆ ಹೆಬ್ಬಾವಿನಂತೆ ನಿಧಾನಗತಿಯಲ್ಲಿ ಉದ್ಯೋಗಾವಕಾಶಗಳನ್ನು ನುಂಗುವ ಈ ತಂತ್ರಜ್ಞಾನ ಕಾಲಾನುಗತಿಯಲ್ಲಿ ನಮ್ಮನ್ನು ನಿಯಂತ್ರಿಸಲು ಆರಂಭಿಸುತ್ತದೆಯೇ ವಿನಾ ಒಮ್ಮೆ ಅವಲಂಬಿತವಾದ ಮೇಲೆ ಯಾವುದೇ ಕಾರಣಕ್ಕೂ ಅದರ ನಿಯಂತ್ರಣದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಕಟು ವಾಸ್ತವವನ್ನು ಯಾರಾದರೂ ಒಪ್ಪಿಕೊಳ್ಳಲೇಬೇಕು.

ಈ ತಂತ್ರಜ್ಞಾನದ ಬಗ್ಗೆ ಕಂಪನಿಯು ಈಗಾಗಲೇ ತನ್ನ 2.25 ಲಕ್ಷ ಉದ್ಯೋಗಿಗಳಿಗೆ ತರಬೇತಿ ನೀಡಿದೆ ಎಂದಾದರೆ, ಅದರಿಂದ ಕಂಪನಿಯ ಉದ್ಯೋಗಿಗಳ ಮೇಲೆ ಭವಿಷ್ಯದಲ್ಲಿ ಉಂಟಾಗಬಹುದಾದ ಪ್ರಭಾವವನ್ನು ಊಹಿಸುವುದು ಕಷ್ಟವೇನಲ್ಲ. ಆದ್ದರಿಂದ ಉದ್ಯಮಿಗಳು, ಉದ್ಯಮಶೀಲರು ತಮ್ಮ ಉದ್ಯಮದ ಲಾಭ, ನಷ್ಟದ ಲೆಕ್ಕಾಚಾರವನ್ನಷ್ಟೇ ಮುಖ್ಯವಾಗಿ ಪರಿಗಣಿಸದೆ, ಉದ್ಯಮದ ಯಶಸ್ಸಿಗಾಗಿ ದುಡಿಯುವ ಉದ್ಯೋಗಿಗಳ ಕಲ್ಯಾಣ ಹಾಗೂ ಹಿತದೃಷ್ಟಿಯನ್ನೂ ಗಮನದಲ್ಲಿ ಇಟ್ಟುಕೊಂಡು ಮುನ್ನಡೆಯಬೇಕಾದುದು ಅಗತ್ಯ.

ದಿನಮಣಿ ಬಿ.ಎಸ್., ಮೈಸೂರು

ರಾಜ್ಯಪಾಲರಿಂದ ಅಸಾಂವಿಧಾನಿಕ ಆದೇಶ

ಆಹಾರದ ಹಕ್ಕು ಸಾಂವಿಧಾನಿಕ ಹಕ್ಕು. ದೇಶದ ನಾಗರಿಕರು ತಮ್ಮ ಪರಂಪರೆ– ಇಚ್ಛೆಗೆ ಅನುಸಾರವಾಗಿ ಆಹಾರ ಸೇವನೆ ಮಾಡುವ ಹಕ್ಕನ್ನು ಹೊಂದಿರುತ್ತಾರೆ. ಕೆಲವರಿಗೆ ಮಾಂಸಾಹಾರ, ಇನ್ನು ಕೆಲವರಿಗೆ ಸಸ್ಯಾಹಾರ ರೂಢಿ ಆಗಿರುತ್ತದೆ. ಆದರೆ 'ಶಿಲ್ಲಾಂಗ್‌ನಲ್ಲಿರುವ ರಾಜಭವನವನ್ನು ಮದ್ಯ ಹಾಗೂ ಮಾಂಸಾಹಾರದಿಂದ ಮುಕ್ತಗೊಳಿಸುವಂತೆ ಅಧಿಕಾರಿಗಳಿಗೆ ಆದೇಶಿಸಿದ್ದೇನೆ. ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಸೂಚಿಸಿದ್ದೇನೆ' ಎಂದು ಮೇಘಾಲಯದ ರಾಜ್ಯಪಾಲ ಸಿ.ಎಚ್.ವಿಜಯಶಂಕರ್ ಹೆಮ್ಮೆಯಿಂದ ಮೈಸೂರಿನಲ್ಲಿ ಹೇಳಿದ್ದಾರೆ (ಪ್ರ.ವಾ., ಆ. 26). 'ಆಹಾರ ರಾಜಕೀಯ'ವನ್ನು ಇಡೀ ದೇಶದ ಮೇಲೆ ಹೇರುವ ಮನುವಾದಿಗಳ ಹುನ್ನಾರದ ಭಾಗವಾಗಿ, ಮಾಂಸಾಹಾರ ತಿನ್ನುವುದು ಕೀಳು ಮತ್ತು ಸಸ್ಯಾಹಾರ ಶ್ರೇಷ್ಠ ಎನ್ನುವುದು ಪ್ರಚಾರ ಪಡೆದುಕೊಂಡಿದೆ. ಇದರಿಂದ, ಸಂವಿಧಾನದ ಮೂಲ ಆಶಯಗಳಲ್ಲಿ ಒಂದಾದ ಸಮಾನತೆ ಮತ್ತು ಸ್ವಾತಂತ್ರ್ಯವನ್ನು ಧಿಕ್ಕರಿಸಿದಂತೆ, ದೇಶದ ಬಹುಸಂಖ್ಯಾತ ಜನರ ಆಹಾರದ ಹಕ್ಕನ್ನು ಕಸಿದಂತೆ ಆಗುತ್ತದೆ. ಈ ಕಾರಣದಿಂದ ರಾಜ್ಯಪಾಲರು ಇಂತಹ ಆದೇಶವನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು. ಇಲ್ಲದಿದ್ದರೆ, ನ್ಯಾಯಾಂಗವು ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿ ಕಾನೂನು ಕ್ರಮ ಜರುಗಿಸಲು ಮುಂದಾಗಬೇಕು.

ಟಿ.ಸುರೇಂದ್ರ ರಾವ್, ಬೆಂಗಳೂರು

ಗೃಹಲಕ್ಷ್ಮಿ ಯೋಜನೆ: ಉದ್ದೇಶ ಅರಿಯಿರಿ

'ಗೃಹಲಕ್ಷ್ಮಿ ಯೋಜನೆ'ಯಡಿ ಬಂದ ಹಣದಲ್ಲಿ ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಸುಟ್ಟಟ್ಟಿಯಲ್ಲಿ ವೃದ್ಧೆಯೊಬ್ಬರು ಊರಿನ ಮಹಿಳೆಯರಿಗೆ ಉಡಿ ತುಂಬಿ, ಹೋಳಿಗೆ ಊಟ ಹಾಕಿಸಿರುವ ಬಗ್ಗೆ ಚಿತ್ರಸಹಿತ ವರದಿಯಾಗಿದೆ (ಪ್ರ.ವಾ., ಆ. 26). ಈ ಯೋಜನೆಯಡಿ ಸರ್ಕಾರ ಕುಟುಂಬದ ಮಹಿಳೆಯೊಬ್ಬರಿಗೆ ₹ 2,000 ಕೊಡುತ್ತಿರುವುದು ಆಕೆಯ ಸಣ್ಣ-ಪುಟ್ಟ ಅಗತ್ಯಗಳನ್ನು ಪೂರೈಸುವುದಕ್ಕೆ ಬಳಕೆಯಾಗಬೇಕೇ ವಿನಾ ಯಾವುದೋ ದೇವಸ್ಥಾನ ಕಟ್ಟಲು ದೇಣಿಗೆ ನೀಡುವುದಕ್ಕೋ ಊರಿನ ಮಹಿಳೆಯರಿಗೆ ಹೋಳಿಗೆ ಊಟ ಹಾಕಿಸಲಿಕ್ಕೋ ಅಲ್ಲ.

ಮಹಿಳೆಗೂ ಆಕೆಯದೇ ಆದ ಖರ್ಚುಗಳಿರುತ್ತವೆ, ಹಣದ ಅವಶ್ಯಕತೆ ಇರುತ್ತದೆ ಎಂದು ಬಹಳಷ್ಟು ಪುರುಷರಿಗೆ ತಿಳಿದೇ ಇರುವುದಿಲ್ಲ. ತಿಳಿದಿದ್ದರೂ ಪ್ರತಿ ತಿಂಗಳೂ ಆಕೆಗೆ ಇಂತಿಷ್ಟು ಹಣ ಕೊಡುವುದನ್ನು ಮನೆಯ ಗಂಡಸರು ರೂಢಿಸಿಕೊಂಡಿರುವುದಿಲ್ಲ. ಅವಳು ತನಗೆ ಬೇಕಾದ ಅಗತ್ಯಗಳನ್ನು ಪೂರೈಸಿಕೊಳ್ಳಲು ಗಂಡನ ಎದುರಿಗೋ ಮಗನ ಎದುರಿಗೋ ದೈನೇಸಿಯಾಗಿ ಕೈಚಾಚಬೇಕಾಗುತ್ತದೆ. ಉದಾಹರಣೆಗೆ, ಯಾವುದೋ ದೇವಸ್ಥಾನಕ್ಕೆ ಹೋಗಬೇಕಾದಾಗ, ಮದುವೆ ಮತ್ತಿತರ ಸಮಾರಂಭಗಳಿಗೆ ಹೋಗುವಾಗ, ಮಕ್ಕಳಿಗೋ ಮೊಮ್ಮಕ್ಕಳಿಗೋ ಏನಾದರೂ ಕೊಡಿಸಬೇಕೆಂದಾಗ, ತವರಿಗೆ ಬಂದ ಮಗಳಿಗೆ ಒಂದು ಕಣವನ್ನೋ ಸೀರೆಯನ್ನೋ ತೆಗೆದುಕೊಡಬೇಕೆನಿಸಿದಾಗ, ಎಲೆ ಅಡಿಕೆ ಹಾಕಿಕೊಳ್ಳುವ ಚಟವಿದ್ದರೆ ಅದಕ್ಕೆ, ಕೆಲವೊಮ್ಮೆ ಮಾತ್ರೆಗೆ- ಹೀಗೆ ಮಹಿಳೆಯ ಇಂಥ ಖರ್ಚುಗಳ ಪೂರೈಕೆಗಾಗಿ ಸರ್ಕಾರ ಈ ಯೋಜನೆಯನ್ನು ಜಾರಿಗೆ ತಂದು ಅವಳ ಸ್ವಾಭಿಮಾನದ ಬದುಕಿಗೆ ಆಸರೆಯಾಗಿದೆ. ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳು ಇದನ್ನು ಅರ್ಥಮಾಡಿಕೊಳ್ಳಬೇಕಿದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಆನ್‌ಲೈನ್‌ನಲ್ಲಿ ವ್ಯಾಪಾರ: ಎರಡು ಆಯಾಮ

ಮುಂದಿನ ಹತ್ತು ವರ್ಷಗಳಲ್ಲಿ ದೇಶದ ಚಿಲ್ಲರೆ ವ್ಯಾಪಾರದಲ್ಲಿ ಅರ್ಧದಷ್ಟು ಆನ್‌ಲೈನ್‌ನಲ್ಲಿ ನಡೆಯಲಿದೆ ಎಂಬ ವರದಿಯ ಬಗ್ಗೆ ಆತಂಕ ವ್ಯಕ್ತಪಡಿಸಿರುವ ಕೇಂದ್ರ ವಾಣಿಜ್ಯ ಹಾಗೂ ಕೈಗಾರಿಕಾ ಸಚಿವ ಪೀಯೂಷ್ ಗೋಯಲ್, ಇಂತಹ ಬೆಳವಣಿಗೆಯಿಂದ ದೇಶದ ಹತ್ತು ಕೋಟಿಗೂ ಹೆಚ್ಚು ಸಣ್ಣ ಪುಟ್ಟ ಚಿಲ್ಲರೆ ವ್ಯಾಪಾರಿಗಳು ನಿರುದ್ಯೋಗಿಗಳಾಗುವ ಬಗ್ಗೆ ಎಚ್ಚರಿಸಿರುವುದು ವರದಿಯಾಗಿದೆ. ಇಂತಹ ಸಂಭವದ ಆತಂಕ ಒಂದು ಆಯಾಮವಾದರೆ, ಪ್ರಸ್ತುತ ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಇಲ್ಲದ, ಆನ್‌ಲೈನ್ ವ್ಯಾಪಾರ ಮಾಡುವ ನೈಪುಣ್ಯ ಇಲ್ಲದ ಹಿರಿಯ ನಾಗರಿಕರು, ಕೂಲಿ ಕಾರ್ಮಿಕರು, ಬಡವರು, ಗ್ರಾಮೀಣ ಭಾಗದ ರೈತರು ಈ ಆನ್‌ಲೈನ್ ವ್ಯಾಪಾರದ ಪ್ರಯೋಜನ ಪಡೆಯಲು ವಿಫಲರಾಗಿದ್ದಾರೆ. ತಾಂತ್ರಿಕ ನೈಪುಣ್ಯ ಇರುವ ಮನೆಯ ಮಾಲೀಕನಿಗೆ ಒಂದು ಸಾವಿರಕ್ಕೆ ಸಿಗುವ ವಸ್ತುವಿಗೆ, ಅಂತಹ ನೈಪುಣ್ಯ ಇಲ್ಲದ ಆ ಮನೆಯ ಕೆಲಸದವರು ಅದೇ ವಸ್ತುವಿಗೆ ಎರಡು ಸಾವಿರ ಕೊಟ್ಟು ಖರೀದಿಸುವಂತೆ ಆಗಿದೆ. ಈ ವ್ಯವಸ್ಥೆಯಲ್ಲಿ, ಆರ್ಥಿಕವಾಗಿ ಸಬಲರಾದವರು ಕಡಿಮೆ ಬೆಲೆಯನ್ನು, ಆರ್ಥಿಕವಾಗಿ ದುರ್ಬಲರಾದವರು ಹೆಚ್ಚು ಬೆಲೆಯನ್ನು ತೆರುತ್ತಿರುವುದು ವಿಪರ್ಯಾಸ. ಇಂತಹ ತಾರತಮ್ಯದಿಂದ ದೇಶದಲ್ಲಿನ ಸಾಮಾಜಿಕ ಅಸಮಾನತೆ ಮತ್ತಷ್ಟು ಹೆಚ್ಚಾಗಲಿದೆ. ಈ ಕಾರಣದಿಂದ ಸಣ್ಣ ಪುಟ್ಟ ವ್ಯಾಪಾರಿಗಳು ಹಾಗೂ ತಾಂತ್ರಿಕ ನೈಪುಣ್ಯ ಇಲ್ಲದ ಬಡವರ ಹಿತಾಸಕ್ತಿ ಎರಡನ್ನೂ ಗಮನದಲ್ಲಿ ಇಟ್ಟುಕೊಂಡು, ಇದನ್ನು ಯಾವ ರೀತಿ ನಿಯಂತ್ರಣ ಮಾಡಬೇಕು ಎಂಬ ಬಗ್ಗೆ ಆಲೋಚಿಸಬೇಕಾಗಿದೆ.

ಟಿ.ಜಯರಾಂ, ಕೋಲಾರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನ್ಯಾ. ಹೇಮಾ ಸಮಿತಿ ವರದಿ

ಬಣ್ಣದ ಲೋಕದ ಕರಾಳ ಮುಖಗಳು

ಕೇರಳದ ಸಿನಿಮಾ ರಂಗದಲ್ಲಿ ಮಹಿಳೆಯರು ಎದುರಿಸುತ್ತಿರುವ ಲೈಂಗಿಕ ಶೋಷಣೆ, ತಾರತಮ್ಯ ಮತ್ತು ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವ ನ್ಯಾಯಮೂರ್ತಿ ಹೇಮಾ ಸಮಿತಿಯ ವರದಿ ಬಿಡುಗಡೆಯಾಗಿದೆ. ಅದು ಮಲಯಾಳದಲ್ಲಿ ಮಾತ್ರವಲ್ಲದೆ, ಭಾರತೀಯ ಚಿತ್ರರಂಗದಲ್ಲಿಯೇ ಕಂಪನ ಹುಟ್ಟಿಸಿದೆ. ಹೊರಜಗತ್ತಿನ ಮಟ್ಟಿಗೆ ಮಿರಮಿರನೆ ಮಿರುಗುವ ಬಣ್ಣದ ಲೋಕದಲ್ಲಿನ ಗುಪ್ತ ಸತ್ಯಗಳನ್ನು, ಶೋಷಣೆಯ ವಿಧಾನಗಳನ್ನು, ಹೆಣ್ಣಿನ ಹತಾಶೆ, ಅಸಹಾಯಕತೆ, ಆಕ್ರೋಶವನ್ನು ವರದಿಯು ಜನರ ಮುಂದೆ ಇಟ್ಟದೆ. ವರದಿ ಬಹಿರಂಗಗೊಳ್ಳುತ್ತಲೇ ಮಲಯಾಳ ಚಿತ್ರರಂಗದ ಕೆಲವು ನಿರ್ಮಾಪಕ, ನಿರ್ದೇಶಕ, ನಟರಿಗೆ ಸಂಕಷ್ಟ ಆರಂಭವಾಗಿದೆ

ಪ್ರಜಾವಾಣಿ ವಾರ್ತೆ

ಮಲಯಾಳ ಚಿತ್ರರಂಗದಲ್ಲಿ ಮಹಿಳೆಯರ ಮೇಲಿನ ಶೋಷಣೆಯ ಬಗ್ಗೆ ಬೆಚ್ಚಿಬೀಳಿಸುವ ವಿವರಗಳುಳ್ಳ ನ್ಯಾ.ಹೇಮಾ ಸಮಿತಿ ರಚನೆಗೆ ಕೇರಳದಲ್ಲಿ ನಡೆದ ಅಂಥದ್ದೇ ಒಂದು ಘಟನೆ ಕಾರಣ. ಚಿತ್ರರಂಗದ ಖ್ಯಾತ ನಟಿಯೊಬ್ಬರ ಮೇಲೆ ಒಂದು ಗುಂಪು ಲೈಂಗಿಕ ಹಲ್ಲೆ ನಡೆಸಿತ್ತು. ಅದರ ಹಿಂದೆ ಮಲಯಾಳ ಚಿತ್ರರಂಗದ ಸ್ಟಾರ್ ನಟ ದಿಲೀಪ್ ಅವರ ಕ್ರಿಮಿನಲ್ ಪಿತೂರಿ ಇದೆ ಎನ್ನುವ ಆರೋಪ ವ್ಯಕ್ತವಾಗಿತ್ತು. ಪ್ರಕರಣದ ಸಂಬಂಧ ದಿಲೀಪ್ ಅವರನ್ನು ಬಂಧಿಸಲಾಗಿತ್ತು. 3 ತಿಂಗಳ ನಂತರ ಅವರು ಜಾಮೀನಿನ ಮೇಲೆ ಹೊರಬಂದಿದ್ದರು.

ಈ ಪ್ರಕರಣದ ನಂತರ ನಟಿಯ ಕೆಲವು ಸ್ನೇಹಿತೆಯರು 'ವಿಮೆನ್ ಇನ್ ಸಿನಿಮಾ ಕಲೆಕ್ಟಿವ್' (ಡಬ್ಲ್ಯುಸಿಸಿ) ಎನ್ನುವ ಸಂಸ್ಥೆಯನ್ನು ರೂಪಿಸಿ, ಚಿತ್ರರಂಗದಲ್ಲಿನ ಮಹಿಳಾ ಶೋಷಣೆಯ ಬಗ್ಗೆ ಅಧ್ಯಯನ ಮಾಡಲು ತಜ್ಞರ ಸಮಿತಿ ರಚಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಿದ್ದರು. ಅದರ ಫಲವಾಗಿ ಕೇರಳ ಸರ್ಕಾರ 2017ರಲ್ಲಿ ರಾಜ್ಯ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಹೇಮಾ ನೇತೃತ್ವದ ಸಮಿತಿ ರಚನೆ ಮಾಡಿ, ನಟಿ ಟಿ.ಶಾರದಾ ಮತ್ತು ನಿವೃತ್ತ ಐಎಎಸ್ ಅಧಿಕಾರಿ ವಲ್ಸಲಾಕುಮಾರಿ ಅವರನ್ನು ಸದಸ್ಯರನ್ನಾಗಿ ನೇಮಿಸಿತು. ಸಮಿತಿಯು ಡಿಸೆಂಬರ್ 2019ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿತು. ವರದಿ ಬಿಡುಗಡೆಗೆ ವಿರೋಧ ವ್ಯಕ್ತವಾಗಿತ್ತು, ಕಾನೂನು ಹೋರಾಟವೂ ನಡೆಯಿತು. ಅಂತಿಮವಾಗಿ, ಅಲ್ಪಸ್ವಲ್ಪ ಪರಿಷ್ಕರಣೆಯೊಂದಿಗೆ ವರದಿಯು ಇದೇ 19ರಂದು ಬಿಡುಗಡೆಯಾಗಿದೆ.

ಚಿತ್ರರಂಗದಲ್ಲಿನ ನಟ, ನಟಿಯರು, ತಂತ್ರಜ್ಞರು, ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರ ಸಂದರ್ಶನ ಮಾಡುವುದು ಸೇರಿದಂತೆ ಹಲವು ಮಾರ್ಗಗಳ ಮೂಲಕ ಸಮಿತಿ ಮಾಹಿತಿ ಸಂಗ್ರಹಿಸಿದೆ. ಜತೆಗೆ ಅದಕ್ಕೆ ಪೂರಕವಾದ ಹೇಳಿಕೆ, ವಿಡಿಯೊ, ಆಡಿಯೊ, ವಾಟ್ಸ್ ಆ್ಯಪ್ ಚಾಟ್ ಮುಂತಾದ ದಾಖಲೆಗಳನ್ನೂ ಕಲೆಹಾಕಿದೆ. ಅದರ ಆಧಾರದ ಮೇಲೆ ಸಮಿತಿಯು, ಚಿತ್ರರಂಗದಲ್ಲಿ ಮಹಿಳೆಯರು ವ್ಯಾಪಕ ಶೋಷಣೆಗೆ ಒಳಗಾಗುತ್ತಿರುವುದಾಗಿ ಅಭಿಪ್ರಾಯಕ್ಕೆ ಬಂದಿದೆ.

ಚಿತ್ರರಂಗದಲ್ಲಿ ಮಹಿಳೆಯರು ಎದುರಿಸುವ ಅತಿ ದೊಡ್ಡ ಸಮಸ್ಯೆ ಎಂದರೆ, ಅದು ಲೈಂಗಿಕ ಕಿರುಕುಳದ್ದು; ಅದು 'ಅತಿ ಕೆಡುಕಿನ ಸಂಗತಿ' ಎಂದು ವರದಿ ತಿಳಿಸಿದೆ. ಮಲಯಾಳ ಚಿತ್ರರಂಗವನ್ನು 10ರಿಂದ 15 ಜನ ಪ್ರಭಾವಿ ಪುರುಷರು ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದಾರೆ. ಇದರಲ್ಲಿ ಪ್ರಭಾವಿ ನಟರು, ನಿರ್ಮಾಪಕರು, ನಿರ್ದೇಶಕರು, ವಿತರಕರು ಇದ್ದಾರೆ. ಸಿನಿಮಾದಿಂದಾಗಿ ಸಾಕಷ್ಟು ಹೆಸರು ಮತ್ತು ಆಸ್ತಿ ಸಂಪಾದಿಸಿರುವ ಇವರು ಚಿತ್ರರಂಗದ ಚಟುವಟಿಕೆಗಳನ್ನು ಕಪಿಮುಷ್ಟಿಯಲ್ಲಿ ಇಟ್ಟುಕೊಂಡಿದ್ದಾರೆ ಎಂದು ವರದಿ ತಿಳಿಸಿದೆ.

ಜೂನಿಯರ್ ಆರ್ಟಿಸ್ಟ್‌ಗಳನ್ನು ಕನಿಷ್ಠ ಸೌಲಭ್ಯ ಒದಗಿಸದೆ ಹೀನಾಯವಾಗಿ ನಡೆಸಿಕೊಳ್ಳಲಾಗುತ್ತದೆ ಎಂದೂ ನಿದರ್ಶನ ಸಹಿತ ವರದಿಯಲ್ಲಿ ವಿವರಿಸಲಾಗಿದೆ. ಆದರೆ, ಚಿತ್ರರಂಗದಲ್ಲಿರುವ ಎಲ್ಲ ಗಂಡಸರೂ ಇಂಥ ಕೆಟ್ಟ ಗುಣಗಳನ್ನು ಹೊಂದಿದವರೇನಲ್ಲ. ಅನೇಕರು ಸಜ್ಜನರೂ ಇದ್ದಾರೆ ಎಂಬ ಮಾತನ್ನು ಕೂಡ ಸಿನಿಮಾ ರಂಗದಲ್ಲಿನ ಮಹಿಳೆಯರು ಹೇಳಿರುವುದಾಗಿ ವರದಿ ಉಲ್ಲೇಖಿಸಿದೆ.

'ಹೊಸದೇನಲ್ಲ, ಹಿಂದೆಯೂ ಇತ್ತು'

ಹಿರಿಯ ನಟಿ ಟಿ.ಶಾರದಾ ಅವರು ಕೂಡ ಮೂವರು ಸದಸ್ಯರಲ್ಲಿ ಒಬ್ಬರು. ಚಿತ್ರೋದ್ಯಮದಲ್ಲಿ ಈಗ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು ಹಿಂದಿನಿಂದಲೇ ಇವೆ ಎಂದು ವರದಿಯಲ್ಲಿ ಅವರು ಅಭಿಪ್ರಾಯಪಟ್ಟಿದ್ದಾರೆ.

- ಲೈಂಗಿಕ ಕಿರುಕುಳ ಹಿಂದೆಯೂ ಇತ್ತು. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಇಂದು ಸಮಾಜ ಬದಲಾಗಿದೆ. ನಮ್ಮ ಸಮಾಜದ ಮೇಲೆ ಪಾಶ್ಚಿಮಾತ್ಯ ಪ್ರಭಾವ ಹೆಚ್ಚಾಗಿದೆ. ಎಲ್ಲರೂ ಈಗ ಮುಕ್ತವಾಗಿ ಬೆರೆಯುತ್ತಾರೆ. ಗಂಡುಮಕ್ಕಳು ಮತ್ತು ಹೆಣ್ಣು ಮಕ್ಕಳ ಸಂಬಂಧ ಈಗ ಸಂಪೂರ್ಣವಾಗಿ ಬದಲಾಗಿದೆ. 'ರಾಜಿ' ಮತ್ತು 'ಹೊಂದಾಣಿಕೆಗಳು' ಈಗಿನ ಕಾಲದಲ್ಲಿ ಮುಕ್ತವಾಗಿವೆ. ಆದರೆ, ಹಿಂದೆ ಹೀಗಿರಲಿಲ್ಲ
- 'ಪಾತ್ರಕ್ಕಾಗಿ ಪಲ್ಲಂಗ' ಹಿಂದೆಯೂ ಇತ್ತು. ಈಗ ಮಹಿಳೆಯರು ಅದನ್ನು ಮುಕ್ತವಾಗಿ ಹೇಳಿಕೊಳ್ಳುತ್ತಿದ್ದಾರೆ. ಹಿಂದಿನ ಕಾಲದಲ್ಲಿ ನಾಯಕ ನಟ ಮತ್ತು ನಾಯಕ ನಟಿ ಪರಸ್ಪರ ಸಮ್ಮತಿಯ ಸಂಬಂಧ ಹೊಂದಿರುತ್ತಿದ್ದರು. ಆಗಲೂ ಕೂಡ ಚಿತ್ರೋದ್ಯಮದ ಪುರುಷರು, ಮಹಿಳೆಯರು ಎಲ್ಲದಕ್ಕೂ 'ಲಭ್ಯ'ರಿರುತ್ತಾರೆ ಎಂಬ ದೃಷ್ಟಿಕೋನ ಹೊಂದಿದ್ದರು.
- ಚಿತ್ರೋದ್ಯಮದಲ್ಲಿರುವ ಈಗಿನ ಮಹಿಳೆಯರ ಉಡುಗೆ ತೊಡುಗೆ ಸರಿ ಇಲ್ಲ. ಧರಿಸುವ ಬಟ್ಟೆಗಳು ದೇಹವನ್ನು ಮುಚ್ಚುವುದರ ಬದಲಾಗಿ, ಅವರ ದೇಹದ ಭಾಗಗಳನ್ನು ಪ್ರದರ್ಶಿಸುತ್ತವೆ. ಹಿಂದಿನ ದಿನಗಳಲ್ಲಿ ಸೆಟ್‌ಗಳಲ್ಲಿ ದ್ವಂದ್ವಾರ್ಥದ ಮಾತುಗಳು ಕೇಳಿಬರುತ್ತಿರಲಿಲ್ಲ. ಸೆಟ್‌ನಲ್ಲಿ ಲೈಂಗಿಕ ಕಿರುಕುಳಗಳೂ ನಡೆಯುತ್ತಿರಲಿಲ್ಲ. ಆದರೆ, ಈಗ ಅಂತಹದ್ದು ನಡೆಯುವುದಿಲ್ಲ ಎಂದು ಹೇಳಲು ಸಾಧ್ಯವಿಲ್ಲ

ವರದಿಯಲ್ಲಿ ಏನಿದೆ?

- ಚಿತ್ರರಂಗಕ್ಕೆ ಅಡಿಯಿಡುವ ಹಂತದಲ್ಲಿಯೇ ಮಹಿಳೆಯರಿಗೆ ಪುರುಷರಿಂದ ಲೈಂಗಿಕ ಬಯಕೆ ಈಡೇರಿಸುವಂತೆ ಬೇಡಿಕೆ; ಅವಕಾಶಕ್ಕಾಗಿ 'ಹೊಂದಾಣಿಕೆ' ಮಾಡಿಕೊಳ್ಳುವಂತೆ ಒತ್ತಾಯ (ಕಾಸ್ಟಿಂಗ್ ಕೌಚ್); ಬೇಡಿಕೆ ನಿರಾಕರಿಸಿದರೆ, ಕಿರುಕುಳ ನೀಡಲಾಗುತ್ತದೆ
- ಕೆಲಸದ ಸ್ಥಳದಲ್ಲಿ, ಪ್ರಯಾಣದ ವೇಳೆ ಹಾಗೂ ವಾಸ್ತವ್ಯ ಹೂಡಿದ ಸ್ಥಳಗಳಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ, ನಿಂದನೆ, ಹಲ್ಲೆ ಮಾಡಲಾಗುತ್ತದೆ
- ಸಿನಿಮಾ ಸೆಟ್‌ಗಳಲ್ಲಿ ಮಹಿಳೆಯರಿಗೆ ಶೌಚಾಲಯ, ಬಟ್ಟೆ ಬದಲಾಯಿಸುವ ಸ್ಥಳದಂಥ ಕನಿಷ್ಠ ಸೌಲಭ್ಯ ಒದಗಿಸದೇ ಮಾನವ ಹಕ್ಕುಗಳನ್ನು ಉಲ್ಲಂಘಿಸಲಾಗುತ್ತಿದೆ; ಮುಟ್ಟಾದ ಸಂದರ್ಭದಲ್ಲೂ ಶುಚಿತ್ವದ ಸಾಧನಗಳಿಗಾಗಿ ಮಹಿಳೆಯರು ಪರದಾಡುವ ಸ್ಥಿತಿ ಇದೆ
- ವಿವಿಧ ವಿಭಾಗಗಳ ಕೆಲಸಗಾರರ ಮೇಲೆ ಅನಧಿಕೃತವಾಗಿ ಹಾಗೂ ಅಕ್ರಮವಾಗಿ ನಿಷೇಧ ಹೇರಲಾಗುತ್ತಿದೆ; ನಿಷೇಧದ ಭಯ ಹುಟ್ಟಿಸಿ ಮಹಿಳೆಯರ ಬಾಯಿ ಮುಚ್ಚಿಸಲಾಗುತ್ತಿದೆ
- ಸಿನಿಮಾ ರಂಗ ಪುರುಷ ಪ್ರಧಾನವಾಗಿದ್ದು, ವ್ಯಾಪಕ ಲಿಂಗ ತಾರತಮ್ಯ ಅನುಸರಿಸಲಾಗುತ್ತಿದೆ
- ಕೆಲಸದ ಸ್ಥಳದಲ್ಲಿ ಮದ್ಯ, ಡ್ರಗ್ಸ್ ಸೇವನೆ ಮಾಡುತ್ತಾರೆ, ಮನಸೋ ಇಚ್ಛೆ ವರ್ತಿಸುತ್ತಾರೆ. ಅಶಿಸ್ತಿನ ನಡವಳಿಕೆಯೂ ಇದೆ. ಮಹಿಳೆಯರಿಗೆ ರಕ್ಷಣೆಯ ಕೊರತೆ ಕಾಡುತ್ತಿದೆ
- ಕೆಲಸದ ಸ್ಥಳದಲ್ಲಿ (ಫೋನ್ ಮೂಲಕವೂ) ದ್ವಂದ್ವಾರ್ಥ ಹಾಗೂ ಅಶ್ಲೀಲ ಮಾತುಗಳನ್ನು ಆಡಲಾಗುತ್ತಿದೆ
- ವೈಯಕ್ತಿಕ ಅಗತ್ಯ, ಸೌಲಭ್ಯಗಳಿಗೆ ತಕ್ಕಂತೆ ಲಿಖಿತ ಗುತ್ತಿಗೆಗಳನ್ನು ಜಾರಿ ಮಾಡಲಾಗುತ್ತಿಲ್ಲ
- ಸಂಭಾವನೆಯಲ್ಲಿ ಗಂಡು–ಹೆಣ್ಣಿನ ನಡುವೆ ತಾರತಮ್ಯ; ಜತೆಗೆ, ಒಪ್ಪಿಕೊಂಡಷ್ಟು ಸಂಭಾವನೆ ನೀಡುವುದಿಲ್ಲ
- ತಾಂತ್ರಿಕ ವಿಭಾಗಗಳೂ ಸೇರಿದಂತೆ ಸಿನಿಮಾ ರಂಗಕ್ಕೆ ಮಹಿಳೆಯರ ಪ್ರವೇಶಕ್ಕೆ ವಿರೋಧ ವ್ಯಕ್ತಪಡಿಸುಲಾಗುತ್ತಿದೆ; ಅವಕಾಶ ನೀಡಲಾಗುತ್ತಿಲ್ಲ
- ಆನ್‌ಲೈನ್ ಕಿರುಕುಳ (ಸೈಬರ್ ದಾಳಿ)
- ಮಹಿಳೆಯರಿಗೆ ತಮ್ಮ ಹಕ್ಕುಗಳ ಬಗ್ಗೆ ಅರಿವು ಇಲ್ಲ
- ಮಹಿಳೆಯರ ಸಮಸ್ಯೆಗಳ ವಿಚಾರಣೆಗೆ ಕಾನೂನಾತ್ಮಕ ವ್ಯವಸ್ಥೆ ಇಲ್ಲ

'ರಾಜಿ', 'ಹೊಂದಾಣಿಕೆ' ಎಂಬ ಅಲಿಖಿತ ನಿಯಮ

'ಚಿತ್ರಗಳಲ್ಲಿ ಅತ್ಯಾಪ್ತ ದೃಶ್ಯಗಳಲ್ಲಿ ನಟಿಸಲು ಸಿದ್ಧರಿರುವ ಮಹಿಳೆಯರು, ಸೆಟ್‌ನ ಹೊರಗಡೆಯೂ ಅದೇ ರೀತಿ ನಡೆದುಕೊಳ್ಳಲು ಸಿದ್ಧರಿರುತ್ತಾರೆ ಎಂದು ಸಿನಿಮಾದಲ್ಲಿ ತೊಡಗಿಕೊಂಡಿರುವ ಬಹುತೇಕ ಪುರುಷರು ಯೋಚಿಸುತ್ತಾರೆ. ಹಾಗಾಗಿ, ಯಾವುದೇ ಮುಜುಗರವಿಲ್ಲದೆ, ಸೆಕ್ಸ್‌ಗೆ ಬೇಡಿಕೆ ಇಡುತ್ತಾರೆ...'

ಸಿನಿಮಾ ರಂಗದಲ್ಲಿನ ಮಹಿಳೆಯರು ನ್ಯಾ. ಹೇಮಾ ಸಮಿತಿಯ ಮುಂದೆ ನೀಡಿರುವ ಹೇಳಿಕೆ ಇದು.

ಮಲಯಾಳ ಚಿತ್ರರಂಗದಲ್ಲಿ ಮಹಿಳೆಯರು ಅವಕಾಶ ಪಡೆಯಬೇಕಾದರೆ 'ರಾಜಿ' (compromise) ಮತ್ತು 'ಹೊಂದಾಣಿಕೆ' (Adjustment) ಮಾಡಿಕೊಳ್ಳಲೇಬೇಕು. ಮಲಯಾಳ ಚಿತ್ರೋದ್ಯಮದಲ್ಲಿ ತೊಡಗಿರುವ ಮಹಿಳೆಯರಿಗೆ ಈ ಎರಡು ಪದಗಳು ತುಂಬಾ ಪರಿಚಿತ ಎಂದು ಹೇಳುತ್ತದೆ ವರದಿ.

ಮಹಿಳೆಯರು ಚಿತ್ರರಂಗಕ್ಕೆ ಪ್ರವೇಶ ಪಡೆಯುವಾಗಲೇ ಕಿರುಕುಳ ಆರಂಭವಾಗುತ್ತದೆ. ಚಿತ್ರದ ಪ್ರೊಡಕ್ಷನ್ ಕಂಟ್ರೋಲರ್ ಯಾವುದೇ ಮಹಿಳೆಗೆ ಸಿನಿಮಾದಲ್ಲಿ ಅವಕಾಶ ಇದೆ ಎಂದು ಹೇಳುವಾಗ ಅಥವಾ ಮಹಿಳೆಯೇ ಚಿತ್ರದಲ್ಲಿ ನಟಿಸಲು ಕೇಳುವಾಗ, 'ಚಿತ್ರರಂಗದಲ್ಲಿ ಅವಕಾಶ ಬೇಕಿದ್ದರೆ 'ರಾಜಿ' ಮತ್ತು 'ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ' ಎಂದು ಹೇಳಲಾಗುತ್ತದೆ. ಆ ಮೂಲಕ, ಬೇಡಿಕೆಗೆ ತಕ್ಕಂತೆ ಸೆಕ್ಸ್‌ಗೆ ಲಭ್ಯವಿರುವಂತೆ ಆಕೆಗೆ ತಿಳಿಸಲಾಗುತ್ತದೆ.

ನಟ, ನಿರ್ಮಾಪಕ, ನಿರ್ದೇಶಕ, ಪ್ರೊಡಕ್ಷನ್ ಕಂಟ್ರೋಲರ್ ಸೇರಿದಂತೆ ಸಿನಿಮಾದಲ್ಲಿ ಭಾಗಿಯಾಗಿರುವ ಯಾರು ಬೇಕಾದರೂ ಸೆಕ್ಸ್‌ಗೆ ಬೇಡಿಕೆ ಇಡಬಹುದು ಮತ್ತು ಮಹಿಳೆ ಅವರ ಬೇಡಿಕೆಗಳಿಗೆ ಶರಣಾಗಲು ಸಿದ್ಧವಾಗಿರಬೇಕು ಎಂದು ಮಹಿಳೆಯೊಬ್ಬರು ಸಮಿತಿಗೆ ನೀಡಿರುವ ಹೇಳಿಕೆಯನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಚಿತ್ರರಂಗದಲ್ಲಿ ದೊಡ್ಡ ಹೆಸರು ಮಾಡಿರುವ ಹಲವು ನಟಿಯರು 'ಹೊಂದಾಣಿಕೆ' ಮತ್ತು 'ರಾಜಿ' ಮಾಡಿಕೊಂಡಿದ್ದರಿಂದಲೇ ಗೌರವ ಪಡೆಯಲು, ಹೆಸರು ಮಾಡಿರಲು ಸಾಧ್ಯವಿದೆ ಎಂದು ಆ ಮಹಿಳೆ ಕೆಲವು ಖ್ಯಾತನಾಮ ನಟಿಯರ ಹೆಸರುಗಳನ್ನು ಉಲ್ಲೇಖಿಸಿದ್ದನ್ನೂ ವರದಿ ಪ್ರಸ್ತಾಪಿಸಿದೆ.

ಹೊಸ ನಟ ನಟಿಯರು ಅಗತ್ಯವಿದ್ದಾರೆ ಎಂಬ ಜಾಹೀರಾತನ್ನು ನೋಡಿ ಆಡಿಷನ್‌ಗೆ ತೆರಳುವ ಮಹಿಳೆಗೆ ನಿರ್ಮಾಪಕ ಮತ್ತು ನಿರ್ದೇಶಕರನ್ನು ಭೇಟಿ ಮಾಡುವಂತೆ ಸೂಚಿಸಲಾಗುತ್ತದೆ. ರಾಜಿ ಮತ್ತು ಹೊಂದಾಣಿಕೆ ಮಾಡಿಕೊಳ್ಳಬೇಕು ಎಂದು ಆಕೆಗೆ ತಿಳಿಸಲಾಗುತ್ತದೆ ಎಂದು ವರದಿ ವಿವರಿಸಿದೆ.

ಚಿತ್ರರಂಗಕ್ಕೆ ಕಾಲಿಡುವ ಹೊಸ ನಟಿಯರು, ಸಾಕಷ್ಟು ಕಷ್ಟಗಳನ್ನು ಅನುಭವಿಸಿದ್ದರೂ ಈ ಎಲ್ಲ ರಹಸ್ಯಗಳನ್ನು ಮುಚ್ಚಿಡುತ್ತಾರೆ. ಡಬ್ಲ್ಯುಸಿಸಿ ಸ್ಥಾಪನೆಯಾದ ಬಳಿಕ ಮಹಿಳೆಯರು ಈ ರಹಸ್ಯಗಳನ್ನು ಹಂಚಿಕೊಳ್ಳಲು ಆರಂಭಿಸಿದರು ಎಂದು ವರದಿ ಹೇಳಿದೆ.

ಕನ್ನಡದಲ್ಲಿ ಸದ್ದು ಮಾಡಿದ್ದ 'ಮೀಟೂ'

ಕನ್ನಡ ಚಿತ್ರರಂಗದಲ್ಲಿ ಕೆಲವು ನಟ, ನಿರ್ದೇಶಕ, ನಿರ್ಮಾಪಕರ ವಿರುದ್ಧವೂ ಲೈಂಗಿಕ ಕಿರುಕುಳದ ಆರೋಪಗಳು ಕೇಳಿಬಂದಿದ್ದವು. ಅವುಗಳಲ್ಲಿ ಮುಖ್ಯವಾದದ್ದು, ನಟಿ ಶ್ರುತಿ ಹರಿಹರನ್ ಅವರು ನಟ ಅರ್ಜುನ್ ಸರ್ಜಾ ವಿರುದ್ಧ ಮಾಡಿದ್ದ ಮೀಟೂ ಆರೋಪ. 'ವಿಸ್ಮಯ' ಚಿತ್ರೀಕರಣದ ಸಂದರ್ಭದಲ್ಲಿ ಅರ್ಜುನ್ ತಮಗೆ ಇರುಸುಮುರುಸಾಗುವಂತೆ ನಡೆದುಕೊಂಡಿದ್ದರು ಎಂದು ಶ್ರುತಿ ಹೇಳಿದ್ದರು. ಸರ್ಜಾ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಮಾಡಿದ್ದರು. ಪ್ರಕರಣ ಕೋರ್ಟ್ ಮೆಟ್ಟಿಲು ಕೂಡ ಹತ್ತಿತು.

ನಟಿ ಸಂಗೀತಾ ಭಟ್ ತಮ್ಮ ಮೇಲೆ ಆದ ಲೈಂಗಿಕ ಶೋಷಣೆಯ ಬಗ್ಗೆ ಹೇಳಿಕೊಂಡಿದ್ದರು. ಮೀಟೂ ಅಭಿಯಾನದ ವೇಳೆ ಹಲವು ನಟಿಯರು ತಮಗೆ ಎದುರಿಸಿದ ಕಹಿ ಅನುಭವಗಳನ್ನು ಹಂಚಿಕೊಂಡಿದ್ದರು. 'ತಿಥಿ' ಸಿನಿಮಾದ ಕಥೆಗಾರ ಹಾಗೂ ನಿರ್ದೇಶಕ ಈರೇಗೌಡ ಅವರ ವಿರುದ್ಧವೂ ಇಂಥದ್ದೇ ಆರೋಪ ಕೇಳಿಬಂದಿತ್ತು. ಚಿತ್ರರಂಗದಲ್ಲಿ ಮಹಿಳಾ ಶೋಷಣೆಯ ವಿರುದ್ಧ ಕೆಲಸ ಮಾಡಲು ನಟ ಚೇತನ್ ಮತ್ತು ಇತರರು 'ಫೈರ್' ಎನ್ನುವ ಸಂಸ್ಥೆ ಹುಟ್ಟುಹಾಕಿದ್ದರು.



ಆಧಾರ: ನ್ಯಾ.ಹೇಮಾ ಸಮಿತಿಯ ವರದಿ

ನ್ಯಾ.ಹೇಮಾ ನೇತೃತ್ವದ ಸಮಿತಿಯು 2019ರಲ್ಲಿ ಕೇರಳ ಸಿಎಂ ಪಿಣರಾಯಿ ವಿಜಯನ್ ಅವರಿಗೆ ವರದಿ ಸಲ್ಲಿಸಿದ ಸಂದರ್ಭ

ಪ್ರಮುಖ ಶಿಫಾರಸುಗಳು

- ಮಹಿಳೆಯರ ಸಮಸ್ಯೆಗಳನ್ನು ಬಗೆಹರಿಸಲು ಸೂಕ್ತ ಕಾನೂನು ಜಾರಿಗೆ ತರಬೇಕು. ಅದರ ಅಡಿಯಲ್ಲಿ ನ್ಯಾಯಮಂಡಳಿ ಸ್ಥಾಪಿಸಬೇಕು
- ಚಿತ್ರೋದ್ಯಮಕ್ಕೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನುಗಳು, ನಿಯಮಗಳು ಈಗ ಎದುರಾಗಿರುವ ಸವಾಲುಗಳನ್ನು ನಿಭಾಯಿಸಲು ಸಾಕಾಗದು. 'ಪಾಶ್' ಕಾಯ್ದೆ ನಿಯಮಗಳು ಚಿತ್ರೋದ್ಯಮಕ್ಕೆ ಹೆಚ್ಚು ಅನ್ವಯಿಸುವುದಿಲ್ಲ ಹಾಗಾಗಿ, ಇದಕ್ಕಾಗಿ ಪ್ರತ್ಯೇಕ ಕಾಯ್ದೆಯ ಅಗತ್ಯವಿದೆ.
- ಕಾಯ್ದೆಯ ಅಡಿಯಲ್ಲಿ ಜಿಲ್ಲಾ ನ್ಯಾಯಾಲಯದ ನಿವೃತ್ತ ಮಹಿಳಾ ನ್ಯಾಯಾಧೀಶರೊಬ್ಬರ ನೇತೃತ್ವದಲ್ಲಿ ನ್ಯಾಯಮಂಡಳಿ ಸ್ಥಾಪಿಸಬೇಕು. ಅವರಿಗೆ ಕನಿಷ್ಠ ಐದು ವರ್ಷಗಳ ವಿಚಾರಣೆಯ ಅನುಭವ ಇರಬೇಕು
- ಸಿನಿಮಾ ಆರಂಭಕ್ಕೂ ಮುನ್ನ ನಟನೆ ಅಥವಾ ಇತರ ಕೆಲಸಗಳಿಗೆ ಸಂಬಂಧಿಸಿದಂತೆ ಯಾವುದೇ ಉದ್ಯೋಗಿ ಒಪ್ಪಂದ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದರೆ, ನಿರ್ಮಾಪಕರು ಈ ಪ್ರಸ್ತಾವವನ್ನು ತಿರಸ್ಕರಿಸಬಾರದು.
- ಸೆಟ್‌ನಲ್ಲಿ ಮಹಿಳೆಯರಿಗೆ ಶೌಚಾಲಯ, ಬಟ್ಟೆ ಬದಲಾಯಿಸುವ ಕೊಠಡಿ, ಕುಡಿಯುವ ನೀರು ಸೇರಿದಂತೆ ಕನಿಷ್ಠ ಸೌಲಭ್ಯಗಳನ್ನು ಒದಗಿಸಬೇಕು
- ಸಿನಿಮಾ ರಂಗದ ಮಹಿಳೆಯನ್ನು ಮಂಚಕ್ಕೆ ಕರೆದು ಕಿರುಕುಳ ನೀಡಬಾರದು

ಸಿನಿ ಬಿಟ್ಸ್

ದುನಿಯಾ ವಿಜಯ್ ಹೊಸ ಸಿನಿಮಾ ಘೋಷಣೆ

ತಮ್ಮ ನಿರ್ದೇಶನದ ಎರಡು ಸಿನಿಮಾಗಳು ಚಂದನವನದ ತೆರೆಗಳಲ್ಲಿ ಹಿಟ್ ಆದ ಬೆನ್ನಲ್ಲೇ ನಟ, ನಿರ್ದೇಶಕ ದುನಿಯಾ ವಿಜಯ್ ಹೊಸ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದಾರೆ. ಬಾಕ್ಸ್‌ಆಫೀಸ್‌ನಲ್ಲಿ 'ಭೀಮ' ಸಿನಿಮಾ ಸದ್ದು ಮಾಡುತ್ತಿರುವಾಗಲೇ ಹೊಸ ಸಿನಿಮಾ ಘೋಷಣೆಯಾಗಿದೆ. 'ಸಲಗ' ಹಾಗೂ 'ಭೀಮ' ಸಿನಿಮಾ ತಂಡವೇ ಈ ಹೊಸ ಸಿನಿಮಾದ ಭಾಗವಾಗಿರಲಿದೆ ಎಂದು ವಿಜಯ್ ಹೇಳಿದ್ದಾರೆ.

ಸದ್ಯಕ್ಕೆ ಈ ಸಿನಿಮಾಗೆ 'VK 30' ಎಂದರೆ ವಿಜಯ್ ಅವರ 30ನೇ ಸಿನಿಮಾ ಎಂಬ ಶೀರ್ಷಿಕೆ ಇಡಲಾಗಿದೆ. ಸಿನಿಮಾಗೆ ಆರ್‌ಆರ್ ವೆಟ್ರಿ ವೇಲ್(ತಂಬಿ) ಆ್ಯಕ್ಷನ್ ಕಟ್ ಹೇಳಲಿದ್ದು, ಚಿತ್ರದ ಕಥೆಯೂ ಅವರದ್ದೇ ಆಗಿದೆ. 'ಸಲಗ' ಮತ್ತು 'ಭೀಮ' ಸಿನಿಮಾದಲ್ಲಿ ಸಹ ನಿರ್ದೇಶಕರಾಗಿ ಕೆಲಸ ಮಾಡಿದ ಅನುಭವ ಇವರಿಗಿದೆ. ಚಿತ್ರದ ಪೋಸ್ಟರ್ ಭಿನ್ನವಾಗಿದ್ದು, ಹೊಸ ಲುಕ್‌ನಲ್ಲಿ ವಿಜಯ್ ಕಾಣಿಸಿಕೊಂಡಿದ್ದಾರೆ. ಕಾಡಿನಲ್ಲಿ ನಡೆಯುವ ಕಥೆಯಂತಿದೆ ಚಿತ್ರದ ಪೋಸ್ಟರ್. ಇದು ಚಿತ್ರದ ಕಥೆಯ ಬಗ್ಗೆಯೂ ಕುತೂಹಲ ಹುಟ್ಟಿಸುವಂತಿದೆ. ಪ್ರಸ್ತುತ 'ಕಾಟೇರ' ಕಥೆಗಾರ ಜಡೇಶ್ ಕೆ.ಹಂಪಿ ನಿರ್ದೇಶನದ ಸಿನಿಮಾದಲ್ಲಿ ವಿಜಯ್ ತೊಡಗಿಸಿಕೊಂಡಿದ್ದಾರೆ. ಇದು ವಿಜಯ್ ನಟನೆ 29ನೇ ಸಿನಿಮಾವಾಗಿದೆ.

'ದುನಿಯಾ' ಸಿನಿಮಾ ಮೂಲಕ ನಾಯಕನಾಗಿ ಚಂದನವನಕ್ಕೆ ಹೆಜ್ಜೆ ಇಟ್ಟಿದ್ದ ದುನಿಯಾ ವಿಜಯ್ ಸಿನಿ ಪಯಣಕ್ಕೆ 'ಸಲಗ' ಹಾಗೂ 'ಭೀಮ' ದೊಡ್ಡ ತಿರುವನ್ನೇ ನೀಡಿವೆ. ಕನ್ನಡದ ಜೊತೆಗೆ ಟಾಲಿವುಡ್ ಅಂಗಳದಲ್ಲಿ ನಂದಮೂರಿ ಬಾಲಕೃಷ್ಣ ನಟನೆಯ 'ವೀರ ಸಿಂಹರೆಡ್ಡಿ' ಚಿತ್ರದಲ್ಲಿ ಖಳನಾಯಕನಾಗಿಯೂ ಮಿಂಚಿದ್ದ ವಿಜಯ್ ಇದೀಗ ತಮ್ಮದೇ ತಂಡದಲ್ಲಿದ್ದ ತಂಬಿ ಅವರ ಸಿನಿಮಾದಲ್ಲಿ ನಟಿಸಲಿದ್ದಾರೆ.

ಸೆ.6ಕ್ಕೆ ಡಾಲರ್ಸ್ ಪೇಟೆ ಸಿನಿಮಾ ರಿಲೀಸ್

ಬಹುತೇಕ ಹೊಸಬರೇ ಇರುವ 'ಡಾಲರ್ಸ್ ಪೇಟೆ' ಸಿನಿಮಾ ಬಿಡುಗಡೆ ದಿನಾಂಕ ಘೋಷಣೆಯಾಗಿದೆ. ಮೋಹನ್ ಎನ್.ಮುನಿನಾರಾಯಣಪ್ಪ ಆ್ಯಕ್ಷನ್ ಕಟ್ ಹೇಳಿರುವ ಈ ಚಿತ್ರ ಸೆ.6ರಂದು ತೆರೆಕಾಣಲಿದೆ.

ಇದು ಮೋಹನ್ ಅವರ ನಿರ್ದೇಶನದ ಚೊಚ್ಚಲ ಸಿನಿಮಾ. ಇದು ಸತ್ಯ ಘಟನೆ ಆಧರಿತ ಸಿನಿಮಾವಾಗಿದೆ. ತಮಿಳುನಾಡಿನ ಬ್ಯಾಂಕ್‌ವೊಂದರ ಮ್ಯಾನೇಜರ್ ಆಕಸ್ಮಿಕವಾಗಿ ₹13 ಕೋಟಿಗಳನ್ನು ನೂರು ಜನರ ಖಾತೆಗೆ ಹಾಕಿಬಿಡುತ್ತಾನೆ. ಅದು ಹೇಗೆ, ಏನು ಅನ್ನುವುದರ ಸುತ್ತ ಈ ಸಿನಿಮಾ ಸಾಗುತ್ತದೆ ಎಂದಿದೆ ಚಿತ್ರತಂಡ. ಹೈಪರ್ ಲಿಂಕ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಸಿನಿಮಾದಲ್ಲಿ 'ಲೂಸಿಯಾ' ಪವನ್ ಪತ್ನಿ ಸೌಮ್ಯ ಜಗನ್‌ಮೂರ್ತಿ, 'ಮೆಟ್ರೊ ಸಾಗಾ'ದ ಆಕರ್ಷ್ ಕಮಲ, ವೆಂಕಟ್ ರಾಜ್, ಕುಶಾಲ್ ಮುಖ್ಯಪಾತ್ರದಲ್ಲಿ ಅಭಿನಯಿಸಿದ್ದು, 'ದಿಯಾ' ಖ್ಯಾತಿಯ ಪೃಥ್ವಿ ಅಂಬಾರ್ ಅತಿಥಿ ಪಾತ್ರದಲ್ಲಿ ನಟಿಸಿದ್ದಾರೆ. ಉಳಿದಂತೆ ದತ್ತು ಬಣಕರ್, ಕೌಶಿಕ್, ರಾಘು ರಾಮಕೊಪ್ಪ, ಹೊನ್ನವಳ್ಳಿ ಕೃಷ್ಣ, ಡ್ರಾಮಾ ಜೂನಿಯರ್ಸ್ ಮಹೇಂದ್ರ ತಾರಾಬಳಗದಲ್ಲಿದ್ದಾರೆ.

ಸೂರಜ್ ಜೋಯಿಸ್ ಸಂಗೀತ ನಿರ್ದೇಶನ, ಆನಂದ್ ಸುಂದರೇಶ ಛಾಯಾಚಿತ್ರಗ್ರಹಣ, ಮಹೇಶ್ ತೊಗಟ್ಟ ಸಂಕಲನ, ಅರ್ಜುನ್ ರಾಜ್ ಮತ್ತು ನರಸಿಂಹ ಸಾಹಸ ನಿರ್ದೇಶನ ಚಿತ್ರಕ್ಕಿದೆ. ಪೆಂಟ್ರಿಕ್ಸ್ ಎಂಟರ್‌ಟೇನ್ಮೆಂಟ್ ಬ್ಯಾನರ್‌ನಡಿ ಪೂಜಾ ಟಿ.ವೈ. ಚಿತ್ರ ನಿರ್ಮಾಣ ಮಾಡಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಜಗದ್ಗುರುಗಳು ಯಾರು?

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

9

ಹಿಂದೆ ಮಕ್ಕಳನ್ನು ಗುರುಕುಲದಲ್ಲಿ 16 ವರ್ಷ ಇಟ್ಟುಕೊಂಡು ವಿದ್ಯೆ ಕಲಿಸುತ್ತಿದ್ದರು. ಶಿಷ್ಯ ವಿದ್ಯೆ ಕಲಿತು ಮನೆಗೆ ಹೋಗುವಾಗ ಗುರುಗಳು 'ನಾನು ಕಲಿಸಿದ್ದರಲ್ಲಿ ಯಾವುದನ್ನಾದರೂ ಮರೆತುಬಿಡು ಪರವಾಗಿಲ್ಲ. ಆದರೆ ಸತ್ಯಂ ವದ, ಧರ್ಮಂ ಚರ, ಮಾತೃ ದೇವೋಭವ, ಪಿತೃದೇವೋ ಭವ, ಆಚಾರ್ಯದೇವೋ ಭವ, ಅತಿಥಿ ದೇವೋ ಭವ ಎಂಬುದಷ್ಟನ್ನು ನೆನಪಿಟ್ಟುಕೊ, ನಿನಗೆ ಜೀವನ ದರ್ಶನ ಆಗುತ್ತದೆ' ಎನ್ನುತ್ತಿದ್ದರು. ಈಗಿನ ಮಕ್ಕಳಿಗೂ ಇದನ್ನು ಹೇಳಿಕೊಡಬೇಕು. ಅಂದರೆ ಸಮಾಜ ಸುಧಾರಿಸುತ್ತದೆ.

ಅಪ್ಪ ಅಮ್ಮ 12 ಮಕ್ಕಳನ್ನು ಜ್ವಾಪಾನ ಮಾಡ್ಯಾರ, ಆದರೆ ಈ 12 ಜನ ಮಕ್ಕಳು 24 ಮಂದಿಯಾದಾಗ ಆ ಮುದುಕ ಮುದುಕಿಯನ್ನು ಜ್ವಾಪಾನ ಮಾಡಕಾಗಲ್ಲ. ಅಪ್ಪ ಅಮ್ಮನ ಆಸ್ತಿಯಲ್ಲಿ ನಾವು ಪಾಲು ಕೇಳಿದೆವೇ ವಿನಾ ಅಪ್ಪ ಅಮ್ಮನ ಪಾಡು ನೋಡಲಿಲ್ಲ. ನಮಗ ಜಗತ್ತು ತೋರಿದವರು ಅವರು, ನಮಗ ಕಣ್ಣು ಕೊಟ್ಟು ನಾವು ಈ ಜಗತ್ತು ನೋಡಲು ಕಾರಣರಾದವರು ಅವರು. ಅವರೇ ನಿಜವಾದ ಅರ್ಥದಲ್ಲಿ ಜಗದ್ಗುರುಗಳು. ಅವರು ತೋರಿಸದೆ ಇದ್ದರೆ ನಾವು ಜಗತ್ತು ನೋಡಲು ಸಾಧ್ಯವೇ ಇರಲಿಲ್ಲ. ಅವರಿಗಿಂತ ಬೇರೆ ಜಗದ್ಗುರುಗಳಿಲ್ಲ.

ಒಂದು ಮುದುಕಿಯನ್ನು ಮಗ ಮನೆಯಿಂದ ಹೊರಹಾಕಿದ್ದ. ಆಕೆ ಭಿಕ್ಷೆ ಬೇಡುತ್ತಿದ್ದಳು. ಒಂದು ದಿನ ತುಂಬು ಗರ್ಭಿಣಿ ಆಸ್ಪತ್ರೆಗೆ ಹೊರಟಾಗ ಈ ಮುದುಕಿ ತನಗೆ ಏನಾದರೂ ತಿನ್ನಲು ಕೊಡು ಎಂದು ಆ ಗರ್ಭಿಣಿಯನ್ನು ಕೇಳಿದಳು. 'ನಾನು ಹೆರಿಗೆ ನೋವಿನಿಂದ ಒದ್ದಾಡಕತ್ತೀನಿ, ನಿನಗೇನು ಕೊಡೋದು' ಎಂದಳು ಗರ್ಭಿಣಿ. ಅದಕ್ಕೆ ಮುದುಕಿ 'ಹೆರಿಗೆ ನೋವು ನನಗೂ ಗೊತ್ತದ. ಆದರೆ ಹೆರಿಗೆ ನೋವಿಗಿಂತ ಮಗ ಮನೆಯಿಂದ ಹೊರಕ್ಕೆ ಹಾಕಿದಾಗ ಆಗುವ ನೋವು ಇನ್ನೂ ಹೆಚ್ಚಿನದು. ಅದನ್ನು ತಡೆಯೋಕಾಗಲ್ಲ' ಎಂದಳು.

ಯಾರೂ ಇಲ್ಲದ ಮನೆಯಲ್ಲಿ, ಕೋಣೆಯ ಕದ ಹಾಕಿಕೊಂಡರೂ ತಾಯಿ ಮಗುವಿಗೆ ಸೆರಗು ಮುಚ್ಚಿಯೇ ಹಾಲು ಕೊಡುತ್ತಾಳೆ. ಯಾಕಂದರ ತನ್ನ ದೃಷ್ಟಿ ಕೂಡಾ ಮಗುವಿನ ಮ್ಯಾಲೆ ಬೀಳಬಾರದು ಅಂತ. ಅಪ್ಪ ಮಗುವನ್ನು ತನ್ನ ಹೆಗಲ ಮೇಲೆ ಕುಳ್ಳಿರಿಸಿಕೊಂಡು ಜಗತ್ತನ್ನು ತೋರಿಸುತ್ತಾನೆ. ಯಾಕೆಂದರೆ ತಾನು ನೋಡದ ಜಗತ್ತನ್ನು ಮಗ ನೋಡಲಿ ಅಂತ. ಎಲ್ಲ ಜ್ಯೋತಿರ್ಲಿಂಗಗಳಿಗಿಂತ, ಎಲ್ಲ ಪವಿತ್ರ ಸ್ಥಳಗಳಿಗಿಂತ ಅತ್ಯಂತ ಪೂಜ್ಯವಾದ ಎರಡು ಪವಿತ್ರ ಸ್ಥಳಗಳೆಂದರೆ ಒಂದು ತಾಯಿಯ ಮಮತೆಯ ಮಡಿಲು, ಮತ್ತೊಂದು ತಂದೆಯ ಪ್ರೇಮದ ಹೆಗಲು. ಅವರು ಅದಾರ ಅಂತ ನಾವು ಇದೀವಿ. ನಾವು ಅವರನ್ನು ಬಿಟ್ಟೀವಿ. ಅವರು ಹೋದಮೇಲೆ ಅವರ ಫೋಟೋ ಇಟ್ಟೇವಿ. ಇದ್ದಾಗ ಸೇವೆ ಮಾಡದೆ ಹೋದಾಗ ಹಾರ ಹಾಕಿದರೇನು ಪ್ರಯೋಜನ?

ಬಹಳಷ್ಟು ಮಕ್ಕಳು ಹೇಳತಿರ್ತಾರ, ಓದಿದ್ದು ನೆನಪುಳಿಯೋದಿಲ್ಲ ಅಂತ. ಅದಕ್ಕ ಮಾಸ್ತರ್‌ಗಳು ಪರೀಕ್ಷಾ ತಯಾರಿ, ರೀಡ್, ರೈಟ್, ರಿಮೆಂಬರ್, ರಿಹರ್ಸಲ್ ಅಂತ ನೂರು ಹೇಳ್ತಾರ. ಓದಿದ್ದು ನೆನಪಲ್ಲಿ ಉಳಿಯೋಕೆ ಸಾಕಷ್ಟು ಟೆಕ್ನಾಲಜಿ ಬಂದಾವ. ಆದರೆ ಅವೆಲ್ಲ ಪ್ರಯೋಜನಕ್ಕೆ ಬರೋದಿಲ್ಲ. ಓದಿದ್ದು ನೆನಪಿನಲ್ಲಿ ಉಳೀಬೇಕು ಅಂದರೆ ಅದಕ್ಕೆ ಇರೋದು ಒಂದೇ ಟೆಕ್ನಾಲಜಿ. ಅದೆಂದರೆ ಅಪ್ಪನ ಬೆವರು, ಅಮ್ಮನ ಕಷ್ಟ ಎರಡು ತಲ್ಯಾಗ ಇಟ್ಟುಕೊಂಡರೆ ಓದಿದ್ದು ತಾನೇ ನೆನಪುಳಿಯುತ್ತದ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಮಂಗಳವಾರ ಆಗಸ್ಟ್ 27, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ನವಮಿ ಗಂ. 25-34 **ನಕ್ಷತ್ರ:** ರೋಹಿಣಿ ಗಂ. 15-38 **ಯೋಗ:** ಹರ್ಷಣ ಗಂ. 20-31 **ಕರಣ:** ತೈತಿಲ ಗಂ. 13-53, ಸಿಂಹ ಮಾಸದ 11 ನೇ ದಿನ, ಮಳೆನಕ್ಷತ್ರ: ಮಘಾ 4.

ರಾಹುಕಾಲ: ಮಧ್ಯಾಹ್ನ 03-00 – 04-30

ಸೂರ್ಯೋದಯ: 06-23 **ಸೂರ್ಯಾಸ್ತ:** 06-41

ಮುಸ್ಲಿಂ ದಿನಾಂಕ: 22 ಸಫರ್

ಅದೃಷ್ಟ ಸಂಖ್ಯೆ: 1, 7

ಮೇಷ: ಹಿರಿಯರ ಕೋರಿಕೆಯಂತೆ ಮನೆಯಲ್ಲಿ ದೇವತಾ ಕಾರ್ಯಗಳನ್ನು ಆಯೋಜಿಸುವಿರಿ. ಕೆಲಸದಲ್ಲಿ ವಿಘ್ನಗಳು ಎದುರಾದರೂ, ಅಪೇಕ್ಷಿತ ಫಲ ದೊರಕುವುದು. ಬಾಲ್ಯದ ನೆನಪುಗಳು ಕಾಡಲಿವೆ.

ವೃಷಭ: ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುವ ಅವಕಾಶಗಳು ಸಿಗಲಿವೆ. ಮನೆಯಲ್ಲಿ ಸಂತಸದ ವಾತಾವರಣದಿಂದ ಹಿರಿಯರಿಗೆ ನೆಮ್ಮದಿ ಇರುವುದು. ತಜ್ಞರ ಅಭಿಪ್ರಾಯ ಪಡೆದು ಚಿಕಿತ್ಸೆ ಪಡೆದುಕೊಳ್ಳಿ.

ಮಿಥುನ: ವಿವಾಹಕ್ಕೆ ಸಂಬಂಧಿಸಿದಂತೆ ನಿಮ್ಮ ಇಚ್ಛೆಯನ್ನು ಈಡೇರಿಸಿಕೊಳ್ಳಲು, ತಾಯಿಯ ಹಾಗೂ ಸಹೋದರರ ಮನಗೆಲ್ಲುವಲ್ಲಿ ಯಶಸ್ವಿಯಾಗುವಿರಿ. ಕಲುಷಿತ ಆಹಾರದಿಂದ ಆರೋಗ್ಯ ಹದಗೆಡುವ ಲಕ್ಷಣಗಳಿವೆ.

ಕರ್ಕಾಟಕ: ಬಹು ದಿನಗಳ ಕಠಿಣ ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕ ಲಾಭ ಮತ್ತು ಮನಸ್ಸಿಗೆ ಸಂತೋಷ ಉಂಟಾಗಲಿದೆ. ಸೋಲಿಗೆ ಆಲಸ್ಯತನವೇ ಮುಖ್ಯ ಕಾರಣವಾಗಿರುತ್ತದೆ. ಪತ್ನಿಯ ಆರೋಗ್ಯ ಸುಧಾರಿಸಲಿದೆ.

ಸಿಂಹ: ಸತ್ಯ ವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು ಎಂಬ ಮಾತನ್ನು ನೆನಪಿಟ್ಟುಕೊಳ್ಳುವುದು ಉತ್ತಮ. ಡೇರಿ ಉತ್ಪನ್ನಗಳ ಮಾರಾಟಗಾರರಿಗೆ ಹೆಚ್ಚಿನ ಲಾಭವಾಗಲಿದೆ. ಜೀವನದಲ್ಲಿ ಹೊಸ ಚೈತನ್ಯ ಮೂಡಲಿದೆ.

ಕನ್ಯಾ: ಆಪ್ತ ಸ್ನೇಹಿತರೊಂದಿಗಿನ ಭಿನ್ನಾಭಿಪ್ರಾಯಗಳು ದೀರ್ಘಕಾಲದವರೆಗೆ ಮುಂದುವರೆಯಬಹುದು. ಆಸ್ತಿ ಕೊಳ್ಳುವ ಅಥವಾ ಮಾರುವ ಬಗ್ಗೆ ಸೂಕ್ತ ವ್ಯಕ್ತಿಗಳೊಂದಿಗೆ ಚರ್ಚಿಸಿ. ಕುಟುಂಬದಲ್ಲಿ ನೆಮ್ಮದಿಯ ವಾತಾವರಣವಿರಲಿದೆ.

ತುಲಾ: ಕಿರು ಪ್ರವಾಸ ಕೈಗೊಳ್ಳುವ ಸಾಧ್ಯತೆ ಇದೆ. ಬಯಕೆಗಳನ್ನು ಹಿರಿಯ ಅಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಸಿದರೆ, ಈಡೇರಲಿವೆ. ಮಹಾಲಕ್ಷ್ಮಿಯನ್ನು ಪೂಜಿಸುವುದರಿಂದ ಹೆಚ್ಚಿನ ಏಳ್ಗೆಯಾಗುವುದು.

ವೃಶ್ಚಿಕ: ಸಕ್ರಿಯವಾಗಿ ಕಾರ್ಯನಿರ್ವಹಿಸಿದಲ್ಲಿ ಸದ್ಯ ವಿಳಂಬಗೊಂಡಿರುವ ಕೆಲವು ಕಾರ್ಯಗಳು ಮುಗಿಯಲಿವೆ. ವ್ಯಾಪಾರದಲ್ಲಿ ಪಾಲುದಾರರಿಂದಲೇ ಮೋಸವಾಗುತ್ತಿರುವ ವಿಚಾರ ತಿಳಿದು ದುಃಖವಾಗಬಹುದು.

ಧನು: ಕೂಡಿ ಬಂದಿರುವ ಕಂಕಣ ಬಲವು ನಿಮ್ಮ ತಪ್ಪು ನಡತೆಯಿಂದಾಗಿಯೋ ಅಥವಾ ಮೂರನೇ ವ್ಯಕ್ತಿಯ ಹಸ್ತಕ್ಷೇಪದಿಂದ ಮುರಿದು ಬೀಳುವ ಸಾಧ್ಯತೆ ಇದೆ. ಸಿನಿಮಾ ಕಲಾವಿದರಿಗೆ ಖ್ಯಾತಿ ಮತ್ತು ಸಂಪತ್ತು ಹರಿದು ಬರಲಿದೆ.

ಮಕರ: ನಿಮ್ಮ ತಪ್ಪುಗಳನ್ನು ಮುಚ್ಚಿಹಾಕಲು ಬೇರೆಯವರ ಮೇಲೆ ವೃಥಾ ಆರೋಪಿಸುವಂತಹಾ ಪ್ರಯತ್ನ ನಡೆಸುವಿರಿ. ದೇಹದಲ್ಲಿ ವಾಯು ಬಾಧೆ ಕಂಡುಬಂದು, ಸಣ್ಣ-ಪುಟ್ಟ ಅನಾರೋಗ್ಯ ಬಾಧಿಸಲಿದೆ.

ಕುಂಭ: ಹಳೆಯ ವಿಚಾರಗಳನ್ನೇ ಮುಂದಿಟ್ಟುಕೊಂಡು ಆಪ್ತರೊಂದಿಗೆ ಮತ್ತೆ ಮತ್ತೆ ವಾದಿಸಬೇಡಿ. ದೂರ ಪ್ರಯಾಣವನ್ನು ಮುಂದೂಡುವುದು ಉತ್ತಮ. ಮಾತೃವರ್ಗದವರಿಂದ ಆರ್ಥಿಕ ನೆರವು ಸಿಗಲಿದೆ.

ಮೀನ: ಸಿಹಿ ತಿಂಡಿಯ ತಯಾರಕರಿಗೆ ಕಾರ್ಮಿಕರ ಕೊರತೆ ಎದುರಾಗುವ ಸಾಧ್ಯತೆ ಇದೆ. ಹಂಗಾಮಿ ಕೆಲಸಗಾರರಿಗೆ ವೃತ್ತಿಯಲ್ಲಿ ಸಣ್ಣ ಬದಲಾವಣೆ ಆಗಲಿದೆ. ಸಿನಿಮಾ ರಂಗದವರಿಗೆ ಖ್ಯಾತಿ ದೊರಕಲಿದೆ.

ಪದಬಂಧ 5785

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ (3)
2.ಸೇನಾನಾಯಕನಿವನು (4)
4.ರಂಗ ತೋರಿಸಿದ ಜಿಂಕೆಯಿಲ್ಲಿ ತಿರುಗಿದೆ (3)
7.ಸಭೆಯಲ್ಲಿ ಕುಳಿತಿರುವವನು (3)
8.ಮರವನ್ನು ಕೊಯ್ಯಲು ಬಳಸುವ ಉಪಕರಣ (4)
9.ಜನರಲ್ಲಿರುವ ಮುಪ್ಪು! (2)
10.ಉತ್ತರದವರ ಚಿಕ್ಕಪ್ಪ (2)
11.ನಾಮ ಹಚ್ಚಿಕೊಂಡವನ ಹೆಸರು! (4)
13.ಇರುಳಿಗೊಂದು ಪರ್ಯಾಯ ಪದ (3)
14.ಕರಿಯೊಳಗಿರುವ ಸುಗಂಧದ್ರವ್ಯ! (3)
16.ಹಿಡಿತದಿಂದ ಖರ್ಚು ಮಾಡುವಿಕೆ (4)
17.ಕಣದೊಳಗೆ ನಡೆದ ಮದುವೆ (3)

ಮೇಲಿಂದ ಕೆಳಕ್ಕೆ

1.ಮಾರ್ಗದಲ್ಲಿ ದೂರವನ್ನು ಸೂಚಿಸುವ ದಾರಿಯ ಪಕ್ಕದಲ್ಲಿ ನೆಟ್ಟಿರುವ ಕಲ್ಲು (4)
2.ನದಿ ಸಮುದ್ರಗಳ ತೀರ (2)
3.ಕಿರೀಟಧಾರಣ ಮಹೋತ್ಸವ (5)
5.ಗರ ಬಡಿದವನು ತೋರಿಸಿದ ಸಮುದ್ರ (3)
6.ಸೂರ್ಯನ ಇನ್ನೊಂದು ಹೆಸರು (5)
9.ಮಂದಿಗೆಲ್ಲಾ ತಿಳಿದಿರುವಂಥದ್ದು (5)
10.ಕಾಯ ಬಗ್ಗಿಸಿ ಮಾಡಿದ ಕೆಲಸ (3)
12.ಹರಿಯ ಮುಂದಿರಿಸಿದ ಅಗಲವಾದ ತಟ್ಟೆ (4)
15.ಉದ್ದೇಶ ಅಥವಾ ಗುರಿ (2)



5784ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ತೋಪು 3.ತುದಿಗಾಲು 6.ಕಮಲ 8.ದವಾಖಾನೆ 9.ಬಸದಿ 10.ಸವಾಲು 11.ಗಜನಿಂಬೆ 13.ಭಾಜಕ 15.ಹಗೆತನ 16.ಟಕ್ಕ

ಮೇಲಿಂದ ಕೆಳಕ್ಕೆ:
2.ಪುಳಕ 3.ತುಮುಲ 4.ಗಾವುದ 5.ಆನೆಕಾಲು 7.ಮಸೀದಿ 9.ಬಡಗಣ 10.ಸಹಜ 12.ಬೆಸುಗೆ 13.ಭಾಜನ 14.ಕಮ್ಮಟ

ಸುಡೊಕು 6170

		1		7		6		2
	6		2		9			
2	8			1			9	5
	5		7			8		
				8		5		9
8		6		9				
6				5		9		7
		8					5	
5		3		6		1		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6169 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,823
ಇಂದಿನ ಅಂತ್ಯ	25,010
▲	187
ದಿನದ ಗರಿಷ್ಠ	25,043

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8000-12000
ತಿಪಟೂರು	₹11500-12000
ತುರುವೇಕೆರೆ	₹11300-12000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹480
12 ಕ್ಕೆ	₹66
ಮೈಸೂರು	
100ಕ್ಕೆ	₹482

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹270-550
ದ್ವಿತಳಿ (ಬಿ.ವಿ)	₹325-668

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹230
ಆರ್‌ಎಸ್‌ಎಸ್-5	₹224
ಗುಡ್ ಲಾಟ್	₹208

(ಪ್ರತಿ ಕೆ.ಜಿಗೆ)

ಮುಂಬೈ ಧಾರಣೆ

ಶೇಂಗಾ

26-08-2024

ಜಾವಾ 70/80(ಹೊಸ)	11700-11800
ಜಾವಾ 80/90(ಹೊಸ)	11100-11200
ದಪ್ಪ ಮಧ್ಯಪ್ರದೇಶ(ಹೊಸ)	9500-9600
ದಪ್ಪ ಗುಜರಾತ್(ಹೊಸ)	10300-10400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1560)
ಒಂದು ವಾರದ ಡೆಲಿವರಿ	1555 (1555)
ಪಾಮ್ ವಾರದ ಡೆಲಿವರಿ	958 (953)
ಸೂರ್ಯಕಾಂತಿ ಎಣ್ಣೆ ಕಚ್ಚಾ	925 (920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹71,650 (71,400)

ಬೆಳ್ಳಿ ಕೆ.ಜಿ ₹86,150 (85,300)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹16950
ಎಸಿ	₹10125
ಆರ್‌ಪಿ	₹20250
ಆರ್‌ಸಿ	₹10325

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1550 (1550)
ಸೋಯಾ (ರಿಫೈನ್ಡ್)	₹975 (960)
ಸೂರ್ಯಕಾಂತಿ (ರಿಫೈನ್ಡ್)	₹990 (970)
ಪಾಮೋಲಿನ್	₹960 (955)

ಆಗತ್ಯ ನೀತಿ, ವಿಧಾನ ರೂಪಿಸಲು ಆರ್‌ಬಿಐ ಸಿದ್ಧ: ಗವರ್ನರ್ ಶಕ್ತಿಕಾಂತ ದಾಸ್

‘ಹಣಕಾಸು ಕ್ಷೇತ್ರದ ಸದೃಢತೆಗೆ ಬದ್ಧ’

ಬೆಂಗಳೂರು (ಪಿಟಿಐ): ದೇಶದ ಹಣಕಾಸು ಕ್ಷೇತ್ರವನ್ನು ಬಲಿಷ್ಠ, ಕ್ರಿಯಾಶೀಲ ಮತ್ತು ಗ್ರಾಹಕ ಕೇಂದ್ರಿತವನ್ನಾಗಿ ಮಾಡಲು ಆರ್‌ಬಿಐ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಸೋಮವಾರ ಹೇಳಿದ್ದಾರೆ.



ಶಕ್ತಿಕಾಂತ ದಾಸ್

‘ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ (ಡಿಪಿಐ) ಮತ್ತು ಎಮರ್ಜಿಂಗ್ ಟೆಕ್ನಾಲಜೀಸ್’ ಕುರಿತು ಬೆಂಗಳೂರಲ್ಲಿ ನಡೆದ ಆರ್‌ಬಿಐನ ಸಮಾವೇಶದಲ್ಲಿ ಮಾತನಾಡಿದ ಅವರು, ‘ಯುನಿಫೈಡ್ ಲೆಂಡಿಂಗ್ ಇಂಟರ್‌ಫೇಸ್’ (ಯುಎಲ್‌ಐ) ಮತ್ತು ಕೇಂದ್ರೀಯ ಬ್ಯಾಂಕ್‌ನ ಡಿಜಿಟಲ್ ಕರೆನ್ಸಿಗೆ (ಸಿಬಿಡಿಸಿ) ಸಂಬಂಧಿಸಿದಂತೆ ಆರ್‌ಬಿಐ ತೆಗೆದುಕೊಳ್ಳುತ್ತಿರುವ ಕ್ರಮಗಳ ಬಗ್ಗೆ ವಿವಸಿದರು.

ಬೇರೆ ಬೇರೆ ದೇಶಗಳ ಗ್ರಾಹಕರು/ಕಂಪನಿಗಳು ಅತ್ಯಂತ ಕಡಿಮೆ ವೆಚ್ಚದಲ್ಲಿ ಹಾಗೂ ತ್ವರಿತವಾಗಿ ಹಣ ವರ್ಗಾವಣೆ ಮಾಡುವುದಕ್ಕೆ, ಯುಪಿಐ ಸೂಕ್ತ ಪರ್ಯಾಯ ವ್ಯವಸ್ಥೆಯಾಗಿ ಹೊರಹೊಮ್ಮುವ ಸಾಮರ್ಥ್ಯ ಹೊಂದಿದೆ. ಚಿಕ್ಕ ಮೊತ್ತವನ್ನು ವರ್ಗಾವಣೆ ಮಾಡುವ ಮೂಲಕ ಯುಪಿಐ ಬಳಸಿ ವ್ಯವಹಾರವನ್ನು ಆರಂಭಿಸಬಹುದು ಎಂದು ಹೇಳಿದರು.

ಡಿಪಿಐ ಮತ್ತು ಹೊಸ ತಂತ್ರಜ್ಞಾನಗಳ ವಿಷಯದ ಕುರಿತು ಮಾತನಾಡಿದ ಅವರು, ‘ಕಳೆದ ದಶಕದಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ತಂತ್ರಜ್ಞಾನ ಅಳವಡಿಕೆಗೆ ವೇಗ ಸಿಕ್ಕಿದ್ದು, ಒಟ್ಟಾರೆ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಅಭೂತಪೂರ್ವ ಬದಲಾವಣೆಗೆ ಇದು ಕಾರಣವಾಗಿದೆ’ ಎಂದರು.

‘ಮುಂಬರುವ ವರ್ಷಗಳಲ್ಲಿ, ಈ ಪರಿವರ್ತನೆ ಪ್ರಕ್ರಿಯೆಗೆ ಇನ್ನಷ್ಟು ವೇಗ ಸಿಗುವ ಸಾಧ್ಯತೆಯಿದೆ’ ಎಂದೂ ಹೇಳಿದರು.

ಸಾಲ ನೀಡುವ ವ್ಯವಸ್ಥೆಗೂ ಕಳೆದ ವರ್ಷ ಡಿಜಿಟಲ್ ಸ್ಪರ್ಶ ನೀಡಿದ್ದು, ಸುಲಲಿತವಾಗಿ ಸಾಲ ವಿತರಿಸುವ ತಂತ್ರಜ್ಞಾನ ಆಧಾರಿತ ವೇದಿಕೆಗೆ ಚಾಲನೆ ನೀಡಲಾಯಿತು. ಈ ವ್ಯವಸ್ಥೆಯನ್ನು ‘ಯುನಿಫೈಡ್ ಲೆಂಡಿಂಗ್‌ಇಂ ಟರ್‌ಫೇಸ್’ ಎಂಬುದಾಗಿ ಕರೆಯುವ ಉದ್ದೇಶವಿದೆ ಎಂದ ಅವರು, ‘ಯುಎಲ್‌ಐ’ ಸೌಲಭ್ಯವನ್ನು ಶೀಘ್ರದಲ್ಲೇ ದೇಶದಾದ್ಯಂತ ಜಾರಿಗೊಳಿಸಲಾವುದು ಎಂದರು.

ಕೃಷಿ, ಎಂಎಸ್‌ಎಂಇ ಸೇರಿದಂತೆ ಎಲ್ಲ ಕ್ಷೇತ್ರಗಳ ಗ್ರಾಹಕರಿಗೆ ಯುಎಲ್‌ಐ ಹೆಚ್ಚು ಅನುಕೂಲಕರವಾಗುವ ನಿರೀಕ್ಷೆ ಇದೆ ಎಂದು ಹೇಳಿದರು.

‘ಜೂನ್ ತ್ರೈಮಾಸಿಕದ ಜಿಡಿಪಿ ಪ್ರಗತಿ ಶೇ 7.1ಕ್ಕೆ ಇಳಿಕೆ’

ಮುಂಬೈ (ಪಿಟಿಐ): 2024–25ರ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ದೇಶದ ನೈಜ ಜಿಡಿಪಿ ಬೆಳವಣಿಗೆ ಶೇ 7.1ಕ್ಕೆ ಇಳಿಯಲಿದೆ ಎಂದು ಎಸ್‌ಬಿಐ ಅರ್ಥಶಾಸ್ತ್ರಜ್ಞರು ಅಂದಾಜಿಸಿದ್ದಾರೆ.

ಕಳೆದ ಜೂನ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆಯು ಶೇ 7.8ರಷ್ಟು ದಾಖಲಾಗಿತ್ತು. ಒಟ್ಟು ಮೌಲ್ಯ ವರ್ಧನೆಯ (ಜಿವಿಎ) ಬೆಳವಣಿಗೆಯು ಶೇ 6.7 ರಿಂದ ಶೇ 6.8ರಷ್ಟಾಗಲಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಶೇ 7ರಷ್ಟು ದಾಖಲಾಗಿತ್ತು ಎಂದು ಅರ್ಥಶಾಸ್ತ್ರಜ್ಞರು ಸಿದ್ಧಪಡಿಸಿರುವ ವರದಿ ಸೋಮವಾರ ಹೇಳಿದೆ.

ತಯಾರಿಕಾ ವಲಯದ ಚಟುವಟಿಕೆಯಲ್ಲಿ ಮಂದಗತಿ ಮತ್ತು ಲೋಕಸಭಾ ಚುನಾವಣೆಯಿಂದ ಸರ್ಕಾರದ ವೆಚ್ಚವು ಕಡಿಮೆಯಾಗಿದ್ದರಿಂದ ಕಳೆದ ತ್ರೈಮಾಸಿಕದಲ್ಲಿ ಆರ್ಥಿಕ ಚಟುವಟಿಕೆ ನಿಧಾನಗೊಂಡಿದೆ. ಇದರಿಂದ ಬೆಳವಣಿಗೆ ಇಳಿಕೆಯಾಗಲಿದೆ.

ಅನಿಶ್ಚಿತ ಜಾಗತಿಕ ಬೆಳವಣಿಗೆಯ ಮುನ್ನೋಟ ಮತ್ತು ಹಣದುಬ್ಬರದ ಇಳಿಕೆಯನ್ನು ಗಮನಿಸಿದರೆ, ಬಡ್ಡಿ ದರ ಕಡಿತಗೊಳಿಸುವ ಅವಕಾಶವಿದೆ ಎಂದು ಹೇಳಿದೆ.

ಕೈಗಾರಿಕಾ ಚಟುವಟಿಕೆ, ಸೇವಾ ವಲಯದ ಚಟುವಟಿಕೆ ಮತ್ತು ಜಾಗತಿಕ ಅರ್ಥ ವ್ಯವಸ್ಥೆಯ ಜೊತೆ ಬೆಸೆದುಕೊಂಡಿರುವ 41 ಸೂಚ್ಯಂಕಗಳನ್ನು ಆಧರಿಸಿ, ಆರ್ಥಿಕ ಚಟುವಟಿಕೆಗಳ ಬೆಳವಣಿಗೆಯನ್ನು ಅಂದಾಜಿಸುವ ‘ನೌಕಾಸ್ಟಿಂಗ್’ ಮಾದರಿಯನ್ನು ಎಸ್‌ಬಿಐ ರೂಪಿಸಿದೆ.

ಮಾರಾಟದ ಪ್ರಮಾಣ ಇಳಿಕೆ ಮತ್ತು ತಯಾರಿಕಾ ವಲಯದ ಕಂಪನಿಗಳ ಸಿಬ್ಬಂದಿ ವೆಚ್ಚದಲ್ಲಿ ಹೆಚ್ಚಳ ಕಂಡಿದೆ. ಈ ಹಿನ್ನೆಲೆಯಲ್ಲಿ, ಲಾಭದ ಪ್ರಮಾಣವು ಕುಸಿದಿದ್ದು, ತಯಾರಿಕಾ ವಲಯದ ಬೆಳವಣಿಗೆಯನ್ನು ಕಡಿಮೆ ಮಾಡುತ್ತಿದೆ ಎಂದು ವರದಿಯಲ್ಲಿ ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ.

2024-25ರ ಆರ್ಥಿಕ ವರ್ಷದಲ್ಲಿ ಶೇ 7.5ರ ಬೆಳವಣಿಗೆಯ ಅಂದಾಜನ್ನು ಎಸ್‌ಬಿಐ ಅರ್ಥಶಾಸ್ತ್ರಜ್ಞರು ಹಾಗೆಯೇ ಉಳಿಸಿಕೊಂಡಿದ್ದಾರೆ. ಇದು ಆರ್‌ಬಿಐ ಅಂದಾಜು ಮಾಡಿದ ಶೇ 7.2ಕ್ಕಿಂತ ಹೆಚ್ಚಾಗಿದೆ.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 611, ನಿಫ್ಟಿ 187 ಅಂಶ ಏರಿಕೆ

ಮುಂಬೈ (ಪಿಟಿಐ): ಲೋಹ, ಐ.ಟಿ ಮತ್ತು ಗ್ರಾಹಕ ವಸ್ತುಗಳ ಷೇರುಗಳ ಖರೀದಿ ಹೆಚ್ಚಳದಿಂದ ಷೇರು ಸೂಚ್ಯಂಕಗಳು ಸೋಮವಾರ ಏರಿಕೆಯಾದವು.

ಅಮೆರಿಕದ ಫೆಡರಲ್ ರಿಸರ್ವ್ ಶೀಘ್ರದಲ್ಲಿ ಬಡ್ಡಿ ದರ ಕಡಿತಗೊಳಿಸುವ ನಿರೀಕ್ಷೆ ಮತ್ತು ವಿದೇಶಿ ಬಂಡವಾಳ ಒಳಹರಿವಿನ ಹೆಚ್ಚಳದಿಂದ ಷೇರು ಸೂಚ್ಯಂಕಗಳು ಜಿಗಿತ ಕಂಡವು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 611 ಅಂಶ ಏರಿಕೆಯಾಗಿ, 81,698ಕ್ಕೆ ಅಂತ್ಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 187 ಅಂಶ ಹೆಚ್ಚಳವಾಗಿ 25,010ಗೆ ಸ್ಥಿರಗೊಂಡಿತು.

ಎಚ್‌ಸಿಎಲ್ ಟೆಕ್ನಾಲಜೀಸ್, ಎನ್‌ಟಿಪಿಸಿ, ಬಜಾಜ್ ಫಿನ್‌ಸರ್ವ್, ಟೆಕ್ ಮಹೀಂದ್ರ, ಜೆಎಸ್‌ಡಬ್ಲ್ಯು ಸ್ಟೀಲ್, ಟೈಟನ್, ಮಹೀಂದ್ರ ಆ್ಯಂಡ್ ಮಹೀಂದ್ರ, ಟಾಟಾ ಸ್ಟೀಲ್, ಲಾರ್ಸನ್ ಆ್ಯಂಡ್ ಟೂಬ್ರೊ ಮತ್ತು ಟಿಸಿಎಸ್ ಷೇರುಗಳ ಮೌಲ್ಯ ಏರಿಕೆಯಾಗಿದೆ.

ಕೋಟಕ್ ಮಹೀಂದ್ರ ಬ್ಯಾಂಕ್, ಪೇಟಿಎಂ, ಇಂಡಸ್‌ಇಂಡ್ ಬ್ಯಾಂಕ್, ಮಾರುತಿ ಮತ್ತು ಹಿಂದುಸ್ತಾನ್ ಯುನಿಲಿವರ್ ಷೇರಿನ ಮೌಲ್ಯ ಇಳಿದಿದೆ. ಏಷ್ಯನ್ ಮಾರುಕಟ್ಟೆಯಲ್ಲಿ ಶಾಂಘೈ, ಹಾಂಗ್‌ಕಾಂಗ್ ಸಕಾರಾತ್ಮಕ ವಹಿವಾಟು ನಡೆಸಿದ್ದರೆ, ಸೋಲ್ ಮತ್ತು ಟೋಕಿಯೊ ಇಳಿಕೆ ದಾಖಲಿಸಿವೆ.

ಜಾಗತಿಕ ಬ್ರೆಂಟ್ ಕಚ್ಚಾ ತೈಲ ದರ ಬ್ಯಾರೆಲ್‌ಗೆ ಶೇ 1ರಷ್ಟು ಏರಿಕೆಯಾಗಿದ್ದು, 79.87 ಡಾಲರ್‌ಗೆ (₹6,698) ಮುಟ್ಟಿದೆ.

ಸಿಇಒಗೆ 2.1 ಕೋಟಿ ಷೇರು ‘ಒನ್‌97’ಗೆ ಸೆಬಿ ನೋಟಿಸ್

ನವದೆಹಲಿ (ಪಿಟಿಐ): ಪೇಟಿಎಂನ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿಜಯ್ ಶೇಖರ್ ಶರ್ಮಾ ಅವರಿಗೆ ಕಂಪನಿಯ ಷೇರನ್ನು ನೀಡಿರುವ ವಿಷಯಕ್ಕೆ ಸಂಬಂಧಿಸಿದಂತೆ ‘ಪೇಟಿಎಂ’ ಮಾಲೀಕತ್ವ ಹೊಂದಿರುವ ‘ಒನ್‌97 ಕಮ್ಯುನಿಕೇಷನ್ಸ್’ ಸಮೂಹಕ್ಕೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಷೋಕಾಸ್ ನೋಟಿಸ್ ನೀಡಿದೆ.

‘ನೋಟಿಸ್ ನೀಡಿರುವುದು ಹೊಸ ವಿಷಯವೇನಲ್ಲ. ಈ ಸಂಬಂಧ ಈಗಾಗಲೇ ಸೆಬಿಯೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇವೆ ಮತ್ತು ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ನಮ್ಮ ವಾರ್ಷಿಕ ವರದಿಯಲ್ಲಿ ಬಹಿರಂಗಪಡಿಸಿದ್ದೇವೆ’ ಎಂದು ಪೇಟಿಎಂ ಹೇಳಿದೆ.

ಉದ್ಯೋಗಿಗಳು ಸಂಸ್ಥೆಯ ಷೇರನ್ನು ಹೊಂದಬಹುದಾದ ಅವಕಾಶದ (ಇಎಸ್‌ಒಪಿ) ಅಡಿಯಲ್ಲಿ 2021-22ರ ಹಣಕಾಸು ವರ್ಷದಲ್ಲಿ ಶರ್ಮಾ ಅವರಿಗೆ 2.1 ಕೋಟಿ ಷೇರನ್ನು ನೀಡಿರುವುದಾಗಿ ಪೇಟಿಎಂನ 2023–24ರ ಹಣಕಾಸು ವರ್ಷದ ವಾರ್ಷಿಕ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಶರ್ಮಾ ಅವರಿಗೆ ಇಎಸ್‌ಒಪಿ ನೀಡಿರುವ ಬಗ್ಗೆ ಸೆಬಿಯು ಪೇಟಿಎಂಗೆ ಷೋಕಾಸ್ ನೋಟಿಸ್ ಜಾರಿ ಮಾಡಿತ್ತು.

ಪೇಟಿಎಂ ಷೇರಿನ ಮೌಲ್ಯ ಇಳಿಕೆ: ಸೆಬಿ ನೋಟಿಸ್‌ನಿಂದ ಪೇಟಿಎಂನ ಷೇರಿನ ಮೌಲ್ಯ ಶೇ 4ರಷ್ಟು ಇಳಿದಿದೆ. ಷೇರಿನ ಬೆಲೆ ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ₹530 ಆಗಿದೆ.

ಷೇರಿನ ಮೌಲ್ಯ ಇಳಿಕೆಯಿಂದ ಕಂಪನಿಯ ಮಾರುಕಟ್ಟೆ ಮೌಲ್ಯ (ಎಂ–ಕ್ಯಾಪ್) ₹1,543 ಕೋಟಿ ಕರಗಿದ್ದು, ಒಟ್ಟು ಎಂ–ಕ್ಯಾಪ್ ₹33,731 ಕೋಟಿ ಆಗಿದೆ.

ಚಿನ್ನದ ಖರೀದಿ ಹೆಚ್ಚಳ ಸಾಧ್ಯತೆ: ಡಬ್ಲ್ಯುಜಿಸಿ

ಬೆಂಗಳೂರು (ರಾಯಿಟರ್ಸ್): ಆಮದು ಮೇಲಿನ ಸುಂಕ ಕಡಿತದಿಂದಾಗಿ ಮುಂಬರುವ ಹಬ್ಬದ ಋತುವಿನಲ್ಲಿ ಭಾರತದಲ್ಲಿ ಚಿನ್ನದ ಖರೀದಿ ಹೆಚ್ಚಳವಾಗುವ ಸಾಧ್ಯತೆ ಇದೆ ಎಂದು ವಿಶ್ವ ಚಿನ್ನ ಮಂಡಳಿಯ (ಡಬ್ಲ್ಯುಜಿಸಿ) ಭಾರತೀಯ ಕಾರ್ಯಾಚರಣೆಯ ಸಿಇಒ ಸಚಿನ್ ಜೈನ್ ಹೇಳಿದ್ದಾರೆ.

ಜುಲೈನಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಕೇಂದ್ರ ಸರ್ಕಾರವು ಚಿನ್ನದ ಮೇಲಿನ ಆಮದು ಸುಂಕವನ್ನು ಶೇ 15 ರಿಂದ ಶೇ 6ಕ್ಕೆ ಇಳಿಸಿದೆ.

ಆಮದು ಸುಂಕದಲ್ಲಿನ ಈ ಕಡಿತವು ಗ್ರಾಹಕರನ್ನು ಆಕರ್ಷಿಸುವಂತೆ ಮಾಡಿದ್ದು, ಚಿನ್ನ ಖರೀದಿಸಲು ಉತ್ತೇಜನ ನೀಡಿದೆ. ಆದರೆ, ಚಿನ್ನದ ಹೆಚ್ಚಿನ ಆಮದು ದೇಶದ ವ್ಯಾಪಾರ ಕೊರತೆಯನ್ನು ಹೆಚ್ಚಿಸುವುದಲ್ಲದೇ, ರೂಪಾಯಿ ಮೌಲ್ಯದ ಮೇಲೆ ಒತ್ತಡ ಸೃಷ್ಟಿಸಬಹುದು ಎಂದು ಹೇಳಿದ್ದಾರೆ.

ಸಾಮಾನ್ಯವಾಗಿ ವರ್ಷದ ಅಂತ್ಯದ ವೇಳೆಗೆ ಮದುವೆಯ ಋತು, ದಸರಾ, ದೀಪಾವಳಿ ಸೇರಿದಂತೆ ಪ್ರಮುಖ ಹಬ್ಬದಿಂದ ದೇಶದಲ್ಲಿ ಚಿನ್ನದ ಬೇಡಿಕೆಯು ಹೆಚ್ಚಾಗುತ್ತದೆ ಎಂದು ತಿಳಿಸಿದ್ದಾರೆ.

‘ಸುಂಕ ಕಡಿತವು ಚಿಲ್ಲರೆ ಗ್ರಾಹಕರಲ್ಲಿ ಖರೀದಿಸುವ ಭಾವನೆಯನ್ನು ಸೃಷ್ಟಿಸಿದೆ. ಸುಂಕ ಕಡಿತ ಮಾಡದಿದ್ದರೆ, ಈ ವೇಳೆಗೆ 10 ಗ್ರಾಂ ಚಿನ್ನದ ಬೆಲೆಯು ಗರಿಷ್ಠ ₹80,000ಕ್ಕೆ ತಲುಪುತ್ತಿತ್ತು. ಆದರೆ ಈಗ ಅದಕ್ಕಿಂತ ಕಡಿಮೆ ಇದೆ’ ಎಂದು ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್‌ನ ಆಶರ್ ಒ. ತಿಳಿಸಿದ್ದಾರೆ.

ಮಾರುತಿ ಸುಜುಕಿ ಇಂಡಿಯಾದ ಮಾರುಕಟ್ಟೆ ಮತ್ತು ಮಾರಾಟ ವಿಭಾಗದ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಪಾರ್ಥೋ ಬ್ಯಾನರ್ಜಿ ಮತ್ತು ನೊಬುಟಾಕಾ ಸುಜುಕಿ ಅವರು 500ನೇ ನೆಕ್ಸಾ ಮಾರಾಟ ಮಳಿಗೆಯನ್ನು ಬೆಂಗಳೂರಿನಲ್ಲಿ ಉದ್ಘಾಟಿಸಿದರು

ನೆಕ್ಸಾ: ಬೆಂಗಳೂರಿನಲ್ಲಿ 500ನೇ ಮಾರಾಟ ಮಳಿಗೆ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಪ್ರಮುಖ ವಾಹನ ತಯಾರಿಕಾ ಕಂಪನಿ ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್ ತನ್ನ 500ನೇ ನೆಕ್ಸಾ ಮಾರಾಟ ಮಳಿಗೆಯನ್ನು ಬೆಂಗಳೂರಿನಲ್ಲಿ ಇತ್ತೀಚೆಗೆ ಉದ್ಘಾಟಿಸಿದೆ.

ಇದರೊಂದಿಗೆ, ಕಂಪನಿಯ ಅರೆನಾ, ನೆಕ್ಸಾ ಮತ್ತು ಕಮರ್ಷಿಯಲ್ ಮಳಿಗೆಗಳ ಸಂಖ್ಯೆ ಈಗ 3,925ಕ್ಕೇರಿದೆ.

ಮಾರುತಿ ಸುಜುಕಿ ತನ್ನ ನೆಕ್ಸಾ ರಿಟೇಲ್ ಅನ್ನು 2015ರ ಜುಲೈನಲ್ಲಿ ಪ್ರಾರಂಭಿಸಿತು. ನೆಕ್ಸಾ ಅನ್ನು ಉದ್ಘಾಟಿಸಿದ ಒಂದು ವರ್ಷದೊಳಗೆ, ಕಂಪನಿಯು 94 ನಗರಗಳಲ್ಲಿ 100 ನೆಕ್ಸಾ ಮಾರಾಟ ಮಳಿಗೆಗಳನ್ನು ಸ್ಥಾಪಿಸಿತು. 2023-24ನೇ ಹಣಕಾಸು ವರ್ಷದಲ್ಲಿ ನೆಕ್ಸಾ ಮಳಿಗೆಗಳ ಮೂಲಕ 5.61 ಲಕ್ಷಕ್ಕೂ ಹೆಚ್ಚು ವಾಹನಗಳನ್ನು ಮಾರಾಟ ಮಾಡಲಾಗಿದೆ. ಇದರ ಹಿಂದಿನ ಹಣಕಾಸು ವರ್ಷದ ಮಾರಾಟಕ್ಕೆ ಹೋಲಿಸಿದರೆ, ಶೇ 54ರಷ್ಟು ಬೆಳವಣಿಗೆ ದಾಖಲಿಸಿದಂತಾಗಿದೆ. ಮಾರುತಿ ಸುಜುಕಿಯ ದೇಶೀಯ ಮಾರಾಟದಲ್ಲಿ ನೆಕ್ಸಾ ಸುಮಾರು ಶೇ 30ರಷ್ಟು ಪಾಲು ಹೊಂದಿದೆ ಎಂದು ಕಂಪನಿ ತಿಳಿಸಿದೆ.

‘ಗ್ರಾಹಕರ ಆದ್ಯತೆಗೆ ತಕ್ಕಂತೆ ವಾಹನಗಳನ್ನು ಒದಗಿಸಲು ಕಂಪನಿ ನಿರಂತರವಾಗಿ ಶ್ರಮಿಸುತ್ತಿದೆ. ಗ್ರಾಹಕರು ಮತ್ತು ಡೀಲರ್‌ಗಳ ಬೆಂಬಲ ಹಾಗೂ ಪ್ರೋತ್ಸಾಹದಿಂದ ಕಂಪನಿಯ ವಾಹನಗಳ ಮಾರಾಟವು ಹೆಚ್ಚಾಗುತ್ತಿದೆ’ ಎಂದು ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಹಿಸಾಶಿ ಟಕೆಯುಚಿ ತಿಳಿಸಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ರಾಶಿ	30199-48451	**ಶಿರಸಿ**	
ಕೋಕ	18000-28500	ಸಿಪ್ಪೆಗೋಟು	10500-17600	ಬೆಟ್ಟೆ	28220-38698
ಹೊಸತು	28500-39500	**ಶಿವಮೊಗ್ಗ**		ಬಿಳಿಗೋಟು	20019-29309
ಚಿತ್ರದುರ್ಗ		ಬೆಟ್ಟೆ	40009-54399	ಚಾಲಿ	32319-36511
ಅಪಿ	46619-47059	ಗೊರಬಲು	13000-32099	ಕೆಂಪುಗೋಟು	2099-25000
ಬೆಟ್ಟೆ	33629-34099	ರಾಶಿ	27000-48699	ರಾಶಿ	41098-47099
ಕೆಂಪುಗೋಟು	27609-28010	ಸರಕು	56009-74400	**ಯಲ್ಲಾಪುರ**	
ರಾಶಿ	46139-46569	**ಸಿದ್ದಾಪುರ**		ಅಪಿ	57475-63179
ಪುತ್ತೂರು		ಬಿಳಿಗೋಟು	24899-29000	ಬಿಳಿಗೋಟು	21212-29600
ಹೊಸತು	28000-39500	ಚಾಲಿ	32119-35600	ಚಾಲಿ	31089-36650
ಸಾಗರ		ಕೋಕ	23899-27899	ಕೋಕ	6890-17710
ಬಿಳಿಗೋಟು	10199-25214	ಕೆಂಪುಗೋಟು	21699-26899	ಕೆಂಪುಗೋಟು	20102-28799
ಚಾಲಿ	24854-32819	ರಾಶಿ	43099-46899	ರಾಶಿ	42099-52899
ಕೋಕ	9099-23989	ತಟ್ಟಿಬೆಟ್ಟೆ	28689-39699	ತಟ್ಟಿಬೆಟ್ಟೆ	31399-40199
ಕೆಂಪುಗೋಟು	20899-32099				

ಮೂವರ ಸಾವು • ಹಲವು ಕಟ್ಟಡಗಳಿಗೆ ಹಾನಿ

ಉಕ್ರೇನ್ ಮೇಲೆ ರಷ್ಯಾ ದಾಳಿ

ಕೀವ್ (ಎಪಿ): ಉಕ್ರೇನ್ ಮೇಲೆ ರಷ್ಯಾವು ಸೋಮವಾರ ಭೀಕರ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಿದ್ದು, ಮೂವರು ಮೃತಪಟ್ಟಿದ್ದಾರೆ.

ಮಧ್ಯರಾತ್ರಿ ಆರಂಭವಾದ ದಾಳಿಯು ಬೆಳಗ್ಗೆವರೆಗೂ ಮುಂದುವರಿದಿದ್ದು, ಉಕ್ರೇನ್ ಮೇಲೆ ರಷ್ಯಾ ಇತ್ತೀಚೆಗೆ ನಡೆಸಿದ ಬೃಹತ್ ದಾಳಿ ಇದಾಗಿದೆ.

‘ರಷ್ಯಾ ಡ್ರೋನ್‌ಗಳ ಹಲವು ಗುಂಪುಗಳು ಉಕ್ರೇನ್‌ನ ಪೂರ್ವ, ಉತ್ತರ ಮತ್ತು ಕೇಂದ್ರ ಭಾಗಗಳ ಮೇಲೆ ನುಗ್ಗಿಬಂದಿದ್ದವು’ ಎಂದು ಉಕ್ರೇನ್ ವಾಯುಪಡೆ ತಿಳಿಸಿದೆ.

‘ರಾಜಧಾನಿಯಲ್ಲಿ ಸ್ಫೋಟದ ಸದ್ದು ಕೇಳಿಸಿತ್ತು. ನಗರದ ಇಂಧನ ಮೂಲಸೌಕರ್ಯ ವ್ಯವಸ್ಥೆ ಹಾನಿಗೊಂಡಿದೆ’ ಎಂದು ಕೀವ್ ಮೇಯರ್ ವಿಟಲಿ ಕ್ಲಿಟ್‌ಸ್ಕೊ ಅವರು ತಿಳಿಸಿದ್ದಾರೆ.

ರಷ್ಯಾ ದಾಳಿಯಿಂದಾಗಿ ವಿವಿಧ ಭಾಗಗಳಲ್ಲಿ ಕಟ್ಟಡಗಳಿಗೆ ಹಾನಿಯಾಗಿದೆ. ಹಲವರು ಗಾಯಗೊಂಡಿದ್ದಾರೆ. ಜನರು ತಮ್ಮ ಎಲೆಕ್ಟ್ರಾನಿಕ್ ಉಪಕರಣಗಳನ್ನು ಚಾರ್ಜ್ ಮಾಡಿಕೊಳ್ಳಲು ಪರ್ಯಾಯ ವ್ಯವಸ್ಥೆಗಳನ್ನು ನೀಡಲಾಗುತ್ತದೆ’ ಎಂದು ಉಕ್ರೇನ್‌ನ ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ಉಕ್ರೇನ್‌ನಿಂದ ದಾಳಿ: ‘ಭಾನುವಾರ ತಡರಾತ್ರಿ ಮತ್ತು ಸೋಮವಾರ ಮುಂಜಾನೆ ಉಕ್ರೇನ್ ಡ್ರೋನ್‌ಗಳು ರಷ್ಯಾದ ಮೇಲೆ ದಾಳಿ ನಡೆಸಿವೆ. ವಸತಿ ಕಟ್ಟಡಗಳಿಗೆ ಡ್ರೋನ್ ಅಪ್ಪಳಿಸಿದ ಪರಿಣಾಮ ನಾಲ್ವರು ಗಾಯಗೊಂಡಿದ್ದಾರೆ’ ಎಂದು ರಷ್ಯಾದ ಅಧಿಕಾರಿಗಳು ತಿಳಿಸಿದ್ದಾರೆ.

‘ಸರಟೋವಾ ಮತ್ತು ಯರೊಸ್ಲಾವಲ್ ಸೇರಿದಂತೆ ರಷ್ಯಾದ 8 ಪ್ರದೇಶಗಳ ಮೇಲೆ ಉಕ್ರೇನ್‌ನ 22 ಡ್ರೋನ್‌ಗಳು ದಾಳಿ ನಡೆಸಿದ್ದವು’ ಎಂದು ರಷ್ಯಾ ಸೇನಾ ಪಡೆ ತಿಳಿಸಿದೆ.

ಝೆಲೆನ್‌ಸ್ಕಿ ಖಂಡನೆ

ರಷ್ಯಾ ದಾಳಿಯನ್ನು ಖಂಡಿಸಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು, ‘ಇದು ಹೇಯ ಕೃತ್ಯ’ ಎಂದು ವಾಗ್ದಾಳಿ ನಡೆಸಿದ್ದಾರೆ.

‘ನೂರಕ್ಕೂ ಹೆಚ್ಚು ಕ್ಷಿಪಣಿಗಳು ಮತ್ತು ನೂರು ಶಹೇದ್ ಡ್ರೋನ್‌ಗಳು ಉಕ್ರೇನ್ ಮೇಲೆ ದಾಳಿ ನಡೆಸಿದ್ದು, ಇಂಧನ ಮೂಲಸೌಕರ್ಯ ವ್ಯವಸ್ಥೆಯು ತೀವ್ರವಾಗಿ ಹಾನಿಗೊಂಡಿದೆ’ ಎಂದು ತಿಳಿಸಿದ್ದಾರೆ.

ಉಕ್ರೇನ್ ಮೇಲಿನ ದಾಳಿಯಿಂದ ಎಚ್ಚೆತ್ತುಕೊಂಡಿರುವ ಪೋಲೆಂಡ್, ದೇಶದ ಪೂರ್ವ ಭಾಗದಲ್ಲಿ ಪೊಲೀಸ್ ಮತ್ತು ನ್ಯಾಟೊ ವಾಯುಪಡೆಗಳಿಂದ ಭದ್ರತೆಯನ್ನು ಹೆಚ್ಚಿಸಿದೆ.

ಸುಡಾನ್: ಭಾರಿ ಮಳೆಗೆ ಒಡೆದ ಡ್ಯಾಂ; ನಾಲ್ವರ ಸಾವು

ಕೈರೊ (ಎಪಿ): ಸುಡಾನ್‌ನ ರೆಡ್ ಸಿ ರಾಜ್ಯದಲ್ಲಿ ಅಣೆಕಟ್ಟೆಯೊಂದು ಒಡೆದಿದ್ದು, ಪ್ರವಾಹದಿಂದಾಗಿ ಕನಿಷ್ಠ ನಾಲ್ಕು ಮಂದಿ ಸಾವಿಗೀಡಾಗಿದ್ದಾರೆ ಎಂದು ಅಲ್ಲಿನ ಆರೋಗ್ಯ ಸಚಿವಾಲಯ ತಿಳಿಸಿದೆ.

ರೆಡ್ ಸಿ ರಾಜ್ಯದಲ್ಲಿ ಈಚೆಗೆ ಭಾರಿ ಮಳೆಯಾಗುತ್ತಿದ್ದು, ‘ಅರ್ಬಾತ್’ ಅಣೆಕಟ್ಟು ಒಡೆದಿದೆ. ಸಂತ್ರಸ್ತರಿಗೆ ನೆರವಾಗಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ. ಎಷ್ಟು ಜನರು ನಾಪತ್ತೆಯಾಗಿದ್ದಾರೆ ಎಂಬ ಬಗ್ಗೆ ಮಾಹಿತಿ ಹಂಚಿಕೊಂಡಿಲ್ಲ.

‘ಪ್ರವಾಹಕ್ಕೆ ಸಿಲುಕಿ ಕನಿಷ್ಠ 60 ಮಂದಿ ಮೃತಪಟ್ಟಿದ್ದು, ಹಲವರು ನಾಪತ್ತೆಯಾಗಿದ್ದಾರೆ ಎಂಬುದಾಗಿ ಅಂದಾಜಿಸಿದ್ದೇನೆ’ ಎಂದು ಅಧಿಕಾರಿಯೊಬ್ಬರು ಸ್ಥಳೀಯ ಮಾಧ್ಯಮ ಅಲ್‌–ತಫೀರ್‌ಗೆ ತಿಳಿಸಿದ್ದಾರೆ.

ಹಸೀನಾ ಹಸ್ತಾಂತರಕ್ಕೆ ಜಾತೀಯ ಪಕ್ಷದ ನಾಯಕನ ಒತ್ತಾಯ

‘ಬಾಂಗ್ಲಾದ ಪ್ರವಾಹ ಪರಿಸ್ಥಿತಿಗೆ ಭಾರತ ಕಾರಣವಲ್ಲ’

ಢಾಕಾ (ಪಿಟಿಐ): ಬಾಂಗ್ಲಾದೇಶದಲ್ಲಿ ಉಂಟಾಗಿರುವ ಪ್ರವಾಹ ಪರಿಸ್ಥಿತಿಗೆ ಭಾರತವನ್ನು ದೂಷಿಸುವುದನ್ನು ಜಾತೀಯ ಪಕ್ಷದ ಮುಖ್ಯಸ್ಥ ಗುಲಾಮ್ ಮೊಹಮ್ಮದ್ ಖಾದರ್ ಅವರು ಖಂಡಿಸಿದ್ದಾರೆ.



ಗುಲಾಮ್ ಮೊಹಮ್ಮದ್ ಖಾದರ್

ಪಿಟಿಐಗೆ ಸಂದರ್ಶನ ನೀಡಿದ ಖಾದರ್ ಅವರು, ‘ಪ್ರವಾಹ ಅಥವಾ ಪ್ರಾಕೃತಿಕ ವಿಕೋಪಕ್ಕೆ ಮತ್ತೊಬ್ಬರನ್ನು ಹೇಗೆ ದೂಷಿಸುತ್ತೀರಿ?. ತಗ್ಗು ಪ್ರದೇಶಗಳಿಗೆ ನೀರು ನುಗ್ಗುವುದು ಸಾಮಾನ್ಯ. ಭಾರತದಿಂದ ಸ್ವಲ್ಪ ನೀರು ಬಿಟ್ಟಿರುವುದರಿಂದ ಸಮಸ್ಯೆಯಾಗಿದೆ. ಆದರೆ, ಮಳೆಗಾಲದಲ್ಲಿ ನೀರು ಬಿಡದೇ ಇದ್ದರೆ ಅಣೆಕಟ್ಟೆಯು ಒಡೆಯುತ್ತದೆ. ಇದರಿಂದ ಭೀಕರ ಅವಘಡ ಸಂಭವಿಸುತ್ತದೆ’ ಎಂದು ಹೇಳಿದರು.

ಖಾದರ್ ಅವರು ಇತ್ತೀಚೆಗೆ ಪತನವಾದ ಶೇಖ್ ಹಸೀನಾ ಅವರ ಸರ್ಕಾರದ ಅವಧಿಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು.

‘ಎರಡು ರಾಷ್ಟ್ರಗಳು ಉತ್ತಮ ಬಾಂಧವ್ಯವನ್ನು ಬಯಸುತ್ತಿವೆ. ಒಂದು ದೇಶವೇ ಪರಮೋಚ್ಚ ಎಂಬ ಭಾವನೆಯನ್ನು ಬಿಟ್ಟು, ಎರಡು ರಾಷ್ಟ್ರಗಳು ಸಮಾನವಾದದ್ದು ಎಂದು ಪರಿಗಣಿಸಬೇಕು. ಜನರ ಆಕ್ರೋಶವು ಭಾರತದ ವಿರುದ್ಧವಲ್ಲ ಬದಲಾಗಿ ಒಂದು ಪಕ್ಷ(ಅವಾಮಿ ಲೀಗ್) ಮತ್ತು ಅದರ ನಾಯಕಿಗೆ(ಶೇಖ್ ಹಸೀನಾ) ನೀಡುತ್ತಿರುವ ಪ್ರಶ್ನಾತೀತ ಬೆಂಬಲದ ವಿರುದ್ಧ’ ಎಂದರು.

‘ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳದ ಕೆಲವರು ಭಾರತ ವಿರೋಧಿ ಭಾವನೆಗಳನ್ನು ಬಳಸಿಕೊಂಡು ಜನರನ್ನು ದಾರಿ ತಪ್ಪಿಸುತ್ತಿದ್ದಾರೆ. ಭಾರತ ವಿರೋಧಿ ಭಾವನೆಯು ಅಲ್ಲಿಯ ಜನರ ಮೇಲಲ್ಲ ಬದಲಾಗಿ ಆಡಳಿತ ನಡೆಸುವವರ ಬಗ್ಗೆ’ ಎಂದರು.

ಬಾಂಗ್ಲಾದೇಶದಲ್ಲಿ ಇತ್ತೀಚೆಗೆ ಪ್ರವಾಹ ಪರಿಸ್ಥಿತಿ ಉಂಟಾಗಿತ್ತು. ‘ತ್ರಿಪುರದಲ್ಲಿ ಗುಮ್ತಿ ನದಿಗೆ ಅಡ್ಡಲಾಗಿ ಕಟ್ಟಿರುವ ಅಣೆಕಟ್ಟೆಯಿಂದ ನೀರು ಬಿಟ್ಟಿರುವುದರಿಂದ ಈ ಪರಿಸ್ಥಿತಿ ಉಂಟಾಗಿದೆ’ ಎಂದು ಬಾಂಗ್ಲಾ ಆರೋಪಿಸಿತ್ತು.

‘ಭಾರತದಲ್ಲಿ ಆಶ್ರಯ ಪಡೆಯುವ ಹಸೀನಾ ಅವರ ನಿರ್ಧಾರವು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿತ್ತು. ಅವರ ವಿಚಾರಣೆಯು ಆಗತ್ಯವಾಗಿದ್ದು, ಭಾರತವು ಹಸೀನಾ ಅವರನ್ನು ಬಾಂಗ್ಲಾದೇಶದ ಸರ್ಕಾರಕ್ಕೆ ಹಸ್ತಾಂತರಿಸಬೇಕು’ ಎಂದು ಒತ್ತಾಯಿಸಿದರು.

ಭಾರತ–ಬಾಂಗ್ಲಾ ಗಡಿ ಸುರಕ್ಷಿತ: ಬಿಎಸ್‌ಎಫ್

ಶಿಲ್ಲಾಂಗ್ (ಪಿಟಿಐ): ಮೇಘಾಲಯದಲ್ಲಿನ 443 ಕಿ.ಮೀ. ಉದ್ದದ ಭಾರತ–ಬಾಂಗ್ಲಾದೇಶ ಗಡಿಯು ಸಂಪೂರ್ಣವಾಗಿ ಸುರಕ್ಷಿತವಾಗಿದೆ ಎಂದು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಹೇಳಿದೆ. ಬಾಂಗ್ಲಾದೇಶದ ಪ್ರಜೆಗಳು ಅಕ್ರಮವಾಗಿ ಭಾರತ ಪ್ರವೇಶಿಸುತ್ತಿದ್ದಾರೆ ಎಂಬ ಆರೋಪಗಳನ್ನು ಅದು ಅಲ್ಲಗಳೆದಿದೆ.

ಬಾಂಗ್ಲಾದೇಶದ ಅವಾಮಿ ಲೀಗ್ ಪಕ್ಷದ ನಾಯಕ ಇಶಾಕ್ ಅಲಿ ಖಾನ್ ಪನ್ನಾ ಅವರು ಬಾಂಗ್ಲಾದೇಶದಿಂದ ತಪ್ಪಿಸಿಕೊಳ್ಳುವ ಯತ್ನದ ಭಾಗವಾಗಿ ಮೇಘಾಲಯದ ಬೆಟ್ಟವೊಂದನ್ನು ಏರುವ ಸಂದರ್ಭದಲ್ಲಿ ಹೃದಯಾಘಾತದಿಂದ ಮೃತಪಟ್ಟರು ಎಂದು ಬಾಂಗ್ಲಾದ ಕೆಲವು ಮಾಧ್ಯಮಗಳು ವರದಿ ಪ್ರಕಟಿಸಿದ ನಂತರ ಬಿಎಸ್‌ಎಫ್ ಈ ಸ್ಪಷ್ಟನೆ ನೀಡಿದೆ.

ಸಂಕ್ಷಿಪ್ತ ಸುದ್ದಿ

ಪಾಕ್: ಬಂಡುಕೋರರಿಂದ 33 ಬಸ್ ಪ್ರಯಾಣಿಕರ ಹತ್ಯೆ

ಕರಾಚಿ(ಪಿಟಿಐ): ಸಂಘರ್ಷ ಪೀಡಿತ ಬಲೂಚಿಸ್ತಾನ ಪ್ರಾಂತ್ಯದಲ್ಲಿ ಸೋಮವಾರ ಪ್ರತ್ಯೇಕತಾವಾದಿಗಳು ನಡೆಸಿದ ಎರಡು ಪ್ರತ್ಯೇಕ ದಾಳಿಗಳಲ್ಲಿ 33 ಬಸ್ ಪ್ರಯಾಣಿಕರನ್ನು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ.

ಬಲೂಚಿಸ್ತಾನದ ಮುಸಾಖೇಲ್ ಜಿಲ್ಲೆಯಲ್ಲಿ ಬಂದೂಕುಧಾರಿಗಳು ಬಸ್‌ವೊಂದರಲ್ಲಿದ್ದ ಪ್ರಯಾಣಿಕರನ್ನು ಕೆಳಗೆ ಇಳಿಸಿದ್ದಾರೆ. ಅವರಲ್ಲಿದ್ದವರ ಪೈಕಿ, ಗುರುತಿನ ಚೀಟಿಗಳ ಪರಿಶೀಲನೆ ಮೂಲಕ ಪಂಜಾಬ್ ಪ್ರಾಂತ್ಯದವರನ್ನು ಗುರುತಿಸಿ, ಕನಿಷ್ಠ 23 ಜನರನ್ನು ಹತ್ಯೆ ಮಾಡಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಅಯೂಬ್ ಖೋಸೊ ತಿಳಿಸಿದ್ದಾರೆ.

‘ಹತ್ಯೆಯಾದವರಲ್ಲಿ ಕೆಲವರು ಖೈಬರ್ ಪಂಖ್ತುಖ್ವಾ ಪ್ರಾಂತ್ಯದವರೂ ಸೇರಿದ್ದಾರೆ. ಜನಾಂಗೀಯ ಹಿನ್ನೆಲೆ ಕಾರಣದಿಂದಾಗಿ ಹತ್ಯೆ ಮಾಡಲಾಗಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ’ ಎಂದಿದ್ದಾರೆ. ಈ ದಾಳಿಯ ಹೊಣೆಯನ್ನು ಬಲೂಚ್ ಲಿಬರೇಷನ್ ಆರ್ಮಿ ಹೊತ್ತುಕೊಂಡಿದೆ. ಬಲೂಚಿಸ್ತಾನದ ಕಲಾತ್ ಜಿಲ್ಲೆಯಲ್ಲಿ ನಡೆದ ಮತ್ತೊಂದು ದಾಳಿಯಲ್ಲಿ, ಬಂದೂಕುಧಾರಿಗಳು ಕನಿಷ್ಠ 10 ಜನರನ್ನು ಕೊಂದಿದ್ದಾರೆ.

‘ಮಹಾದೇವ್ ಬೆಟ್ಟಿಂಗ್ ಆ್ಯಪ್ ಹಗರಣದ ತನಿಖೆ ಸಿಬಿಐಗೆ’

ರಾಯಪುರ (ಪಿಟಿಐ): ದೇಶದಾದ್ಯಂತ ಸಂಚಲನ ಮೂಡಿಸಿದ್ದ ಕುಖ್ಯಾತ ‘ಮಹಾದೇವ್ ಬೆಟ್ಟಿಂಗ್ ಆ್ಯಪ್’ ಪ್ರಕರಣದ ತನಿಖೆಯನ್ನು ಛತ್ತೀಸಗಢ ಸರ್ಕಾರ ಸಿಬಿಐಗೆ ವಹಿಸಿದೆ.

ಈ ಸಂಬಂಧ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಛತ್ತೀಸಗಢ ಉಪಮುಖ್ಯಮಂತ್ರಿ ವಿಜಯ್ ಶರ್ಮಾ, ‘ಮಹಾದೇವ್ ಬೆಟ್ಟಿಂಗ್ ಆ್ಯಪ್‌ನಲ್ಲಿ ನಡೆದಿದೆ ಎನ್ನಲಾದ ಹಗರಣ ಸಂಬಂಧ ಛತ್ತೀಸಗಢದ ವಿವಿಧ ಠಾಣೆಗಳಲ್ಲಿ 70 ಪ್ರಕರಣ ಹಾಗೂ ಆರ್ಥಿಕ ಅಪರಾಧಗಳ ವಿಭಾಗದಲ್ಲಿ ಒಂದು ಪ್ರಕರಣ ದಾಖಲಾಗಿದೆ. ಈ ಎಲ್ಲ ಪ್ರಕರಣಗಳನ್ನು ಸಿಬಿಐಗೆ ವರ್ಗಾಯಿಸಲು ಸರ್ಕಾರ ನಿರ್ಧರಿಸಿದ್ದು, ಕಳೆದ ವಾರ ಅಧಿಸೂಚನೆಯನ್ನು ಹೊರಡಿಸಿದೆ’ ಎಂದು ತಿಳಿಸಿದ್ದಾರೆ.

ಈ ಹಗರಣವು ಛತ್ತೀಸಗಢಕ್ಕೆ ಸೀಮಿತವಾಗಿರದೆ, ಬಹುರಾಜ್ಯಗಳೊಂದಿಗೆ ಸಂಪರ್ಕ ಹೊಂದಿದೆ. ಅಲ್ಲದೆ ಹಗರಣದ ಕೆಲ ರೂವಾರಿಗಳು ವಿದೇಶದಲ್ಲಿ ನೆಲಸಿದ್ದಾರೆ. ಸಿಬಿಐ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಕೈಗೊಳ್ಳುವ ಭರವಸೆ ಇದೆ ಎಂದಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

J. Parashiva Murthy (Pasha)

DOB:08.09.1952 - DOD:26.08.2024
S/O Late J. Rajasekhar & J. Sharda
Wife - J. Gayathri,
Son - J. Basava Prabhu
Sister - J. Hamsa Mahesh
Ph.: 9845428705, 9845214596

ಎರಡನೇ ವರ್ಷದ ಪುಣ್ಯಸ್ಮರಣೆ

ಶ್ರೀ ಎಂ.ಎಂ. ನಾಯ್ಕ
ಕರ್ನಾಟಕ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಹಾಗೂ ಮಾಜಿ KPSC ಸದಸ್ಯರು
ಜನನ: 5.6.1932 ಮರಣ: 27.8.2022
ನಿಮ್ಮ ನೆನಪು ಸದಾ ಜೀವಂತ
ದುಃಖತಪ್ತ: ಕುಟುಂಬದವರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General
✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381
ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC,PUC,Degree, ITI ನವರು.18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035277967
Part-Time Jobs
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663563555, 9663542555
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.
ಮನೆಯಲ್ಲಿ ವರ್ಕ್ ಫ್ರಮ್ ಹೋಮ್ ಕೆಲಸಮಾಡಿ 4000- 20,000/- ಪಡೆಯಿರಿ. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526.
Wanted
ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/- ರಿಂದ 20,000/- ESI,PF ಸೌಲಭ್ಯವಿರುತ್ತದೆ. ಬೆಂಗಳೂರು-76. ಸಂಪರ್ಕಿಸಿ: 9008835841, 9900859248
ಪ್ರವಾಸ
Travel
9.9.2024, 23.9.2024, 30.9.2024 ರಿಂದ 6ದಿನಗಳ ಕಾಶಿ ಅಯೋಧ್ಯಾ, ಅಲಹಾಬಾದ್, ಗಯಾ ವಿಮಾನ ಪ್ರವಾಸ ರೂ.27,000/- ಒಬ್ಬರಿಗೆ ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ 9902008056
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು
ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ @50/-* PER WORDS
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
*Conditions apply
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
7795158424
9900428036

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಮಲಯಾಳ ಚಿತ್ರೋದ್ಯಮದಲ್ಲಿ ಮತ್ತೆ ಅಲ್ಲೋಲ–ಕಲ್ಲೋಲ • ಸಮಗ್ರ ತನಿಖೆ ನಡೆಸಲು ಆಗ್ರಹ

ನಟರಿಂದ ಲೈಂಗಿಕ ಕಿರುಕುಳ: ನಟಿ ಆರೋಪ

ತಿರುವನಂತಪುರ (ಪಿಟಿಐ/ಪ್ರಜಾವಾಣಿ ವಾರ್ತೆ): ಮಲಯಾಳ ನಟ ಹಾಗೂ ಶಾಸಕ ಎಂ. ಮುಕೇಶ್, ನಟರಾದ ಜಯ ಸೂರ್ಯ, ಮಣಿಯಣ್ಣಿಳ್ಳ ರಾಜು, ಇಡವೇಳ ಬಾಬು, ಬಾಬುರಾಜ್ ವಿರುದ್ಧ ಮಲಯಾಳ ಸಿನಿಮಾ ನಟಿ ಮಿನು ಮುನೀರ್ ಅವರು ಸೋಮವಾರ ಲೈಂಗಿಕ ಕಿರುಕುಳದ ಆರೋಪ ಮಾಡಿದ್ದಾರೆ.


ಎಂ.ಮುಕೇಶ್

ಹಲವು ವರ್ಷಗಳ ಹಿಂದೆ ಈ ಕೃತ್ಯ ನಡೆದಿದೆ. ನ್ಯಾಯಮೂರ್ತಿ ಕೆ. ಹೇಮಾ ಸಮಿತಿಯು ಮಲಯಾಳ ಚಿತ್ರರಂಗದಲ್ಲಿ ಕಲಾವಿದೆಯರ ಮೇಲಿನ ಲೈಂಗಿಕ ದೌರ್ಜನ್ಯದ ಕುರಿತು ಬೆಳಕು ಚೆಲ್ಲಿದ ಬೆನ್ನಲ್ಲೇ, ಮತ್ತಷ್ಟು ನಟರ ವಿರುದ್ಧ ನಟಿಯರು ಬಹಿರಂಗವಾಗಿ ಆರೋಪಿಸಿದ್ದಾರೆ.

ಸುದ್ದಿವಾಹಿನಿಗೆ ನೀಡಿದ ಸಂದರ್ಶನದಲ್ಲಿ ನಾಲ್ವರು ನಟರ ಹೆಸರು ಉಲ್ಲೇಖಿಸಿ ನಟಿ ಮಿನು ಮುನೀರ್ ಆರೋಪ ಮಾಡಿದ್ದರೆ, ನಟಿ ಗೀತಾ ವಿಜಯನ್ ಅವರು ನಿರ್ಮಾಪಕ ತುಳಸಿದಾಸ್ ಅವರು 1991ರಲ್ಲಿ ಲೈಂಗಿಕ ಕಿರುಕುಳ ನೀಡಿದ್ದರು ಎಂದು ಆರೋಪಿಸಿದ್ದಾರೆ.

‘ಆರೋಪಿಗಳನ್ನು ರಕ್ಷಿಸಲು ಯತ್ನ’

ಕೊಚ್ಚಿ (ಪಿಟಿಐ): ‘ಮಲಯಾಳ ಸಿನಿಮಾ ಕ್ಷೇತ್ರದಲ್ಲಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಿಗಳನ್ನು ಎಡಪಕ್ಷಗಳ ನೇತೃತ್ವದ ರಾಜ್ಯ ಸರ್ಕಾರವು ರಕ್ಷಿಸಲು ಪ್ರಯತ್ನಿಸುತ್ತಿದೆ’ ಎಂದು ಕೇರಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ಆರೋಪಿಸಿದ್ದಾರೆ.


ವಿ.ಡಿ.ಸತೀಶನ್

‘ನ್ಯಾಯಮೂರ್ತಿ ಕೆ. ಹೇಮಾ ಸಮಿತಿಯು ಮಲಯಾಳ ಚಿತ್ರರಂಗದಲ್ಲಿ ಕಲಾವಿದೆಯರ ಮೇಲಿನ ಲೈಂಗಿಕ ದೌರ್ಜನ್ಯದ ಕುರಿತು ಬೆಳಕು ಚೆಲ್ಲಿದ ಕುರಿತು ತನಿಖೆ ನಡೆಸಲು ರಾಜ್ಯ ಸರ್ಕಾರ ಒಪ್ಪಿಲ್ಲ. ನಟಿಯರು ಎದುರಿಸಿದ ಲೈಂಗಿಕ ಕಿರುಕುಳದ ಕುರಿತು ರಾಜ್ಯ ಸರ್ಕಾರವು ವಿಶೇಷ ತನಿಖಾ ತಂಡ ರಚಿಸಲು ಭಾನುವಾರ ಒಪ್ಪಿಗೆ ಸೂಚಿಸಿದೆ. ಈ ತಂಡಕ್ಕೆ ಮಹಿಳಾ ಐಪಿಎಸ್ ಅಧಿಕಾರಿಗಳ ಬದಲಾಗಿ ಪುರುಷ ಅಧಿಕಾರಿಗಳನ್ನು ನೇಮಿಸಿದ್ದು ಏಕೆ’ ಎಂದು ಅವರು ಪ್ರಶ್ನಿಸಿದ್ದಾರೆ.

‘ಹೇಮಾ ಸಮಿತಿ ಮುಂದೆ ಸಂತ್ರಸ್ತೆಯರು ನೀಡಿದ ಹೇಳಿಕೆ ಆಧರಿಸಿ ಹಿರಿಯ ಮಹಿಳಾ ಐಪಿಎಸ್ ಅಧಿಕಾರಿಯ ನೇತೃತ್ವದಲ್ಲಿ ತನಿಖೆ ನಡೆಸಬೇಕು ಎಂದು ಮೊದಲಿನಿಂದಲೂ ಒತ್ತಾಯಿಸುತ್ತಿದ್ದೇವೆ. ಮುಖ್ಯಮಂತ್ರಿಗಳ ಕಚೇರಿಯು ಬಿಡುಗಡೆಗೊಳಿಸಿದ ಪತ್ರಿಕಾ ಪ್ರಕಟಣೆಯಲ್ಲಿ ಈ ವಿಚಾರವನ್ನೇ ಪ್ರಸ್ತಾಪಿಸಿಲ್ಲ’ ಪತ್ರಿಕಾಗೋಷ್ಠಿಯಲ್ಲಿ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ತನಿಖೆ ನಡೆಸಿ, ತಪ್ಪಿತಸ್ಥರಿಗೆ ಕಾನೂನಿನ ಅಡಿಯಲ್ಲಿ ಶಿಕ್ಷೆ ಕೊಡಿಸಿ, ಸಂತ್ರಸ್ತರಿಗೆ ನ್ಯಾಯ ಒದಗಿಸುವುದು ಸರ್ಕಾರದ ಜವಾಬ್ದಾರಿ. ಕಳೆದ ನಾಲ್ಕೂವರೆ ವರ್ಷದಲ್ಲಿ ಸರಣಿ ಅಪರಾಧಗಳು ನಡೆದಿದ್ದರೂ ಪ್ರಕರಣವನ್ನು ಮುಚ್ಚಿಹಾಕಲು ಯತ್ನಿಸುತ್ತಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಅಸಹ್ಯ ಮೂಡಿಸುತ್ತಿರುವ ಅಪರಾಧ ಕೃತ್ಯ’

ಮುಂಬೈ (ಪಿಟಿಐ): ‘ಯಾವುದೇ ಸ್ಥಳ ಅಥವಾ ಸಂದರ್ಭದಲ್ಲಿ ಮಹಿಳೆಯರು ಸುರಕ್ಷಿತರಾಗಿರಬೇಕು. ಅಂತಹ ವಾತಾವರಣ ಸೃಷ್ಟಿಸುವ ಹೊಣೆಗಾರಿಕೆ ಪುರುಷರ ಮೇಲಿದ್ದು, ಇತ್ತೀಚಿಗಿನ ದಿನಗಳಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಅಪರಾಧಗಳು ‘ಅಸಹ್ಯ’ ಮೂಡಿಸುತ್ತಿವೆ’ ಎಂದು ನಟ ವಿಕ್ರಂ ತಿಳಿಸಿದ್ದಾರೆ.

ವಿಕ್ರಂ

ಕೋಲ್ಕತ್ತದಲ್ಲಿ ಮಹಿಳಾ ವೈದ್ಯೆ ಮೇಲೆ ನಡೆದ ಅತ್ಯಾಚಾರ ಹಾಗೂ ಕೊಲೆ, ಮಲಯಾಳ ಸಿನಿಮಾದಲ್ಲಿ ನಟಿಯರ ಮೇಲೆ ನಡೆದ ಲೈಂಗಿಕ ದೌರ್ಜನ್ಯದ ಕುರಿತಂತೆ ಈ ಪ್ರತಿಕ್ರಿಯೆ ನೀಡಿದ್ದಾರೆ.

‘ಎಲ್ಲ ಮಹಿಳೆಯರನ್ನು ರಕ್ಷಿಸುವ ಅಗತ್ಯವಿದೆ. ಬೆಳಿಗ್ಗೆ 3 ಗಂಟೆಗೂ ಬೀದಿಯಲ್ಲಿ ಮಹಿಳೆಯರು ಒಬ್ಬರೇ ನಡೆದುಕೊಂಡು ಮನೆ ತಲುಪುವಂತಹ ವಾತಾವರಣ ಸೃಷ್ಟಿಯಾಗಬೇಕು. ಯಾರೂ ಕೂಡ ಆಕೆಗೆ ತೊಂದರೆ ನೀಡಬಾರದು. ಪ್ರತಿ ಪುರುಷನು ಆಕೆಗೆ ರಕ್ಷಣೆ ನೀಡಬೇಕು’ ಎಂದು ಅವರು ಮನವಿ ಮಾಡಿದ್ದಾರೆ.

ಇದರ ಬೆನ್ನಲ್ಲೇ, ಬಿಜೆಪಿ ಯುವ ಮೋರ್ಚಾ ಹಾಗೂ ಮಹಿಳಾ ಕಾಂಗ್ರೆಸ್ ಘಟಕದ ಕಾರ್ಯಕರ್ತರು ಕೊಲ್ಲಂನಲ್ಲಿರುವ ಶಾಸಕರ ಮನೆಗೆ ಬೃಹತ್ ಮೆರವಣಿಗೆ ನಡೆಸಿದರು. ಆರೋಪಿ ವಿರುದ್ಧ ಕೂಡಲೇ ಪ್ರಕರಣ ದಾಖಲಿಸಬೇಕು, ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬೇಕು ಎಂದು ಆಗ್ರಹಿಸಿದರು.

ಆರೋಪದ ಕುರಿತು ಯಾವುದೇ ಪ್ರತಿಕ್ರಿಯೆ ನೀಡಲು ಕೊಲ್ಲಂನ ಶಾಸಕ ಮುಕೇಶ್ ನಿರಾಕರಿಸಿದರು. ಮುಕೇಶ್ ಅವರು ಮಲಯಾಳದಲ್ಲಿ 200ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿದ್ದಾರೆ. 2016 ಹಾಗೂ 2021ರಲ್ಲಿ ಸಿಪಿಐ(ಎಂ) ಪಕ್ಷದಿಂದ ಕೊಲ್ಲಂ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ, ಗೆದ್ದು ಶಾಸಕರಾಗಿದ್ದಾರೆ.

ನಟ ಮುಕೇಶ್ ಹೊರತುಪಡಿಸಿ, ಇತರರು ತಮ್ಮ ಮೇಲಿನ ಆರೋಪಗಳು ‘ಆಧಾರರಹಿತವಾದುದು’ ಎಂದಿದ್ದಾರೆ.

ತನಿಖೆಗೆ ಆಗ್ರಹ: ‘ಮಲಯಾಳ ಸಿನಿಮಾ ಉದ್ಯಮದ ಮೇಲೆ ಕೇಳಿಬಂದಿರುವ ಆರೋಪಗಳ ಕುರಿತಂತೆ ಸಮಗ್ರ ತನಿಖೆ ನಡೆಸಬೇಕು ಎಂದು ನಟ ಮಣಿಯಣ್ ಪಿಳ್ಳ ರಾಜು ಆಗ್ರಹಿಸಿದ್ದಾರೆ. ಇನ್ನು ಹಲವರ ಹೆಸರು ಬಹಿರಂಗವಾಗಲಿದ್ದು, ಅವುಗಳ ಹಿಂದೆ ಬಹುಹಿತಾಸಕ್ತಿಗಳು ಇರುವ ಸಾಧ್ಯತೆಗಳಿವೆ’ ಎಂದು ಮಾಧ್ಯಮಗಳಿಗೆ ತಿಳಿಸಿದ್ದಾರೆ.

‘ಕೆಲವರು ಪರಿಸ್ಥಿತಿಯ ಲಾಭ ಪಡೆಯಲು ಯತ್ನಿಸುತ್ತಿದ್ದಾರೆ. ಆರೋಪಿಗಳಲ್ಲಿ ಅಮಾಯಕರು ಹಾಗೂ ತಪ್ಪಿತಸ್ಥರು ಇರುತ್ತಾರೆ. ಹೀಗಾಗಿ ಸಮಗ್ರ ತನಿಖೆಗೆ ಅಗತ್ಯವಿದೆ’ ಎಂದು ಪ್ರತಿಪಾದಿಸಿದ್ದಾರೆ.

ರಾಜೀನಾಮೆ ಪರ್ವ: ದುರ್ವರ್ತನೆ, ಲೈಂಗಿಕ ದೌರ್ಜನ್ಯ ಎಸಗಿದ್ದಾಗಿ ಆರೋಪ ಮಾಡಿದ ಬೆನ್ನಲ್ಲೇ, ಸಿನಿಮಾ ನಿರ್ದೇಶಕ ರಂಜಿತ್ ಕೇರಳ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕೆ ಮತ್ತು ನಟ ಸಿದ್ದೀಕ್ ಅವರು ಮಲಯಾಳ ಸಿನಿಮಾ ಕಲಾವಿದರ ಸಂಘದ (ಅಮ್ಮ) ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಭಾನುವಾರ ರಾಜೀನಾಮೆ ಸಲ್ಲಿಸಿದ್ದರು.

ರಂಜಿತ್ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಕೋರಿ ಬಂಗಾಳಿ ನಟಿ ಶ್ರೀಲೇಖಾ ಮಿತ್ರ ಅವರು ಕೊಚ್ಚಿ ನಗರ ಪೊಲೀಸರಿಗೆ ಮನವಿ ಸಲ್ಲಿಸಿದ್ದಾರೆ. ರಾಜ್ಯ ಸರ್ಕಾರ ಭಾನುವಾರ ರಚಿಸಿರುವ ವಿಶೇಷ ತಂಡಕ್ಕೆ ಈ ಪ್ರಕರಣವನ್ನು ವರ್ಗಾಯಿಸುವ ನಿರೀಕ್ಷೆಯಿದೆ.

ವೇತನ ಶಿಫಾರಸು: ಸಿ.ಎಸ್ ಖುದ್ದು ಹಾಜರಿಗೆ ಸೂಚನೆ

ನವದೆಹಲಿ (ಪಿಟಿಐ): ಎರಡನೆಯ ರಾಷ್ಟ್ರೀಯ ನ್ಯಾಯಾಂಗ ವೇತನ ಆಯೋಗದ (ಎಸ್‌ಎನ್‌ಜೆಪಿಸಿ) ಕೆಲವು ಶಿಫಾರಸುಗಳನ್ನು ಜಾರಿಗೆ ತರದೆ ಇರುವುದಕ್ಕೆ ಸಂಬಂಧಿಸಿದಂತೆ ಹದಿನೆಂಟು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳಿಗೆ ಮಂಗಳವಾರ ವಿಚಾರಣೆಗೆ ಖುದ್ದಾಗಿ ಹಾಜರಾಗುವಂತೆ ಸುಪ್ರೀಂ ಕೋರ್ಟ್ ತಾಕೀತು ಮಾಡಿದೆ.

ತಮಿಳುನಾಡು, ಮಧ್ಯಪ್ರದೇಶ, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ, ಛತ್ತೀಸಗಢ, ದೆಹಲಿ, ಅಸ್ಸಾಂ, ನಾಗಾಲ್ಯಾಂಡ್, ಮೇಘಾಲಯ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಲಡಾಖ್, ಜಾರ್ಖಂಡ್, ಕೇರಳ, ಬಿಹಾರ, ಗೋವಾ, ಹರಿಯಾಣ ಮತ್ತು ಒಡಿಶಾದ ಮುಖ್ಯ ಕಾರ್ಯದರ್ಶಿಗಳು ವಿಚಾರಣೆಗೆ ಖುದ್ದಾಗಿ ಹಾಜರಾಗಬೇಕಿದೆ.

ಅಖಿಲ ಭಾರತ ನ್ಯಾಯಾಧೀಶರ ಸಂಘ ಸಲ್ಲಿಸಿರುವ ಅರ್ಜಿ ಹಾಗೂ ಇತರ 22 ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ನ್ಯಾಯಪೀಠವು ಮಂಗಳವಾರ ಬೆಳಿಗ್ಗೆ ನಡೆಸುವ ಸಾಧ್ಯತೆ ಇದೆ.

ಕಾಂಗ್ರೆಸ್ ಸಂಸದ ವಸಂತ ಚವಾಣ್ ನಿಧನ

ನಾಂದೇಡ್ (ಪಿಟಿಐ): ಮಹಾರಾಷ್ಟ್ರದ ನಾಂದೇಡ್ ಕ್ಷೇತ್ರದ ಕಾಂಗ್ರೆಸ್ ಸಂಸದ ವಸಂತ ಚವಾಣ್ ಅವರು ದೀರ್ಘಕಾಲದ ಅನಾರೋಗ್ಯ ಸಮಸ್ಯೆಯಿಂದ ಹೈದರಾಬಾದ್‌ನ ಖಾಸಗಿ ಆಸ್ಪತ್ರೆಯಲ್ಲಿ ಸೋಮವಾರ ಮೃತಪಟ್ಟಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಕಳೆದೊಂದು ವಾರದಿಂದ ಮೂತ್ರ ಪಿಂಡದ ಸಮಸ್ಯೆಗೆ ಚಿಕಿತ್ಸೆ ಪಡೆಯುತ್ತಿದ್ದ ಚವಾಣ್ (69) ಅವರು ಮುಂಜಾನೆ 4 ಗಂಟೆಗೆ ಆಸ್ಪತ್ರೆಯಲ್ಲಿ ನಿಧನರಾದರು.

ಚವಾಣ್ 2024ರಲ್ಲಿ ಮರಾಠವಾಡ ಪ್ರದೇಶದ ನಾಂದೇಡ್ ಕ್ಷೇತ್ರದಿಂದ ಬಿಜೆಪಿ ಸಂಸದ ಪ್ರತಾಪ್ ಪಾಟೀಲ್ ಚಿಖ್ಲಿಕರ್ ಅವರನ್ನು ಸೋಲಿಸಿ ಮೊದಲ ಬಾರಿಗೆ ಲೋಕಸಭೆಯ ಸದಸ್ಯರಾದರು.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಸಂತಾಪ ಸೂಚಿಸಿದ್ದಾರೆ.

ಅಂತ್ಯಸಂಸ್ಕಾರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ನಾಯ್‌ಗಾಂವ್‌ನಲ್ಲಿ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ತ್ರಿಪುರಾದಲ್ಲಿ ಕೋಮು ಗಲಭೆ: 12 ಮನೆಗಳಿಗೆ ಬೆಂಕಿ

ಗುವಾಹಟಿ (ಪಿಟಿಐ): ಪಶ್ಚಿಮ ತ್ರಿಪುರಾ ಜಿಲ್ಲೆಯ ರಾಣಿರ್‌ಬಜಾರ್ ಪ್ರದೇಶದ ದೇವಸ್ಥಾನವೊಂದರಲ್ಲಿ ಕಾಳಿ ದೇವಿಯ ಮೂರ್ತಿಯನ್ನು ಕೆಲವು ದುಷ್ಕರ್ಮಿಗಳು ವಿರೂಪಗೊಳಿಸಿದ್ದಾರೆ. ಭಾನುವಾರ ರಾತ್ರಿ ಈ ಸುದ್ದಿ ತಿಳಿದ ಬಳಿಕ ಈ ಪ್ರದೇಶದಲ್ಲಿ ಕೋಮುಗಲಭೆ ಉಂಟಾಗಿದೆ.

ದೊಡ್ಡ ಸಂಖ್ಯೆಯಲ್ಲಿ ಜಮಾಯಿಸಿದ ಜನರು ಈ ಪ್ರದೇಶದಲ್ಲಿನ ನಿರ್ದಿಷ್ಟ ಕೋಮಿನ 12 ಮನೆಗಳಿಗೆ ಹಾಗೂ ಕೆಲವು ವಾಹನಗಳಿಗೆ ಬೆಂಕಿ ಹಚ್ಚಿದ್ದಾರೆ.

ಕೋಮುಗಲಭೆಯು ಉಲ್ಬಣಗೊಳ್ಳುವ ಸಾಧ್ಯತೆ ಇರುವುದರಿಂದ ರಾಣಿರ್‌ಬಜಾರ್‌ನಲ್ಲಿ ನಿಷೇಧಾಜ್ಞೆ ಹೇರಲಾಗಿದೆ. ಈ ಪ್ರದೇಶದಲ್ಲಿ ದೊಡ್ಡ ಸಂಖ್ಯೆಯಲ್ಲಿ ಭದ್ರತಾ ಪಡೆಗಳನ್ನು ನಿಯೋಜಿಸಲಾಗಿದೆ. ‘ಹಿಂಸಾಚಾರದಲ್ಲಿ ಆದ ಆಸ್ತಿಹಾನಿಯ ಅಂದಾಜು ಮಾಡಿದ ಬಳಿಕ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಳ್ಳಲಾಗುವುದು. ಇದುವರೆಗೂ ಸಾವಿನ ಕುರಿತು ವರದಿಯಾಗಿಲ್ಲ’ ಎಂದು ಪೊಲೀಸರು ಹೇಳಿದ್ದಾರೆ.

ಕೇಂದ್ರ ಗೃಹಖಾತೆ ಸಚಿವ ಅಮಿತ್ ಶಾ ಘೋಷಣೆ

ಲಡಾಖ್‌ಗೆ ಹೊಸ ಐದು ಜಿಲ್ಲೆ

ನವದೆಹಲಿ (ಪಿಟಿಐ): ಕೇಂದ್ರಾಡಳಿತ ಪ್ರದೇಶವಾದ ಲಡಾಖ್‌ನಲ್ಲಿ ಹೊಸತಾಗಿ ಐದು ಜಿಲ್ಲೆಗಳನ್ನು ರಚಿಸಲಾಗುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸೋಮವಾರ ಘೋಷಿಸಿದರು.

‘ಅಭಿವೃದ್ಧಿ ಹೊಂದಿದ ಹಾಗೂ ಸಮೃದ್ಧ ಲಡಾಖ್ ನಿರ್ಮಿಸುವ ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯಂತೆ ಕೇಂದ್ರ ಗೃಹಸಚಿವಾಲಯವು ಐದು ಜಿಲ್ಲೆಗಳನ್ನು ರಚಿಸಲಾಗಿದೆ’ ಎಂದು ಶಾ ಅವರು ‘ಎಕ್ಸ್’ ಮೂಲಕ ತಿಳಿಸಿದ್ದಾರೆ.

‘ಹೊಸ ಜಿಲ್ಲೆಗಳಿಗೆ ಜನ್‌ಸ್ಕಾರ್, ದ್ರಾಸ್, ಶಾಮ್, ನುಬ್ರಾ ಹಾಗೂ ಚಾಂಗ್‌ಥಾಂಗ್ ಎಂದು ನಾಮಕರಣ ಮಾಡಲಾಗಿದ್ದು, ಸರ್ಕಾರದ ಎಲ್ಲ ಯೋಜನೆಗಳು ಜನರ ಮನೆ ಬಾಗಿಲಿಗೆ ತಲುಪಲಿವೆ’ ಎಂದಿದ್ದಾರೆ.

‘ಲಡಾಖ್‌ನ ಜನರಿಗೆ ಅಪರಿಮಿತ ಅವಕಾಶಗಳನ್ನು ಸೃಷ್ಟಿಸಲು ಸರ್ಕಾರ ಬದ್ಧವಾಗಿದೆ’ ಎಂದು ಶಾ ಭರವಸೆ ನೀಡಿದ್ದಾರೆ.

ಲಡಾಖ್‌ನ ಹೊಸ ಜಿಲ್ಲೆಗಳು
1.ಜನ್‌ಸ್ಕಾರ್ 2.ದ್ರಾಸ್ 3.ಶಾಮ್ 4.ನುಬ್ರಾ 5.ಚಾಂಗ್‌ಥಾಂಗ್

2019ರ ಆಗಸ್ಟ್ 5ರಂದು ಜಮ್ಮು ಮತ್ತು ಕಾಶ್ಮೀರವನ್ನು ವಿಭಜಿಸಿ ಲಡಾಖ್ ಹಾಗೂ ಜಮ್ಮು ಮತ್ತು ಕಾಶ್ಮೀರ ಎಂದು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ಘೋಷಿಸಲಾಯಿತು. ಅದೇ ದಿನ, ಸಂವಿಧಾನದ 370ನೇ ವಿಧಿ ಅಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಲಾಗಿತ್ತು.

ಕೇಂದ್ರಾಡಳಿತ ಪ್ರದೇಶವಾಗಿ ಲಡಾಖ್ ಬದಲಾದ ಬಳಿಕ ಅಲ್ಲಿನ ಆಡಳಿತ ವ್ಯವಸ್ಥೆಯು ನೇರವಾಗಿ ಕೇಂದ್ರ ಗೃಹಸಚಿವಾಲಯದ ವ್ಯಾಪ್ತಿಗೆ ಒಳಪಟ್ಟಿದೆ.

ಇದುವರೆಗೆ ಲಡಾಕ್‌ಖ್‌ನಲ್ಲಿ ಲೇಹ್, ಕಾರ್ಗಿಲ್ ಜಿಲ್ಲೆಗಳಷ್ಟೇ ಇದ್ದವು. ಹೊಸ ಐದು ಜಿಲ್ಲೆಗಳ ರಚನೆಯಿಂದ ಸಂಖ್ಯೆಯು 7ಕ್ಕೆ ಏರಿದಂತಾಗಿದೆ.

ಲಡಾಖ್‌ನಲ್ಲಿ ಐದು ಹೊಸ ಜಿಲ್ಲೆಗಳನ್ನು ರಚಿಸಿರುವುದು ಉತ್ತಮ ಆಡಳಿತ ಹಾಗೂ ಸಮೃದ್ಧಿಯ ಹೊಸ ಹೆಜ್ಜೆಯಾಗಿದೆ. ಸೇವೆಗಳು ಹಾಗೂ ಅವಕಾಶಗಳು ಇಲ್ಲಿನ ಜನರಿಗೆ ಮನೆ ಬಾಗಿಲಿಗೆ ತಲುಪಲಿವೆ

ನರೇಂದ್ರ ಮೋದಿ, ಪ್ರಧಾನಮಂತ್ರಿ

ಘೋಷ್‌ಗೆ ಮತ್ತೆ ಸುಳ್ಳುಪತ್ತೆ ಪರೀಕ್ಷೆ

ಆರ್‌.ಜಿ. ಕರ್ ಆಸ್ಪತ್ರೆಯ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಪ್ರಕರಣ

ಕೋಲ್ಕತ್ತ (ಪಿಟಿಐ): ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಹಾಗೂ ಆಕೆಯ ಹತ್ಯೆ ಪ್ರಕರಣದ ತನಿಖೆ ನಡೆಸುತ್ತಿರುವ ಸಿಬಿಐ ಅಧಿಕಾರಿಗಳು, ಸಂಸ್ಥೆಯ ಮಾಜಿ ಪ್ರಾಂಶುಪಾಲ ಸಂದೀಪ್ ಘೋಷ್ ಮತ್ತು ಇತರ ಐವರನ್ನು ಎರಡನೆಯ ಬಾರಿಗೆ ಸುಳ್ಳುಪತ್ತೆ ಪರೀಕ್ಷೆಗೆ ಒಳಪಡಿಸಿದರು.

ಘೋಷ್ ಅವರು ಕಳೆದ ಹತ್ತು ದಿನಗಳಿಂದ ಹೇಳಿಕೆ ಬದಲಾಯಿಸುತ್ತಿದ್ದಾರೆ. ಹೀಗಾಗಿ ಅವರನ್ನು ಎರಡನೆಯ ಬಾರಿಗೆ ಸುಳ್ಳುಪತ್ತೆ ಪರೀಕ್ಷೆಗೆ ಒಳಪಡಿಸಲಾಯಿತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಘೋಷ್ ಹಾಗೂ ಇತರ ಐವರನ್ನು ಶನಿವಾರ ಸುಳ್ಳುಪತ್ತೆ ಪರೀಕ್ಷೆಗೆ ಒಳಪಡಿಸಲಾಗಿತ್ತು. ಬಂಧಿತ ಆರೋಪಿ ಸಂಜಯ್ ರಾಯ್‌ನನ್ನು ಭಾನುವಾರ ಸುಳ್ಳುಪತ್ತೆ ಪರೀಕ್ಷೆಗೆ ಒಳಪಡಿಸಲಾಗಿತ್ತು.

ಅವ್ಯವಹಾರ, ಎಫ್‌ಐಆರ್ ದಾಖಲು: ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಘೋಷ್ ಅವರು ಪ್ರಾಂಶುಪಾಲರಾಗಿದ್ದ ಅವಧಿಯಲ್ಲಿ ನಡೆದಿದೆ ಎನ್ನಲಾದ ಹಣಕಾಸಿನ ಅವ್ಯವಹಾರ ಕುರಿತು ಸಿಬಿಐ ಅಧಿಕಾರಿಗಳು ದಾಖಲಿಸಿರುವ ಎಫ್‌ಐಆರ್‌ನಲ್ಲಿ ಘೋಷ್ ಅವರ ಹೆಸರು ಉಲ್ಲೇಖವಾಗಿದೆ.

ಕೋಲ್ಕತ್ತದ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಹಾಗೂ ಹತ್ಯೆಯನ್ನು ಖಂಡಿಸಿ ಆರ್‌.ಜಿ. ಕರ್ ಆಸ್ಪತ್ರೆಯ ವೈದ್ಯರು ಪ್ರತಿಭಟನೆ ನಡೆಸುತ್ತಿರುವ ಕಾರಣ ಆಸ್ಪತ್ರೆಯ ಅಪಘಾತ ಚಿಕಿತ್ಸಾ ವಿಭಾಗದ ಮುಂದೆ ರೋಗಿಯೊಬ್ಬರು ಚಿಕಿತ್ಸೆ ಪಡೆದುಕೊಳ್ಳಲು ಸ್ಟ್ರೆಚರ್ ಮೇಲೆ ಕಾಯುತ್ತಾ ಕುಳಿತಿದ್ದರು –ಪಿಟಿಐ ಚಿತ್ರ

ಭಾರತೀಯ ದಂಡ ಸಂಹಿತೆಯ ಸೆಕ್ಷನ್ 120ಬಿ (ಕ್ರಿಮಿನಲ್ ಪಿತೂರಿ), ಸೆಕ್ಷನ್ 420 (ವಂಚನೆ ಮತ್ತು ಅಪ್ರಾಮಾಣಿಕತೆ) ಹಾಗೂ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ–1988ರ ಸೆಕ್ಷನ್ 7ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ರಾಜ್ಯ ಸರ್ಕಾರದ ಆರೋಗ್ಯ ಇಲಾಖೆಯ ವಿಶೇಷ ಕಾರ್ಯದರ್ಶಿ ದೇಬಲ್ ಕುಮಾರ್ ಘೋಷ್ ಅವರು ಸಲ್ಲಿಸಿರುವ ದೂರು ಆಧರಿಸಿ ಶನಿವಾರವೇ ಈ ಎಫ್‌ಐಆರ್ ದಾಖಲಿಸಲಾಗಿದೆ. ಕಲ್ಕತ್ತ ಹೈಕೋರ್ಟ್‌ನ ನಿರ್ದೇಶನ ಆಧರಿಸಿ ಸಿಬಿಐ ಈ ತನಿಖೆಯನ್ನು ಕೈಗೆತ್ತಿಕೊಂಡಿದೆ.

ಸಂದೀಪ್ ಘೋಷ್ ಅವರು 2021ರ ಫೆಬ್ರುವರಿಯಿಂದ 2023ರ ಸೆಪ್ಟೆಂಬರ್‌ವರೆಗೆ ಈ ಸಂಸ್ಥೆಯ ಪ್ರಾಂಶುಪಾಲರಾಗಿದ್ದರು. ಅಕ್ಟೋಬರ್‌ನಲ್ಲಿ ಅವರ ವರ್ಗ ಆಗಿತ್ತು. ಆದರೆ, ಒಂದೇ ತಿಂಗಳಲ್ಲಿ ಅವರು ಮತ್ತೆ ಅದೇ ಹುದ್ದೆಗೆ ಮರಳಿದ್ದರು. ವೈದ್ಯ ವಿದ್ಯಾರ್ಥಿನಿಯ ಹತ್ಯೆ ನಡೆಯುವ ದಿನದವರೆಗೂ ಅವರು ಅದೇ ಹುದ್ದೆಯಲ್ಲಿದ್ದರು.

ರಾಜಿಯಾದ ರಜನೀಕಾಂತ್ ಹಾಗೂ ದುರೈ ಮುರುಗನ್

‘ಹಿರಿಯ ವಿದ್ಯಾರ್ಥಿ’ ಹೇಳಿಕೆಗೆ ಕಿಡಿ

ಪ್ರಜಾವಾಣಿ ವಾರ್ತೆ

ಚೆನ್ನೈ: ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಡಿಎಂಕೆ ಹಿರಿಯ ನಾಯಕರನ್ನು ನಿಭಾಯಿಸುವ ವಿಧಾನಕ್ಕೆ ತಮಿಳು ಸೂಪರ್‌ಸ್ಟಾರ್ ರಜನೀಕಾಂತ್ ಅವರು ‘ಸಲ್ಯೂಟ್’ ಹೇಳಿದ್ದಾರೆ.

ರಜನೀಕಾಂತ್ ಅವರು ಪಕ್ಷದ ಹಿರಿಯ ಹಿರಿಯ ನಾಯಕರನ್ನು ‘ಹಿರಿಯ ವಿದ್ಯಾರ್ಥಿ’ ಗಳೆಂದು ಕರೆದಿದ್ದು, ‘ಉತ್ತೀರ್ಣರಾಗಲು ಅಗತ್ಯವಿರುವ ಅಂಕ ಪಡೆದರೂ ತರಗತಿಯನ್ನು ಬಿಟ್ಟು ಹೋಗಲು ನಿರಾಕರಿಸುತ್ತಿದ್ದಾರೆ’ ಎಂದು ವ್ಯಂಗ್ಯವಾಡಿದ್ದಾರೆ.

ಈ ಹೇಳಿಕೆಯು ರಜನೀಕಾಂತ್ ಮತ್ತು ಜಲಸಂಪನ್ಮೂಲ ಸಚಿವ ದುರೈ ಮುರುಗನ್ ಅವರೊಂದಿಗಿನ ಮನಸ್ತಾಪಕ್ಕೆ ಮತ್ತಷ್ಟು ಇಂಬುನೀಡಿದೆ.

ಡಿಎಂಕೆ ನಾಯಕ ಎಂ.ಕರುಣಾನಿಧಿ ಅವರ ಕುರಿತ ಪುಸ್ತಕ ಬಿಡುಗಡೆ ಮಾಡಿ ಶನಿವಾರ ಮಾತನಾಡಿದ ರಜನೀಕಾಂತ್, ‘ಹೊಸ ವಿದ್ಯಾರ್ಥಿಗಳನ್ನು ನಿಭಾಯಿಸುವುದು ಶಿಕ್ಷಕರಿಗೆ ಸುಲಭ. ಆದರೆ ಹಳೆಯ ವಿದ್ಯಾರ್ಥಿಗಳನ್ನು ನಿಭಾಯಿಸುವುದೇ ಸವಾಲು. ಇಲ್ಲಿ ಎಲ್ಲ ಹಳೆಯ ವಿದ್ಯಾರ್ಥಿಗಳೂ ರ‍್ಯಾಂಕ್ ಪಡೆದಿದ್ದು, ತರಗತಿ ಬಿಟ್ಟು ಹೋಗಲು ನಿರಾಕರಿಸುತ್ತಿದ್ದಾರೆ. ದುರೈ ಮುರುಗನ್ ಅವರನ್ನು ನಿಭಾಯಿಸುವುದು ಕರುಣಾನಿಧಿ ಅವರಿಗೂ ಕಷ್ಟವಾಗಿತ್ತು. ಸ್ಟಾಲಿನ್ ಸರ್... ನಿಮಗೆ ನಮನ’ ಎಂದು ಹೇಳಿದ್ದರು.


ರಜನೀಕಾಂತ್

ಮುರುಗನ್

ಡಿಎಂಕೆ ಹಿರಿಯ ನಾಯಕರು ಪಕ್ಷವನ್ನು ಮುನ್ನಡೆಸಲು ಯುವಕರಿಗೆ ಅವಕಾಶ ನೀಡುತ್ತಿಲ್ಲ ಎಂದು ಪರೋಕ್ಷವಾಗಿ ಹೇಳಿದ್ದಾರೆ ಎಂದು ರಜನೀಕಾಂತ್ ಅವರ ಹೇಳಿಕೆಯನ್ನು ಅರ್ಥೈಸಲಾಗಿದೆ.

ಈ ಬೆನ್ನಲ್ಲೇ ದುರೈ ಮುರುಗನ್ ಅವರು ರಜನೀಕಾಂತ್ ವಿರುದ್ಧ ವಾಗ್ದಾಳಿ ನಡೆಸಿ, ‘ಕೆಲ ನಟರು ಹಲ್ಲುದುರಿದ ನಂತರವೂ ಥಳುಕು–ಬಳುಕಿನ ನಗರದಲ್ಲಿ ಪ್ರಾಬಲ್ಯ ಮುಂದುವರಿಸುತ್ತಾರೆ’ ಎಂದು ತಿರುಗೇಟು ನೀಡಿದ್ದಾರೆ.

ಇಷ್ಟೆಲ್ಲ ಆದ ನಂತರ, ಸೋಮವಾರ ಉಭಯ ನಾಯಕರು ರಾಜಿ ಆಗಿದ್ದಾರೆ. ರಜನೀಕಾಂತ್ ಅವರು, ‘ದುರೈ ಮುರುಗನ್ ನನ್ನ ದೀರ್ಘಕಾಲದ ಸ್ನೇಹಿತ. ನಮ್ಮಿಬ್ಬರ ಸಂಬಂಧ ಹೀಗೆಯೇ ಮುಂದುವರಿಯಲಿದೆ’ ಎಂದು ಹೇಳಿದ್ದರೆ, ಇತ್ತ ಮುರುಗನ್ ಅವರು, ‘ನಾವಿಬ್ಬರೂ ಸ್ನೇಹಿತರು’ ಎಂದು ಹೇಳಿದ್ದಾರೆ.

ಛತ್ತೀಸಗಢ: 25 ನಕ್ಸಲರು ಶರಣು

ಛತ್ತೀಸಗಢ (ಪಿಟಿಐ): ಒಟ್ಟು 25 ನಕ್ಸಲರು ಬಿಜಾಪುರ ಜಿಲ್ಲೆಯಲ್ಲಿ ಸೋಮವಾರ ಶರಣಾದರು ಎಂದು ಪೊಲೀಸರು ತಿಳಿಸಿದ್ದಾರೆ.

ಶರಣಾದವರಲ್ಲಿ ಐವರ ಸುಳಿವು ನೀಡಿದವರಿಗೆ ಒಟ್ಟು ₹28 ಲಕ್ಷ ಬಹುಮಾನ ಘೋಷಿಸಲಾಗಿತ್ತು. ಗಂಗಲೂರ್‌ಹಾಗೂಭೈರಮ್‌ಗಢದ ಮಾವೋ ಸಂಘಟನೆಗಳಲ್ಲಿ ಶರಣಾದ ನಕ್ಸಲರು ಸಕ್ರಿಯರಾಗಿದ್ದರು.

ಶಂಬತಿ ಮದ್ಕಂ (23) ಹಾಗೂ ಜ್ಯೋತಿ ಪುನೇಮ್ (27) ಎಂಬಿಬ್ಬರು ಮಹಿಳೆಯರು ಹಾಗೂ ಮಹೇಶ್ ಟೇಲಂ ಎಂಬುವವರ ಸುಳಿವು ನೀಡಿದವರಿಗೆ ತಲಾ ₹8 ಲಕ್ಷ ಬಹುಮಾನ ಘೋಷಿಸಲಾಗಿತ್ತು.

ಮದ್ಕಂ 2012ರಿಂದ ಮಾವೋ ಸಂಘಟನೆಗಳಲ್ಲಿ ಸಕ್ರಿಯರಾಗಿದ್ದರು. ಸುಕ್ಮಾ ಬಳಿಯ ಮಿನ್ಪಾ ಗ್ರಾಮದಲ್ಲಿ 2020ರಲ್ಲಿ ನಡೆದಿದ್ದ ಹೊಂಚು ದಾಳಿಯಲ್ಲಿ ಮದ್ಕಂ ಶಾಮೀಲಾಗಿದ್ದರು ಎಂದು ಪೊಲೀಸರು ಮಾಹಿತಿ ನೀಡಿದರು.

2021ರಲ್ಲಿ 22 ಭದ್ರತಾ ಸಿಬ್ಬಂದಿ ಸಾವಿಗೆ ಕಾರಣವಾಗಿದ್ದ ಬಿಜಾಪುರ ದಾಳಿಯಲ್ಲಿಯೂ ಮದ್ಕಂ ಭಾಗಿಯಾಗಿದ್ದರು ಎಂದು ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರ ಕುಮಾರ್ ಯಾದವ್ ತಿಳಿಸಿದರು.

ಪುನೇಮ್ ಮತ್ತು ಟೇಲಂ ಈ ವರ್ಷ ಮೇನಲ್ಲಿ ಪಿಡಿಯಾ ಗ್ರಾಮದಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಭಾಗಿಯಾಗಿದ್ದರು ಎಂಬ ಆರೋಪವಿದೆ.

ವಿಷ್ಣು ಕರ್ತಂ ಅಲಿಯಾಸ್ ಮನು ಮತ್ತು ಜೈದೇವ್ ಪೋಡಿಯಮ್ ಅವರ ಸುಳಿವು ನೀಡಿದವರಿಗೆ ಕ್ರಮವಾಗಿ ₹3 ಲಕ್ಷ ಮತ್ತು ₹1 ಲಕ್ಷ ಬಹುಮಾನ ಘೋಷಿಸಲಾಗಿತ್ತು ಎಂದು ಮಾಹಿತಿ ನೀಡಿದರು.

ಶರಣಾಗಿರುವ ಗುಡ್ಡು ಕಕೇಮ್ ಮತ್ತು ಸುರ್ದು ಪುನೇಮ್ ಅವರ ಸುಳಿವು ನೀಡಿದವರಿಗೆ ತಲಾ ₹10,000 ಬಹುಮಾನ ಘೋಷಿಸಲಾಗಿತ್ತು ಎಂದು ತಿಳಿಸಿದರು.

ಶರಣಾದವರಿಗೆ ಸರ್ಕಾರದ ನಿಯಮದ ಅನುಸಾರ ತಲಾ 25,000 ನೆರವು ಮತ್ತು ಪುನರ್‌ವಸತಿ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಇದರೊಂದಿಗೆ ಪ್ರಸಕ್ತ ವರ್ಷ 170 ನಕ್ಸಲರು ಶರಣಾಗಿದ್ದಾರೆ. ಇದೇ ಅವಧಿಯಲ್ಲಿ 346 ನಕ್ಸಲರನ್ನು ಬಂಧಿಸಲಾಗಿದೆ ಎಂದು ಮಾಹಿತಿ ನೀಡಿದರು.

ಮಾಹಿತಿ ನೀಡಿದ ಆರೋಪ: ಹತ್ಯೆ

ಬಿಜಾಪುರ (ಪಿಟಿಐ): ಪೊಲೀಸರಿಗೆ ಮಾಹಿತಿ ನೀಡುತ್ತಿದ್ದ ಎಂದು ಆರೋಪಿಸಿ ವ್ಯಕ್ತಿಯೊಬ್ಬನನ್ನು ನಕ್ಸಲರು ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ಹತ್ಯೆ ಮಾಡಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ನಕ್ಸಲರು ಭಾನುವಾರ ನಡೆಸಿದ ‘ಪಂಚಾಯಿತಿ’ಯಲ್ಲಿ ಸೀತು ಮಾದ್ವಿ ಅವರನ್ನು ಹತ್ಯೆ ಮಾಡಲಾಗಿದೆ. ಪ್ರಾಥಮಿಕ ಮಾಹಿತಿ ಪ್ರಕಾರ, ಮಾದ್ವಿ ಸೇರಿ ಇಬ್ಬರನ್ನು ನಕ್ಸಲರು ತಮ್ಮ ಜೊತೆ ಕರೆದೊಯ್ದಿದ್ದರು. ಬಳಿಕ ಮಾದ್ವಿ ಅವರನ್ನು ಕೊಂದು ಮತ್ತೊಬ್ಬರನ್ನು ಬಿಟ್ಟು ಕಳುಹಿಸಿದ್ದಾರೆ’ ಎಂದು ಹೇಳಿದರು.



ಕಂಗನಾ ಮಾತಿನ ಕಿಡಿ

ಒಂದನೇ ಪುಟದಿಂದ...

ಕಂಗನಾ ಅವರ ಮಾತುಗಳು ವಿವಾದದ ಕಿಡಿ ಹೊತ್ತಿಸಿರುವುದು ಇದೇ ಮೊದಲ ಬಾರಿ ಅಲ್ಲ. ರೈತರ ಪ್ರತಿಭಟನೆಗಳ ಬಗ್ಗೆ ಕಂಗನಾ ಅವರು ಹಿಂದೆಯೂ ವಿವಾದಾತ್ಮಕ ಮಾತುಗಳನ್ನು ಆಡಿದ್ದಾರೆ. ಆದರೆ ಬಿಜೆಪಿಯು ಕಂಗನಾ ಅವರ ಮಾತುಗಳು ತನ್ನವಲ್ಲ ಎಂದು ಬಹಿರಂಗವಾಗಿ ಹೇಳಿರುವುದು ಇದೇ ಮೊದಲು.

ಕಿಸಾನ್ ಸಭಾ ಖಂಡನೆ: ಕಂಗನಾ ಅವರ ಹೇಳಿಕೆಯನ್ನು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಖಂಡಿಸಿದೆ. ಕಂಗನಾ ಅವರ ಮಾತುಗಳು ‘ಕೃಷಿಯನ್ನು ನಾಶಪಡಿಸಲು ಬಯಸುತ್ತಿರುವ ತಮ್ಮ ಬಾಹ್ಯ ಹಾಗೂ ಆಂತರಿಕ ಧಣಿಗಳನ್ನು ಮೆಚ್ಚಿಸುವ ಉದ್ದೇಶ ಹೊಂದಿವೆ’ ಎಂದು ಎಐಕೆಎಸ್ ಅಧ್ಯಕ್ಷ ಡಾ. ಅಶೋಕ್ ಧವಲೆ ಹೇಳಿದ್ದಾರೆ.

ಆಡಳಿತಾರೂಢ ಬಿಜೆಪಿಯು ಕಂಗನಾ ರನೌತ್ ಅವರ ಮಾತುಗಳನ್ನು ಒಪ್ಪುವುದಿಲ್ಲ ಎಂದಾದರೆ, ಕಂಗನಾ ಅವರನ್ನು ಪಕ್ಷದಿಂದ ಉಚ್ಚಾಟಿಸಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ.

ಸಂಕ್ಷಿಪ್ತ ಸುದ್ದಿ

ಸಿನ್ಹಾರಿಂದ ಹೊಸ ಪಕ್ಷ ಘೋಷಣೆ ಸಾಧ್ಯತೆ

ಹಜಾರೀಬಾಗ್ (ಜಾರ್ಖಂಡ್) (ಪಿಟಿಐ): ಕೇಂದ್ರ ಮಾಜಿ ಸಚಿವ ಯಶವಂತ್ ಸಿನ್ಹಾ ಅವರು ಈ ವರ್ಷದ ಅಂತ್ಯದ ವೇಳೆಗೆ ತಮ್ಮ ಹೊಸ ಪಕ್ಷ ‘ಅಟಲ್ ವಿಚಾರ್ ಮೋರ್ಚಾ’ವನ್ನು ಘೋಷಿಸುವ ಸಾಧ್ಯತೆ ಇದೆ. ಜಾರ್ಖಂಡ್ ವಿಧಾನಸಭೆ ಚುನಾವಣೆಯ ಕಾರಣಕ್ಕೆ ಈ ನಿರ್ಧಾರ ಕೈಗೊಳ್ಳಲಾಗಿದೆ.

ತಮ್ಮ ಬೆಂಬಲಿಗರೊಂದಿಗೆ ಇಲ್ಲಿ ಭಾನುವಾರ ಸಭೆ ನಡೆಸಿದ್ದ ಅವರು, ಹೊಸ ಪಕ್ಷ ಕಟ್ಟುವ ವಿಚಾರವನ್ನು ಸಭೆಯ ಮುಂದಿಟ್ಟಿದ್ದರು. ಬೆಂಬಲಿಗರು ಈ ನಿರ್ಧಾರಕ್ಕೆ ಒಪ್ಪಿಗೆ ಸೂಚಿಸಿದ್ದರು ಮತ್ತು ಈ ಬಗ್ಗೆ ಉತ್ಸಾಹಿತರಾಗಿದ್ದರು ಎನ್ನಲಾಗಿದೆ. ಈ ಪಕ್ಷವು ರಾಜ್ಯ ರಾಜಕಾರಣದಲ್ಲಿ ಪರ್ಯಾಯವಾಗಿ ರೂಪುಗೊಳ್ಳಲಿದೆ ಎಂದು ಸಿನ್ಹಾ ಬೆಂಬಲಿಗರು ಅಭಿಪ್ರಾಯಪಟ್ಟಿದ್ದಾರೆ.

ರಾಜಕೀಯ ನಿವೃತ್ತಿ ಇಲ್ಲ: ಮಾಯಾವತಿ

ಲಖನೌ: ಸಕ್ರಿಯ ರಾಜಕಾರಣದಿಂದ ನಿವೃತ್ತಿಯಾಗುವ ಕುರಿತ ವದಂತಿಗಳನ್ನು ತಳ್ಳಿಹಾಕಿದ ಬಹುಜನ ಸಮಾಜವಾದಿ ಪಕ್ಷದ ವರಿಷ್ಠ ನಾಯಕಿ ಮಾಯಾವತಿ, ‘ದಲಿತರು ಹಾಗೂ ಇತರ ಸಮಾಜದಲ್ಲಿರುವ ದುರ್ಬಲ ಸಮುದಾಯಗಳ ಏಳ್ಗೆಗಾಗಿ ಹೋರಾಟ ನಡೆಸಲಿದ್ದೇನೆ’ ಎಂದು ತಿಳಿಸಿದ್ದಾರೆ.

‘ರಾಜಕೀಯ ನಿವೃತ್ತಿ ಕುರಿತು ಕೆಲವು ಜಾತೀಯ ಮಾಧ್ಯಮಗಳು ವದಂತಿ ಹರಡಿವೆ. ಇದು ಸತ್ಯಕ್ಕೆ ದೂರವಾದುದು’ ಎಂದು ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

‘ಹಿಂದೂ ಎಂದು ಸಾಬೀತು ಮಾಡಲು ಹೇಳಿದರು’

ಮಧುರೈ (ತಮಿಳು ನಾಡು) (ಪಿಟಿಐ): ಶ್ರೀ ಮೀನಾಕ್ಷಿ ಸುಂದರೇಶ್ವರ ದೇವಸ್ಥಾನದ ಅಧಿಕಾರಿಗಳ ನಡವಳಿಕೆ ಕುರಿತು ನಟಿ, ಬಿಜೆಪಿಯ ರಾಜ್ಯ ಕಾರ್ಯಕಾರಿ ಸದಸ್ಯೆ ನಮಿತಾ ಅವರು ಸೋಮವಾರ ಆಕ್ಷೇಪ ವ್ಯಕ್ತಪಡಿಸಿದರು. ‘ನಾನು ಹಿಂದೂ ಎನ್ನುವುದಕ್ಕೆ ದೇವಸ್ಥಾನದ ಅಧಿಕಾರಿಗಳು ಸಾಕ್ಷ್ಯ ಕೇಳಿದರು’ ಎಂದು ದೂರಿದರು.

ನಮಿತಾ

‘ನಾನು ಹಿಂದೂ ಎನ್ನುವುದಕ್ಕೆ ಸಾಕ್ಷ್ಯ ಕೇಳಿದರಲ್ಲದೆ, ನನ್ನ ಜಾತಿ ಪ್ರಮಾಣಪತ್ರವನ್ನೂ ಕೇಳಿದರು. ಇಂಥ ಅವಮಾನವನ್ನು ನಾನು ಎಂದೂ ದೇಶದ ಯಾವ ದೇವಸ್ಥಾನದಲ್ಲಿಯೂ ಅನುಭವಿಸಿರಲಿಲ್ಲ. ನನ್ನ ಜೊತೆ ಬಹಳ ಒರಟಾಗಿ ಮಾತನಾಡಿದರು’ ಎಂದು ಆರೋಪಿಸಿದರು.

ನಮಿತಾ ಅವರ ಆರೋಪಗಳನ್ನು ಅಲ್ಲಗಳೆದಿರುವ ದೇವಸ್ಥಾನದ ಹಿರಿಯ ಅಧಿಕಾರಿಗಳು, ‘ನಮಿತಾ ಹಾಗೂ ಅವರ ಪತಿ ಮಾಸ್ಕ್ ಧರಿಸಿದ್ದರು. ಆದ್ದರಿಂದ ಅವರನ್ನು ವಿಚಾರಿಸಬೇಕಾಯಿತು. ಅವರು ವಿವರಣೆ ನೀಡಿದ ಬಳಿಕ ಅವರಿಗೆ ತಿಲಕವಿಟ್ಟು ದರ್ಶನಕ್ಕೆ ಅವಕಾಶ ನೀಡಲಾಯಿತು’ ಎಂದಿದ್ದಾರೆ.

ಮತ್ತಷ್ಟು ದೇಹಗಳ ಭಾಗಗಳು ಪತ್ತೆ

ವಯನಾಡ್ (ಪಿಟಿಐ): ‘ವಯನಾಡ್ ಭೂಕುಸಿತದಲ್ಲಿ ಮಣ್ಣಿನಡಿ ಸಿಲುಕಿದ್ದ ದೇಹದ ಭಾಗಗಳನ್ನು ಸೋಮವಾರ ಶೋಧ ಕಾರ್ಯದ ವೇಳೆ ಹೊರತೆಗೆಯಲಾಗಿದೆ. ಒಟ್ಟು ಆರು ದೇಹಗಳ ಭಾಗಗಳನ್ನು ಹೊರತೆಯಲಾಗಿದ್ದು, ಇವುಗಳಲ್ಲಿ ಐದು ಮನುಷ್ಯನ ದೇಹಗಳ ಭಾಗಗಳಾಗಿವೆ’ ಎಂದು ಅಧಿಕಾರಿಗಳು ತಿಳಿಸಿದರು.

‘ಶೋಧಕಾರ್ಯದ ವೇಳೆ ದೊರೆತ ದೇಹದ ಭಾಗಗಳನ್ನು ಸುಲ್ತಾನ್ ಬತೇರಿ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಗಿದೆ. ಇಲ್ಲಿಯವರೆಗೆ ಒಟ್ಟು 231 ಮೃತದೇಹಗಳು ಹಾಗೂ 217 ದೇಹದ ಭಾಗಗಳು ದೊರೆತಿವೆ. 231ರಲ್ಲಿ 176 ಮೃತದೇಹಗಳ ಗುರುತು ಪತ್ತೆಯಾಗಿದ್ದು, ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ’ ಎಂದರು.

‘ಸರ್ಕಾರದ ನಿರ್ದೇಶನದಂತೆ ಗುರುತು ಪತ್ತೆಯಾಗದ 55 ಮೃತದೇಹಗಳು ಹಾಗೂ 203 ದೇಹದ ಭಾಗಗಳ ಅಂತ್ಯಸಂಸ್ಕಾರ ಮಾಡಲಾಗಿದೆ. 30ಕ್ಕೂ ಹೆಚ್ಚು ಮೃತದೇಹಗಳನ್ನು ಡಿಎನ್‌ಎ ಪರೀಕ್ಷೆ ಮೂಲಕ ಗುರುತು ಪತ್ತೆ ಮಾಡಲಾಗಿತ್ತು’ ಎಂದರು. ನೂರಾರು ಸಂತ್ರಸ್ತರು ಆಶ್ರಯ ಪಡೆದಿದ್ದ ಮೇಪ್ಪಾಡಿ ಪ್ರೌಢ ಶಾಲೆಯ ತರಗತಿಗಳು ಮಂಗಳವಾರದಿಂದ ಆರಂಭಗೊಳ್ಳಲಿದೆ.

ಉಕ್ಕಿದ ನದಿ...
ಗುಜರಾತ್‌ನಲ್ಲಿ ಭಾರಿ ಮಳೆಯಾಗುತ್ತಿದ್ದು, ಸೂರತ್‌ನ ಉಕಾಯ್ ಅಣೆಕಟ್ಟೆಯಿಂದ ನೀರು ಬಿಟ್ಟಿರುವುದರಿಂದ ತಾಪಿ ನದಿ ಉಕ್ಕಿ ಹರಿಯುತ್ತಿದೆ. ರಾಜ್ಯದಾದ್ಯಂತ ಮಳೆಯ ಪರಿಣಾಮದಿಂದ ಮೂವರು ಮೃತಪಟ್ಟಿದ್ದಾರೆ. ಮೊರ್ಬಿ ಜಿಲ್ಲೆಯಲ್ಲಿ ಟ್ರಾಕ್ಟರ್‌ನ ಟ್ರಾಲಿ ಕೊಚ್ಚಿಹೋಗಿ ಇಬ್ಬರು ನಾಪತ್ತೆಯಾಗಿದ್ದಾರೆ –ಪಿಟಿಐ ಚಿತ್ರ

ಗೊಂದಲ; ಬಿಜೆಪಿಯಿಂದ 15 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯ ಮೊದಲ ಹಂತದ ಚುನಾವಣೆಗೆ ಬಿಜೆಪಿಯು 15 ಅಭ್ಯರ್ಥಿಗಳನ್ನು ಒಳಗೊಂಡ ಮೊದಲ ಪಟ್ಟಿಯನ್ನು ಸೋಮವಾರ ಬಿಡುಗಡೆ ಮಾಡಿದೆ.

ಮೊದಲ ಪಟ್ಟಿಯು ಪಂಪೋರ್, ಶೋಪಿಯಾನ್, ಅನಂತ್‌ನಾಗ್ ಪಶ್ಚಿಮ ಮತ್ತು ಅನಂತ್‌ನಾಗ್ ಕ್ಷೇತ್ರಗಳ ಅಭ್ಯರ್ಥಿಗಳನ್ನು ಒಳಗೊಂಡಿದೆ.

ಈ ಪರಿಷ್ಕೃತ ಪಟ್ಟಿ ಬಿಡುಗಡೆಗೂ ಮುನ್ನ, ಎರಡನೇ ಮತ್ತು ಮೂರನೇ ಹಂತದ ಚುನಾವಣೆಗೆ ಸ್ಪರ್ಧಿಸುವ, ಕ್ರಮವಾಗಿ 10 ಮತ್ತು 19 ಅಭ್ಯರ್ಥಿಗಳ ಹೆಸರಿರುವ ಪಟ್ಟಿಯನ್ನು ಬಿಡುಗಡೆ ಮಾಡಿತ್ತು. ಬಳಿಕ ಈ ಪಟ್ಟಿಯನ್ನು ಹಿಂಪಡೆಯಲಾಗಿದೆ ಎಂದು ಪಕ್ಷವು ಸ್ಪಷ್ಟನೆ ನೀಡಿತು.

ಮೊದಲ ಹಂತದ ಚುನಾವಣೆಗೆ ನಾಮಪತ್ರ ಸಲ್ಲಿಸಲು ಆಗಸ್ಟ್ 27 ಕೊನೆಯ ದಿನ. ಎರಡು ಮತ್ತು ಮೂರನೇ ಹಂತದ ಚುನಾವಣೆಗೆ ನಾಮಪತ್ರ ಸಲ್ಲಿಸುವ ಪ್ರಕ್ರಿಯೆಯು ಕ್ರಮವಾಗಿ ಆಗಸ್ಟ್ 29 ಮತ್ತು ಸೆಪ್ಟೆಂಬರ್ 5ರಂದು ಆರಂಭವಾಗಲಿದೆ.

ಹಿಂದೂಗಳಿಗೆ ಯೋಗಿ ಆದಿತ್ಯನಾಥ ಎಚ್ಚರಿಕೆ

ಒಗ್ಗಟ್ಟಿನಿಂದ ಇರದಿದ್ದರೆ ಇಲ್ಲೂ ಬಾಂಗ್ಲಾ ಸ್ಥಿತಿ

ಪ್ರಜಾವಾಣಿ ವಾರ್ತೆ

ಲಖನೌ: ಹಿಂದೂಗಳು ಒಗ್ಗಟ್ಟಿನಿಂದ ಇರಬೇಕು, ಇಲ್ಲವಾದರೆ ಅವರು ಬಾಂಗ್ಲಾದೇಶದಲ್ಲಿ ಎದುರಾದಂತಹ ಪರಿಸ್ಥಿತಿಯನ್ನು ಎದುರಿಸಬೇಕಾಗಬಹುದು ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದ್ದಾರೆ.

ಯೋಗಿ ಆದಿತ್ಯನಾಥ

ಉತ್ತರ ಪ್ರದೇಶದ 10 ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ಹತ್ತಿರವಾಗುತ್ತಿರುವ ಸಂದರ್ಭದಲ್ಲಿ ಆದಿತ್ಯನಾಥ ಅವರು ಬಹುಸಂಖ್ಯಾತ ಸಮುದಾಯದ ಮತಗಳನ್ನು ಧ್ರುವೀಕರಿಸುವ ಉದ್ದೇಶದಿಂದ ಈ ಮಾತು ಆಡಿದ್ದಾರೆ ಎಂದು ವಿಶ್ಲೇಷಿಸಲಾಗಿದೆ.

ಆಗ್ರಾದಲ್ಲಿ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಆದಿತ್ಯನಾಥ ಅವರು, ಬಾಂಗ್ಲಾದೇಶದಲ್ಲಿ ಹಿಂದೂಗಳನ್ನು ಗುರಿಯಾಗಿಸಿಕೊಂಡು ನಡೆಯುತ್ತಿರುವ ಹಿಂಸಾಚಾರದ ಬಗ್ಗೆ ವಿರೋಧ ಪಕ್ಷಗಳು ಮಾತನಾಡುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಬಾಂಗ್ಲಾದೇಶದ ಪರಿಸ್ಥಿತಿ ನೋಡುತ್ತಿದ್ದೀರಲ್ಲವೇ... ಒಗ್ಗಟ್ಟಿನಿಂದ ಇದ್ದರೆ ಸುರಕ್ಷಿತವಾಗಿ ಇರುತ್ತೀರಿ... ಒಡಕು ಉಂಟಾದರೆ ನಿಮ್ಮನ್ನು ಕತ್ತರಿಸಿಹಾಕಲಾಗುತ್ತದೆ’ ಎಂದು ಔರಂಗಜೇಬನ ವಿರುದ್ಧ ಹೋರಾಡಿದ್ದ ದುರ್ಗಾದಾಸ್ ರಾಥೋರ್ ಪ್ರತಿಮೆ ಅನಾವರಣಗೊಳಿಸಿದ ನಂತರ ಆದಿತ್ಯನಾಥ ಹೇಳಿದರು.

ಜಾತಿ ಗಣತಿ ನಡೆಸಬೇಕು ಎಂದು ಕಾಂಗ್ರೆಸ್ ಒತ್ತಾಯಿಸುತ್ತಿರುವ ಬಗ್ಗೆ ಪರೋಕ್ಷವಾಗಿ ಉಲ್ಲೇಖಿಸಿ ಆದಿತ್ಯನಾಥ ಅವರು, ‘ಹಿಂದೂಗಳನ್ನು ವಿಭಜಿಸಲು ಯತ್ನಗಳು ನಡೆದಿವೆ. ಹಿಂದೂಗಳು ಒಗ್ಗಟ್ಟಿನಿಂದ ಇಲ್ಲದಿದ್ದರೆ ದುರ್ಬಲರಾಗುತ್ತಾರೆ’ ಎಂದು ಹೇಳಿದರು.

ಅಖಿಲೇಶ್ ಮಾತಿನ ಏಟು

ಲಖನೌ (ಪಿಟಿಐ): ಯೋಗಿ ಆದಿತ್ಯನಾಥ ಅವರ ಮಾತಿಗೆ ಚಾಟಿ ಬೀಸಿರುವ ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್, ‘ಯೋಗಿ ಅವರು ದೇಶದ ಪ್ರಧಾನಿಯಾಗಲು ಬಯಸಿದ್ದಾರೆ. ಆದರೆ ಅವರು ಪ್ರಧಾನಿಯ ಕೆಲಸ ಈಗ ಮಾಡಬಾರದು. ಯಾವ ದೇಶದ ಜೊತೆ ಸಂಬಂಧ ಬೆಳೆಸಬೇಕು ಎಂಬುದರ ತೀರ್ಮಾನ ಪ್ರಧಾನಿ ಮತ್ತು ಕೇಂದ್ರ ಸರ್ಕಾರದ ಕಡೆಯಿಂದ ಆಗುತ್ತದೆ’ ಎಂದು ಹೇಳಿದ್ದಾರೆ.

‘ಆದಿತ್ಯನಾಥ ಅವರು ಈ ರೀತಿ ಮಾಡಿರುವುದು ಇದೇ ಮೊದಲಲ್ಲ. ಕೇಂದ್ರವು ತೆಗೆದುಕೊಳ್ಳುವ ತೀರ್ಮಾನಗಳಲ್ಲಿ ಆದಿತ್ಯನಾಥ ಅವರು ಮಧ್ಯ ಪ್ರವೇಶಿಸಬಾರದು ಎಂಬುದನ್ನು ದೆಹಲಿಯವರು ತಿಳಿಸಿ ಹೇಳುತ್ತಾರೆ ಎಂದು ನಾನು ಆಶಿಸುತ್ತೇನೆ’ ಎಂದು ಅಖಿಲೇಶ್ ಹೇಳಿದ್ದಾರೆ.

ಕುಸಿದ ಶಿವಾಜಿ ಪ್ರತಿಮೆ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಸಿಂಧುದುರ್ಗ ಜಿಲ್ಲೆಯ ಕೋಟೆಯಲ್ಲಿದ್ದ ಮರಾಠ ರಾಜ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಸೋಮವಾರ ಕುಸಿದುಬಿದ್ದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಾಲ್ವಾನ್‌ನಲ್ಲಿರುವ ರಾಜ್‌ಕೋಟ್ ಕೋಟೆಯಲ್ಲಿದ್ದ 35 ಅಡಿ ಎತ್ತರದ ಪ್ರತಿಮೆಯು ಮಧ್ಯಾಹ್ನ 1 ಗಂಟೆ ಸುಮಾರಿಗೆ ಕುಸಿದಿದೆ ಎಂದರು.

‘ಜಿಲ್ಲೆಯಲ್ಲಿ ಕಳೆದ ಎರಡು ಮೂರು ದಿನಗಳಿಂದ ಭಾರಿ ಮಳೆ ಮತ್ತು ಬಿರುಗಾಳಿ ಬೀಸುತ್ತಿದೆ. ಕುಸಿತಕ್ಕೆ ಕಾರಣವನ್ನು ತಜ್ಞರು ಪರಿಶೀಲಿಸುತ್ತಿದ್ದಾರೆ’ ಎಂದು ಅಧಿಕಾರಿ ಹೇಳಿದ್ದಾರೆ.

ಕಳೆದ ವರ್ಷ ಡಿಸೆಂಬರ್ 4ರಂದು ನೌಕಾಪಡೆಯ ದಿನದಂದು ಪ್ರಧಾನಿ ನರೇಂದ್ರ ಮೋದಿ ಅವರು ಈ ಪ್ರತಿಮೆಯನ್ನು ಅನಾವರಣಗೊಳಿಸಿದ್ದರು.

ಮಹಾರಾಜ ಟ್ರೋಫಿ ಟಿ20: ಅನೀಶ್ವರ್ ಗೌತಮ್ ಅಜೇಯ 95

ಟೈಗರ್ಸ್ ಅಬ್ಬರಕ್ಕೆ ಡ್ರ್ಯಾಗನ್ಸ್ ಸುಸ್ತು

ಬೆಂಗಳೂರು: ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಾದ ಅನೀಶ್ವರ್ ಗೌತಮ್ (ಔಟಾಗದೇ 95, 58ಎ) ಮತ್ತು ಕೃಷ್ಣನ್ ಶ್ರೀಜಿತ್ (77, 44ಎ) ಅವರ ಅಮೋಘ ಬ್ಯಾಟಿಂಗ್ ನೆರವಿನಿಂದ ಹುಬ್ಬಳ್ಳಿ ಟೈಗರ್ಸ್ ತಂಡ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಸೋಮವಾರ ಮಂಗಳೂರು ಡ್ರ್ಯಾಗನ್ಸ್ ಮೇಲೆ 42 ರನ್‌ಗಳ ಸುಲಭ ಜಯಪಡೆಯಿತು.

ಈ ಗೆಲುವಿನೊಡನೆ ಪಾಯಿಂಟ್ಸ್ ಪಟ್ಟಿಯಲ್ಲಿ ಟೈಗರ್ಸ್ ಮರಳಿ ಅಗ್ರಸ್ಥಾನಕ್ಕೇರಿತು. ನಿವ್ವಳ ರನ್ ದರ ಸುಧಾರಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬ್ಯಾಟ್ ಮಾಡಲು ಕಳಿಸಲ್ಪಟ್ಟ ಹುಬ್ಬಳ್ಳಿ ಟೈಗರ್ಸ್ 3 ವಿಕೆಟ್‌ಗೆ 209 ರನ್‌ಗಳ ದೊಡ್ಡ ಮೊತ್ತ ಗಳಿಸಿತು. ಈ ಬಾರಿ ತಂಡವೊಂದು 200 ದಾಟುತ್ತಿರುವುದು ಮೂರನೇ ಬಾರಿ. ಉತ್ತರವಾಗಿ ಮಂಗಳೂರು ಡ್ರ್ಯಾಗನ್ಸ್ ನಾಲ್ಕು ಎಸೆತಗಳಿರುವಂತೆ 167 ರನ್‌ಗಳಿಗೆ ಆಟ ಮುಗಿಸಿತು.

ಆರಂಭ ಆಟಗಾರರಾದ ಕಾರ್ತಿಕೇಯ ಕೆ.ಪಿ ಮತ್ತು ಮೊಹಮ್ಮದ್ ತಾಹಾ ಅವರನ್ನು ಟೈಗರ್ಸ್ ತಂಡ 13 ರನ್‌ಗಳಾಗುವಷ್ಟರಲ್ಲಿ (2.1 ಓವರ್) ಕಳೆದುಕೊಂಡಿತ್ತು. ಆದರೆ ಶ್ರೀಜಿತ್ ಜೊತೆಗೂಡಿದ ಅನೀಶ್ವರ್ ಪಂದ್ಯದ ಗತಿಯನ್ನು ಬದಲಾಯಿಸಿದರು. ಮೂರನೇ ವಿಕೆಟ್‌ಗೆ ಕೇವಲ 83 ಎಸೆತಗಳಲ್ಲಿ 148 ರನ್‌ಗಳು ಹರಿದುಬಂದವು.

ಅನೀಶ್ವರ್ ಅಜೇಯ ಆಟದಲ್ಲಿ ಐದು ಭರ್ಜರಿ ಸಿಕ್ಸರ್‌ಗಳ ಜೊತೆಗೆ ಎಂಟು ಬೌಂಡರಿಗಳು ಒಳಗೊಂಡಿದ್ದವು. ಅದ್ವಿತ್ ಶೆಟ್ಟಿ ಅಂತಿಮ ಓವರ್‌ನಲ್ಲಿ ಸಿಕ್ಸರ್ ಸೇರಿದಂತೆ 14 ರನ್‌ಗಳನ್ನು ಮಾತ್ರ ನೀಡಿ ಅನೀಶ್ವರ್ ಅವರ ಶತಕಕ್ಕೆ ಅವಕಾಶ ಕೊಡಲಿಲ್ಲ. ಶ್ರೀಜಿತ್ ಅವರ 77 ರನ್‌ಗಳ ಇನಿಂಗ್ಸ್‌ನಲ್ಲಿ ಏಳು ಬೌಂಡರಿ, ಆರು ಸಿಕ್ಸರ್‌ಗಳಿದ್ದವು. ಮನೀಶ್ ಪಾಂಡೆ ಲಗುಬಗನೇ 24 ರನ್ ಗಳಿಸಿ ಅಜೇಯರಾಗುಳಿದರು.

ಈ ಭಾರಿ ಮೊತ್ತಕ್ಕೆ ಉತ್ತರವಾಗಿ ಮಂಗಳೂರು ಡ್ರ್ಯಾಗನ್ಸ್ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡು ಒತ್ತಡಕ್ಕೀಡಾಯಿತು. ಕೆ.ಸಿದ್ಧಾರ್ಥ್ (30) ಮತ್ತು ಲೋಚನಗೌಡ (35) ನಾಲ್ಕನೇ ವಿಕೆಟ್‌ಗೆ 28 ಎಸೆತಗಳಲ್ಲಿ 55 ರನ್ ಸೇರಿಸಿ ಕೆಲಕಾಲ ಹೋರಾಟ ತೋರಿದರು.

ಸಂಕ್ಷಿಪ್ತ ಸ್ಕೋರು: ಹುಬ್ಬಳ್ಳಿ ಟೈಗರ್ಸ್: 20 ಓವರುಗಳಲ್ಲಿ 3 ವಿಕೆಟ್‌ಗೆ 209 (ಕೃಷ್ಣನ್ ಶ್ರೀಜಿತ್ 77, ಅನೀಶ್ವರ ಗೌತಮ್ ಔಟಾಗದೇ 95, ಮನೀಶ್ ಪಾಂಡೆ ಔಟಾಗದೇ 24); ಮಂಗಳೂರು ಡ್ರ್ಯಾಗನ್ಸ್: 19.2 ಓವರುಗಳಲ್ಲಿ 167 ರೋಹನ್ ಪಾಟೀಲ್ 25, ಕೆ.ಸಿದ್ಧಾರ್ಥ್ 30, ಲೋಚನ್ ಗೌಡ 35, ಶ್ರೇಯಸ್ ಗೋಪಾಲ್ 38; ನಿಶ್ಚಿತ್ ಪೈ 21ಕ್ಕೆ3, ರಿಶಿ ಬೋಪಣ್ಣ 28ಕ್ಕೆ3). ಹುಬ್ಬಳ್ಳಿ ಟೈಗರ್ಸ್‌ಗೆ 42 ರನ್ ಜಯ. ಪಂದ್ಯದ ಆಟಗಾರ: ಅನೀಶ್ವರ ಗೌತಮ್

ಇಂದಿನ ಪಂದ್ಯಗಳು: ಗುಲ್ಬರ್ಗ ಮಿಸ್ಟಿಕ್ಸ್– ಶಿವಮೊಗ್ಗ ಲಯನ್ಸ್ (ಮಧ್ಯಾಹ್ನ3). ಹುಬ್ಬಳ್ಳಿ ಟೈಗರ್ಸ್– ಮೈಸೂರು ವಾರಿಯರ್ಸ್ (ರಾತ್ರಿ 7)

ಅಜೇಯ 95 ರನ್ ಗಳಿಸಿದ ಅನೀಶ್ವರ ಗೌತಮ್ ಅರ್ಧ ಶತಕ ದಾಟಿದಾಗ ಸಂಭ್ರಮಿಸಿದ್ದು ಹೀಗೆ....

ತಂಡಗಳು	ಪಂದ್ಯ	ಗೆಲುವು	ಸೋಲು	ಅಂಕ	ನೆಟ್ ರನ್‌ರೇಟ್
ಬೆಂಗಳೂರು ಬ್ಲಾಸ್ಟರ್ಸ್	8	6	2	12	+1.046
ಹುಬ್ಬಳ್ಳಿ ಟೈಗರ್ಸ್	8	6	2	12	-0.033
ಗುಲ್ಬರ್ಗ ಮಿಸ್ಟಿಕ್ಸ್	8	4	3	9	+0.028
ಮೈಸೂರು ವಾರಿಯರ್ಸ್	8	4	4	8	+0.260
ಶಿವಮೊಗ್ಗ ಲಯನ್ಸ್	8	2	6	4	-1.029
ಮಂಗಳೂರು ಡ್ರ್ಯಾಗನ್ಸ್	8	1	6	3	-0.635

ಬ್ಲಾಸ್ಟರ್ಸ್‌ಗೆ ರೋಚಕ ಜಯ

ಬೆಂಗಳೂರು: ತೀವ್ರ ಹೋರಾಟದ ನಂತರ ಬೆಂಗಳೂರು ಬ್ಲಾಸ್ಟರ್ಸ್ ತಂಡ, ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಗುಲ್ಬರ್ಗ ಮಿಸ್ಟಿಕ್ಸ್ ತಂಡವನ್ನು ಎರಡು ರನ್‌ಗಳಿಂದ ಸೋಲಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಮೊದಲು ಆಡಿದ ಬ್ಲಾಸ್ಟರ್ಸ್ ತಂಡ ಆರಂಭದಲ್ಲಿ ಕುಸಿತ ಕಂಡರೂ ಅಂತಿಮವಾಗಿ 9 ವಿಕೆಟ್‌ಗೆ 151 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಒಂದ ಹಂತದಲ್ಲಿ 6 ವಿಕೆಟ್‌ಗೆ 51 ರನ್ ಗಳಿಸಿದ್ದ ಬ್ಲಾಸ್ಟರ್ಸ್‌ಗೆ ಸೂರಜ್ ಅಹುಜಾ (35) ಮತ್ತು ನವೀನ್ (29) ನಡುವಣ ಏಳನೇ ವಿಕೆಟ್‌ಗೆ 49 ರನ್ ಜೊತೆಯಾಟ ಚೇತರಿಕೆ ನೀಡಿತು. ವೇಗದ ಬೌಲರ್ ವೈಶಾಖ ವಿಜಯಕುಮಾರ್ ಮತ್ತು ಅಭಿಷೇಕ್ ಪ್ರಭಾಕರ್ ತಲಾ 3 ವಿಕೆಟ್ ಪಡೆದರು.

ಲವನೀತ್ ಸಿಸೋಡಿಯಾ (56, 45ಎ) ಮತ್ತು ದೇವದತ್ತ ಪಡಿಕ್ಕಲ್ (40) ಮೊದಲ ವಿಕೆಟ್‌ಗೆ 10 ಓವರುಗಳಲ್ಲಿ 77 ರನ್ ಸೇರಿಸಿದರೂ, ಗುಲ್ಬರ್ಗ ಮಿಸ್ಟಿಕ್ಸ್ ಅಂತಿಮವಾಗಿ 5 ವಿಕೆಟ್‌ಗೆ 151 ರನ್ ಗಳಿಸಲಷ್ಟೇ ಶಕ್ತವಾಯಿತು.

ಸಂಕ್ಷಿಪ್ತ ಸ್ಕೋರು: ಬೆಂಗಳೂರು ಬ್ಲಾಸ್ಟರ್ಸ್: 20 ಓವರುಗಳಲ್ಲಿ 9 ವಿಕೆಟ್‌ಗೆ 153 (ಮುಯಂಕ್ ಅಗರವಾಲ್ 20, ಸೂರಜ್ ಅಹುಜಾ 35, ನವೀನ್ ಎಂ.ಜಿ. 29; ವೈಶಾಖ ವಿಜಯಕುಮಾರ್ 32ಕ್ಕೆ3, ಅಭಿಷೇಕ್ ಪ್ರಭಾಕರ್ 24ಕ್ಕೆ3); ಗುಲ್ಬರ್ಗ ಮಿಸ್ಟಿಕ್ಸ್: 20 ಓವರುಗಳಲ್ಲಿ 5 ವಿಕೆಟ್‌ಗೆ 151 (ಲವನೀತ್ ಸಿಸೋಡಿಯಾ 56, ದೇವದತ್ತ ಪಡಿಕ್ಕಲ್ 40, ರಿತೇಶ್ ಭಟ್ಕಳ್ ಔಟಾಗದೇ 20). ಬ್ಲಾಸ್ಟರ್ಸ್‌ಗೆ 2 ರನ್ ಜಯ. ಪಂದ್ಯದ ಆಟಗಾರ: ನವೀನ್ ಎಂ.ಜಿ.

ಲೆಜೆಂಡ್ಸ್ ಲೀಗ್ ಕ್ರಿಕೆಟ್‌ಗೆ ಧವನ್

ನವದೆಹಲಿ (ಪಿಟಿಐ): ಅಂತರ ರಾಷ್ಟ್ರೀಯ ಕ್ರಿಕೆಟ್‌ಗೆ ಶನಿವಾರ ವಿದಾಯ ಹೇಳಿದ್ದ ಶಿಖರ್ ಧವನ್ ಅವರು ಲೆಜೆಂಡ್ಸ್ ಲೀಗ್ ಕ್ರಿಕೆಟ್‌ಗೆ (ಎಲ್‌ಎಲ್‌ಸಿ) ಸೋಮವಾರ ಸೇರ್ಪಡೆಯಾದರು.

‘ನನ್ನ ದೇಹ ಈಗಲೂ ಆಡಲು ಶಕ್ತವಾಗಿದೆ. ಕ್ರಿಕೆಟ್ ಆಟವನ್ನು ನನ್ನಿಂದ ದೂರ ಮಾಡಲು ಸಾಧ್ಯವಿಲ್ಲ. ನಾನು ನನ್ನ ಕ್ರಿಕೆಟ್ ಸ್ನೇಹಿತರ ಜೊತೆಯಗಲು ಕಾತರದಿಂದ ಇದ್ದೇನೆ. ನನ್ನ ಅಭಿಮಾನಿಗಳಿಗೆ ರಂಜನೆ ನೀಡುವುದನ್ನು ಮುಂದುವರಿಸುವೆ. ಹೊಸ ನೆನಪುಗಳಿಗೆ ದಾರಿಮಾಡಿಕೊಡುವೆ’ ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

38 ವರ್ಷ ವಯಸ್ಸಿನ ಎಡಗೈ ಆಟಗಾರನಾಗಿರುವ ಧವನ್ 34 ಟೆಸ್ಟ್, 167 ಏಕದಿನ ಮತ್ತು 68 ಟಿ20 ಪಂದ್ಯಗಳನ್ನು ಆಡಿದ್ದು ಒಟ್ಟು 12,286 ರನ್ ಕಲೆಹಾಕಿದ್ದಾರೆ. ಲೆಜೆಂಡ್ಸ್ ಲೀಗ್ ಸೆಪ್ಟೆಂಬರ್‌ನಲ್ಲಿ ನಡೆಯಲಿದೆ.

ವಿಶ್ವ 17 ವರ್ಷದೊಳಗಿನವರ ಚಾಂಪಿಯನ್‌ಷಿಪ್

ಸ್ನೂಕರ್: ಫೈನಲ್‌ಗೆ ರಿಕ್ಟರ್– ಲೊಮ್‌ನಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜರ್ಮನಿಯ ಕ್ರಿಸ್ಟಿಯನ್ ರಿಕ್ಟರ್ ಮತ್ತು ಥಾಯ್ಲೆಂಡ್‌ನ ಲೊಮ್‌ನಾ ಇಸ್ಸಾರಂಗ್‌ಕುನ್ ಅವರು ಸೋಮವಾರ ತಮ್ಮ ಎದುರಾಳಿಗಳ ವಿರುದ್ಧ ಸುಲಭ ಗೆಲುವಿನೊಡನೆ ಐಬಿಎಸ್‌ಎಫ್ ವಿಶ್ವ 17 ವರ್ಷದೊಳಗಿನವರ ಸ್ನೂಕರ್ ಚಾಂಪಿಯನ್‌ಷಿಪ್‌ನ ಫೈನಲ್ ತಲುಪಿದರು.

ಕರ್ನಾಟಕ ರಾಜ್ಯ ಬಿಲಿಯಡ್ಸ್ ಸಂಸ್ಥೆಯಲ್ಲಿ ನಡೆಯುತ್ತಿರುವ ಈ ಚಾಂಪಿಯನ್‌ಷಿಪ್‌ನ ಸೆಮಿಫೈನಲ್‌ನಲ್ಲಿ ರಿಕ್ಟರ್ 4-2 ರಿಂದ (66 (60)-11, 4-101 (101), 80 (46)-21, 31-72, 75-40, 68-55) ವೇಲ್ಸ್‌ನ ರೀಲಿ ಪಾವೆಲ್ ಅವರನ್ನು ಸೋಲಿಸಿದರು.

ಇನ್ನೊಂದು ಸೆಮಿಫೈನಲ್‌ನಲ್ಲಿ ಲೊಮ್‌ನಾ ಕೂಡ 4-2 ಅಂತರದಿಂದ (58-27, 30-67, 102 (87)-16, 86 (57)-32, 34-68, 54-34) ಪೋಲೆಂಡ್‌ನ ಮಿಚಲ್ ಝುಬರ್‌ಝಿಕ್ ಅವರನ್ನು ಪರಾಭವಗೊಳಿಸಿದರು.

ರಿಕ್ಟರ್ ಆಟದಲ್ಲಿ ಕಡಿಮೆ ತಪ್ಪುಗಳಿದ್ದವು. ದೊಡ್ಡ ಬ್ರೇಕ್‌ಗಳೊಂದಿಗೆ ಅವರು ಉತ್ತಮ ಲಯದಲ್ಲೂ ಇದ್ದರು. ಟೇಬಲ್‌ನಲ್ಲಿ ಅವರ ಆ್ಯಂಗಲ್‌ಗಳೂ ಆಸಕ್ತಿದಾಯಕವಾಗಿದ್ದವು.

ಕ್ವಾರ್ಟರ್‌ಫೈನಲ್ಸ್ ಫಲಿತಾಂಶ: ಜರ್ಮನಿಯ ರಿಕ್ಟರ್‌ಗೆ 3-0 ಯಿಂದ ಭಾರತದ ಜಬೇಝ್ ನವೀನ್ ಕುಮಾರ್ ವಿರುದ್ಧ ಜಯ, ಪಾವೆಲ್‌ಗೆ 3-1 ರಿಂದ ಹಾಂಗ್‌ಕಾಂಗ್‌ನ ಸ್ಕಿ ಚಾನ್ ವಿರುದ್ಧ ಗೆಲುವು, ಝುಬರ್‌ಝಿಕ್ ಅವರಿಗೆ 3-1 ರಿಂದ ಝಿಯಾದ್ ಅಲ್ಗಾಬ್ಬಾನಿ (ಸೌದಿ ಅರೇಬಿಯಾ) ವಿರುದ್ಧ ಜಯ, ಇಸ್ಸಾರಂಗ್‌ಕುನ್ ಅವರಿಗೆ 3-1 ರಿಂದ ಪರ್ಹಾಮ್ ಕಝುಮಿಮೊಗದ್ದಾಮ್ (ಇರಾನ್) ವಿರುದ್ಧ ಗೆಲುವು.

ಮಹಿಳೆಯರ 21 ವರ್ಷದೊಳಗಿನವರ ವಿಭಾಗದ ಪಂದ್ಯಗಳಲ್ಲಿ ಭಾರತದ ಆರ್.ಟಿ.ಮೋಹಿತಾ 2-1 ರಿಂದ ಜಿಯಾ ಸೆಹಗಲ್ ವಿರುದ್ಧ, ನತಾಶಾ ಚೇತನ್ 2-0 ಯಿಂದ ಸೌದಿ ಅರೇಬಿಯಾದ ನೂತ್ ಅಲ್ಬಾಲವಿ ವಿರುದ್ಧ, ಇರಾನ್‌ನ ಸೆತಾಯೇಶ್ ಅಮಿರ್‌ಝುಮಿ 2-1 ರಿಂದ ಭಾರತದ ಸಮೀಕ್ಷಾ ದೇವನ್ ವಿರುದ್ಧ ಜಯಗಳಿಸಿದರು.

ಐಬಿಎಸ್‌ಎಫ್ ವಿಶ್ವ (17 ವರ್ಷದೊಳಗಿನವರ) ಸ್ನೂಕರ್ ಚಾಂಪಿಓಯನ್‌ಷಿಪ್‌ನಲ್ಲಿ ಭಾರತದ ಜಬೇಝ್ ನವೀನ್ ಕುಮಾರ್ ವಿರುದ್ಧ ಆಡಿ ಗೆದ್ದ ಜರ್ಮನಿಯ ಕ್ರಿಸ್ಟಿಯನ್ ರಿಕ್ಟರ್ ಪ್ರಜಾವಾಣಿ ಚಿತ್ರ: ಎಸ್.ಕೆ.ದಿನೇಶ್

ಲಿರೆನ್ –ಪ್ರಜ್ಞಾನಂದ ಪಂದ್ಯ ಡ್ರಾ

ಸಿಂಕ್ವೆಫೀಲ್ಡ್ ಕಪ್ ಚೆಸ್ ಟೂರ್ನಿ: ಕರುವಾನಾಗೆ ಜಯ

ಸೇಂಟ್ ಲೂಯಿ (ಅಮೆರಿಕ), (ಪಿಟಿಐ): ವಿಶ್ವ ಚಾಂಪಿಯನ್ ಡಿಂಗ್ ಲಿರೆನ್ ವಿರುದ್ಧ ಯೋಜನಾಬದ್ಧವಾಗಿ ಆಡಿದ ಭಾರತದ ಗ್ರ್ಯಾಂಡ್‌ಮಾಸ್ಟರ್ ಪ್ರಜ್ಞಾನಂದ ಆರ್. ಅವರು ಸಿಂಕ್ವೆಫೀಲ್ಡ್ ಚೆಸ್ ಚಾಂಪಿಯನ್‌ಷಿಪ್‌ನ ಆರನೇ ಸುತ್ತಿನ ಪಂದ್ಯವನ್ನು ಭಾನುವಾರ ಸುಲಭವಾಗಿ ‘ಡ್ರಾ’ ಮಾಡಿಕೊಂಡರು.

ಗ್ರ್ಯಾಂಡ್ ಚೆಸ್ ಟೂರ್‌ನ ಅಂತಿಮ ಲೆಗ್ ಆಗಿರುವ ಈ ಟೂರ್ನಿಯಲ್ಲಿ ಪಾಲ್ಗೊಂಡಿರುವ ಭಾರತದ ಇನ್ನೊಬ್ಬ ಆಟಗಾರ ಡಿ.ಗುಕೇಶ್, ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಜೊತೆ 72 ನಡೆಗಳ ನಂತರ ಡ್ರಾ ಮಾಡಿಕೊಂಡರು.

ಆದರೆ, ದಿನದ ಅನಿರೀಕ್ಷಿತ ಫಲಿತಾಂಶದಲ್ಲಿ ಅಮೆರಿಕದ ಫ್ಯಾಬಿಯಾನೊ ಕರುವಾನ ಅವರು ಈ ಟೂರ್ನಿಯಲ್ಲಿ ಉತ್ತಮ ಲಯದಲ್ಲಿದ್ದ ಇಯಾನ್ ನಿಪೊಮ್‌ನಿಯಾಷಿ (ರಷ್ಯಾ) ಅವರನ್ನು ಮಣಿಸಿದರು. ಅದೂ ಕೇವಲ 25 ನಡೆಗಳಲ್ಲಿ. ಭಾನುವಾರ ಇದೊಂದೇ ಪಂದ್ಯ ನಿರ್ಣಾಯಕ ಫಲಿತಾಂಶ ಕಂಡಿತು. ಉಳಿದ ನಾಲ್ಕು ಪಂದ್ಯಗಳು ಡ್ರಾ ಆದವು.

ಹಾಲೆಂಡ್‌ನ ಅನಿಶ್ ಗಿರಿ ಮತ್ತು ಉಜ್ಬೇಕಿಸ್ತಾನದ ನಾಡಿರ್ಬೆಕ್ ಅಬ್ದು-ಸತ್ತಾರೋವ್ ನಡುವಣ ಪಂದ್ಯ ಡ್ರಾ ಆದರೆ, ಫ್ರಾನ್ಸ್‌ನ ಅಲಿರೇಜಾ ಫಿರೋಜ್ ಮತ್ತು ಸ್ಥಳೀಯ ತಾರೆ ವೆಸ್ಲಿ ಸೊ ಕೂಡ ಪಾಯಿಂಟ್ ಹಂಚಿಕೊಳ್ಳುವ ನಿರ್ಧಾರಕ್ಕೆ ಬಂದರು.

ಇನ್ನು ಮೂರು ಸುತ್ತುಗಳು ಉಳಿದಿದ್ದು, ಕರುವಾನ ಅವರು ಅಲಿರೇಜಾ ಫಿರೋಜ್ ಅವರಿಗೆ ಪ್ರಬಲ ಪೈಪೋಟಿ ನೀಡುವಂತೆ ಕಾಣುತ್ತಿದೆ. ಆದರೆ ಅಲಿರೇಜಾ ನಾಲ್ಕು ಪಾಯಿಂಟ್ಸ್ ಗಳಿಸಿದ್ದು ಮುನ್ನಡೆ ಉಳಿಸಿಕೊಂಡಿದ್ದಾರೆ. ಕರುವಾನ ಮತ್ತು ವೆಸ್ಲಿ ಸೊ ತಲಾ 3.5 ಪಾಯಿಂಟ್ಸ್ ಕಲೆಹಾಕಿದ್ದು ಅರ್ಧ ಪಾಯಿಂಟ್ ಅಂತರದಿಂದ ಎರಡನೇ ಸ್ಥಾನದಲ್ಲಿದ್ದಾರೆ.

ಪ್ರಜ್ಞಾನಂದ, ಗುಕೇಶ್, ವೇಷಿಯರ್-ಲಗ್ರಾವ್ ಮತ್ತು ಲಿರೆನ್ ಅವರು ತಲಾ ಮೂರು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ನಿಪೊಮ್‌ನಿಯಾಷಿ ಮತ್ತು ಅಬ್ದುಸತ್ತಾರೋವ್ ಅವರು (2.5) ನಂತರದ ಸ್ಥಾನದಲ್ಲಿದ್ದಾರೆ. ಡಚ್ ಆಟಗಾರ ಅನಿಶ್ ಗಿರಿ (2) ಹತ್ತು ಆಟಗಾರರ ಪಟ್ಟಿಯಲ್ಲಿ ತಳದಲ್ಲಿದ್ದಾರೆ.



ಆರ್.ಪ್ರಜ್ಞಾನಂದ –ಪಿಟಿಐ ಚಿತ್ರ

ಡುರಾಂಡ್ ಕಪ್ ಫುಟ್‌ಬಾಲ್: ಸೆಮಿಫೈನಲ್ ಇಂದು

ಬೆಂಗಳೂರು ಎಫ್‌ಸಿಗೆ ಬಾಗನ್ ಸವಾಲು

ಕೋಲ್ಕತ್ತ (ಪಿಟಿಐ): ಬೆಂಗಳೂರು ಎಫ್‌ಸಿ ತಂಡ, ಮಂಗಳವಾರ ಇಲ್ಲಿನ ಸಾಲ್ಟ್ ಲೇಕ್ ಕ್ರೀಡಾಂಗಣದಲ್ಲಿ ನಡೆಯುವ ಡುರಾಂಡ್ ಕಪ್ ಸೆಮಿಫೈನಲ್‌ನಲ್ಲಿ ಮೋಹನ್ ಬಾಗ್ ಸೂಪರ್ ಜೈಂಟ್ಸ್ ತಂಡವನ್ನು ಎದುರಿಸಲಿದೆ. ಭಾರತ ತಂಡದ ಮಾಜಿ ನಾಯಕ, ಅನುಭವಿ ಸುನೀಲ್ ಚೆಟ್ರಿ ಅವರ ಪಾತ್ರ ಈ ಪಂದ್ಯದಲ್ಲಿ ಮಹತ್ವದ್ದಾಗಲಿದೆ.

ಏಷ್ಯಾದಅತ್ಯಂತಹಳೆಯಟೂರ್ನಿಯೆನಿಸಿರುವ ಡುರಾಂಡ್ ಕಪ್ ಈಗ ಅಂತಿಮ ಹಂತದಲ್ಲಿದ್ದು, ಬೆಂಗಳೂರು ಎಫ್‌ಸಿ ತಂಡಕ್ಕೆ, ಹಾಲಿ ಚಾಂಪಿಯನ್ ಮೋಹನ್ ಬಾಗನ್ ಪ್ರಬಲ ಎದುರಾಳಿಯಾಗಿದೆ. ಕೋಲ್ಕತ್ತದ ದೈತ್ಯ ತಂಡ ತನ್ನ ಭದ್ರ-ಕೋಟೆಯಲ್ಲಿ 10 ಗೋಲು ಗಳಿಸಿದೆ ಮಾತ್ರವಲ್ಲ, ಕೇವಲ ಎದುರಾಳಿಗಳಿಗೆ ಮೂರು ಗೋಲುಗಳನ್ನಷ್ಟೇ ಬಿಟ್ಟುಕೊಟ್ಟಿದೆ.

ಬೆಂಗಳೂರು ತಂಡವೂ ಭರವಸೆಯ ಪ್ರದರ್ಶನ ನೀಡಿದೆ. ಆಡಿದ ನಾಲ್ಕು ಪಂದ್ಯಗಳಲ್ಲಿ 11 ಗೋಲುಗಳನ್ನು ಗಳಿಸಿದ್ದು, ಎರಡು ಗೋಲುಗಳನ್ನಷ್ಟೇ ಬಿಟ್ಟುಕೊಟ್ಟಿದೆ.

ಗೋಲ್‌ಕೀಪರ್ ಗುರುಪ್ರೀತ್ ಸಂಧು, ರಾಹುಲ್ ಭೆಕೆ, ಸುರೇಶ್ ವಾಂಗ್ಜಮ್ ಮತ್ತು ಸುನೀಲ್ ಚೆಟ್ರಿ ಅವರ ಪ್ರದರ್ಶನ ಬಿಎಫ್‌ಸಿ ಪಾಲಿಗೆ ನಿರ್ಣಾಯಕ. ಚೆಟ್ರಿ ಇದು ತವರು ಮೈದಾನವಿದ್ದಂತೆ. ಇದೇ ಮೈದಾನದಲ್ಲಿ ಅವರ ಕೌಶಲ ಗಮನಿಸಿ ಮೊದಲ ಬಾರಿ ಮೋಹನ್ ಬಾಗನ್ ತಂಡ ಟ್ರಯಲ್ಸ್‌ಗೆ ಆಹ್ವಾನಿಸಿತ್ತು. ಅದು 2002ರ ಡುರಾಂಡ್ ಕಪ್‌ಗೆ ಮೊದಲು.

ಬಿಎಫ್‌ಸಿ ತಂಡದ ಸುನಿಲ್ ಚೆಟ್ರಿ

ಫೈನಲ್‌ಗೆ ನಾರ್ತ್‌ಈಸ್ಟ್

ಶಿಲ್ಲಾಂಗ್ (ಪಿಟಿಐ): ಸೂಪರ್ ಲೀಗ್ ತಂಡವಾದ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ 3–0 ಗೋಲುಗಳಿಂದ ಶಿಲ್ಲಾಂಗ್ ಲಾಜೊಂಗ್ ಎಫ್‌ಸಿ ತಂಡವನ್ನು ಸೋಲಿಸಿ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿ ಫೈನಲ್ ತಲುಪಿತು.

ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಥೋಯಿ ಸಿಂಗ್, ಮೊರಾಕೊದ ಅಲ್ಲೇಡಿನ್ ಅಜರಾಯಿ, ಪಾರ್ಥಿವ್ ಗೊಗೊಯಿ ಗೋಲುಗಳನ್ನು ಗಳಿಸಿದರು. ವಿರಾಮದ ವೇಳೆ ವಿಜೇತರು 2–0 ಯಿಂದ ಮುಂದಿದ್ದರು. ನಾರ್ತ್‌ಈಸ್ಟ್ ಇದೇ ಮೊದಲ ಬಾರಿ ಡುರಾಂಡ್ ಫೈನಲ್ ತಲುಪಿದೆ.

ತಂಡವು ಗ್ರೆಗ್ ಸ್ಟೀವರ್ಟ್, ಮನ್ವೀರ್ ಸಿಂಗ್ ಮತ್ತು ಜೇಸನ್ ಕಮಿಂಗ್ಸ್ ಪ್ರದರ್ಶನ ನೆಚ್ಚಿಕೊಂಡಿದೆ.

ನಿಧಾನಗತಿಯ ಓವರ್: ಪಾಕ್, ಬಾಂಗ್ಲಾದೇಶಕ್ಕೆ ದಂಡ

ರಾವಲ್ಪಿಂಡಿ (ಎಎಫ್‌ಪಿ): ಮೊದಲ ಕ್ರಿಕೆಟ್ ಟೆಸ್ಟ್‌ನಲ್ಲಿ ನಿಧಾನ ಗತಿಯಲ್ಲಿ ಓವರುಗಳನ್ನು ಮಾಡಿದ್ದಕ್ಕೆ ಪಾಕಿಸ್ತಾನ ಮತ್ತು ಬಾಂಗ್ಲಾದೇಶ ತಂಡಗಳಿಗೆ ದಂಡ ವಿಧಿಸಲಾಗಿದೆ ಮತ್ತು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಪಾಯಿಂಟ್ಸ್ ಕಳೆಯಲಾಗಿದೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಸೋಮವಾರ ಹೇಳಿದೆ.

ಬಾಂಗ್ಲಾದೇಶ ಭಾನುವಾರ ಮುಕ್ತಾಯಗೊಂಡ ಟೆಸ್ಟ್ ಪಂದ್ಯದಲ್ಲಿ ಆತಿಥೇಯರ ವಿರುದ್ಧ 14 ಟೆಸ್ಟ್‌ಗಳಲ್ಲಿ ಮೊದಲ ಬಾರಿ ಗೆಲುವನ್ನು ದಾಖಲಿಸಿತ್ತು. ಪಾಕಿಸ್ತಾನ ಆರು ಓವರುಗಳನ್ನು ಕಡಿಮೆ ಮಾಡಿದ್ದು, ಆರು ಡಬ್ಲ್ಯುಟಿಸಿ ಪಾಯಿಂಟ್ಸ್ ಕಳೆದುಕೊಂಡಿದೆ. ಬಾಂಗ್ಲಾದೇಶ ಮೂವರು ಓವರುಗಳನ್ನು ಕಡಿಮೆ ಮಾಡಿರುವುದು ಖಚಿತಪಟ್ಟಿದ್ದು, ಮೂರು ಪಾಯಿಂಟ್ಸ್ ಕಳೆದುಕೊಂಡಿದೆ ಎಂದು ಐಸಿಸಿ ಹೇಳಿಕೆಯಲ್ಲಿ ತಿಳಿಸಿದೆ. ಪಾಕಿಸ್ತಾನದ ಆಟಗಾರರಿಗೆ ಪಂದ್ಯ ಶುಲ್ಕದ ಶೇ 30ರಷ್ಟು ದಂಡ ವಿಧಿಸಲಾಗಿದ್ದು, ಬಾಂಗ್ಲಾದೇಶದ ಆಟಗಾರರಿಗೆ ಶೇ 15ರಷ್ಟು ದಂಡ ವಿಧಿಸಲಾಗಿದೆ.

ಅಮೆರಿಕ ಓಪನ್: ಝೆಂಗ್ ಮುನ್ನಡೆ

ನ್ಯೂಯಾರ್ಕ್ (ಎಎಫ್‌ಪಿ): ಹಿನ್ನಡೆಯಿಂದ ಚೇತರಿಸಿದ ಪ್ಯಾರಿಸ್ ಒಲಿಂಪಿಕ್ಸ್ ಚಾಂಪಿಯನ್ ಝೆಂಗ್ ಕಿನ್ವೆನ್ ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಮಹಿಳಾ ಸಿಂಗಲ್ಸ್ ಎರಡನೇ ಸುತ್ತಿಗೆ ಮುನ್ನಡೆದರು.

ಸೋಮವಾರ ನಡೆದ ಪಂದ್ಯದಲ್ಲಿ ಚೀನಾದ ಆಟಗಾರ್ತಿ ಝೆಂಗ್ 4-6, 6-4, 6-2ರಿಂದ ಅಮೆರಿಕದ ಅಮಂಡಾ ಅನಿಸಿಮೊವಾ ಅವರನ್ನು ಸೋಲಿಸಿದರು.

ಏಳನೇ ಶ್ರೇಯಾಂಕದ ಝೆಂಗ್, ಎರಡನೇ ಸುತ್ತಿನಲ್ಲಿ ರಷ್ಯಾದ ಎರಿಕಾ ಆಂಡ್ರೀವಾ ಅವರನ್ನು ಎದುರಿಸಲಿದ್ದಾರೆ.

ಆಂಡ್ರೀವಾ ಇನ್ನೊಂದು ಪಂದ್ಯದಲ್ಲಿ 6-3, 7-6 (9-7)ರಿಂದ ಚೀನಾದ ಯುವಾನ್ ಯೂ ಅವರನ್ನು ಹಿಮ್ಮೆಟ್ಟಿಸಿದರು.

ಚೀನಾದ ವಾಂಗ್ ಯಫಾನ್ ಮೊದಲ ಸೆಟ್‌ಅನ್ನು 6-2 ರಿಂದ ಗೆದ್ದ ಮೇಲೆ ಅವರ ಎದುರಾಳಿ, ಒಂಬತ್ತನೇ ಶ್ರೇಯಾಂಕದ ಮರಿಯಾ ಸಕ್ಕರಿ (ಗ್ರೀಸ್) ಪಂದ್ಯದಿಂದ ನಿವೃತ್ತರಾದರು.

ಜ್ವರೇವ್ ಮುನ್ನಡೆ: ಪುರುಷರ ಸಿಂಗಲ್ಸ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವರೇವ್ 6-2, 6-7 (5), 6-3, 6-2 ರಿಂದ ಜರ್ಮನಿಯ ಮ್ಯಾಕ್ಸಿಮಿಲನ್ ಮಾರ್ಟೆರರ್ ವಿರುದ್ಧ ಗೆದ್ದು ಶುಭಾರಂಭ ಮಾಡಿದರು.

ಆಟದಿಂದ ಬಿಡುವು ಪಡೆಯಲು ಪ್ರಣಯ್ ನಿರ್ಧಾರ

ನವದೆಹಲಿ (ಪಿಟಿಐ): ಚಿಕುನ್‌ಗುನ್ಯಾದಿಂದ ದೇಹದ ಮೇಲೆ ಉಂಟಾಗಿರುವ ಸುಸ್ತಿನಿಂದ ಸಂಪೂರ್ಣ ಚೇತರಿಸಿಕೊಳ್ಳಲು ಅನುವಾಗುವಂತೆ ಕೆಲಸಮಯ ಆಟದಿಂದ ವಿರಾಮ ತೆಗೆದುಕೊಳ್ಳುವುದಾಗಿ ಭಾರತದ ಅನುಭವಿ ಬ್ಯಾಡ್ಮಿಂಟನ್ ಆಟಗಾರ ಎಚ್.ಎಸ್.ಪ್ರಣಯ್ ಹೇಳಿದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲೂ ಅವರ ಆಟದ ಮೇಲೆ ಇದು ತೀವ್ರವಾಗಿ ಪರಿಣಾಮ ಬೀರಿತ್ತು. 2022ರ ಥಾಮಸ್ ಕಪ್ ಪ್ರಶಸ್ತಿ ವಿಜೇತ ಹಾಗೂ ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತರಾದ ಪ್ರಣಯ್, ಒಲಿಂಪಿಕ್ಸ್ ಕ್ರೀಡೆಗಳಿಗೆ ವಾರಗಳ ಮೊದಲು ಚಿಕುನ್‌ಗುನ್ಯಾ ಪೀಡಿತರಾಗಿದ್ದರು. ಜ್ವರ, ಅತೀವ ಗಂಟುನೋವು ಇದರ ಲಕ್ಷಣ.

‘ದುರದೃಷ್ಟವಶಾತ್, ಚಿಕುನ್‌ಗುನ್ಯಾ ಜೊತೆಗಿನ ಹೋರಾಟದಿಂದ ನನ್ನ ದೇಹ ಬಳಲಿದೆ. ಇದರಿಂದ ತೀವ್ರ ಮೈ ಕೈನೋವು ನೋವು ನನ್ನನ್ನು ಬಾಧಿಸುತ್ತಿದೆ. ಇಂಥ ಸನ್ನಿವೇಶದಲ್ಲಿ ಉತ್ತಮ ಆಟ ನೀಡಲು ನನ್ನಿಂದ ಅಸಾಧ್ಯ’ ಎಂದು ಪ್ರಣಯ್ ‘ಎಕ್ಸ್’ನಲ್ಲಿ ಬರೆದಿದ್ದಾರೆ.

‘ನನ್ನ ತಂಡದ ಜೊತೆ ಕೂಲಂಕಷವಾಗಿ ಸಮಾಲೋಚಿಸಿದ್ದು, ಚೇತರಿಸಿಕೊಳ್ಳುವ ಕಡೆ ಗಮನಹರಿಸುವ ಸಲುವಾಗಿ ಮುಂದಿನ ಕೆಲವು ಟೂರ್ನಿಗಳಿಂದ ಹಿಂದೆಸರಿಯಲು ತೀರ್ಮಾನಿಸಿದ್ದೇನೆ. ಸವಾಲಿನ ಸಮಯದಲ್ಲಿ ನನ್ನನ್ನು ಅರ್ಥಮಾಡಿಕೊಂಡಿದ್ದಕ್ಕೆ ಧನ್ಯವಾದಗಳು. ನಾನು ಮತ್ತೆ ಇನ್ನಷ್ಟು ಗಟ್ಟಿಯಾಗಿ ಮರಳುವೆ’ ಎಂದೂ 32 ವರ್ಷ ವಯಸ್ಸಿನ ಆಟಗಾರ ಬರೆದಿದ್ದಾರೆ.

ಆದರೆ ಎಷ್ಟು ಸಮಯ ಆಟದಿಂದ ದೂರವಿರುವುದಾಗಿ ಅವರು ತಿಳಿಸಿಲ್ಲ. ಹಿಂದೆ ಸರಿದಿರುವ ಟೂರ್ನಿಗಳ ಬಗ್ಗೆಯೂ ಕೇರಳದ ಆಟಗಾರ ವಿವರ ನೀಡಿಲ್ಲ.

ಎಚ್.ಎಸ್.ಪ್ರಣಯ್ –ಎಎಫ್‌ಪಿ ಚಿತ್ರ

ಫ್ರಾನ್ಸ್‌ನ ರ್‍ಯಾಲಿ ಡೆಸ್ ವ್ಯಾಲೀಸ್‌ನಲ್ಲಿ ಮೂರನೇ ಸ್ಥಾನ

ಪ್ರಗತಿ ಗೌಡ ‘ಪೋಡಿಯಂ ಫಿನಿಷ್’ ಸಾಧನೆ

ಬೆಂಗಳೂರು: ಕರ್ನಾಟಕದ ಯುವ ರೇಸರ್ ಪ್ರಗತಿ ಗೌಡ ಅವರು ಫ್ರಾನ್ಸ್‌ನ ‘ರ್‍ಯಾಲಿ ಡೆಸ್ ವ್ಯಾಲೀಸ್-2024’ ಟೂರ್ನಿಯಲ್ಲಿ ಮೂರನೇ ಸ್ಥಾನ ಪಡೆದರು. ಆ ಮೂಲಕ ಅಂತರ ರಾಷ್ಟ್ರೀಯ ರ್‍ಯಾಲಿಯ ಚೊಚ್ಚಲ ಪ್ರವೇಶದಲ್ಲೇ ಮೊದಲ ಮೂರರಲ್ಲಿ ಸ್ಥಾನ ಪಡೆದ ಭಾರತದ ಮೊದಲ ರೇಸರ್ ಎಂಬ ಹೆಗ್ಗಳಿಕೆಗೆ ಪಾತ್ರವಾದರು.

ಪ್ರಕೃತಿ ಸೌಂದರ್ಯದ ಗುಮಿಗೊಮೊದಲ್ಲಿ ನಡೆದ ರ್‍ಯಾಲಿಯಲ್ಲಿ ಪುರುಷ ರೇಸರ್‌ಗಳೊಂದಿಗೆ ಸ್ಪರ್ಧಿಸಿದ 26 ವರ್ಷ ವಯಸ್ಸಿನ ಪ್ರಗತಿ, ರ್‍ಯಾಲಿ-5 ಕಾರ್ ವಿಭಾಗದ ಸ್ಪರ್ಧೆಯಲ್ಲಿ 23 ನಿಮಿಷ 51.8 ಸೆಕೆಂಡ್‌ನಲ್ಲಿ ಗುರಿ ತಲುಪಿದರು.

ಫ್ರಾನ್ಸ್‌ನ ಹಾಲಿ ರಾಷ್ಟ್ರೀಯ ಚಾಂಪಿಯನ್ ಯೋನ್ ಕಾರ್ಬೆರಾಂಡ್ ಅವರು ಹ್ಯಾಮೆಲ್ ಜೂಲಿಯೆಟ್ ಜೊತೆ (21:34.2) ಈ ವಿಭಾಗದಲ್ಲಿ ಮೊದಲ ಸ್ಥಾನ ಪಡೆದರು.

ಯುರೋಪ್‌ನಲ್ಲಿ ಮೂರು ತಿಂಗಳ ಕಠಿಣ ತರಬೇತಿ ಪಡೆದ ಬಳಿಕ ಅವರು ಬ್ರೆಜಿಲ್‌ನ ಸಹ ಚಾಲಕ ಗೇಬ್ರಿಯಲ್ ಮೊರೇಲ್ಸ್ ಅವರೊಂದಿಗೆ ರೆನಾಲ್ಟ್ ಕ್ಲಿಯೊ ಕಾರಿನಲ್ಲಿ ಸ್ಪರ್ಧೆಗೆ ಇಳಿದಿದ್ದರು. ತಮ್ಮ ವಿಭಾಗದಲ್ಲಿ ಮೂರನೇ ಸ್ಥಾನ ಪಡೆದಿದ್ದು ಮಾತ್ರವಲ್ಲದೆ, ಒಟ್ಟಾರೆಯಾಗಿ 37ನೇ ಸ್ಥಾನ ಪಡೆದು ಗಮನ ಸೆಳೆದರು.

‘ಫ್ರಾನ್ಸ್‌ನಲ್ಲಿ ನನ್ನ ಮೊದಲ ಅಂತರ ರಾಷ್ಟ್ರೀಯ ರ್‍ಯಾಲಿಯು ನಂಬಲಾಗದ ಅನುಭವ ನೀಡಿದೆ. ಈ ರ್‍ಯಾಲಿ ತುಂಬಾ ಸವಾಲಿನಿಂದ ಕೂಡಿತ್ತು. ಆದರೆ, ಸಹ ಚಾಲಕ ನನ್ನಲ್ಲಿ ಧೈರ್ಯ ತುಂಬಿದರು. ಹೀಗಾಗಿ, ಕೆಲವು ಸ್ಥಳಗಳಲ್ಲಿ ಗಂಟೆಗೆ ಸುಮಾರು 165 ಕಿಲೋಮೀಟರ್ ವೇಗದಲ್ಲಿ ಸಾಗಿದೆ. ಕಿರಿದಾದ ರಸ್ತೆಗಳಲ್ಲೂ ಸವಾಲಿನ ವೇಗವನ್ನು ಕಾಪಾಡಿಕೊಂಡೆ’ ಎಂದು ಪ್ರಗತಿ ಗೌಡ ಅವರು ಪ್ಯಾರಿಸ್‌ನಿಂದ ‘ಪ್ರಜಾವಾಣಿ’ಗೆ ಪ್ರತಿಕ್ರಿಯೆ ನೀಡಿದರು.

‘ವಿವಿಧ ಸುತ್ತುಗಳಲ್ಲಿ ಟೈಮಿಂಗ್ ಕಡೆ ಗಮನ ನೀಡಲಿಲ್ಲ. ತಪ್ಪು ಪುನರಾವರ್ತನೆಯಾಗದಂತೆ ನೋಡಿಕೊಳ್ಳುವುದರ ಕಡೆಗಷ್ಟೇ ನನ್ನ ಗಮನ ನೆಟ್ಟಿತ್ತು’ ಎಂದರು.

‘ಮುಂಬರುವ ರ್‍ಯಾಲಿಗಳಲ್ಲಿ ಕಾರ್ಯಕ್ಷಮತೆಯನ್ನು ಇನ್ನಷ್ಟು ಸುಧಾರಿಸುವ ಕಡೆ ಗಮನ ಹರಿಸುತ್ತೇನೆ. ಪ್ರೋತ್ಸಾಹ ನೀಡಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ಈ ವಾರಾಂತ್ಯದಲ್ಲಿ ನಡೆಯುವ ರೇಸ್‌ನಲ್ಲಿ (ರ್‍ಯಾಲಿ ಟೆರ್ರ ಡಿ ಲೊಝೂಗ್) ಉತ್ತಮ ಪ್ರದರ್ಶನ ನೀಡುವ ಗುರಿ ಹೊಂದಿದ್ದೇನೆ’ ಎಂದಿದ್ದಾರೆ.

ಬ್ರೆಜಿಲ್ ದೇಶದ ಸಹ ಚಾಲಕ ಗೇಬ್ರಿಯಲ್ ಮೊರೇಲ್ಸ್ ಅವರೊಂದಿಗೆ ಬೆಂಗಳೂರಿನ ಪ್ರಗತಿ ಗೌಡ

ರಾಷ್ಟ್ರೀಯ ಚೆಸ್ ಟೂರ್ನಿ ಸೆ.1ರಿಂದ

ಪ್ರಜಾವಾಣಿ ವಾರ್ತೆ

ಮೈಸೂರು: ಏಳು ವರ್ಷದೊಳಗಿನವರ 37ನೇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್ ಸೆ.1ರಿಂದ 5ರವರೆಗೆ ಇಲ್ಲಿನ ವಿಜಯನಗರದ ಸಂಭ್ರಮ ಕಲ್ಯಾಣಮಂಟಪದಲ್ಲಿ ನಡೆಯಲಿದೆ.

‘ಅಖಿಲ ಭಾರತ ಚೆಸ್ ಸಂಸ್ಥೆ ಹಾಗೂ ಎಂ.ಎಂ.ಚೆಸ್ ಡೆವಲಪ್‌ಮೆಂಟ್ ಟ್ರಸ್ಟ್, ಮೈಸೂರು ಚೆಸ್ ಸೆಂಟರ್, ತುಮಕೂರು ಚೆಸ್ ಅಕಾಡೆಮಿ ಮತ್ತು ಮಂಡ್ಯ ಚೆಸ್ ಅಕಾಡೆಮಿ ಸಹಯೋಗದಲ್ಲಿ ಟೂರ್ನಿ ನಡೆಯಲಿದೆ.

ದೇಶದ ವಿವಿಧ ಭಾಗಗ ಳಿಂದ 400ಕ್ಕೂ ಹೆಚ್ಚು ಸ್ಪರ್ಧಿಗಳು ಪಾಲ್ಗೊಳ್ಳಲಿದ್ದಾರೆ’ ಎಂದು ರಾಜ್ಯ ಚೆಸ್ ಸಂಸ್ಥೆ ಉಪಾಧ್ಯಕ್ಷ ಟಿ.ಎನ್.ಮಧುಕರ್ ಸೋಮವಾರ ಸುದ್ದಿ ಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ಟೂರ್ನಿಯಲ್ಲಿ 9 ಸುತ್ತುಗಳಿದ್ದು ನಡೆಯಲಿದ್ದು, ವಿಜೇತರು ಒಟ್ಟು ₹5 ಲಕ್ಷ ಮೊತ್ತದ ಬಹುಮಾನ ಪಡೆಯಲಿದ್ದಾರೆ. ಕಾಮನ್‌ವೆಲ್ತ್ ಚೆಸ್, ಏಷ್ಯನ್ ಹಾಗೂ ವಿಶ್ವ ಮಕ್ಕಳ ಚೆಸ್ ಸ್ಪರ್ಧೆಗೆ ಇದೇ ವೇಳೆ ಆಯ್ಕೆ ಪ್ರಕ್ರಿಯೆ ನಡೆಯಲಿದೆ’ ಎಂದು ತಿಳಿಸಿದರು.